ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 18 ಸಂಚಿಕೆ 3-4
ಜುಲೈ-ಡಿಸೆಂಬರ್ 1989

(ಸಂಯುಕ್ತ ಸಂಚಿಕೆ)

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University Bangalore
Vol. 18. Nos. 3 & 4, July to December 1989

Chief Editor: H. K. Jayadev

ಪ್ರಧಾನ ಸಂಪಾದಕರು :

ಹ. ಕಾ. ಜಯದೇವ್

ಸಂಪಾದಕರು :

ಡಾ. ಕೃಷ್ಣ ಪರಮೇಶ್ವರ ಭಟ್ಟ
ಡಾ. ಬಸವರಾಜ ಕಲ್ಗುಡಿ
ಡಾ. ಎಂ. ಎಸ್. ತಿಮ್ಮಪ್ಪ

ವಾರ್ಷಿಕ ಚಂದಾ : ರೂ. 8-00
ರೂ. 5-00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100-00

ಪ್ರಕಾಶಕರು : ಡಾ. ಕೆ. ವಿ. ನಾರಾಯಣ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ

ನೀಲಮ್ಮನ ಅಳಲು

ಶ್ಯಾಮಸುಂದರ ಕೋಟಿ

ಮಗು ಮಲ್ಲಿನಾಥ,
ನೀನಾದರೂ ಅರಿತೆಯಲ್ಲಪ್ಪ
ಕಂದ ಕೊನೆಗೆ,
ಸಂಗಯ್ಯನಿಕ್ಕಿದ ಈ 'ದಿಬ್ಯ'
ಎಂಥದೆಂಬುದ,
ನಮ್ಮ ಬಸವಯ್ಯನ ಆಟ
ಎಲ್ಲಿಗೆ ತಂತೆಂಬುದ !

ಬದುಕಿ ಬಾಳಿದೆನಪ್ಪ ಮಗನೇ
ಮಲ್ಲಿನಾಥ, ಆಸರಂತ –
– ಉಡಿಯಲ್ಲಿ ಹಿಡಿಬೆಂಕಿ ಕಟ್ಟಿಕೊಂಡೇ
ಧಗಧಗಿಸುತ್ತ !
ನೊಡಿಕೊಂಡೆನಯ್ಯ ಮಗನೇ
ಆದರೂ ಆ ಬೆಂಕಿ,
ನಿಮ್ಮಯ್ಯ ಬಸವಯ್ಯನ ಬಾಳಿಗೆ
ತುಸುವೂ ತಾಗದಂತೆ !
ಅವರ ಸಿರಿಮುಡಿಯ ಹೂವು
ನಸುವೂ ಬಾಡದಂತೆ ! !

ನೊಂದೆಯಾ ಕಂದ ನನಗಾಗಿ
ಈ...ನನ್ನವರಿಂದಾಗಿ,
'ಸತ್ಯ' ಎಂದಿದ್ದರೂ ಕಹಿಯೇ ಕಂದ
ಅದು ಹಿತವಪ್ಪವುದಾದರೂ ಹೇಗೆ ?
ಕ್ಷಮಿಸಿಬಿಡಪ್ಪ ಮಗನೇ ನನ್ನೊಂದಿಗೆ
ಅವರನ್ನೂ ಕೊನೆಗೆ,
ಯಾಕೆನ್ನುವಿಯಾ ಕಂದ, ಮಕ್ಕಳು ತಾನೆ
ನಿನ್ನಂತೆಯೇ ಅವರೂ ನನಗೆ ! !

ನಿಘಂಟು ವಿಜ್ಞಾನ–2

ಡಾ. ವಿಲಿಯಂ ಮಾಡ್ತ

ನಿಘಂಟು ರಚನೆ*


ನಿಘಂಟಿಮಗಳನ್ನು ಕುರಿತ ಸೈದ್ಧಾಂತಿಕ ವಿಚಾರ (Theory) ನಿಘಂಟು–ವಿಜ್ಞಾನವಾದರೆ ಅದರ ಅನ್ವಯ (Praxis)ವೇ ನಿಘಂಟುರಚನೆ (Lexicography). ನಿಘಂಟು ರಚನೆಯಲ್ಲಿ ಸಾಮಾನ್ಯವಾಗಿ ಈ ಕೆಳಗಿನ ವಿಷಯಂಗಳನ್ನು ಕುರಿತು ಹೆಚ್ಚಿನ ಗಮನಕೊಡಬೇಕಾಗುತ್ತದೆ.

1.1 ನಿಘಂಟುಗಳ ವರ್ಗೀಕರಣ
1.2 ಏಕಭಾಷಿಕ ನಿಘಂಟು ರಚನೆ
1.3 ದ್ವಿಭಾಷಿಕ ನಿಘಂಟು ರಚನೆ
1.4 ನಿಘಂಟು ಯೋಜನೆ .

1.1. ನಿಘಂಟುಗಳ ವರ್ಗೀಕರಣ

"ಒಂದು ಭಾಷಾ–ಸಮಾಜ (Speech-community)ದ ಭಾಷಾ ಪ್ರಯೋಗಗಳಿಂದ ಆರಿಸಿದ ಸಾಮಾಜೀಕರಣಗೊಂಡ ಭಾಷಿಕ ರೂಪಗಳನ್ನು ವ್ಯವಸ್ಥಿತವಾಗಿ ಸಂಯೋಜಿಸಿಕೊಳ್ಳುವುದೇ ನಿಘಂಟು (Dictionary)" –ಎಂದು ಸಿ. ಜೆ. ಬರ್ಗ್ (C. J. Berg, ನೋಡಿ ZGUSTA 1971 : 197), ಅಭಿಪ್ರಾಯಪಡುತ್ತಾನೆ.

ನಿಘಂಟಿಮಗಳನ್ನು ಸಂಯೋಜಿಸಿಕೊಳ್ಳುವ ರೀತಿಗಳನ್ನು ಅವಲಂಬಿಸಿ ನಿಘಂಟುಗಳಲ್ಲಿ ವೈವಿಧ್ಯತೆಯನ್ನು ನಾವು ಕಾಣುತ್ತೇವೆ. ನಿಘಂಟುಗಳ ಪ್ರಮುಖ ವರ್ಗೀಕರಣವನ್ನು ಈ ಕೆಳಗಿನಂತೆ ಸೂಚಿಸಬಹುದು.



* 'ನಿಘಂಟು ವಿಜ್ಞಾನ' ಎನ್ನುವ ಹಿಂದಿನ ಸಂಚಿಕೆಯ ಲೇಖನದ ಮುಂದುವರಿದ ಭಾಗ

1. ಬಹುಕಾಲಿಕ ನಿಘಂಟುಗಳು (Diachronic Dictionaries) ನಿಘಂಟಿಮಂಗಳ ರೌಪಿಕ ಹಾಗೂ ಅರ್ಥಾತ್ಮಕ ಇತಿಹಾಸವನ್ನು ಕುರಿತ ನಿಘಂಟುಗಳೇ ಬಹುಕಾಲಿಕ ನಿಘಂಟುಗಳು, ಅವುಗಳನ್ನು ಐತಿಹಾಸಿಕ ಮತ್ತು ವ್ಯುತ್ಪತ್ತಿಕ ನಿಘಂಟಿಮಂಗಳೆಂದು ವರ್ಗೀಕರಿಸುತ್ತಾರೆ.

ಅ) ಐತಿಹಾಸಿಕ ನಿಘಂಟು (Historical Dictionary)ಗಳು : ನಿಘಂಟಿಮಂಗಳ ರೌಪಿಕ ಹಾಗೂ ಅರ್ಥಾತ್ಮಕ ಬದಲಾವಣೆಗಳನ್ನು ಕಾಲಾನುಕ್ರಮವಾಗಿ ಸೂಚಿಸುತ್ತವೆ.

ಉದಾ : "**Kleid** 'clothes', attested since the 12th C, but related to Anglo-Saxon (Engl. **Cloth**); possibly related to German **Klette**. The basic meaning was 'stuff, material'. Then it developed into the designation of a piece of garment made of the stuff..."

ಐತಿಹಾಸಿಕ ನಿಘಂಟುಗಳು ನಿಘಂಟಿಮಂಗಳ ಸಾಂದರ್ಭಿಕ ಅರ್ಥ (Contextual meannig) ವಿವರಣೆಗಳಿಗೆ ಹೆಚ್ಚಿನ ಮಹತ್ವವನ್ನು ಕೊಡುತ್ತವೆ. (**Oxford English Dictionarv** ಇದಕ್ಕೆ ಉತ್ತಮ ಉದಾಹರಣೆ.

ಆ) ವ್ಯುತ್ಪತ್ತಿಕ ನಿಘಂಟು (Etymological Dictionary) ಗಳು ನಿಘಂಟಿಮಂಗಳ ವ್ಯುತ್ಪತ್ತಿಗೆ ಪ್ರಾಧಾನ್ಯತೆಯನ್ನು ಕೊಡುತ್ತವೆ.

ಉದಾ :— "*father* 'a male parent', Middle English, *fader ;* Anglo saxon *faeder ;* Dutch, *Vader ;* Danish, *fader ;* Icelandic, *fadir ;* Gothonic *Fadar*, German, *vater*, Latin, *Pater ;* Greek, *pater*, Persian, *Pidar*, Sanskrit *pitr*. Indo-European* *pater*.

Sir S. Ralph Lilly Turner ಇವರ *A Comparative Dictionary* of the Indo-Aryan Languages, London (1962) ಹಾಗೂ T. Burrow ಹಾಗೂ M. B. Emeneau ಇವರ *A Dravidian Etymological Dictionary*, Oxford (1961) ವ್ಯುತ್ಪತ್ತಿಕ ನಿಘಂಟುಗಳಿಗೆ ಉತ್ತಮ ಉದಾಹರಣೆಗಳು.

ವ್ಯುತ್ಪತ್ತಿ ನಿಘಂಟುಗಳಲ್ಲಿ ನಿಘಂಟಿಮಂಗಳ ಅರ್ಥದ ಜೊತೆಗೆ ಅವುಗಳ ರೂಪ ಬದಲಾವಣೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುತ್ತದೆ.

ನಿಘಂಟು ರಚನೆಯಲ್ಲಿ ಐತಿಹಾಸಿಕ ಹಾಗೂ ವ್ಯುತ್ಪತ್ತಿಕ ನಿಘಂಟುಗಳು ಅತ್ಯಂತ ವಿಶೇಷೀಕೃತ ನಿಘಂಟುಗಳೆಂದು ಪರಿಗಣಿತವಾಗಿವೆ. ಒಂದು ಭಾಷೆಯ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಕಂಡುಬರುವ ನಿಘಂಟಿಮಂಗಳು ವೈವಿಧ್ಯತೆಗಳನ್ನು ಬಹುಕಾಲಿಕ ನಿಘಂಟುವಿನಲ್ಲಿ ನಾವು ಗುರುತಿಸುತ್ತೇವೆ.

2. ಏಕಕಾಲಿಕ ನಿಘಂಟುಗಳು

ಭಾಷಾ ಬೆಳವಣಿಗೆಯಲ್ಲಿ ಯಾವುದಾದರೂ ಒಂದು ಹಂತಕ್ಕೆ ಸೀಮಿತವಾಗಿರುವ ನಿಘಂಟುಗಳನ್ನು ಏಕಕಾಲಿಕ ನಿಘಂಟುಗಳೆನ್ನುವರು. (ಉದಾ :- Grassman's Dictionary of the Rigvedic Sanskrit). ನಿಘಂಟುವಿಗೆ ಸಂಬಂಧಪಟ್ಟು 'ಬಹುಕಾಲಿಕ' ಮತ್ತು 'ಏಕಕಾಲಿಕ' ಎಂಬ ಪಾರಿಭಾಷಿಕ ಪದಗಳನ್ನು ಸಾಪೇಕ್ಷಾರ್ಥಕ ವಾಗಿ ಬಳಸುತ್ತಾರೆ. ಯಾಕೆಂದರೆ ಏಕಕಾಲಿಕ ನಿಘಂಟುಗಳಲ್ಲಿ ಪ್ರಾಚೀನ, ಅಪ್ರಚಲಿತ ಹಾಗೂ ನವ್ಯರೂಪಗಳು ಮಿಶ್ರಿತಗೊಂಡು ಇರುವುದು ಸ್ವಾಭಾವಿಕ. ಅಂತೆಯೇ ಬಹುಕಾಲಿಕ ನಿಘಂಟುಗಳಲ್ಲಿ ಏಕಕಾಲಿಕ ರೂಪಗಳು ಸೇರುವುದುಂಟು. ಗತಿಶೀಲ ವಾದ ಭಾಷೆಯ ನಿಘಂಟುಗಳಲ್ಲಿ ಈ ರೀತಿಯ ಪ್ರಭಾವಗಳು ಸಹಜವೇ ಸರಿ.

ನಿಘಂಟುಗಳ ವ್ಯಾಪ್ತಿ, ಪ್ರಸ್ತಾಪಿಸಲಾಗುವ ಭಾಷಾ ಸಂಖ್ಯೆ, ನಿಘಂಟುಗಳ ಉದ್ದೇಶ ಹಾಗೂ ಅವುಗಳ ಗಾತ್ರವನ್ನು ಅವಲಂಬಿಸಿ ಏಕಕಾಲಿಕ ನಿಘಂಟುಗಳಲ್ಲಿ ವೈವಿಧ್ಯತೆಯನ್ನು ನಾವು ಕಾಣುತ್ತೇವೆ.

ನಿಘಂಟುಗಳ ವ್ಯಾಪ್ತಿಯನ್ನು ಗಮನಿಸಿ ಏಕಕಾಲಿಕ ನಿಘಂಟುಗಳಲ್ಲಿ ನಿರ್ಬಂಧಿತ (Restricted) ಮತ್ತು ಸಾಮಾನ್ಯ (General) ನಿಘಂಟುಗಳೆಂದು ಎರಡು ತೆರ.

ನಿರ್ಬಂಧಿತ ನಿಘಂಟುಗಳ ವ್ಯಾಪ್ತಿ/ಹರವು ಸೀಮಿತವಾಗಿರುತ್ತದೆ. ಇವುಗಳಲ್ಲಿ ಉಪಭಾಷೆಗಳಿಗೆ ಸೀಮಿತವಾಗಿರುವ ನಿಘಂಟುಗಳೇ ಹೆಚ್ಚು. ಅವುಗಳ ಸಂಗ್ರಹದಲ್ಲಿ ಪ್ರಶ್ನಾವಳಿ (Questionnaire) ಗಳನ್ನು ಸಿದ್ಧ ಮಾಡಿ ಕ್ಷೇತ್ರಕಾರ್ಯದ ಮೂಲಕ ಮೌಖಿಕ ದತ್ತಸಂಗ್ರಹ ಮಾಡಬೇಕಲ್ಲದೆ ಬರಹ-ಸಾಹಿತ್ಯವಿದ್ದ ಉಪಭಾಷೆಗಳಲ್ಲಿ ಬರಹ ಸಾಹಿತ್ಯದಿಂದಲೂ ದತ್ತದ ಪರಿವೀಕ್ಷಣೆ ಮಾಡಬೇಕಾಗುತ್ತದೆ.

ಉಪಭಾಷೆಯ ನಿಘಂಟುಗಳಲ್ಲಿ ಏಕ ಉಪಭಾಷಾ (Mono-dialectal) ನಿಘಂಟು ಮತ್ತು ಬಹು ಉಪಭಾಷಾ (Poly-dialectal) ನಿಘಂಟು ಎಂದು ಎರಡು ಬಗೆ. ಈ ಪ್ರತಿಯೊಂದು ಬಗೆಯ ನಿಘಂಟುಗಳನ್ನು ತೌಲನಿಕ (Comparative) ನಿಘಂಟು ಹಾಗೂ ವೈದೃಶ್ಯಾತ್ಮಕ (Contrastive) ನಿಘಂಟು ಎಂದು ವರ್ಗೀಕರಿಸ ಬಹುದು. ಒಂದೇ ಭಾಷೆಯ ಹಲವಾರು ಉಪಭಾಷೆಗಳ ನಿಘಂಟಿಮಗಳನ್ನು ತೌಲನಿಕ ರೀತಿಯಲ್ಲಿ ಗುರುತಿಸುವುದು ಭಾಷಾಧ್ಯಯನದಲ್ಲಿ ಬಹು ಉಪಯುಕ್ತ ಹಾಗೂ ಮೌಲಿಕ. ಉಪಭಾಷೆಗಳಲ್ಲಿ ವ್ಯತ್ಯಾಸಗಳು ಹೆಚ್ಚು ಪ್ರಮಾಣದಲ್ಲಿದ್ದಾಗ ವೈದೃಶ್ಯಾತ್ಮಕ ನಿಘಂಟುಗಳ ಪ್ರಯೋಜನ ಹೆಚ್ಚು.

ವಿಭಿನ್ನ ಉದ್ಯೋಗ ವೃತ್ತಿಗಳಿಗೆ, ಕ್ರೀಡೆ ಆಟಗಳಿಗೆ, ಕಲೆ ವಾಣಿಜ್ಯ ವಿಜ್ಞಾನ ಮುಂತಾದ ಶಿಸ್ತುಗಳಿಗೆ ಸಂಬಂಧಪಟ್ಟು ತಯಾರಿಸಿದ ಪಾರಿಭಾಷಿಕ ನಿಘಂಟುಗಳು ನಿರ್ಬಂಧಿತ ನಿಘಂಟುಗಳಿಗೆ ಮತ್ತೊಂದು ಒಳ್ಳೆಯ ಉದಾಹರಣೆ. ಈ ನಿಘಂಟು ಗಳಲ್ಲಿ ಪಾರಿಭಾಷಿಕ ನಿಘಂಟಿಮಗಳಿಗ ಗಳಿಗೆ ಮಾತ್ರ ಸ್ಥಾನ.

ಸಾಹಿತ್ಯಿಕ ಗ್ರಂಥಗಳ ಕೊನೆಯಲ್ಲಿ ಗ್ರಂಥಕರ್ತರು ಅಥವಾ ಸಂಪಾದಕರು ಭಾಷಿಕ, ವಿಶ್ವಕೋಶಾತ್ಮಕ, ಅಥವಾ ಭಾಷ್ಯ (Exegetic) ರೂಪದ ಅಥವಾ ಅವುಗಳೆಲ್ಲವನ್ನೂ ಕೂಡಿಕೊಂಡ ನಿಘಂಟುವನ್ನು ಕೊಡುವುದುಂಟು. ಅಂಥವುಗಳನ್ನು ಸಾಮಾನ್ಯವಾಗಿ ಭಾಷ್ಯ ನಿಘಂಟು (Exegetic dictionary) ಗಳು ಎಂದು ಕರೆಯುತ್ತಾರೆ.

ಸೂಚಿಗಳು (Indices) ಮತ್ತು ಅನುಕ್ರಮಿಕ (Concordance) ಗಳು ಕೂಡಾ ಭಾಷ್ಯ ನಿಘಂಟುಗಳಂತೆ ನಿರ್ಬಂಧಿತ ನಿಘಂಟುಗಳಿಗೆ ಒಳ್ಳೆಯ ಉದಾಹರಣೆಗಳು. ಸೂಚಿಗಳು ಪಠ್ಯದಲ್ಲಿ ಬರುವಂತಹ ಉದ್ಧರಣೆ (Citation) ಗಳ ಸ್ಥಾನವನ್ನು ನಿರ್ದೇಶಿಸಿದರೆ, ಅನುಕ್ರಮಿಕಗಳು, ನಿಘಂಟಿಮಗಳು ಬರುವ ಎಲ್ಲ ಉದ್ಧರಣೆಗಳನ್ನು ಅಕಾರಾದಿಯಲ್ಲಿ ಸೂಚಿಸುತ್ತವೆ.

ಅನ್ಯಭಾಷಾ ಪದಗಳು, ಸಂಕ್ಷೇಪಗಳು (Abbreviations), ನುಡಿಗಟ್ಟುಗಳು, ಗಾದೆಗಳು, ಸಮಾನಾರ್ಥಕಗಳು, ವಿರುದ್ಧಾರ್ಥಕಗಳು ಮೊದಲಾದವುಗಳನ್ನು ಸೂಚಿಸುವ ನಿಘಂಟುಗಳೂ ನಿರ್ಬಂಧಿತ ನಿಘಂಟುಗಳಿಗೆ ಉದಾಹರಣೆಗಳಾಗಿವೆ.

ಯಾವುದೇ ಒಂದು ಸೀಮಿತ ವಲಯಕ್ಕೆ ನಿರ್ಬಂಧಗೊಳಿಸದೆ ಸಾಮಾನ್ಯವಾಗಿ ಬಳಸುವ ಪ್ರಮಾಣ ಭಾಷೆಯ ನಿಘಂಟಿಮಗಳನ್ನು ಕುರಿತ ನಿಘಂಟುಗಳನ್ನು ಸಾಮಾನ್ಯ ನಿಘಂಟು (General dictionary) ಗಳೆಂದು ಕರೆಯುತ್ತಾರೆ. ಅವು ರಚನಾ ದೃಷ್ಟಿಯಿಂದ ವಿವರಣಾತ್ಮಕಗಳಾಗಿರುತ್ತವೆ. ನಿಘಂಟನ್ನು ರಚಿಸುತ್ತಿರುವ ಕಾಲದಲ್ಲಿ ಬಳಕೆಯಾಗುವ ಪ್ರಮಾಣ ಭಾಷೆ ಅಲ್ಲಿ ವಸ್ತುವಾಗಿರುತ್ತದೆ. ಆ ಭಾಷೆಯ ನಿಘಂಟಿಮಗಳು, ಅವುಗಳ ಅರ್ಥ ಹಾಗೂ ಪ್ರಯೋಗಗಳು ಅಲ್ಲಿ ಉಲ್ಲೇಖಿತವಾಗಿರುತ್ತವೆ. ಆಯಾ ಭಾಷೆಗಳ ಬರಹ-ಸಾಹಿತ್ಯವನ್ನೇ ಅವು ಹೆಚ್ಚು ಅವಲಂಬಿಸಿರುತ್ತವೆ. ಸಾಮಾನ್ಯವಾಗಿ ಬಳಕೆಯಲ್ಲಿರುವ ಪ್ರಯೋಗಗಳಿಗೆ ಅಲ್ಲಿ ಹೆಚ್ಚಿನ ಪ್ರಾತಿನಿಧ್ಯವಿರುತ್ತದೆ. ವಸ್ತುಸ್ಥಿತಿ ಹೀಗಿರುವುದರಿಂದ ಅಪರೂಪದ ನಿಘಂಟಿಮಗಳು, ಪ್ರಾಚೀನ ರೂಪಗಳು ಇತ್ಯಾದಿಗಳ ವಿವರ ಅಲ್ಲಿ ಸಿಗುವುದು ದುರ್ಲಭ. ಯಾವ ರೂಪಗಳನ್ನು ಹೇಗೆ ಬಳಸಬೇಕು ಎಂದು ವಿಧಿವತ್ತಾಗಿ ತೋರಿಸಿಕೊಡುವುದೇ ಈ ನಿಘಂಟುಗಳ ಉದ್ದೇಶ. ಕಾರಣ, ಇವುಗಳನ್ನು ಪ್ರಮಾಣ ವಿವರಣಾತ್ಮಕ ನಿಘಂಟು (Standard descriptive dictionaries) ಗಳು ಎಂದು ಕರೆಯುತ್ತಾರೆ.

ಸಾಮಾನ್ಯ ನಿಘಂಟುಗಳಲ್ಲಿ ಪ್ರಮಾಣ ನಿಘಂಟಿಮಗಳ ಜೊತೆ ಜೊತೆಗೆ ಅಪರೂಪ ನಿಘಂಟಿಮಗಳು, ವಿಶಿಷ್ಟ ರೂಪಗಳು, ಪ್ರಾಚೀನ ರೂಪಗಳು, ಉಪಭಾಷಾ ನಿಘಂಟಿಮಗಳು, ಪಾರಿಭಾಷಿಕ ರೂಪಗಳು ಇತ್ಯಾದಿ ಬಹುಕಾಲಿಕ ವಿವರಣೆ

ಗಳು...ಇದ್ದರೆ ಆ ನಿಘಂಟುಗಳನ್ನು ಸಾಮಾನ್ಯ—ವಿವರಣಾತ್ಮಕ ನಿಘಂಟು (Overall-descriptive dictionary) ಗಳು ಎಂದು ಹೆಸರಿಸುತ್ತಾರೆ.

ನಿಘಂಟುವಿನಲ್ಲಿ ವಿವರಿಸಲು ಆರಿಸಿದ ಭಾಷೆಗಳ ಸಂಖ್ಯೆಗಳನ್ನು ಗಮನದಲ್ಲಿಟ್ಟು ಪ್ರಮುಖವಾಗಿ ನಿಘಂಟುಗಳನ್ನು ಎರಡು ವರ್ಗಗಳನ್ನಾಗಿ ವಿಭಜಿಸುತ್ತಾರೆ.

1. ಏಕಭಾಷಿಕ ನಿಘಂಟು (Monolingual dictionary)
2. ದ್ವಿಭಾಷಿಕ ನಿಘಂಟು (Bilinguai dictionary)

ಏಕಭಾಷಿಕ ನಿಘಂಟುಗಳಲ್ಲಿ ಯಾವುದಾದರೂ ಒಂದು ಭಾಷೆಯ ನಿಘಂಟಿಮಗಳ ವಿವರ ಸಿಗುತ್ತದೆ. ಅವು ಹೆಚ್ಚಾಗಿ ಸಾಮಾನ್ಯ ನಿಘಂಟುಗಳಾಗಿರುತ್ತವೆ. ದ್ವಿಭಾಷಿಕ ನಿಘಂಟುಗಳಲ್ಲಿ ಎರಡು ಭಾಷೆಗಳ ವಿವರಗಳು ಇರುತ್ತವೆ. ಭಾಷಾಂತರ, ಪಠ್ಯ ಪುಸ್ತಕ ರಚನೆ ಮುಂತಾದ ಶೈಕ್ಷಣಿಕ ಸಂದರ್ಭಗಳಲ್ಲಿ ದ್ವಿಭಾಷಿಕ ನಿಘಂಟಿಮಗಳು ಅತ್ಯಂತ ಪ್ರಯೋಜನಕಾರಿಯಾಗಿವೆ. ಇವುಗಳಲ್ಲಿ ನಿಘಂಟಿಮಗಳ ಪ್ರಮುಖವಾದ ಅರ್ಥಗಳಿಗೆ ಮಾತ್ರ ಪ್ರಾಶಸ್ತ್ಯ ಕೊಡಲಾಗುತ್ತದೆ ; ಅವುಗಳ ಅರ್ಥ ಹರವಿನ ಬಗೆಗೆ ಸೂಕ್ಷ್ಮಾತಿಸೂಕ್ಷ್ಮತೆಗಳ ಬಗೆಗೆ ಅಲ್ಲಿ ವಿವರ ಕೊಡಲಾಗುವುದಿಲ್ಲ.

ಪ್ರತಿಯೊಂದು ನಿಘಂಟುವಿಗೆ ಅದರದ್ದೇ ಆದ ಗುರಿ ಇರುತ್ತದೆ. ಈ ಗುರಿಯನ್ನು ತಿಳಿದುಕೊಂಡು ನಿಘಂಟುಕಾರ ಅದರ ವ್ಯಾಪ್ತಿಯನ್ನು ಗುರುತಿಸಿಕೊಳ್ಳುತ್ತಾನೆ, ಅವುಗಳ ಸ್ವರೂಪವನ್ನು (ಉದಾ ; ವಿಧಿಯಾತ್ಮಕ/ವಿವರಣಾತ್ಮಕ ಇತ್ಯಾದಿ) ನಿಗದಿಪಡಿಸಿಕೊಳ್ಳುತ್ತಾನೆ. ಹೆಚ್ಚಾಗಿ ಪಾರಿಭಾಷಿಕ ನಿಘಂಟುಗಳು ಕೇವಲ ಪದಕೋಶ (Vocabulary) ಗಳಾಗಿರುತ್ತವೆ. ನಿಘಂಟುವಿನ ಉದ್ದೇಶದಂತೆ ಅದನ್ನು ಬಳಸುವ ವ್ಯಕ್ತಿಗಳನ್ನು (: ಸಂಶೋಧನಾಕಾರರು, ವಿದ್ಯಾರ್ಥಿಗಳು, ಜನಸಾಮಾನ್ಯರು...) ಗಮನಿಸಿ ನಿಘಂಟುಗಳ ಸ್ವರೂಪ ಲಕ್ಷಣಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆಂಬುದನ್ನು ಪ್ರಸ್ತುತದಲ್ಲಿ ಗಮನಿಸಬೇಕು.

ಸ್ವರೂಪ ಲಕ್ಷಣದಂತೆ, ಗಾತ್ರ (Size), ನಿಘಂಟು ರಚನೆಯಲ್ಲಿ ಪರಿಗಣಿಸಬೇಕಾದ ಇನ್ನೊಂದು ಅಂಗ. ಈ ಗಾತ್ರ ನಿರ್ಧರಿಸುವಲ್ಲಿ ನಿಘಂಟಿಮಗಳ ಸಂಖ್ಯೆಗಿಂತ ಅವುಗಳ ಅರ್ಥ ವಿವರ ನೀಡುವ ರೀತಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಬೃಹತ್ಕೋಶ (Thesaurus) ಗಳು, ಹೆಸರೇ ಸೂಚಿಸುವಂತೆ, ದೊಡ್ಡ ಗಾತ್ರದ, ವಿಸ್ತಾರವಾದ ನಿಘಂಟುಗಳಾಗಿರುತ್ತವೆ. ಇವುಗಳಲ್ಲಿ ನಿಗದಿತ ಸಂಖ್ಯೆಯಲ್ಲಿ ಪ್ರಾಚೀನ ಪಾಠ-ಭಾಗಗಳು ಉದ್ಧರಿಸಲಾಗುತ್ತವೆ. ಅಲ್ಲದೆ, ಪ್ರತಿಯೊಂದು ನಿಘಂಟಿಮದ ಅರ್ಥ ವಿವರಗಳನ್ನು, ಅರ್ಥವಿಶೇಷತೆ (Nuance) ಗಳನ್ನು ಹಾಗೂ ಪಠ್ಯ-ಸಂದರ್ಭ (Context) ಗಳನ್ನು ವಿಸ್ತಾರವಾದ ರೀತಿಯಲ್ಲಿ ಕೊಡುತ್ತಾರೆ. ಶೈಕ್ಷಣಿಕ ನಿಘಂಟು (Academic dictionary) ಗಳಲ್ಲಿ ಬೃಹತ್ಕೋಶದಲ್ಲಿ ಕೊಡುವ ರೀತಿಯಲ್ಲಿ ವಿವರಗಳನ್ನು ಕೊಡದಿದ್ದರೂ ಅವು ಬೃಹತ್ ನಿಘಂಟುಗಳೇ ಆಗಿರು

ತ್ತವೆ. ಮಧ್ಯಮ ನಿಘಂಟುಗಳಲ್ಲಿ ಸುಮಾರು 40,000ಕ್ಕಿಂತ ಹೆಚ್ಚು ನಿಘಂಟಿಮಗಳನ್ನು ಸೇರಿಸುವುದಿಲ್ಲ. ಅವು ಹೆಚ್ಚಾಗಿ ಚಾಲ್ತಿಯಲ್ಲಿರುವ ರೂಪಗಳಿಗೆ ಸೀಮಿತವಾಗಿರುತ್ತವೆ. ಅವುಗಳಲ್ಲಿ ಉದ್ಧರಣೆಗಳು ಕಡಿಮೆ ಪ್ರಮಾಣದಲ್ಲಿರುತ್ತವೆ. ನಿಘಂಟುಗಳಲ್ಲಿ ಉದ್ಧರಣೆಗಳಾಗಲಿ, ಉದಾಹರಣೆಗಳಾಗಲಿ, ಸಾಮಾನ್ಯವಾಗಿ ಇರುವುದಿಲ್ಲ. ಅವುಗಳಲ್ಲಿ ಅತ್ಯಂತ ಮೂಲಭೂತವಾದ ಸುಮಾರು 10,000 ನಿಘಂಟಿಮಗಳಿಗೆ ಅರ್ಥಗಳನ್ನು ಕೊಡಲಾಗುತ್ತದೆ.

ಪದಕೋಶಗಳು ಅತ್ಯಂತ ಚಿಕ್ಕದಾದ ನಿಘಂಟುಗಳು. ಅವು ಕೇವಲ ಒಂದು ಭಾಷೆಯ ಪದಗಳ ಅಕಾರಾದಿ ಮತ್ತು ಅವುಗಳ ಮೂಲಾರ್ಥಗಳಿಂದ ಕೂಡಿಕೊಂಡಿರುತ್ತವೆ. ಕಠಿಣ ಶಬ್ದಾರ್ಥಕೋಶ (Glossary) ಗಳು ಕಠಿಣವಾದ ನಿಘಂಟಿಮಗಳು ಮತ್ತು ಅವುಗಳ ಅರ್ಥಗಳು–ಇವುಗಳಿಗಷ್ಟೇ ಸೀಮಿತವಾಗಿರುತ್ತವೆ.

ನಿಘಂಟು ರಚನೆಯ ಪೂರ್ವದಲ್ಲಿ ನಿಘಂಟುಕಾರ ತಾನು ಯಾವ ಬಗೆಯ ನಿಘಂಟುವನ್ನು ರಚಿಸಬೇಕೆಂಬುದನ್ನು ನಿರ್ಣಯ ಮಾಡುವಾಗ ಈ ಮೇಲೆ ಚರ್ಚಿಸಿದ ವಿವರಣೆ ಅತ್ಯಂತ ಸಹಾಯಕಾರಿಯಾಗುತ್ತದೆ.

ನಿಘಂಟು ವೈವಿಧ್ಯತೆಯನ್ನು ಗಮನಿಸಿದಾಗ ಅವುಗಳಲ್ಲಿ ಏಕಭಾಷಿಕ ಮತ್ತು ದ್ವಿಭಾಷಿಕ ನಿಘಂಟುಗಳೇ ಹೆಚ್ಚು ಪ್ರಸಿದ್ಧಿಯನ್ನು ಪಡೆದಿವೆ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಕಾರಣ ಈ ಎರಡು ಬಗೆಯ ನಿಘಂಟುಗಳಿಗೆ ಮುಂದಿನ ಚರ್ಚೆ ಸೀಮಿತಗೊಳಿಸಲಾಗಿದೆ.

1.2 ಏಕಭಾಷಿಕ ನಿಘಂಟು ರಚನೆ

ಏಕಭಾಷಿಕ ನಿಘಂಟು ರಚನೆಗೆ ಕೈಹಾಕುವ ಮೊದಲು ನಿಘಂಟುಕಾರ ಆರಂಭದಲ್ಲಿಯೇ ಎರಡು ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಒಂದು ಭಾಷಾಸ್ವರೂಪದ ಬಗೆಗಾದರೆ, ಇನ್ನೊಂದು ನಿಘಂಟುವಿನ ಸ್ವರೂಪದ ಬಗೆಗೆ.

ಯಾವ ಭಾಷೆಗೆ ನಾವು ನಿಘಂಟು ರಚಿಸುತ್ತೇವೆಯೊ ಆ ಭಾಷೆಯ ಪೂರ್ಣ ಜ್ಞಾನ ನಿಘಂಟುಕಾರನಿಗೆ ಬೇಕಾಗುತ್ತದೆ. ಆ ಭಾಷೆಯ ಉಪಭಾಷೆಗಳು ಮತ್ತು ಅವುಗಳ ಪರಸ್ಪರ ಸಂಬಂಧವನ್ನು ಕುರಿತು ಆತನಿಗೆ ಸರಿಯಾದ ಜ್ಞಾನ ಬೇಕೇ ಬೇಕು. ಆಡು ಮಾತಿಗೂ ಸಾಹಿತ್ಯಿಕ ಭಾಷೆಗೂ ಇರುವ ಅನ್ಯೋನ್ಯ ಸಂಬಂಧ ಆತ ತಿಳಿದುಕೊಳ್ಳಬೇಕು. ಸಾಹಿತ್ಯ ಭಾಷೆಯಲ್ಲಿ ಅನೇಕ ಪ್ರಾಚೀನ ರೂಪಗಳು ಇವೆಯೆ? ಅದರಲ್ಲಿ ಉಪಭಾಷಾ ಪದಗಳು ಬಳಕೆಯಾಗುತ್ತದೆಯೆ ? ಎಷ್ಟು ಪ್ರಮಾಣದಲ್ಲಿ? ಕಾಲಿಕ ಉಪಭಾಷೆ (Temporal dialect) ಗಳಲ್ಲಿ ಬಹಳಷ್ಟು ವ್ಯತ್ಯಾಸಗಳನ್ನು ನಾವು ಕಾಣುತ್ತೇವೆಯೆ? ಇವೇ ಮೊದಲಾದ ಪ್ರಶ್ನೆಗಳನ್ನು ನಿಘಂಟುಕಾರನು ನಿಘಂಟು ರಚನೆಯ ಆರಂಭದಲ್ಲಿಯೇ ಕೇಳಿಕೊಳ್ಳಬೇಕಾಗುತ್ತದೆ.

ಎರಡನೆಯದಾಗಿ, ತಾನು ರಚಿಸಬೇಕಾದ ನಿಘಂಟುವಿನ ಸ್ವರೂಪ ಹೇಗಿರಬೇಕೆಂಬುದನ್ನು ನಿಘಂಟುಕಾರನು ಮೊದಲೇ ನಿರ್ಧರಿಸಬೇಕಾಗುತ್ತದೆ. ನಿಘಂಟುಗಳ ಸ್ವರೂಪ, ಅವುಗಳ ಅರ್ಥಗಳನ್ನು ಸೂಚಿಸುವ ರೀತಿ, ಉಪಭಾಷಾ ನಿಘಂಟಿಮಂಗಳು, ಪ್ರಾಚೀನ ರೂಪಗಳು, ಗ್ರಾಮ್ಯರೂಪಗಳು–ಇತ್ಯಾದಿಗಳ ಸೇರ್ಪಡೆ ನಿಘಂಟುವಿನ ಗುರಿ, ಪ್ರಭೇದ (Type) ಮತ್ತು ಗಾತ್ರವನ್ನು ಅನುಸರಿಸಿರುತ್ತದೆ.

ನಿಘಂಟು ರಚನಾ ವಿಧಾನ :

ವೈಜ್ಞಾನಿಕವಾಗಿ ನಿಘಂಟು ರಚನೆ ಮಾಡುವಲ್ಲಿ ಈ ಕೆಳಗಿನ ವಿಧಾನವನ್ನು ಅನುಸರಿಸಬೇಕು :

1. ಕ್ಷೇತ್ರಕಾರ್ಯ
2. ನಿಘಂಟಿಮಂಗಳ ಆಯ್ಕೆ
3. ನಿಘಂಟಿಮಂಗಳ ರಚನೆ

1. ಕ್ಷೇತ್ರ ಕಾರ್ಯ :

ನಿಘಂಟು ರಚನೆಯನ್ನು ಗಮನದಲ್ಲಿಟ್ಟುಕೊಂಡು ನಿಘಂಟುಕಾರ ಕ್ಷೇತ್ರ ಕಾರ್ಯವನ್ನು ಮಾಡಬೇಕು. ಕ್ಷೇತ್ರ ಕಾರ್ಯದಿಂದ ದೊರೆತ ದತ್ತ (Date) ಸಮಗ್ರವಾಗಿದೆ ಹಾಗೂ ಸಮರ್ಪಕವಾಗಿದೆ ಎಂಬ ಅಭಿಪ್ರಾಯ ಆತನಲ್ಲಿ ಮೂಡುವ ತನಕ ಈ ಕ್ಷೇತ್ರಕಾರ್ಯ ಮುಂದುವರಿಯಬೇಕು. ದತ್ತ ಸಂಗ್ರಹ ಮಾಡುವಾಗ ನಿಘಂಟಿಮವನ್ನು ಒಂದೇ ಗಾತ್ರದ ಕಾರ್ಡಿನ ಮೇಲ್ಭಾಗದಲ್ಲಿ ಬರೆಯಬೇಕು. ಜೊತೆಯಲ್ಲಿಯೇ ಅದರ ಸಂದರ್ಭವನ್ನೂ ನಮೂದಿಸಬೇಕು. ಮೌಖಿಕ–ಸಾಹಿತ್ಯದಿಂದ ದತ್ತ ಸಂಗ್ರಹ ಮಾಡಲು ಯೋಗ್ಯವಾದ ಪ್ರಶ್ನಾವಳಿ (Questionnaire) ಗಳನ್ನು ಸಿದ್ಧಗೊಳಿಸಿ ಅವುಗಳ ಮೂಲಕ ದತ್ತ ಸಂಗ್ರಹ ಮಾಡಬೇಕು.

ಬರಹ–ಸಾಹಿತ್ಯದಿಂದ ದತ್ತ ಸಂಗ್ರಹ ಮಾಡುವ ಕಾಲಕ್ಕೆ ಸಾಹಿತ್ಯದ ಎಲ್ಲ ರೂಪಗಳಿಂದ ಸಾಮಗ್ರಿಯನ್ನು ಸಂಗ್ರಹಿಸಬೇಕಾದುದು ಅನಿವಾರ್ಯ. ಹೀಗೆ ಕೇವಲ ಲಲಿತ ಸಾಹಿತ್ಯ (Creative literature) ದಿಂದ ಮಾತ್ರವಲ್ಲದೆ ಪ್ರಾಯೋಜ್ಯ ಸಾಹಿತ್ಯ (Pragmatic literature) ವಾದ ಕಾನೂನು, ವಾಣಿಜ್ಯ, ಆಡಳಿತ, ವೃತ್ತಿ ಪರಿಭಾಷೆ ಮೊದಲಾದವುಗಳಿಗೆ ಸಂಬಂಧಿಸಿದ ಸಾಹಿತ್ಯದಿಂದಲೂ ದತ್ತ ಸಂಗ್ರಹ ಮಾಡಬೇಕು. ಸಮಾಚಾರ ಪತ್ರಿಕೆ. ನಿಯತಕಾಲಿಕೆಗಳು ಇತ್ಯಾದಿಗಳಿಂದಲೂ ಸಾಮಗ್ರಿ ಸಂಗ್ರಹವಾಗಬೇಕು.

ಆಡುಮಾತಿಗೂ ಬರಹದ ಭಾಷೆಗೂ ಬಹಳಷ್ಟು ವ್ಯತ್ಯಾಸವಿದ್ದಲ್ಲಿ ಅವುಗಳಿಗೆ ಪ್ರತ್ಯೇಕವಾದ ನಿಘಂಟುಗಳನ್ನು ರಚಿಸುವುದೇ ಒಳ್ಳೆಯದು.

ನಿಘಂಟಿಮಗಳ ನಿರ್ದಿಷ್ಟವಾದ ಅರ್ಥಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ಅವುಗಳ ಭಾಷಿಕ ಸಂದರ್ಭ (Linguistic context) ವನ್ನು ನಿಘಂಟಿಮದ ಜೊತೆಗೆ ಅದೇ ಕಾರ್ಡಿನಲ್ಲಿ ನಮೂದಿಸಬೇಕು. ನಿಘಂಟಿಮಂದ ಅರ್ಥವಿವರಗಳನ್ನೂ ವ್ಯಾಕರಣಾಂಶಗಳನ್ನೂ ಸ್ಪಷ್ಟಪಡಿಸಬೇಕು. ಭಾಷಿಕ ಹಾಗೂ ಸಾಮಾಜಿಕ ಸಂದರ್ಭಗಳು ದೊರಕದಿದ್ದರೆ ನಿಘಂಟಿಮಗಳ ವ್ಯುತ್ಪತ್ತಿ (Etymology), ಅರ್ಥ ನಿರ್ಧರಿಸುವಲ್ಲಿ ಸಹಾಯಕವಾಗಬಹುದು. ನಿಘಂಟಿಮಗಳ ಬೇರೆ ಬೇರೆ ಸಂದರ್ಭಗಳನ್ನು ಗಮನಿಸುವುದರಿಂದ ವಾಕ್ಯಗಳಲ್ಲಿ ಅವುಗಳ ಸ್ಥಾನಮಾನವನ್ನು ಗುರುತಿಸುವುದು, ಅವುಗಳ ವಾಚ್ಯಾರ್ಥಗಳನ್ನು, ಸೂಚ್ಯಾರ್ಥಗಳನ್ನು ಮತ್ತು ಸೂಕ್ಷ್ಮಾರ್ಥಕಗಳನ್ನು ನಿಗದಿಪಡಿಸುವುದು ಸಾಧ್ಯವಾಗುತ್ತದೆ. ನಿಘಂಟಿಮಗಳ ಸಮಾನಾರ್ಥಕಗಳು, ವಿರುದ್ಧಾರ್ಥಕಗಳು ಇತ್ಯಾದಿಗಳನ್ನೂ ಅದೇ ಕಾರ್ಡಿನಲ್ಲಿ ಸಂದರ್ಭಸಹಿತವಾಗಿ ಸೂಚಿಸಬೇಕು.

ನಿಘಂಟುಕಾರನಿಗೆ ಆರಿಸಿದ ಭಾಷೆ, ಮಾತೃಭಾಷೆಯಾಗಿದ್ದರೆ ಆತ ಮಾತಂಗನಾಗಿ ಆ ಭಾಷೆಯ ಒಂದು ಉಪಭಾಷೆಯನ್ನು ಆತ ಸಾಮಾನ್ಯವಾಗಿ ಮಾತಾಡುತ್ತಾನೆಂಬುದನ್ನು ನೆನಪಿಸಿಕೊಳ್ಳಬೇಕು. ಕಾರಣ, ನಿಘಂಟು ರಚಿಸುವ ಸಂದರ್ಭದಲ್ಲಿ ಬೇರೆ ಬೇರೆ ಪ್ರದೇಶಗಳ, ಸಾಮಾಜಿಕ ಸ್ತರಗಳ ಜನರನ್ನು ಆತ ಸಂಪರ್ಕಿಸಿ ವ್ಯಾಪಕವಾದ ಸಾಮಗ್ರಿಯನ್ನು ಕಲೆಹಾಕಬೇಕು. ಮೃತಭಾಷೆ (Dead language) ಯನ್ನು ಕುರಿತ ನಿಘಂಟು ರಚನೆಯಲ್ಲಿ ಆ ಭಾಷೆಯ ಹಲವಾರು ಪಠ್ಯ (Text) ಗಳಿಂದ ನಿಘಂಟಿಮಗಳನ್ನು ಸಂಗ್ರಹಿಸಬೇಕಾಗುತ್ತದೆ.

ನಿಘಂಟು ರಚನೆಯ ಭಾಷೆ ನಿಘಂಟುಕಾರನ ಮಾತೃಭಾಷೆಗಿಂತ ಭಿನ್ನವಾಗಿದ್ದರೆ ಮತ್ತು ಆ ಭಾಷೆ ಪ್ರಮಾಣಭಾಷೆಯ ಸ್ವರೂಪವನ್ನು ಪಡೆಯದಿರುವ ಸಂದರ್ಭದಲ್ಲಿ ಆತ ನಿರೂಪಕನ/ರ (Informant/s) ಸಹಾಯ ಪಡೆಯಬೇಕು. ಈ ನಿರೂಪಕರಿಗೆ ಆ ಭಾಷೆ ಮಾತೃಭಾಷೆಯಾಗಿರಬೇಕು. ಅವರು ಒಳ್ಳೆಯ ಸ್ವಭಾವದವರು, ನಂಬಿಗಸ್ತರು, ಚುರುಕು ಸ್ವಭಾವದವರು, ಪರಿಷಯುಕ್ತಿನವರೂ ಆಗಿರಬೇಕು. ಸಾಧ್ಯವಾದಲ್ಲಿ ಅವರು ಅಕ್ಷರಸ್ಥರೂ, ವಿದ್ಯಾವಂತರೂ ಆಗಿದ್ದು ತಮ್ಮ ಭಾಷೆಯ ಬಗೆಗೆ ಶುಷ್ಕ ಅಭಿಮಾನಕ್ಕಿಂತ ಹೆಚ್ಚು ಪಾಂಡಿತ್ಯ ಉಳ್ಳವರಾಗಿದ್ದರೆ ಬಹು ಉತ್ತಮ. ತಮ್ಮ ಭಾಷಾಜ್ಞಾನವನ್ನು ಅಭಿವ್ಯಕ್ತಪಡಿಸುವ ಸಾಮರ್ಥ್ಯ ಅವರಲ್ಲಿರಬೇಕು. ನಿರೂಪಕರ ಸಂಖ್ಯಾ ನಿರ್ಣಯ ನಿಘಂಟುವಿನ ಸ್ವರೂಪ ಹಾಗೂ ಗಾತ್ರವನ್ನು ಅವಲಂಬಿಸಿದೆ. ಭಾಷಾನಿರೂಪಕರನ್ನು ಆರಿಸುವಾಗ ಅವರು ಬೇರೆ ಬೇರೆ ಜನಸಮುದಾಯಗಳ ಯೋಗ್ಯ ಪ್ರತಿನಿಧಿಗಳಾಗಿರಬೇಕು. ಕ್ಷೇತ್ರಕಾರ್ಯದಲ್ಲಿ ನಿಘಂಟಿಮಗಳನ್ನು ಆದಷ್ಟು ಅವುಗಳ ಸಂದರ್ಭಗಳ ಜೊತೆಗೆ ಸಂಗ್ರಹಿಸಬೇಕಲ್ಲದೆ, ಪ್ರತ್ಯೇಕವಾಗಿ ಅಲ್ಲ.

ನಿರೂಪಕರ ಜೊತೆ ವಿವಿಧ ಜ್ಞಾನಕ್ಷೇತ್ರಗಳಿಂದ ಸೂಕ್ತ ಪರಿಣತರನ್ನು (Experts) ಆರಿಸಿಕೊಂಡು ಅವರ ಸಲಹೆ ಮಾರ್ಗದರ್ಶನಗಳನ್ನು ಪಡೆಯಬೇಕು. ನಿರೂಪಕರು ಸಂಗ್ರಹಿಸಿದ ಮಾಹಿತಿಯನ್ನು ಈ ಪರಿಣತರು ಪರಾಂಬರಿಸಬೇಕು. ಸಮಸ್ಯೆಗಳು, ಶಂಕೆಗಳು ಮೂಡಿದಾಗ ಅವರಿಂದ ಪರಿಹಾರ ದೊರಕಿಸಿಕೊಳ್ಳಬೇಕು. ಇಂತಹ ಸಂದರ್ಭಗಳಲ್ಲಿ ಪ್ರಚಲಿತವಾಗಿರುವ ಇತರ ನಿಘಂಟುಗಳ ಸಹಾಯವನ್ನೂ ಪಡೆಯಬೇಕು. ಹಾಗೆ ಹಲವು ಬಗೆಯ ಸಹಾಯ ಸಹಕಾರಗಳನ್ನು ಪಡೆಯುವುದನ್ನು ನಿಘಂಟುಕಾರ ಮರೆಯಬಾರದು.

2. ನಿಘಂಟಿಮಗಳ ಆಯ್ಕೆ

ನಿಘಂಟುವಿನಲ್ಲಿ ಸೇರಿಸಬಹುದಾದ ಎಲ್ಲ ರೂಪಗಳೂ ನಿಘಂಟಿಮಗಳೇ. ಭಾಷೆಯ ಸ್ವರೂಪವನ್ನು ಗಮನಿಸಿ ಕೇವಲ 'ಪದ'ಗಳಷ್ಟೇ ಅಲ್ಲದೆ ಅವುಗಳಿಗಿಂತ ಚಿಕ್ಕದಾದ ಘಟಕಗಳು (ಉದಾ: ಉಪಸರ್ಗಗಳು: in, by) ಹಾಗೂ ಸಮಾಸಗಳು ನಿಘಂಟಿಮಗಳೆಂದು ಪರಿಗಣಿಸಲಾಗಬಹುದು ಬಹಳಷ್ಟು ಬಳಕೆಯಲ್ಲಿರುವ ಕೆಲವೊಂದು ಬದ್ಧಾಕೃತಿಮಗಳನ್ನೂ (Bound morphenes) ನಿಘಂಟಿಮಗಳೆಂದು ಪರಿಗಣಿಸುತ್ತಾರೆ (ಉದಾ: anti-pseudo–).

ನಿಘಂಟುಗಳ ವೈವಿಧ್ಯತೆಯನ್ನು ಗಮನಿಸಿ ನಿಘಂಟಿಮಗಳ ಆಯ್ಕೆಯನ್ನು ಮಾಡಬೇಕಾಗುತ್ತದೆ. ಹಿಂದಿನ ಕಾಲದ ಸಾಹಿತ್ಯ ಗ್ರಂಥಗಳನ್ನು ಆಧರಿಸಿ ರಚಿತಗೊಳ್ಳುವ ನಿಘಂಟುಗಳಲ್ಲಿ ಸಾಮಾನ್ಯ ನಿಘಂಟಿಮಗಳ ಜೊತೆಗೆ ಕ್ವಚಿತ್ತಾಗಿ ಕಂಡುಬರುವ ಪ್ರಯೋಗಗಳು, ಪುರಾತನ ರೂಪಗಳು, ಲುಪ್ತರೂಪಗಳು ಇತ್ಯಾದಿಗಳಿಗೆ ಸ್ಥಾನ ಸಿಗುತ್ತದೆ. ದೊಡ್ಡ ಗಾತ್ರದ ನಿಘಂಟುಗಳಲ್ಲಿ ಗ್ರಾಮ್ಯರೂಪಗಳನ್ನು ಸೇರಿಸಿಕೊಳ್ಳಬಹುದು. ಸಾಮಾನ್ಯ ನಿಘಂಟುಗಳಲ್ಲಿ ದೈನಂದಿನ ವ್ಯವಹಾರದಲ್ಲಿ ಬರುವ ಪಾರಿಭಾಷಿಕ ಪದಗಳನ್ನು ಸೇರಿಸಬೇಕಾಗುತ್ತದೆ.

ನಿಘಂಟುವಿನ ಗಾತ್ರ ಮತ್ತು ಸ್ವರೂಪವನ್ನು ಗಮನಿಸಿ ನಿಘಂಟಿಮಗಳ ಆಯ್ಕೆ ಮಾಡಬೇಕಾಗುತ್ತದೆಯಾದುದರಿಂದ ನಿಘಂಟಿಮಗಳನ್ನು ಆರಿಸುವಲ್ಲಿ ಏಕ ರೀತಿಯ ನಿಯಮಗಳನ್ನು ಸೂಚಿಸುವುದು ಸಾಧ್ಯವಿಲ್ಲ. ಸಣ್ಣ ಗಾತ್ರದ ನಿಘಂಟುಗಳಲ್ಲಿ ನಿಘಂಟಿಮಗಳ ಆವೃತ್ತಿ (Frequency) ಯನ್ನು ಗಮನಿಸಿ ಅವುಗಳನ್ನು ಆರಿಸಬೇಕಾಗುತ್ತದೆ. ನಿಘಂಟಿಮಗಳ ಆಯ್ಕೆಯಲ್ಲಿ ನಿಘಂಟು ರಚನೆಯ ಉದ್ದೇಶವನ್ನೂ ಗಮನಿಸಬೇಕಾಗುತ್ತದೆ. ಬೇರೆ ಬೇರೆ ಭಾಷೆಗಳಲ್ಲಿಯ ನಿಘಂಟುಗಳನ್ನು ಪರಿಶೀಲಿಸಿ ಹಲವು ಪಂಡಿತರ ಅಭಿಪ್ರಾಯಗಳನ್ನು ಕೇಳಿಕೊಂಡು ನಿಘಂಟಿಮಗಳನ್ನು ಆಯ್ಕೆ ಮಾಡುವುದು ಹೆಚ್ಚು ಸೂಕ್ತ.

ನಿಘಂಟಿಮಗಳ ರಚನೆ :

ನಿಘಂಟಿಮಗಳ ರಚನೆಯಲ್ಲಿ ಆದಷ್ಟು ಮಟ್ಟಿಗೆ ಏಕರೂಪತೆ ಇರಬೇಕು. ಪ್ರತಿಯೊಂದು ನಿಘಂಟಿಮಕ್ಕೆ ಸರಿಯಾದ ಪೂರ್ಣ ನಿಘಂಟಾತ್ಮಕ ವಿವರವನ್ನು ಕೊಡಬೇಕು. ಆ ವಿವರಗಳಿಂದ ನಿಘಂಟಿಮದ ವೈಯಕ್ತಿಕ ಲಕ್ಷಣಗಳು ತಿಳಿದು ಕೊಳ್ಳಲು ಸಾಧ್ಯವಾಗಬೇಕು. ಅವುಗಳ ಅನ್ಯೋನ್ಯ ಸಂದರ್ಭಗಳನ್ನು (Cross references) ಸೂಚಿಸುವುದು ಬಹಳ ಪ್ರಯೋಜನಕಾರಿ. ನಿಘಂಟಿಮಗಳು ಭಿನ್ನಾರ್ಥದಲ್ಲಿ ಬಳಸಿದಾಗ ಅವುಗಳಿಗೆ ಸೂಕ್ತವಾದ ಉದಾಹರಣೆಗಳನ್ನು ಕೊಡಬೇಕು.

ನಿಘಂಟಿಮವನ್ನು ಸೂಚಿಸುವಲ್ಲಿ ಪ್ರಮುಖವಾಗಿ ಎರಡು ಭಾಗಗಳಿವೆ: ಮೊದಲನೆಯದು, ನಿಘಂಟಿಮವನ್ನು ನಮೂದಿಸುವುದು; ಎರಡನೆಯದು, ಅದರ ವಿವಿಧ ವಿವರಗಳನ್ನು ಕೊಡುವುದು.

ಮೊದಲನೆಯ ಭಾಗದಲ್ಲಿ ಪ್ರಧಾನ–ಪದ (Head-word) ಬಹು ಪ್ರಮುಖವಾದುದು. ಅದು ನಿಘಂಟಿಮದ ರೂಪವರ್ಗ (Form-class) ವನ್ನು ಸೂಚಿಸುತ್ತದೆಯಲ್ಲದೆ ಅದರ ಕೆಳಗೆ ಬರುವ ಇತರ ಮಾಹಿತಿಗೆ ಅದು ಆಧಾರವಾಗಿ ನಿಲ್ಲುತ್ತದೆ. ಪ್ರಧಾನ ಪದದ ನಂತರ ಅದರ ವ್ಯಾಕರಣ ಮಾಹಿತಿಯನ್ನು ನೀಡಬೇಕು. ದೊಡ್ಡ ಗಾತ್ರದ ನಿಘಂಟುವಿನಲ್ಲಿ ನಿಘಂಟಿಮದ ಅನಿಯಮಿತ ರೂಪಗಳನ್ನೂ (Irregular orms) ಸೂಚಿಸಬೇಕು (ಉದಾ :- ಸಾಯು-ಸತ್ತನು ; ಬೇಯು–ಬೆಂದನು ; ನೋಯು–ನೋಂತನು ; ಹೀನು–ಹೀಂತನು).

ಎರಡನೆಯ ಭಾಗದಲ್ಲಿ ನಿಘಂಟಿಮದ ಉಚ್ಚಾರ ಧ್ವನಿ ವಿಜ್ಞಾನ ಲಿಪಿ (Phonetic script) ಯಲ್ಲಿ ಕೊಡಬೇಕು. ಒಂದು ಭಾಷೆಯ ಲಿಪಿ ಅದರ ಧ್ವನಿಮಾ ಚಿಹ್ನೆಗಳಿಗಿಂತ ತೀರ ಭಿನ್ನವಾದಾಗ ಉಚ್ಚಾರಗಳನ್ನು ನಮೂದಿಸುವುದು ತೀರಾ ಅವಶ್ಯಕ. ನಿಘಂಟುವಿನ ಆರಂಭದಲ್ಲಿಯೇ ಲಿಪಿಮ (Grapheme) ಮತ್ತು ಧ್ವನಿಮ (Pheneme) ಗಳ ಅನ್ಯೋನ್ಯ ಸಂಬಂಧಗಳನ್ನು ಸೂಚಿಸುವ ಕೋಷ್ಟಕವನ್ನು ಕೊಡುವುದು ಸೂಕ್ತ. ಧ್ವನಿಮಾಗಳ ಉಪಧ್ವನಿಗಳನ್ನು ಮತ್ತು ಅವುಗಳ ಸಂದರ್ಭಗಳನ್ನು ಕಾಣಿಸುವುದು ಯೋಗ್ಯ.

ನಿಘಂಟಿಮಗಳ ಉತ್ಪತ್ತಿಯನ್ನು ಸಂಕ್ಷಿಪ್ತದಲ್ಲಿ ಕೊಡುವುದು ಬಹು ಉಚಿತ. ಸಣ್ಣ ನಿಘಂಟುಗಳಲ್ಲಿ ಇದು ಕಡ್ಡಾಯವಲ್ಲ. ಈ ವಿಷಯಗಳೆಲ್ಲ ನಿಘಂಟಿಮದ ರೂಪಕ್ಕೆ ಸಂಬಂಧ ಪಟ್ಟವುಗಳು. ಅದನ್ನು ನಿಘಂಟಿಮ – ರೂಪ (Lemma) ಎಂದು ಕರೆಯುತ್ತಾರೆ. ಅದರ ಮುಂದೆ ಬರುವ ವಿವರಣೆಗಳೆಲ್ಲವೂ ನಿಘಂಟಿಮದ ಅರ್ಥ–ವಿವರಣೆ (Semantic Content).

ನಿಘಂಟಿಮದ ಅರ್ಥ ವಿವರಣೆಯಲ್ಲಿ ಪ್ರಮುಖವಾದ ಅಂಶಗಳು ನಾಲ್ಕು :

ಅ) ನಿಘಂಟಿಮದ ವ್ಯಾಖ್ಯೆ

ಆ) ಉದಾಹರಣೆಗಳು

ಇ) ನಿಘಂಟಿಮದ ಸಮಾನಾರ್ಥಕ ರೂಪಗಳು

ಈ) ನಿಘಂಟಿಮದ ವಿವರಣೆ.

ನಿಘಂಟಿಮದ ವ್ಯಾಖ್ಯೆ :

ನಿಘಂಟಿಮದ ಅರ್ಥವ್ಯಾಪ್ತಿ ತಿಳಿಯುವ ರೀತಿಯಲ್ಲಿ ಅಂತೆಯೇ ಒಂದು ನಿಘಂಟಿಮವನ್ನು ಇನ್ನೊಂದು ನಿಘಂಟಿಮದಿಂದ ಬೇರ್ಪಡಿಸುವ ಶೈಲಿಯಲ್ಲಿ ನಿಘಂಟಿಮದ ವ್ಯಾಖ್ಯೆಯನ್ನು ರೂಚಿಸಬೇಕು. ಅದರ ಎಲ್ಲ ಅರ್ಥ ವಿಶೇಷಗಳಿಗೂ ನಿಘಂಟಿಮದ ಅನ್ವಯವಾಗುವಂತೆ ಈ ವ್ಯಾಖ್ಯೆಯನ್ನು ನೀಡಬೇಕು.

ನಿಘಂಟಿಮದ ವ್ಯಾಖ್ಯೆಯನ್ನು ಓದುವಾಗ ಅದು ಸಾಮಾನ್ಯ ಭಾಷಿಗನಿಗೆ ನೇರವಾಗಿ ಅರ್ಥವಾಗಬೇಕು. ಉದಾ :–ನೀರು : "ಭಾವಿ, ಕೆರೆ, ನದಿ, ಸಮುದ್ರ ಗಳಲ್ಲಿರುವ ದ್ರವ ಪದಾರ್ಥ" ಎಂದು ಹೇಳಬೇಕೇ ವಿನಹ "ಹೈಡ್ರೋಜನಿನ ಆಕ್ಸೈಡ್ ರೂಪ ಎಂದು ವ್ಯಾಖ್ಯೆಯನ್ನು ಕೊಡುವುದು ಅಲ್ಲ.

ಪಾರಿಭಾಷಿಕ ಪದಗಳನ್ನು ಸರಿಯಾದ ರೀತಿಯಲ್ಲಿ, ಅರ್ಥವಾಗುವಂತೆ ವ್ಯಾಖ್ಯಾನಿಸಬೇಕು. (ಧ್ವನಿಮ : 'ಒಂದು ಭಾಷೆಯಲ್ಲಿ ಅರ್ಥವ್ಯತ್ಯಾಸವನ್ನುಂಟು ಮಾಡುವ ಅರ್ಥರಹಿತವಾದ ಅತ್ಯಲ್ಪ ಭಾಷಾಘಟಕ ; ಆಕೃತಿಮ : 'ಒಂದು ಭಾಷೆ ಯಲ್ಲಿ ಅರ್ಥವ್ಯತ್ಯಾಸವನ್ನುಂಟುಮಾಡುವ ಅರ್ಥಸಹಿತವಾದ ಅತ್ಯಲ್ಪ ಭಾಷಾ ಘಟಕ'). ಸಸ್ಯ, ಪ್ರಾಣಿ ಮೊದಲಾದವುಗಳನ್ನು ನಿರ್ದೇಶಿಸುವ ನಿಘಂಟಿಮಗಳನ್ನು ಸಾಮಾನ್ಯರಿಗೆ ಅರ್ಥವಾಗುವಂತೆ ವ್ಯಾಖ್ಯಾನಿಸಬೇಕು. (ಬಾಳೆಹಣ್ಣು : 'ಬೆರಳಿನ ಆಕಾರದ ಹಳದಿ ಬಣ್ಣದ ಗೊಂಚಲು ಗೊಂಚಲು ಗೊಂಚಲಾಗಿ ಗೊನೆಯಾಗಿ ಉಷ್ಣಪ್ರದೇಶದಲ್ಲಿ ಬೆಳೆಯುವ ಹಣ್ಣು'.

ನಿಘಂಟಿಮದ ಸಮಾನಾರ್ಥಕ ರೂಪಗಳು .

ನಿಘಂಟಿಮದ ಅರ್ಥ ನೀಡುವಲ್ಲಿ ನಿಘಂಟಿಮಾತ್ಮಕ ವ್ಯಾಖ್ಯೆಯಂತೆ ನಿಘಂಟಿ ಮದ ಸಮಾನಾರ್ಥಕ ರೂಪಗಳನ್ನು ಕೊಡುವುದು ಇನ್ನೊಂದು ತಂತ್ರ. ಇವುಗಳನ್ನು ನಿಘಂಟಿಮಾತ್ಮಕ ವ್ಯಾಖ್ಯೆಯನ್ನು ಕೊಟ್ಟ ಬಳಿಕ ಕೊಡಬಹುದು. ಉದಾ : ಇಡು 'ಒಂದು ವಸ್ತುವನ್ನು ಒಂದು ಸ್ಥಳದಲ್ಲಿ ಇರಿಸುವುದು ; ಮಡಗು, ಸ್ಥಾಪಿಸು.' ಈ ರೀತಿ ಸಮಾನಾರ್ಥಕ ರೂಪಗಳನ್ನು ಕೊಡುವುದರಿಂದ ನಿಘಂಟಿಮದ ಅರ್ಥವ್ಯಾಪ್ತಿ ಸ್ಪುಟಗೊಳ್ಳುತ್ತದೆ ; ಅಲ್ಲದೆ, ನಿಘಂಟು ಬಳಸುವವರಿಗೆ ತಮಗೆ ಬೇಕಾದ ಅರ್ಥ ವನ್ನು ಅರಿತುಕೊಳ್ಳುವುದು ಸುಲಭಸಾಧ್ಯವಾಗುತ್ತದೆ.

ಸಣ್ಣ ಪುಟ್ಟ ನಿಘಂಟುಗಳಲ್ಲಿ ನಿಂಘಟಮುದ ವ್ಯಾಖ್ಯೆಯನ್ನು ಕೊಡುವುದು ಕಡ್ಡಾಯವಲ್ಲ ; ಕೇವಲ ಸಮಾನಾರ್ಥಕ ರೂಪಗಳನ್ನು ಕೊಟ್ಟರೆ ಸಾಕು. ಉದಾ :

1. ಕರ್ಮ 'ಕೆಲಸ, ಕಸಬು ; ದೇವರ ಅರ್ಚನೆ ; ಪೂರ್ವಜನ್ಮದ ಕೃತ್ಯ'
2. ಚಾಚು 'ಮುಂದೆ ನಡೆ, ಮುಂದೆ ಸಾಗು ; ಮುಂದೆ ಒಡ್ಡು, ಮುಂದೆ ನೀಡು'.

ಈ ಸಮಾನಾರ್ಥಕಗಳನ್ನು ಸೋದಾಹರಣಗಳೊಂದಿಗೆ ಸೂಚಿಸಿದರೆ ಒಳ್ಳೆಯದು. ಉದಾಹರಣೆಗಳನ್ನು ಕೊಟ್ಟಾಗ ವಾಕ್ಯದಲ್ಲಿ ನಿಘಂಟಿಮು ಉಳಿದ ಪದಗಳ ಜೊತೆ ಸೇರಿಕೊಳ್ಳುವ ರೀತಿಯನ್ನು ತಿಳಿದುಕೊಳ್ಳುವುದು ಸಾಧ್ಯವಾಗುತ್ತದೆ ಮಾತ್ರವಲ್ಲದೆ ಆಗ ಉಂಟಾಗುವ ಅರ್ಥವ್ಯತ್ಯಾಸಗಳ ಕಲ್ಪನೆಯೂ ನಮಗಾಗುತ್ತದೆ.

ನಿಘಂಟಿಮಗಳ ವಿವಿಧ ಸಾಂದರ್ಭಿಕ ಅರ್ಥವ್ಯತ್ಯಾಸಗಳು, ಅರ್ಥದ ಹರವು ಸಮಾನಾರ್ಥಕ ರೂಪಗಳ ಅರ್ಥವ್ಯಾಪ್ತಿ ಇವುಗಳೆಲ್ಲವೂ ಸೂಕ್ತ ಉದಾಹರಣೆಗಳು ಕೊಟ್ಟಾಗ ಮನದಟ್ಟಾಗುತ್ತವೆ. ಈ ಕಾರಣದಿಂದಾಗಿ ಉದಾಹರಣೆಗಳನ್ನು ನೀಡುವುದು ಬಹಳ ಉಪಯುಕ್ತ. ಅವುಗಳಿಂದಾಗಿ ನಿಘಂಟಿಮಗಳ ಬಳಕೆಯ ಬಗೆಗೆ ನಮಗೆ ನಿರ್ದಿಷ್ಟ ಜ್ಞಾನ ದೊರಕುತ್ತದೆ. ಉದಾಹರಣೆಗಾಗಿ ಒಳ್ಳೆಯ ಎಂಬ ನಿಘಂಟಿಮಕ್ಕೆ 'ಸಂತೋಷವನ್ನುಂಟುಮಾಡುವ ಅಥವಾ ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಅಥವಾ ಪಂಚೇಂದ್ರಿಯಗಳಿಗೆ ತೃಪ್ತಿಯನ್ನು ಕೊಡುವ' ಎಂಬ ನಿಘಂಟಿಮಾತ್ಮಕ ವ್ಯಾಖ್ಯೆಯೊಂದಿಗೆ, ಒಳ್ಳೆಯ ಮುಖ, ಹೂ, ನೋಟ ; ಒಳ್ಳೆಯ ಸಂಗೀತ, ಒಳ್ಳೆಯ ಹವೆ ಇಂತಹ ಉದಾಹರಣೆಗಳನ್ನು ಕೊಟ್ಟಾಗ ಒಳ್ಳೆಯ ಎಂಬ ನಿಘಂಟಿಮುದ ಅರ್ಥವ್ಯಾಪ್ತಿ ಕೇವಲ ವ್ಯಾಖ್ಯೆಗಿಂತ ಹೆಚ್ಚು ಮನವರಿಕೆಯಾಗುತ್ತದೆ. ನಿಘಂಟುವಿನಲ್ಲಿ ನಿಘಂಟಿಮುದ ಬಳಕೆಗೆ ಸಂಬಂಧಪಟ್ಟ ಎಲ್ಲ ಸಂದರ್ಭೋಚಿತ ಉದಾಹರಣೆಗಳನ್ನು ಕೊಡುವುದು ಅಸಾಧ್ಯವಾದುದರಿಂದ ಕೆಲವೊಂದು ಮಾದರಿಯಾತ್ಮಕ (Typical) ಉದಾಹರಣೆಗಳನ್ನು ಮಾತ್ರ ಕೊಡಬೇಕಾಗುತ್ತದೆ.

ಉದಾಹರಣೆಗಳು : ನಿಘಂಟುವಿನಲ್ಲಿಯ ಉದಾಹರಣೆಗಳನ್ನು ಲಭ್ಯ ಪಠ್ಯಗಳಿಂದ ಆರಿಸಿ ಕೊಳ್ಳಬಹುದು. ಅಥವಾ ನಿಘಂಟುಕಾರನೇ ಸೃಷ್ಟಿಸಿಕೊಳ್ಳಬಹುದು. ವ್ಯುತ್ಪತ್ತಿ ನಿಘಂಟುಗಳಲ್ಲಿ ಪಠ್ಯಗಳಿಂದ ಆಯ್ಕೆ ಮಾಡಿಕೊಂಡ ಉದಾಹರಣೆಗಳಿಗೆ ಹೆಚ್ಚಿನ ಮಹತ್ವವಿದೆ. ಈ ಉದ್ಧರಣೆಗಳು ವ್ಯಾಕರಣಾತ್ಮಕ ಪೂರ್ಣ ವಾಕ್ಯ ರೂಪದ್ದಾಗಿರುವುದು ಒಳ್ಳೆಯದು ಹಾಗೂ ಅಗತ್ಯವಿಲ್ಲದಿದ್ದಲ್ಲಿ ಈ ಉದ್ಧರಣೆಗಳನ್ನು ಮೊಟಕುಗೊಳಿಸಬಹುದು (ಉದಾ : 1. (ಕ್ಲಾಸಿಗೆ ಹೋದಾಗ) ಒಳ್ಳೆಯ ಮುಖವನ್ನು ನೋಡುವ ಅನುಭವ (ವಾದರೂ ದೊರೆಯಿತು). 2. ಒಳ್ಳೆಯ ಹವೆ ಇದ್ದುದರಿಂದ ನಾವೆಲ್ಲರೂ... ಪ್ರವಾಸಕ್ಕೆ ಹೊರಟೆವು.

ಸೂಕ್ತ ಉದ್ಧರಣೆಗಳನ್ನು ಪಠ್ಯದಿಂದ ಆರಿಸುವುದು ಮಾತ್ರ ಬಹಳ ಶ್ರಮದ ಕೆಲಸ. ಆದುದರಿಂದ ಹೆಚ್ಚಾಗಿ ನಿಘಂಟುಕಾರನು ನಿರೂಪಕರ ಸಹಾಯದಿಂದ ಅಥವಾ ತನ್ನ ಅನುಭವದಿಂದ ಸೂಕ್ತ ಉದಾಹರಣೆಗಳನ್ನು ಸೃಷ್ಟಿಸಿಕೊಳ್ಳುವುದು ಅನಿವಾರ್ಯ. ಅವು ಹೆಚ್ಚಾಗಿ ಸ್ವರೂಪದೃಷ್ಟಿಯಿಂದ ಚಿಕ್ಕದಾಗಿರುತ್ತವೆ :

ಕೆಟ್ಟ : ಹುಡುಗ, ನಾಯಿ, ಹವೆ.
ಸೂಕ್ತ : ಸೂಕ್ತ ಉತ್ತರ, ಇತ್ಯಾದಿ.

ನಿಘಂಟಿಮದ ಅರ್ಥ ಹಾಗೂ ಉದಾಹರಣೆಗಳನ್ನು ಕೊಟ್ಟ ಬಳಿಕ ಅದಕ್ಕೆ ಸಂಬಂಧಿಸಿದ ನುಡಿಗಟ್ಟುಗಳು (Idioms) ಗಾದೆಗಳು ಇತ್ಯಾದಿಗಳನ್ನು ಉಪಭಾಗ ವಾಗಿ ನಮೂದಿಸಬಹುದು.

ನಿಘಂಟಿಮದ ವಿವರಣೆ (Gloss) ಅದರ ಅರ್ಥದಷ್ಟೇ ಪ್ರಮುಖ. ಸೂಚಿಸ ಲಾದ ನಿಘಂಟಿಮದ ಸ್ವರೂಪವೇನು ? ಅದು ಭಾವನಾತ್ಮಕವೇ, ಗ್ರಾಮ್ಯವೇ, ಆಡು ಮಾತಿಗೆ ಸೇರಿದ್ದೇ, ಪ್ರಾದೇಶಿಕ ರೂಪವೇ, ಹಳಗನ್ನಡ ರೂಪವೇ, ನಡುಗನ್ನಡ ರೂಪವೇ, ಪಾರಿಭಾಷಿಕ ಪದವೇ ಮೊದಲಾದ ವಿವರ ನಿಘಂಟಿಮದ ಜೊತೆಯಲ್ಲಿಯೇ ನಮೂದಿಸಬೇಕು. ಅವನ್ನು ಹೆಚ್ಚಾಗಿ ಸಂಕ್ಷಿಪ್ತರೂಪದಲ್ಲಿ ಸೂಚಿಸುತ್ತಾರೆ. ಉದಾ : ಗ್ರಾಂ. (=ಗ್ರಾಂಥಿಕ) ; ಆ. ಮಾ. (=ಆಡುಮಾತು) : ಗ್ರಾ. (=ಗ್ರಾಮ್ಯ); ಪ್ರಾ.ರೂ. (=ಪ್ರಾಚೀನ ರೂಪ); ಸ. ಶಾ. (=ಸಸ್ಯಶಾಸ್ತ್ರ); ಪ್ರಾ. ಶಾ (=ಪ್ರಾಣಿ ಶಾಸ್ತ್ರ) ಇತ್ಯಾದಿ. ಪಂಡಿತರು ಒಪ್ಪಿಕೊಂಡ ರೂಪಗಳನ್ನೇ ಈ ವಿವರ ಕೊಡಲು ಬಳಸಬೇಕೇ ವಿನಹ ಮನಸ್ಸಿಗೆ ಬಂದಂತೆ ಅವುಗಳನ್ನು ಬದಲಾಯಿಸಿಕೊಳ್ಳಬಾರದು.

ಸಾಧಿತ ರೂಪ (Divided form) ಗಳನ್ನು ನಿಘಂಟಿಮಗಳನ್ನಾಗಿ ಆರಿಸಿ ಕೊಳ್ಳಬಹುದು. ಆದರೆ ಆಗ ಅವುಗಳ ಮೂಲರೂಪಗಳನ್ನು ಅಲ್ಲಿಯೇ ಸೂಚಿಸ ಬೇಕು :

ವಿದ್ಯಾರ್ಥಿನಿ (< ವಿದ್ಯಾರ್ಥಿ)
ಅಧ್ಯಾಪಕಿ (< ಅಧ್ಯಾಪಕ) ಇತ್ಯಾದಿ.

ನಿಘಂಟಿಮಗಳ ಅನೇಕಾರ್ಥತೆ(Polysemy)ಯನ್ನು ಅಭಿವ್ಯಕ್ತಗೊಳಿಸುವುದು ನಿಘಂಟುಕಾರನ ಸಮಸ್ಯೆಗಳಲ್ಲಿ ಪ್ರಮುಖವಾದುದು. ದೊಡ್ಡ ನಿಘಂಟಿಮಗಳ ಅನೇಕಾರ್ಥತೆಯನ್ನು ಸವಿಸ್ತಾರವಾಗಿ ಸೂಕ್ತ ಉದಾಹರಣೆಗಳೊಂದಿಗೆ ಕೊಡು ತ್ತಾರೆ ; ಆದರೆ, ಸಣ್ಣ ನಿಘಂಟುಗಳಲ್ಲಿ ಪ್ರಮಾಣ ಭಾಷೆಯಲ್ಲಿ ಇಲ್ಲದ ಪ್ರಮುಖ ವಾದ ಅರ್ಥಗಳಿಗೆ ಅಷ್ಟೇ ಸ್ಥಾನ ಕೊಡಬೇಕು. ಪ್ರಧಾನ ಅರ್ಥಕ್ಕೆ ಪ್ರಥಮ ಸ್ಥಾನ. ನಿಘಂಟಿಮಕ್ಕೆ ಹಲವು ಅರ್ಥಗಳಿದ್ದು ಯಾವುದೇ ಪ್ರಧಾನ ಅರ್ಥವಿಲ್ಲದಿರು

ವಾಗ ಹೆಚ್ಚು ಬಳಕೆಯಲ್ಲಿದ್ದ ಅರ್ಥಕ್ಕೆ ಪ್ರಧಾನ ಸ್ಥಾನ ಕೊಡುವುದು ನಿಯಮ. ಆ ಬಳಿಕ ಇತರ ಅರ್ಥಗಳನ್ನು (ವಿಶಿಷ್ಟಾರ್ಥ, ಪಾರಿಭಾಷಿಕ ಅರ್ಥ, ರೀತ್ಯರ್ಥ (Style), ಪ್ರಾಚೀನಾರ್ಥ, ಪ್ರಾದೇಶಿಕಾರ್ಥ, ಗ್ರಾಮ್ಯಾರ್ಥ. ಅಶ್ಲೀಲಾರ್ಥ ಇತ್ಯಾದಿ) ನಮೂದಿಸುತ್ತಾರೆ.

1.3 ದ್ವಿಭಾಷಿಕ ನಿಘಂಟು ರಚನೆ :

ಒಂದು ಭಾಷೆಯ ನಿಘಂಟಿಮಗಳನ್ನು ಇನ್ನೊಂದು ಭಾಷೆಯ ಸಮಾನ ಸ್ಥಾನೀಯ ಹಾಗೂ ಸಮಾನಾರ್ಥಕ (Equivalent) ನಿಘಂಟಿಮಗಳೊಂದಿಗೆ ಹೊಂದಿಸಿ ನಿರೂಪಿಸುವುದೇ ದ್ವಿಭಾಷಿಕ ನಿಘಂಟುವಿನ ಗುರಿ. ಯಾವ ಭಾಷೆಯ ನಿಘಂಟಿಮಗಳನ್ನು ಇನ್ನೊಂದು ಭಾಷೆಯ ನಿಘಂಟಿಮಗಳೊಂದಿಗೆ ಹೊಂದಿಸಿ ನಿರೂಪಿಸುತ್ತಾರೆಯೊ ಆ ಭಾಷೆಯನ್ನು ಆಕರ ಭಾಷೆ(Source language)ಯೆಂದೂ ಎರಡನೆಯ ಭಾಷೆಯನ್ನು ಉದ್ದಿಷ್ಟ ಭಾಷೆ (Target language) ಎಂದೂ ಕರೆಯುತ್ತಾರೆ.

ಭಾಷೆ ಭಾಷೆಗಳಲ್ಲಿ ವ್ಯತ್ಯಾಸಗಳಿರುವುದರಿಂದ ಅವುಗಳ ನಿಘಂಟಿಮಗಳನ್ನು ಹೊಂದಿಸಿ ನಿರೂಪಿಸುವುದು ಸುಲಭಸಾಧ್ಯ ಕೆಲಸವಲ್ಲ. ಒಂದು ಭಾಷೆಯಲ್ಲಿಯ ಸಾಂಸ್ಕೃತಿಕ ಪದಗಳಿಗೆ ಹಾಗೂ ವಿಶಿಷ್ಟ ಪದಪುಂಜಗಳಿಗೆ ಸಮಾನಾರ್ಥಕಗಳನ್ನು ಹುಡುಕುವುದು ಬಹು ಕಠಿಣವಾದುದು. ಹೀಗೆ ಕನ್ನಡ ಭಾಷೆಯಲ್ಲಿಯ ತಿಂಡಿ ತಿನಿಸುಗಳಾದ ದೋಸೆ, ಇಡ್ಲಿ, ಚಕ್ಕುಲಿ ಮೊದಲಾದುವುಗಳಿಗೆ ಇಂಗ್ಲೀಷಿನಲ್ಲಿ ಸಮಾನಾರ್ಥಕಗಳು ಸಿಗುವುದು ಅಸಾಧ್ಯ. ಇದೇ ರೀತಿಯಲ್ಲಿ ಇಂಗ್ಲೀಷ್‌ನ Beer-Pub, Beauty-Parlour, Car, Cycle, Ice-creem, Cake ಮುಂತಾದ ನಿಘಂಟಿಮಗಳಿಗೆ ಕನ್ನಡ ಸಮಾನಾರ್ಥಕಗಳು ಸಿಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಆಕರ ಭಾಷೆಯ ನಿಘಂಟಿಮಗಳಿಗೆ ಉದ್ದಿಷ್ಟ ಭಾಷೆಯಲ್ಲಿ ಅರ್ಥವಾಗುವ ರೀತಿಯಲ್ಲಿ ವಿವರಣೆ ಕೊಡಬೇಕಾಗುತ್ತದೆ.

ಉದಾ : ದೋಸೆ—'a cake prepared in a pan'

ಚಕ್ಕುಲಿ—'a snack prepared out of dough in a circular manner

Beer-pub—ಬಿಯರನ್ನು ಮಾತ್ರ ಕುಡಿಯುವುದಕ್ಕೆ ಇರುವ ಅಂಗಡಿ.

Beer—ಮೊಳೆತ ಯವೆಯಿಂದ ತಯಾರಿಸಿ ರುಚಿಗಾಗಿಯೂ ಕೆಟ್ಟು ಹೋಗದಂತಿರುವುದಕ್ಕಾಗಿಯೂ 'ಹಾಪ್' ಎಂಬ ಒಂದು ಜಾತಿ ಬಳ್ಳಿಯ ಕಹಿ ಹೂಗಳನ್ನೂ ಇತರ ಕಹಿ ಪದಾರ್ಥಗಳನ್ನೂ ಸೇರಿಸಿ ಮಾಡಿದ ಮದ್ಯ, ಬಿಯರ್.

ಆಕರ ಭಾಷೆಯ ಕೆಲವೊಂದು ಪದಗಳಿಗೆ ಉದ್ದಿಷ್ಟ ಭಾಷೆಯಲ್ಲಿ ಸಮಾನಾರ್ಥಕಗಳಿದ್ದರೂ ಅವುಗಳ ಸಮಾನತೆ ಸಂಪೂರ್ಣವಾಗಿರದೆ, ಕೇವಲ ಸಾಪೇಕ್ಷ ಸ್ವರೂಪದ್ದಾಗಿರುತ್ತದೆ. ಉದಾಹರಣೆಗಾಗಿ ಕನ್ನಡದ ದೇವರು ಎಂಬುದಕ್ಕೆ ಇರುವ ಅರ್ಥವ್ಯಾಪ್ತಿ (ಬಹುದೇವಾರ್ಥ) ಇಂಗ್ಲೀಷಿನಲ್ಲಿ ಸಮಾನಾರ್ಥಕವಾಗಿರುವ God ಎಂಬ ನಿಘಂಟಿಮಕ್ಕೆ ಇಲ್ಲ. ಇಂಥ ಸಾಂಸ್ಕೃತಿಕ ಪದಗಳಿಗೆ ಸಮಾನಾರ್ಥಕಗಳು ಕೊಡುವುದು ಕಠಿಣವಾದಾಗ ಅವುಗಳಿಗೆ ತಕ್ಕುದಾದ ಅರ್ಥ ವಿವರಣೆ ಕೊಟ್ಟು ನಿಘಂಟುಕಾರ ತೃಪ್ತನಾಗಬೇಕು.

ದ್ವಿಭಾಷಿಕ ನಿಘಂಟನ್ನು ಯೋಜಿಸುವಲ್ಲಿ ನಿಘಂಟುಕಾರನ ಗುರಿ ಪ್ರಮುಖ ಪಾತ್ರ ವಹಿಸುತ್ತದೆ. ಅಂದರೆ ಕೇವಲ ಆಕರ ಭಾಷೆಯ ಅಥವಾ ಉದ್ದಿಷ್ಟ ಭಾಷೆಯ ಪಠ್ಯ (Text)ವನ್ನು ಸಾಮಾನ್ಯ ರೀತಿಯಲ್ಲಿ ತಿಳಿದುಕೊಳ್ಳಲು ಅಥವಾ ಆ ಭಾಷೆಯನ್ನು ಹೆಚ್ಚು ಆಳವಾಗಿ ತಿಳಿದುಕೊಳ್ಳಲು ಅಥವಾ ಆ ಭಾಷೆಯಲ್ಲಿ ಪಠ್ಯದ ಭಾಷಾಂತರ ಮಾಡಲು ಇತ್ಯಾದಿಯಾಗಿ ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ನಿಘಂಟು ರಚನೆಗೆ ಕೈಹಾಕಬೇಕಾಗುತ್ತದೆ. ನಿಘಂಟುವಿನ ಸ್ವರೂಪವನ್ನು ಗಮನಿಸಿ ಅಲ್ಲಿಯ ನಿಘಂಟಿಮಗಳ ವಿವರ, ಪಠ್ಯ ಸಂದರ್ಭ, ಪ್ರಯೋಗ, ಉದಾಹರಣೆ ಇತ್ಯಾದಿಗಳ ಪ್ರಮಾಣವನ್ನು ನಿರ್ದಿಷ್ಟಪಡಿಸಿಕೊಳ್ಳಬೇಕಾಗುತ್ತದೆ.

ಒಂದು ಭಾಷೆಯ ಪಠ್ಯಗಳನ್ನು ಅರ್ಥೈಸುವಲ್ಲಿ ಸರಳ ಸ್ವರೂಪದ ನಿಘಂಟುಗಳು ಸಾಕಾಗುತ್ತವೆ. ಅವುಗಳಲ್ಲಿ ಆಕರ ಭಾಷೆಯ ನಿಘಂಟಿಮಗಳಿಗೆ ಹೆಚ್ಚು ಕಡಿಮೆ ಸರಿದೂಗುವ ಸಮಾನಾರ್ಥಕಗಳನ್ನು ಉದ್ದಿಷ್ಟ ಭಾಷೆಯಲ್ಲಿ ಕೊಟ್ಟರೆ ಸಾಕು. ಉದಾ;- ಇಂಗ್ಲಿಷಿನ Churl ಎಂಬುದಕ್ಕೆ ಕನ್ನಡದಲ್ಲಿ 'ಕೀಳು ಹುಟ್ಟಿನವನು, ಹಳ್ಳಿಗ, ಗಾಮಿಲ, ಅಸಭ್ಯ, ಅಶಿಕ್ಷಿತ, ಒರಟ, ವಕ್ರ ಇತ್ಯಾದಿ ಈ ರೀತಿಯ ನಿಘಂಟುಗಳು ಸಮಾನಾರ್ಥಕಗಳಿಗೆ ಸೀಮಿತವಾಗಿರುತ್ತವೆ.

ಆಕರ ಭಾಷೆಯ ಪಠ್ಯಕ್ಕೆ ಸರಿಹೊಂದುವ ಉದ್ದಿಷ್ಟ ಭಾಷೆಯ ಪಠ್ಯವನ್ನು ರಚಿಸುವುದಕ್ಕೋಸ್ಕರ ನಿಘಂಟುವಿನ ರಚನೆ ಮಾಡುವಲ್ಲಿ ನಿಘಂಟುಕಾರನು ಅರ್ಥ ವೈವಿಧ್ಯತೆಗೂ, ಪಠ್ಯ ಸಂದರ್ಭಗಳಿಗೂ ಹೆಚ್ಚು ಪ್ರಾಧಾನ್ಯತೆ ಕೊಡಬೇಕಾಗುತ್ತದೆ. ಆದರೆ ಒಂದೇ ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ನಿಘಂಟು ರಚನೆ ಮಾಡುವುದು ಬಹು ವಿರಳ. ಕಾರಣ ನಿಘಂಟುಕಾರ ಅನೇಕ ಗುರಿಗಳನ್ನಿಟ್ಟುಕೊಂಡು ನಿಘಂಟುವನ್ನು ರಚಿಸಬೇಕಾಗುತ್ತದೆ.

ಗಾತ್ರದ ದೃಷ್ಟಿಯಿಂದ ದ್ವಿಭಾಷಿಕ ನಿಘಂಟು ಅತಿ ಚಿಕ್ಕದಾಗಿರಬಾರದು. ಅದರಲ್ಲಿ ಸಾಕಷ್ಟು ನಿಘಂಟಿಮಗಳನ್ನು ಸೇರಿಸಬೇಕಲ್ಲದೆ, ಪ್ರತಿಯೊಂದು ನಿಘಂಟಿಮದ ಕೆಳಗೆ ಹೆಚ್ಚಿನ ಪ್ರಮಾಣದಲ್ಲಿ ಮಾಹಿತಿಯನ್ನು ಒದಗಿಸಬೇಕು.

ಆದರೆ ಕೇವಲ ಪ್ರವಾಸಿಗರಿಗೆ ಅಥವಾ ವಿದ್ಯಾರ್ಥಿಗಳಿಗೆ ಸೀಮಿತವಾಗಿ ರಚಿಸಿದ ನಿಘಂಟುಗಳ ಗಾತ್ರ ಅಷ್ಟು ವಿಸ್ತಾರವಾಗಬೇಕಾಗಿಲ್ಲ.

1. **ಕ್ಷೇತ್ರಕಾರ್ಯ** : ಏಕಭಾಷಿಕ ನಿಘಂಟು ರಚನೆಯಲ್ಲಿ ಅಳವಡಿಸುವ, ಈ ಮೊದಲೇ ವಿವರಿಸಲಾದ, ಕ್ಷೇತ್ರಕಾರ್ಯ ವಿಧಾನವನ್ನೇ ಅಳವಡಿಸಬಹುದು.

2. ನಿಘಂಟಿಮುಗಳ ಆಯ್ಕೆ, ನಿಘಂಟುವಿನ ಸ್ವರೂಪ, ಅದರ ಗುರಿ ಹಾಗೂ ವ್ಯಾಪ್ತಿಯನ್ನು ಅವಲಂಬಿಸಿದೆ. ಪಠ್ಯಕ್ಕೆ ನಿಯಮಿತವಾದ ನಿಘಂಟುವಿನಲ್ಲಿ ಆರಿಸಿದ ಪಠ್ಯದ ನಿಘಂಟಿಮುಗಳನ್ನು ಮಾತ್ರ ನಿಘಂಟುವಿನಲ್ಲಿ ಸೇರಿಸಬೇಕಾಗುತ್ತದೆ. ಆ ನಿಘಂಟು ಗಾತ್ರದಲ್ಲಿ ಚಿಕ್ಕದಾದರೆ ಪಲವಾರು ನಿಘಂಟಿಮಗಳನ್ನು ತೆಗೆದುಕೊಂಡು ಕೈಬಿಡಬೇಕಾಗುತ್ತದೆ. ಅಂತೆಯೇ ಗ್ರಾಮ್ಯ ಪದಗಳನ್ನು, ಅಶ್ಲೀಲ ಪದಗಳನ್ನು ಬಿಟ್ಟುಬಿಡಬೇಕಾಗುತ್ತದೆ.

ಆಕರ ಭಾಷೆ ಮಾತನಾಡುವವನ ಉದ್ದಿಷ್ಟ ಭಾಷೆಯ ಪಠ್ಯಗಳನ್ನು ಉತ್ಪಾದಿಸಲು ಅನುಕೂಲ ಮಾಡಿಕೊಡುವುದು ನಿಘಂಟು ರಚನೆಯ ಉದ್ದೇಶವಾದರೆ, ಉದ್ದಿಷ್ಟ ಭಾಷೆಯ ಪಠ್ಯಗಳ ನಿಘಂಟಿಮುಗಳನ್ನು ನಿಘಂಟು ರಚನೆಗೋಸ್ಕರ ಆರಿಸುವುದು ಬಹು ಮುಖ್ಯ. ಆದರೆ ಪ್ರತಿ ಸಲ ಯೋಗ್ಯ ಸಮಾನಾರ್ಥಕಗಳು ಸಿಗುವುದು ಬಹು ಕಠಿಣ.

ಪರಸ್ಪರ ವಾಂಶಿಕ ಸಂಬಂಧವುಳ್ಳ ಭಾಷೆಗಳಿಗೆ ಸಣ್ಣ ಗಾತ್ರದ ನಿಘಂಟುವನ್ನು ರಚಿಸುವುದಾದರೆ ಎರಡೂ ಭಾಷೆಗಳಲ್ಲಿ ಸಮಾನ ರೂಪ ಹಾಗೂ ಅರ್ಥವುಳ್ಳ ನಿಘಂಟಿಮುಗಳನ್ನು ಅದರಲ್ಲಿ ಸೇರಿಸಬೇಕಾಗಿಲ್ಲ. ಅಥವಾ ರೂಪದಲ್ಲಿ ಸ್ವಲ್ಪವೇ ವ್ಯತ್ಯಾಸವಿದ್ದು ಅರ್ಥದಲ್ಲಿ ವ್ಯತ್ಯಾಸವಿಲ್ಲದಿದ್ದರೆ ಅವುಗಳನ್ನು ಬಿಡಬಹುದು.

ಉದಾ :	ತುಳು	ಕನ್ನಡ
	ಕಣ್ಣ್	ಕಣ್ಣು
	ಕಯ್	ಕೈ
	ತೋರ	ಪೋರ ಇತ್ಯಾದಿ

ಯಾವುದೇ ಸಮಸ್ಯೆ ಉದ್ಭವಿಸಿದಾಗ ನಿಘಂಟುವಿನ ಸ್ವರೂಪ, ಗುರಿ, ಹಾಗೂ ಗಾತ್ರ–ಇವುಗಳನ್ನು ಗಮನದಲ್ಲಿಟ್ಟು ಪರಿಣತರ ಅಭಿಪ್ರಾಯವನ್ನು ಪಡೆದು ಅದನ್ನು ಕೂಡಲೇ ನಿವಾರಿಸಿಕೊಳ್ಳಬೇಕು. ಇಂದಿನ ಸಮಸ್ಯೆಗಳನ್ನು ನಾಳೆಗೆ ಕಾಯ್ದಿಡಬಾರದು. ವಾಂಶಿಕ ಸಂಬಂಧವಿಲ್ಲದ ಭಾಷೆಗಳಿಗೆ ಸಮಾನ ವ್ಯಾಕರಣ ವರ್ಗಗಳು ಸಿಗದೆ ಇದ್ದಾಗ ನಿಘಂಟಿಮುದ ಬಳಿಕ ಆಯಾ ಭಾಷಾ ವ್ಯಾಕರಣ ವರ್ಗ ಸೂಚಿಸಿ

ಅರ್ಥವನ್ನು ಕೊಡಬೇಕಾಗುತ್ತದೆ. ಆಕರ ಭಾಷೆಯ ನಿಘಂಟಿಮಗಳಿಗೆ ಸೂಕ್ತ ವಾದ ಸಮಾನಾರ್ಥಕಗಳನ್ನು ಉದ್ದಿಷ್ಟ ಭಾಷೆಯಿಂದ ದೊರಕಿಸಿಕೊಡಬೇಕಾದರೆ ಆ ಎರಡೂ ಭಾಷೆಯಲ್ಲಿ ಆರಿಸಿದ ನಿಘಂಟಿಮ ಹಾಗೂ ಅದರ ಸಮಾನಾರ್ಥಕವಾಗಿ ಬಳಕೆಯಾಗುವ ಎಲ್ಲ ಪಠ್ಯ—ಸಂದರ್ಭಗಳನ್ನು ಕಲೆ ಹಾಕಬೇಕಾಗುತ್ತದೆ. ಆ ಬಳಿಕ ಸಮಾನಾರ್ಥಕಗಳನ್ನು ಆರಿಸಿ ನಿಘಂಟುವಿನಲ್ಲಿ ಸೂಚಿಸಬೇಕಾಗುತ್ತದೆ. ಸರಿಯಾದ ಸಮಾನಾರ್ಥಕಗಳು ಸಿಗದಿದ್ದಾಗ ನಿಘಂಟಿಮಗಳ ವಿವರಣೆ ಕೊಡ ಬೇಕಾಗುತ್ತದೆ. ಅದನ್ನು ಕೊಡಲು ಅಸಾಧ್ಯವಾದಾಗ ಆ ನಿಘಂಟಿಮಗಳ ಕ್ರಿಯೆ ಯನ್ನು ಸೂಚಿಸಬೇಕು (ಉದಾ : ಪ್ರತಿಧ್ವನಿ ಶಬ್ದಗಳು, ವಿಸ್ಮಯಕಾರಕ ರೂಪ ಗಳು ಇತ್ಯಾದಿ).

3. **ನಿಘಂಟಿಮಗಳ ರಚನೆ :** ನಿಘಂಟಿಮವನ್ನು ಅದರ ನಿಯಮಾಂಕೂಲಿತ ರೂಪ (Canonical form) ದಲ್ಲಿ ನಮೂದಿಸಬೇಕು. ಅದರ ವಿವಿಧ ವ್ಯಾಕರಣ ರೂಪವ್ಯತ್ಯಾಸಗಳನ್ನು ಸೂಚಿಸಬೇಕು (ಬರು, ಬನ್ದ—ಭೂತಕಾಲ). ನಿಘಂಟಿಮದ ಉಚ್ಚಾರವನ್ನು ತಿಳಿಸಬೇಕಾಗುತ್ತದೆ (: Cough [K⊃f] ; ಫಲ [fala/Phala]).

ನಿಘಂಟಿಮಗಳಿಗೆ ಸಾಮಾನ್ಯವಾಗಿ ಒಂದೇ ಅರ್ಥ ಇಲ್ಲದಿರುವುದರಿಂದ ಅವು ಗಳ ವಿಭಿನ್ನ ಅರ್ಥಗಳನ್ನು ಸಂದರ್ಭಸಹಿತವಾಗಿ ಸೂಚಿಸುವುದು ಬಹು ಪ್ರಮುಖ ವಾದ ವಿಷಯ. ಕೆಲವೊಮ್ಮೆ ಈ ಸಂದರ್ಭಗಳಿಂದಲೂ ಅರ್ಥದ ತೊಡಕುಗಳಿಗೆ ಪರಿಹಾರ ಸಿಗದೆ ಇರಬಹುದು. ಆದುದರಿಂದ ತಕ್ಕುದಾದ ಪ್ರಯೋಗಗಳನ್ನು ಕೊಡುವುದೂ ಹಿತಕಾರಿ. ಈ ಎಲ್ಲ ತಂತ್ರಗಳಿಂದಾಗಿ ಅರ್ಥ ಸುಸ್ಪಷ್ಟಗೊಳ್ಳು ತ್ತದೆ.

ನಿಘಂಟಿಮಗಳ ವ್ಯಾಕರಣ ಮಾಹಿತಿಯನ್ನು ನಿಘಂಟಿಮದ ಜೊತೆಯಲ್ಲಿ ಕೊಡಬೇಕು. (: ಹೋಗು ಚತುರ್ಥೀ ವಿಭಕ್ತಿ ಪ್ರತ್ಯಯ ; ಹೊಡೆ— ದ್ವಿತೀಯ ವಿಭಕ್ತಿ ಪ್ರತ್ಯಯ).

ಈ ನಿಘಂಟಿಮಗಳನ್ನು ನಿಘಂಟುವಿನಲ್ಲಿ ಸೂಚಿಸುವಲ್ಲಿ ಆ ಭಾಷೆಯ ಅಕಾರಾದಿಯನ್ನು ಅವಲಂಬಿಸುವುದು ಹೆಚ್ಚು ಸೂಕ್ತ. ಕನ್ನಡ-ಇಂಗ್ಲೀಷು ನಿಘಂಟುವಿ ನಲ್ಲಿ ಅ ಆ ಇ ಈ... ಈ ರೀತಿಯಾಗಿ ನಿಘಂಟಿಮಗಳನ್ನು ಸೂಚಿಸಬೇಕೇ ಹೊರತು ಅ ಬ ಡ ಕ – ಈ ರೀತಿಯಲ್ಲಿ ಅಲ್ಲ.

1.4 ನಿಘಂಟು ಯೋಜನೆ

ನಿಘಂಟು ರಚನೆಗೆ ಅದರ ಸ್ವರೂಪ ಹಾಗೂ ಗಾತ್ರವನ್ನು ಅವಲಂಬಿಸಿ, ಹಲವಾರು ವರ್ಷಗಳು, ದಶಕಗಳು ಬೇಕಾಗಬಹುದು. ಕೆಲವೊಮ್ಮೆ ಅದು ಆಜೀವ

ಪರ್ಯಂತ ಕೆಲಸವೂ ಹೌದು. ಇಂತಹ ದೀರ್ಘಾವಧಿಯ ಕೆಲಸದಲ್ಲಿ ಒಬ್ಬ ಅಥವಾ ಹಲವಾರು ವ್ಯಕ್ತಿಗಳ ವೇಳೆ ಹಾಗೂ ಮಾನಸಿಕ ಶಕ್ತಿ ನಿಘಂಟು ರಚನೆಗೋಸ್ಕರ ವ್ಯಯವಾಗುತ್ತದೆ. ಪ್ರತಿಯೊಂದು ಕಾರ್ಡಿನಲ್ಲಿ ಬರೆಯಲಾಗಿದ್ದ ನಿಘಂಟಿನುವನ್ನು ಕುರಿತು ತಾದಾತ್ಮ್ಯತೆಯಿಂದ ನಿಘಂಟುಕಾರನು ಯೋಚಿಸಬೇಕಾಗುತ್ತದೆ. ನಿಘಂಟಿನುದ ಸ್ವರೂಪ ಗಾತ್ರಗಳನ್ನು ಕುರಿತು, ಬೇಕಾಗುವ ಹಣದ ವ್ಯವಸ್ಥೆಯನ್ನು ಕುರಿತು, ನಿರೂಪಕರನ್ನು ಕುರಿತು ಹಾಗೂ ಇತರ ಸಿಬ್ಬಂದಿಯನ್ನು ಕುರಿತು ಅತ : ಆಕೆ ಬಹು ಜಾಗರೂಕತೆಯಿಂದ ಒಂದು ನಿರ್ದಿಷ್ಟ ಯೋಜನೆಯನ್ನು ಹಾಕಿಕೊಳ್ಳ ಬೇಕಾಗುತ್ತದೆ.

ಒಂದು ನಿರ್ದಿಷ್ಟ ಅವಧಿಯಲ್ಲಿ ನಿಘಂಟು ರಚನೆಯ ಕಾರ್ಯವನ್ನ ಮುಗಿಸ ಬೇಕೆಂಬ ನಿರ್ಣಯ ತೆಗೆದುಕೊಂಡು ಅದು ಅಸಾಧ್ಯವೆನಿಸಿದಾಗ ಎಷ್ಟೋಸಲ ನಿಘಂಟುಕಾರನಿಗೆ ಈ ಕೆಲಸದ ಬಗೆಗೆ ತಾತ್ಸಾರ, ಜುಗುಪ್ಸೆ ಉಂಟಾಗುವುದೂ ಉಂಟು. ಈ ಪ್ರವೃತ್ತಿ ಆತನ ಸಿಬ್ಬಂದಿ ವರ್ಗದವರಲ್ಲೂ ಉಂಟಾಗಬಹುದು.

ಭಾಷೆಯ ಸ್ವರೂಪ, ಬೆಳವಣಿಗೆ, ಸಾಮಾಜಿಕ ಸ್ಥಾನಮಾನಗಳನ್ನು ಅವಲಂಬಿಸಿ ಆ ಭಾಷೆಯ ನಿಘಂಟು ರಚನೆಯ ಯೋಜನೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ಒಂದು ಭಾಷೆಯಲ್ಲಿ ಪ್ರಥಮ ಬಾರಿಗೆ ನಿಘಂಟು ರಚಿಸುವಾಗ ಸಣ್ಣ ಗಾತ್ರದ ನಿಘಂಟನ್ನು ರಚಿಸುವುದು ಒಳ್ಳೆಯದು. ಆ ಭಾಷೆಗೆ ಸರಿಹೋಗುವ ಲಿಪಿಯನ್ನು ಸೂಚಿಸಿ ಆ ಲಿಪಿಯಲ್ಲಿ ನಿಘಂಟುಗಳನ್ನು ಬರೆಯುವ ರೀತಿಯನ್ನು ತೋರಿಸುವುದೇ ಅಲ್ಲಿಯ ಪ್ರಮುಖ ಉದ್ದೇಶ. ಆ ಬಳಿಕ ದ್ವಿಭಾಷಿಕ ನಿಘಂಟು ರಚನೆಯತ್ತ ಗಮನ ಹರಿಯಿಸಬೇಕು. ಈ ನಿಘಂಟುವಿನಲ್ಲಿ ಒಂದು ರಾಜ್ಯ ಭಾಷೆಯನ್ನು (ಕನ್ನಡ, ಹಿಂದಿ, ಇಂಗ್ಲಿಷ್ ಮುಂತಾಗಿ) ಆಕರ ಭಾಷೆಯನ್ನಾಗಿ ಇಟ್ಟುಕೊಂಡು ಅಲ್ಪ ಸಂಖ್ಯಾತರ ಭಾಷೆ (ಕೊಂಕಣಿ, ತುಳು, ಕೊಡಗು ಇತ್ಯಾದಿ)ಯನ್ನು ಉದ್ದಿಷ್ಟ ಭಾಷೆ ಭಾಷೆಯನ್ನಾಗಿಟ್ಟುಕೊಳ್ಳಬೇಕು. ಆಗ ಉದ್ದಿಷ್ಟ ಭಾಷೆಯ ನಿಘಂಟಾತ್ಮಕ ಸಾಮರ್ಥ್ಯವನ್ನು ನಾವು ತಿಳಿಯಲು ಸಮರ್ಥರಾಗುತ್ತೇವೆ.

ದ್ವಿಭಾಷಿಕ ನಿಘಂಟನ್ನು ರಚಿಸಿದ ಬಳಿಕ, ಕೆಲವು ವರ್ಷಗಳ ತರುವಾಯ, ಏಕ ಭಾಷಿಕ ನಿಘಂಟನ್ನು ರಚಿಸಿದರೆ ನಿಘಂಟುಗಳಿಗೆ ಸರಿಯಾದ ಅರ್ಥವನ್ನು ಕೊಡಲು ಸುಲಭಸಾಧ್ಯವಾಗುತ್ತದೆ. ಬೆಳೆಯುತ್ತಿರುವ ಸಣ್ಣಪುಟ್ಟ ಭಾಷೆಗಳಲ್ಲಿ ಒಂದೇ ಸವನೆ ಏಕಭಾಷಿಕ ನಿಘಂಟುಗಳನ್ನು ರಚಿಸುವುದು ಕಷ್ಟಸಾಧ್ಯ ಮಾತ್ರವಲ್ಲ ಅದು ಸೂಕ್ತವೂ ಅಲ್ಲ ಎಂಬುದು ನಿಘಂಟು ವಿಜ್ಞಾನಿಗಳ ಅಭಿಪ್ರಾಯ. ಕಾರಣ, ಇಂತಹ ಭಾಷೆ ಗಳಲ್ಲಿ ನಿಘಂಟು ರಚನೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುತ್ತದೆ. ನಿಘಂಟುಗಳು

ಕೂಡ ಆರಂಭದಲ್ಲಿ ಕಡಿಮೆ ಗಾತ್ರದ್ದು ಇದ್ದು ಅದರ ಸ್ವರೂಪ ಕಾಲದ ಇತಿಮಿತಿಗೆ ಅನುಗುಣವಾಗಿರುತ್ತದೆ. ಅರ್ಥಾತ್ ಅವು ಸರ್ವಕಾಲಿಕಗಳಲ್ಲ.

ನಿಘಂಟು ರಚನೆ ಬಹು ವೆಚ್ಚದಾಯಕ. ಕಾರಣ, ಈ ಯೋಜನೆಯನ್ನು ಕೈಕೊಳ್ಳುವ ಮೊದಲು ಅದಕ್ಕೆ ಯೋಗ್ಯವಾದ ಹಣಕಾಸಿನ ವ್ಯವಸ್ಥೆ ಹಾಗೂ ಕಾಲಾವಕಾಶ ಸಿಗುವ ಏರ್ಪಾಡು ಮಾಡಿಕೊಳ್ಳಬೇಕು. ನಿಘಂಟು ರಚನೆಯ ಕೆಲಸ ಬಹಳ ಕ್ಲಿಷ್ಟದಾಯಕವಾದುದರಿಂದ ಅದನ್ನು ನಿಗದಿತ ವೇಳೆಯಲ್ಲಿ ಅಥವಾ ನಿರ್ದಿಷ್ಟ ಹಣಕಾಸು ಯೋಜನೆಯಲ್ಲಿ ಮುಗಿಸುವುದು ಸಾಮಾನ್ಯವಾಗಿ ಅಸಾಧ್ಯ. ಆದರೂ ಸಹ ಒಂದು ಸ್ಪಷ್ಟ ಕಾರ್ಯಕ್ರಮವನ್ನು ಗುರುತಿಸಿಕೊಂಡು ದತ್ತ ಸಂಗ್ರಹ ಮಾಡ ಬೇಕು. ಇದಕ್ಕಾಗಿ ಸಂದರ್ಭಕ್ಕನುಗುಣವಾಗಿ ಪುಸ್ತಕಗಳನ್ನು ಸಂಗ್ರಹಿಸಬೇಕು ಅಥವಾ : ಮತ್ತು ಭಾಷಾಕ್ಷೇತ್ರಕ್ಕೆ ಹೋಗಿ ನೇರವಾಗಿ ಕ್ಷೇತ್ರಕಾರ್ಯದಲ್ಲಿ ತೊಡಗ ಬೇಕು. ಯೋಜನೆಯ ಆರಂಭದಲ್ಲಿಯೇ ಕಾಲಾವಕಾಶದ ಬಗೆಗೆ ಸರಿಯಾದ ಕಲ್ಪನೆ ಸಿಗುವುದಿಲ್ಲ. ಕಾರ್ಯದ ಅರ್ಧ ಭಾಗ ಮುಗಿದಾಗ ಹೆಚ್ಚು ಕಡಿಮೆ ಇನ್ನೆಷ್ಟು ಕಾಲಾವಕಾಶ ಬೇಕಾದೀತು, ದುಡ್ಡು ಬೇಕಾಗಬಹುದು ಎಂಬ ಕಲ್ಪನೆ ಮೂಡುತ್ತದೆ. ಇದರ ಪ್ರಕಾರ ಪೂರ್ವಭಾವಿಯಾಗಿ ಮಾಡಿದ ಯೋಜನೆಯಲ್ಲಿ ಹೆಚ್ಚು ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ.

ಸಣ್ಣ ಗಾತ್ರದ ಶಬ್ದಕೋಶಗಳನ್ನು ರಚಿಸಲು ಹೆಚ್ಚಾಗಿ ಒಬ್ಬನೇ ಸಾಕಾಗು ತ್ತಾನೆ. ಮಧ್ಯಮ ಗಾತ್ರದ ಹಾಗೂ ಬೃಹತ್ ಗಾತ್ರದ ಶಬ್ದಕೋಶಗಳನ್ನು ರಚಿಸುವಾಗ ಅದಕ್ಕೆ ತಕ್ಕುದಾದ ಮಂಡಳಿಯೊಂದನ್ನು ರಚಿಸಬೇಕು. ಈ ಮಂಡಳಿ ಯಲ್ಲಿ ಪ್ರಧಾನ ಸಂಪಾದಕರುಗಳು, ಉಪ ಸಂಪಾದಕರುಗಳು ಹಾಗೂ ಇತರ ಸಿಬ್ಬಂದಿ ವರ್ಗದವರು ಇರುತ್ತಾರೆ.

ಸಂಪಾದಕರು ಹೆಚ್ಚಾಗಿ ನಿಘಂಟಿನುಗಳ ರಚನೆಯನ್ನು ಕುರಿತು ನಿಗಾವಹಿಸ ಬೇಕಾಗುತ್ತದೆ. ಈ ರಚನೆಯಲ್ಲಿ ಸಾಮಾನ್ಯತೆ ಹಾಗೂ ಸಮಗ್ರತೆ ಬರಬೇಕಾದರೆ ಕೆಲವೊಂದು ನಿರ್ದಿಷ್ಟ ನಿಯಮಗಳನ್ನು ಅವರು ರೂಪಿಸಿಕೊಳ್ಳಬೇಕಾಗುತ್ತದೆ. ಪ್ರತಿಯೊಂದು ನಿಘಂಟಿನ ಪೂರ್ತಿ ವಿವರಗಳನ್ನು ಅವರು ಪರಸ್ಪರ ಚರ್ಚಿಸಿ ಕೊಳ್ಳಬೇಕು. ಸಂಪಾದಕ ಮಂಡಳಿಯ ಸದಸ್ಯರು ಆಗಾಗ ಕೂಡಿಕೊಂಡು ಈ ರೀತಿಯ ಚರ್ಚೆ ನಡೆಯಿಸಿದಾಗ ಮಾತ್ರ ಹಲವಾರು ತಪ್ಪು ಹಾಗೂ ದೋಷಗಳನ್ನು ನಿವಾರಿಸುವುದು ಸಾಧ್ಯವಾಗುತ್ತದೆ. ಈ ಚರ್ಚೆಗಳಿಂದಾಗಿ ಸಂಪಾದಕರೂ ಹೆಚ್ಚು ಚುರುಕುಗೊಳ್ಳುತ್ತಾರೆ. ಚರ್ಚೆಗಳು ಫಲದಾಯಕವಾಗಬೇಕಾದರೆ ಮಂಡಳಿಯ ಎಲ್ಲ ಸದಸ್ಯರಿಗೂ ಕೈಕೊಂಡ ಶಬ್ದಕೋಶದ ಗುರಿ, ಉದ್ದೇಶಗಳು, ವ್ಯಾಪ್ತಿ ಇತ್ಯಾದಿಗಳು ಮನದಟ್ಟಾಗಬೇಕು.

ಉಪಸಂಪಾದಕರುಗಳು ಸಿದ್ಧಗೊಳಿಸಿದ ಕರಡು ಪ್ರತಿಗಳನ್ನು ಸಂಪಾದಕರುಗಳು ಪರಿಶೀಲಿಸುವಾಗ ಆ ವಿಷಯಕ್ಕೆ ಹಿನ್ನೆಲೆಯಾಗಿರುವ ಕ್ಷೇತ್ರಕಾರ್ಯದಿಂದ ಒದಗಿ ಬಂದ ಸಂಪೂರ್ಣ ಮಾಹಿತಿ, ನಿಘಂಟಿಮುಗಳ ಆಯ್ಕೆ, ರಚನೆ, ಹಾಗೂ ಸಂಯೋಜನೆಗಳತ್ತ ತೀವ್ರ ಗಮನ ಹರಿಯಿಸಿ ತಕ್ಕುದಾದ ತಿದ್ದುಪಡಿಗಳನ್ನು ಮಾಡಬೇಕು. ಅಷ್ಟೇ ಅಲ್ಲದೆ, ಅಚ್ಚಿಸಿದ ಕರಡು ಪ್ರತಿಗಳನ್ನು ತಿದ್ದುವಲ್ಲಿಯೂ ವಿಶೇಷ ಗಮನ ಹರಿಯಿಸಬೇಕು.

ಒಮ್ಮೆ ಸಂಪಾದಕರು ಸರಿಯೆಂದು ತೀರ್ಮಾನಿಸಿದ ವಿಷಯಗಳನ್ನು ಎಲ್ಲರೂ ಒಮ್ಮತದಿಂದ ಸ್ವೀಕರಿಸಬೇಕು. ಆದುದರಿಂದ ಪ್ರತಿಯೊಂದು ವಿಷಯದ ಬಗೆಗೂ ಸಾಕಷ್ಟು ಚರ್ಚೆಯಾದ ಬಳಿಕ ಸಂಪಾದಕರು ಕರಡುಗಳ ಬಗೆಗೆ ತಮ್ಮ ಕೊನೆಯ ನಿರ್ಧಾರವನ್ನು ಸೂಚಿಸಬೇಕು.

ನಿಘಂಟು ರಚನೆಯಲ್ಲಿ ಆಧುನಿಕ ಯಂತ್ರಗಳನ್ನು (ಉದಾ : Automatic Data Processor) ಬಳಸಬೇಕೇ ಬೇಡವೇ ಎಂಬುದು ಪತ್ರದ ಗಾತ್ರ ಹಾಗೂ ಹಣದ ಸೌಲಭ್ಯವನ್ನು ಅವಲಂಭಿಸಿದೆ. ನಿಘಂಟಿಮುಗಳ ಬೇರೆ ಬೇರೆ ರೂಪಗಳನ್ನೂ, ಕ್ರಿಯೆಗಳನ್ನೂ, ಪ್ರಯೋಗಗಳನ್ನೂ ಇತ್ಯಾದಿ ಗುರುತಿಸಿ ಅವುಗಳನ್ನು ವರ್ಗೀಕರಿಸವಲ್ಲಿ ಆಧುನಿಕ ಯಂತ್ರಗಳು ಬಹಳಷ್ಟು ಸಹಕಾರಿಯಾಗಿವೆ. ಆದರೆ ಆ ಯಂತ್ರಗಳನ್ನು ಉಪಯುಕ್ತವಾಗಿ ಬಳಸಬೇಕಾದರೆ ಯೋಗ್ಯ ತರಬೇತಿಯನ್ನು ಪಡೆಯುವುದು ಅವಶ್ಯ.

ನಿಘಂಟಿಮುಗಳಿಗೆ ಅರ್ಥ ನಿರ್ಧಾರವನ್ನು ಮಾಡುವುದಾಗಲಿ, ಅವುಗಳ ಸಾಂದರ್ಭಿಕ ರೂಪಗಳನ್ನಾಗಿ ಗುರುತಿಸುವುದು ಕೇವಲ ಯಾಂತ್ರಿಕ ಕೆಲಸವಲ್ಲ. ಆದರೆ ಯಂತ್ರಗಳ ಸಹಾಯದಿಂದ ಅನಾವಶ್ಯಕ ಪ್ರಯಾಸ (Drudgery)ವನ್ನು ಸಾಕಷ್ಟು ಕಡಿಮೆಗೊಳಿಸಬಹುದು.

ಒಟ್ಟಿನಲ್ಲಿ, ನಿಘಂಟು ರಚನೆಯೆಂಬುದು ತೀರಾ ಸುಲಭದ ಕೆಲಸವಲ್ಲವಾದರೂ ಅದು ಆಸಕ್ತರನ್ನು ಪೂರ್ಣ ಸೆರೆಹಿಡಿಯಬಲ್ಲದು. ಪ್ರತಿದಿನ ಹೊಸ ಹೊಸ ಭಾಷಾಸಮಸ್ಯೆಗಳನ್ನು ಅದು ಒಡ್ಡುವುದರಿಂದ ನಾವು ಪೂರ್ತಿ ಈ ಕಗ್ಗಂಟುಗಳನ್ನು ಬಿಡಿಸುವುದರಲ್ಲಿ ತಲ್ಲೀನರಾಗಬೇಕಾತ್ತದೆ. ಈ ಭಾಷಾ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸಿಕ್ಕಿದಾಗ ಅದರಿಂದ ನಮಗೆ ತೃಪ್ತಿಯುಂಟಾಗುತ್ತದೆಯಲ್ಲದೆ ಆನಂದವೂ ಪ್ರಾಪ್ತಿಯಾಗುತ್ತದೆ. ಶ್ರಮದ ಫಲವಾಗಿ ಬಂದ ಈ ಆನಂದವೇ ನಿಘಂಟುಕಾರನಿಗೆ ದೊರಕುವ ಪ್ರಯೋಜನ*

---

* ಸ. ಸ. ಮಾಳವಾಡ ದತ್ತಿ ಉಪನ್ಯಾಸ

ಆಕರ ಸೂಚಿ

1. ಕೆಂಪೇಗೌಡ, ಕೆ.
1976 ಭಾಷಾವಿಜ್ಞಾನ ಕೋಶ, ಮೈಸೂರು : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ

2. BARTSCH, Renate and Theo VENNEMANN
1975 *Linguistics and Neighbouring Disciplines (North-Holland Linguistic Series)*, New York : American Elsvier Publishing Co., Inc.

3. DOROSZEUSKI, Witold
1973 *Elements of Lexicology and Semiotics*, The Hague. Paris : Mouton.

4. HORNBY, A.S. et. al.
1971 *The Advanced Learner's Dictionary of Current English*, London : Oxford University Press.

5. LEHRER, Adrienne
1974 *Semantic Fields and Lexical Structure* (North-Holland Series), New York : American Elsvier Publishing Co., Inc.

6. LONGYEAR, Christopher R.
1971 *Linguistically Determined Categories of Meanings*, The Hague. Paris : Mouton.

7. ZGUSTA, Ladislav
1971 *Manual of Lexicography*, The Hague. Paris : Mouton

ಮಾತೃಭಾಷೆ ಮತ್ತು ಶಿಕ್ಷಣ ಮಾಧ್ಯಮ

ಕನ್ನಡ ಮಾಧ್ಯಮದ ಪ್ರಯೋಜನಗಳು *

ಡಾ. ಶಂಕರ ಮೊಕಾಶಿ ಪುಣೇಕರ

1920ರ ಸುಮಾರಿಗೆ ಬೆಳೆದು ಪ್ರತಿಷ್ಠೆ ಪಡೆದ ವರ್ಣನಾತ್ಮಕ ಭಾಷಾಶಾಸ್ತ್ರವು Language Area, Native Speakr, ಇಂಥ ಪರಿಕಲ್ಪನೆಗಳಿಗೆ ಅವಾಸ್ತವ ಒತ್ತು ಕೊಟ್ಟು ಮೋಹಕ ಮಾಯೆಯನ್ನು ಬೀಸಿ, ವ್ಯಾಕರಣ (Grammar) ಎಂಬ ಪರಿಕಲ್ಪನೆಯನ್ನು ರಸಾತಳಕ್ಕೆ ಇಳಿಸಿತು. ಅಲ್ಲಿಯವರೆಗೆ ಶಿಕ್ಷಕರು ಗ್ರಾಮರ್‌ದ ನಿರ್ದಿಷ್ಟ, ಖಚಿತ ಬಂಧವನ್ನು ಹೇಳಿಕೊಡುತ್ತಿದ್ದರು. Descriptive Linguistics ಈ ಖಚಿತ ಬಂಧವನ್ನು ಸಡಿಲುಗೊಳಿಸಿತು. ಇದು ಆ ಶಾಸ್ತ್ರದ ತಪ್ಪಲ್ಲ. ಅದರಿಂದ ಏಷ್ಟು ಕಲಿಯಬೇಕೆಂಬುದನ್ನು ಅರಿತುಕೊಳ್ಳದೆ, ಶಿಕ್ಷಣಶಾಸ್ತ್ರದಲ್ಲಿ ಅನಿಶ್ಚಿತತೆ ತಲೆದೋರಿತು. ಆ ಕಾಲಕ್ಕೆ ಇಂಗ್ಲಿಷಿನಲ್ಲಿ Direct Method ದ ತಲೆ ಎತ್ತಿತು. ಈ ಅನಿಶ್ಚಿತತೆಯ ವಾತಾವರಣವೇ ಶಿಕ್ಷಣ ಕ್ಷೇತ್ರದಲ್ಲಿ Direct Method ದ ತಾಯಿ. ಅಪ್ರತ್ಯಕ್ಷವಾಗಿ ಹುಟ್ಟಿದ ಈ ಅಕಾಲ ಜನನವೇ ಭಾರತದ ಶಿಕ್ಷಣಮಟ್ಟದ ಅಧೋಗತಿಗೆ ಕಾರಣವಾಯಿತು. Descriptive Linguistics ದ ದೋಷವಲ್ಲ, ಅದರಿಂದ ಹುಟ್ಟಿಕೊಂಡ ಅನಿಶ್ಚಿತತೆಯೇ ಶಿಕ್ಷಣಮಟ್ಟದ ದುರವಸ್ಥೆಗೆ ಕಾರಣ.

ಇದೀಗ ನಾವು Chomsky ಯುಗದಲ್ಲಿ ಇದ್ದೇವೆ. Grammer ಮತ್ತೆ ಭಾಷಾಭ್ಯಾಸದಲ್ಲಿ ಗೌರವಸ್ಥಾನ ಪಡೆದಿದೆ. Deep Structuresಗಳ ಬಗ್ಗೆ ಗೌರವದಿಂದ ಮಾತಾಡಬೇಕಾಗಿದೆ. ದುರ್ದೈವದಿಂದ ಶಿಕ್ಷಣ ವ್ಯವಸ್ಥೆಯಲ್ಲಿ ಚೋಮಿಸ್ಕಿಯ ಹೆಸರೇ ಕೇಳಬರುತ್ತಿಲ್ಲ. ಭಾರತದಲ್ಲಿ ಅವನ ಹೆಸರು ಹೆಚ್ಚು ಆಸ್ಥೆಯಿಂದ ಪ್ರಚುರವಾಗಬೇಕಿತ್ತು, ಸಣ್ಣ ಮಕ್ಕಳೂ ಹೇಗೆ ದೋಷಗಳನ್ನು ತಿದ್ದಿಕೊಂಡು ಶುದ್ಧ ವ್ಯಾಕರಣಗಳತ್ತ ಭರದಿಂದ ಸ್ವಾಭಾವಿಕವಾಗಿ ಸಾಗುತ್ತಾರೆಂಬುದನ್ನು ತೋರಿಸುವುದು ಚೋಮಿಸ್ಕಿ ಮುಖ್ಯ ತತ್ವ. ಅದಕ್ಕೆ Grammer ಎಂಬ Process ಇದೆ ಎಂದು ಖಂಡತುಂಡವಾಗಿ, ನಿರ್ದಿಷ್ಟವಾಗಿ ಹೇಳಿದ ಮಾನ ಅವನಿಗೆ ಸಲ್ಲುತ್ತದೆ. ಅದಕ್ಕಾಗಿ ಪಾಣಿನಿಯ ಉದಾಹರಣೆಯನ್ನೇ ಕೊಟ್ಟು ವ್ಯಾಕರಣದ ಅಂಗೋಪಾಂಗಗಳನ್ನು ಹೇಳಿದ ಮೊದಲಿಗನೆಂದು ಪಾಣಿನಿಗೆ ಅಗ್ರಸ್ಥಾನವನ್ನು ಚೋಮಿಸ್ಕಿ

---

* ತಳುಕಿನ ವೆಂಕಣ್ಣಯ್ಯ ಸ್ಮಾರಕ ಉಪನ್ಯಾಸ ಮಾಲೆಯ ಲೇಖನದ ಎರಡನೇ ಭಾಗ

ಕೊಟ್ಟನು. ಚೋಮಿಸ್ಕಿಯ ಪ್ರಭಾವ ಶಿಕ್ಷಣ ಕ್ಷೇತ್ರದಲ್ಲಿ ಎಳ್ಳಷ್ಟೂ ಆಗದಿದ್ದುದು ನಮ್ಮ ದುರ್ದೈವ.

ವರ್ಣನಾತ್ಮಕ ಭಾಷಾಶಾಸ್ತ್ರದ ತತ್ವಗಳನ್ನು ಒಪ್ಪಿಕೊಂಡರೂ ನಾವು ಚೋಮಿಸ್ಕಿ ಹೇಳಿದ ವ್ಯಾಕರಣ ತತ್ವ ಒಪ್ಪಿಕೊಳ್ಳುವುದು ಶಕ್ಯವಿದೆ. ಕೆಲವು ಉದಾಹರಣೆಗಳು :

ಧಾರವಾಡ ಜಿಲ್ಲೆಯ ಹಳ್ಳಿಗಳಲ್ಲಿ ಈ ವಾಕ್ಯ ಕೇಳ ಸಿಗಬಹುದು ;

"ನಾ ಪ್ಹಾರೆ ಮಾಡಿ ಬಂದೀನಿ. ಉಣಲಾಕ ಬಡಸಬೇ"

ಧಾರವಾಡದ ಜಿಲ್ಲೆಯ ಶಿಕ್ಷಕರು ಇದು ಶುದ್ಧ ಕನ್ನಡವೆಂದು ಮಕ್ಕಳಿಗೆ ಹೀಗೇ ಪಾಠ ಹೇಳಿಕೊಡಬೇಕೇ ? ಅಥವಾ, ಇದು "ನಾ ಹೋರೆಯನ್ನು ಮಾಡಿ ಬಂದಿದ್ದೇನೆ. (ನನಗೆ) ಉಣ್ಣಲಿಕ್ಕೆ ಬಡಿಸು, ಅಬ್ಬೆ" ಎಂಬ ವಾಕ್ಯದ ಆಡು ಮಾತಿನ ರೂಪವೆಂದು ಕಲಿಸಬೇಕೆ ?

Descriptive Linguistics ದ ಮೂಲತತ್ವದ ಮೇರೆಗೆ ಮೊದಲಿನ ವಾಕ್ಯವೇ ಆಯಾ Language Areaದಲ್ಲಿ ಒಡಮೂಡಿ ಬಂದದ್ದೇ ಸರಿ ಎಂದು ಆಗುವುದು. ಇದು ಬಲು ಮೋಹಕ ತತ್ವ. ಸುದೈವದಿಂದ ಧಾರವಾಡದ ಆಕಾಶ ವಾಣಿಯಷ್ಟೇ ಇದನ್ನು ಬಳಸುತ್ತದೆ. ಶಿಕ್ಷಕರು ಇನ್ನೂ ಆ ತಾತ್ವಿಕ ಮಟ್ಟಕ್ಕೆ ಇಳಿದಿಲ್ಲ.

ಚೋಮಿಸ್ಕಿಯ ತತ್ವ ಒಪ್ಪುವುದಾದರೆ, ಕನ್ನಡ ಭಾಷೆಯ ಕರ್ತೃ, ಕರ್ಮ, ಕ್ರಿಯಾಪದದ ಒಳರಚನೆ ಅಪಾದಿತವಾದ್ದರಿಂದ ಇದು ಶುದ್ಧಕನ್ನಡವೇ. ಕಾಲ–ದೇಶ–ಸಂದರ್ಭಗಳಿಂದ ಆದ ಸ್ಥಿತ್ಯಂತರಗಳು ಇವರ ವ್ಯಾಕರಣಕ್ಕೆ ಬಾಧೆ ತಂದಿಲ್ಲ. 'ಹ್ವಾರೆ ಮಾಡಿ ಬಂದೇನ್ ನಾ', 'ಬಂದೇನ್ ನಾ ಪ್ಹಾರೆ ಮಾಡಿ', ಈ ಎಲ್ಲ ರಚನೆಗಳೂ ಆ ಮೂಲ ರಚನೆಗೆ ಭಾಷೆ ತರುವದಿಲ್ಲ. ಮೂಲ ರಚನೆ ಕರ್ತೃ-ಕ್ರಿಯಾಪದ. ಹ್ವಾರೆ ಮಾಡಿ ಬಂದೇನ್' ಇಷ್ಟು ರಚನೆಯೂ ನಡೆದೀತು. ಏಕೆಂದರೆ ಕನ್ನಡ inflected ಭಾಷೆ ಆದ್ದರಿಂದ 'ನಾ' ಶಬ್ದ 'ಬಂದೇನ್' ಎಂಬ ಕ್ರಿಯಾಪದದ ರೂಪದಲ್ಲೇ ಅಡಕವಾಗಿದೆ. ಇವೆಲ್ಲ 'ನಾನು ಹೋರೆಯನ್ನು ಮಾಡಿ ಬಂದೆನು' ಎಂಬ ಮೂಲ ರಚನೆಯ ಸಂದರ್ಭೋಚಿತ ಆಡುಮಾತಿನ ಬಳಕೆಗಳು (varients) ಎಂದು ಹೇಳಬಹುದು. ಮೂಲರಚನೆ ಕರ್ತೃ–ಕ್ರಿಯಾಪದ.

ವರ್ಗದಲ್ಲಿ ಧಾರವಾಡ ಜಿಲ್ಲೆಯ ಶಿಕ್ಷಕರು ಮೂಲ ರೂಪವನ್ನೇ ಕಲಿಸಬೇಕೆಂಬ ಹಟ ಚೋಮಿಸ್ಕಿಯಲ್ಲಿ ಇಲ್ಲ. Descriptive Linguistics ದಲ್ಲಿ ಈ ಹಟವಿದೆ.

ಇದರಂತೆ, ವಿಜಾಪುರ ಜಿಲ್ಲೆಯಲ್ಲಿ ಈ ಮಾತು ಹೇಳಬಹುದು:

“ಅಂವ ನನ್ನ ಕಾಕಾ ಹಾನ. ನಿನ್ನೆ ಫೋಟೋ ತೆಗಿತ್ಯಾನ” ಈ ಮಾತು Descriptive Linguistics ತತ್ವಾನುಸಾರವಾಗಿ ಪೂಜ್ಯ ಮಾತು. ಈ ತತ್ವ ಒಪ್ಪಿದರೆ ವಿಜಾಪುರ ಜಿಲ್ಲೆಯ ಶಿಕ್ಷಕರು ವರ್ಗದಲ್ಲಿ ಈ ಮಾತನ್ನೇ ಕಲಿಸಬೇಕು, ಡೈರೆಕ್ಟ ಮೆಥಡದಿಂದ ಚೋಮಿಸ್ಕಿಯ ಗ್ರಾಮರ್ ಒಪ್ಪಿದರೆ. ಇದು ಕಾಲ-ದೇಶ-ಸಂದರ್ಭಕ್ಕೆ ಹೊಂದಿಕೊಂಡ ‘ಅವನು ನನ್ನ ಕಕ್ಕನು ಇದ್ದಾನೆ. ನಿನ್ನೆ ಫೋಟೋವನ್ನು ತೆಗೆಸಿಕೊಂಡಿದ್ದಾನೆ” ಈ ವಾಕ್ಯದ ಉಚಿತ ಉಪಭಾಷಾರೂಪ. ಇದರಲ್ಲಿ ಕರ್ತೃ-ಕ್ರಿಯಾಪದಗಳು ಕನ್ನಡ ಭಾಷೆಯ ನಿಯಮಾನುಸಾರ ಇವೆ ಎಂದು ಧೈರ್ಯವಾಗಿ ಹೇಳಬಹುದು.

ವರ್ಣನಾತ್ಮಕ ಭಾಷಾಶಾಸ್ತ್ರವು ಶಿಕ್ಷಣಕ್ಕೆ ನಿರುಪಯೋಗಿ. ಅದರಿಂದ ಜನಿತ ಡೈರೆಕ್ಟ ಮೆಥಡ್ ಕೂಡ ಇದನ್ನು ಅನುಸರಿಸುವುದಿಲ್ಲ. ಆ ಮಾತು ಬೇರೆ. ಮುಖ್ಯ ಮಾತು ಎಂದರೆ ವ್ಯಾಕರಣದ ಪರಿಭಾಷೆಯಾದ ಕರ್ತೃ-ಕರ್ಮ-ಕ್ರಿಯಾಪದಗಳ ಪ್ರಯೋಗವನ್ನು ಅದು ಒತ್ತಿ ಹೇಳುವುದಿಲ್ಲ. ಭಾಷೆಯ Direct Transfusion ಒತ್ತಿ ಹೇಳುತ್ತದೆ. ಅದಕ್ಕೇನೆ ಪ್ರದೇಶ-ಪರಿಸರ Language habit ನ್ನು ಒತ್ತಿ ಹೇಳಿ, ಗೋಜಲು ಮಾಡಿ, ಪ್ರಾಥಮಿಕ, ಮಾಧ್ಯಮಿಕ ಶಾಲಾಭ್ಯಾಸದಲ್ಲಿ ನಿರುಪಯುಕ್ತವಾಗುತ್ತದೆ.

Descriptive Linguistics ಈ ವಿಜ್ಞಾನವು Post-graduate ಮಟ್ಟದಲ್ಲಿ ಮಾತ್ರ ಪಿ.ಎಚ್.ಡಿ. ವಿಷಯವಾಗಬಲ್ಲದೇ ಹೊರತು ಪ್ರಾಥಮಿಕ-ಮಾಧ್ಯಮಿಕ ಅವಸ್ಥೆಯಲ್ಲಿ ಅದಕ್ಕೆ ಸಡಿಲುಕೊಟ್ಟು ಪ್ರಯೋಜನವಿಲ್ಲ. ಅಲ್ಲಿ ಶಿಕ್ಷಕರು ಗ್ರಾಂಥಿಕ ಭಾಷೆಯನ್ನೇ (ಕೃತ್ರಿಮವೆನಿಸಿಯೂ ಕೂಡ) ಕಲಿಸಬೇಕಾಗುತ್ತದೆ. ಇದರ ತಾತ್ವಿಕ ಹಿನ್ನೆಲೆ ಸಡಿಲುಗೊಂಡ ಮೂಲಕವೇ ವ್ಯಾಕರಣ ಅಭ್ಯಾಸ ಪ್ರಾಥಮಿಕ-ಮಾಧ್ಯಮಿಕ ಮಟ್ಟದಲ್ಲಿ ನಿಂತುಹೋಗಿದೆ. ವ್ಯಾಕರಣ ತಲೆಬೇನೆಯೆಂಬ ಭಾವನೆ ವಿದ್ಯಾರ್ಥಿಗಳಿಗಿಂತ ಮೊದಲೇ ಶಿಕ್ಷಕರಲ್ಲಿ ಹುಟ್ಟಿರುತ್ತದೆ. ಇದು ತಲೆಬೇನೆಯೆಂದೇ ಬಿ.ಎಡ್, ಕಾಲೇಜುಗಳು ಪ್ರಸಾರಮಾಡುತ್ತವೆ. ಕನ್ನಡ ಭಾಷೆಯ ವ್ಯಾಕರಣಗಳಿಂದ ಅಧ್ಯಯನ ಪ್ರಾಥಮಿಕ ಅವಸ್ಥೆಯಲ್ಲೇ ಮುದುಡಿ ಹೋಗಿರುತ್ತದೆ. ಮಾಧ್ಯಮಿಕ ಅವಸ್ಥೆಯಲ್ಲಿ ಒಮ್ಮೊಮ್ಮೆ ಇಂಗ್ಲಿಷ್ ಮಾದರಿಯ ಮೇಲೆ Analysis ಅರೆಮನಸ್ಸಿನಿಂದ ಮಾಡಿಸುತ್ತಾರೆ. ಮೇಲೆ ಹೇಳಿದ ‘ಅವನು ನನ್ನ ಕಕ್ಕನು’ He is my uncleಗೆ complement ಎಂಬ ಶಬ್ದವಿದೆ. ಇದಕ್ಕೆ ಕನ್ನಡದಲ್ಲಿ ಶಬ್ದವಿಲ್ಲದಕ್ಕಾಗಿ. ಅದನ್ನು ‘ಕರ್ಮ’ವೆಂದು ಹೇಳಿದ ಉದಾಹರಣೆ ನಾನು ಕಂಡಿದ್ದೇನೆ. ಕನ್ನಡದ ಕರ್ಮಕಲೆ!

ಕನ್ನಡ ಭಾಷೆಯ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧ್ಯಾಕರಣಗಳ operational model ಗಳಿಲ್ಲದೇನೇ ಹಂಡಬಂಡ ರೀತಿಯಲ್ಲಿ ಮಾತೃಭಾಷೆಯನ್ನು ಕಲಿಸಿದ ದುಷ್ಪರಿಣಾಮಗಳು ಎಲ್ಲೆಲ್ಲೂ ಕಂಗೊಳಿಸುತ್ತವೆ. ಕನ್ನಡ ಮಾತೃಭಾಷೆ. ಚೌಮಿಸ್ಕಿ ಹೇಳಿದ Natural Generative Grammar's ಅಂಶ ಅದರಲ್ಲಿ ಇದ್ದ ಮೂಲಕ ಸ್ವಾಭಾವಿಕ ರಕ್ತಗತವಾಗಿಯೇ ಬರುತ್ತವೆ. ಆದರೆ ಇತರ ಭಾಷೆಗಳನ್ನು ಕಲಿಯುವದರಲ್ಲಿ ವ್ಯಾಕರಣದ ಸ್ವಯಂಪೂರ್ಣ ರಚನೆಗಳನ್ನು ಕಲಿಸಿಲ್ಲವಾದ್ದರಿಂದ, ಆಯಾ ತತ್ವಗಳನ್ನು extrapolate ಮಾಡುವುದರಲ್ಲಿ ನಮ್ಮ ವಿದ್ಯಾರ್ಥಿಗಳು ಅಸಮರ್ಥರಾಗುತ್ತಾರೆ. ಅವರ ಏಕಭಾಷೀಯತೆ ಒಂದು ಬಂಧನವಾಗುತ್ತದೆ. ಇಂಗ್ಲಿಷದಲ್ಲಿ ಬರುವ prepositions ಕನ್ನಡದಲ್ಲಿ ಕಾರಣಾರ್ಥವಾಗಿ ಪ್ರತ್ಯಯವಾಗಿ ಬರುತ್ತವೆ. ಇಷ್ಟನ್ನೂ ಅರಿಯದ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯನ್ನು ಏನು ಕಲಿತಾರು ? ಕನ್ನಡವನ್ನೇ ಅಭಿಜಾತವಾಗಿ ಕಲಿಯದ ವಿದ್ಯಾ ವಿದ್ಯಾರ್ಥಿಗಳನ್ನು ದೂಷಿಸಿ ಫಲವೇನು ?

ತದ್ವಿರುದ್ಧ, ಇನ್ನೊಂದು ರೀತಿಯ ಚಟುವಟಿಕೆ ನಮ್ಮ ವರ್ಣನಾತ್ಮಕ ಭಾಷಾ ಶಾಸ್ತ್ರಿಗಳಿಂದ ಜರುಗುತ್ತಿದೆ, ಕನ್ನಡ ಭಾಷೆಗೆ ತನ್ನದೇ ಆದ ವ್ಯಾಕರಣವಿದೆಯೆಂದೂ, ಕನ್ನಡದಲ್ಲಿ ಕ್ರಿಯಾ ಪದಗಳೇ ಇಲ್ಲವೆಂದೂ, ಆ ತತ್ವಾನುಸಾರ ಕನ್ನಡದ ಹೊಸ ವ್ಯಾಕರಣವನ್ನು ರಚಿಸಲಿಕ್ಕೆ ಹೊರಟಿದ್ದಾರೆ ಈ Descriptive Linguistics ಪಂಡಿತರು. ಅವರ ಯತ್ನ ವಿಫಲವಾಗಲಿ, ಎಂದು ನಮ್ಮ ಕುಲದೇವರಿಗೆ ಪ್ರಾರ್ಥಿಸಿ, ಅವರ ಯತ್ನಗಳನ್ನು ಉಪೇಕ್ಷಿಸಿ, ಮುಂದೆ ಹೋಗುತ್ತೇನೆ ಯಾವ ಕಾರಣಕ್ಕಾಗಿ ನಮ್ಮ ಶಿಕ್ಷಣ ಹಿಮ್ಮೆಟ್ಟೆಡು ಗೊಂಡಿದೆ ಅದಕ್ಕೂ ತಿಳಿಯಲು ಇಂಥ ಉದಾಹರಣೆಗಳು ಉದ್ದೇಶಕವೆಂದಿಷ್ಟೇ ಹೇಳುತ್ತೇನೆ.

ಭಾರತದ ಎಲ್ಲ ಭಾಷೆಗಳೂ ಪಾಣಿನಿ-ಚೊಮಿಸ್ಕಿ ಮಾದರಿಯನ್ನು ಅನುಸರಿಸುತ್ತದೆ. ಯಾವುದೇ ಒಂದು ಭಾಷೆಗೆ ಹೊಸ ಮಾದರಿ ಹಾಕಿಕೊಡುವ ಯತ್ನ ಮೂಲ ದುರ್ಬೀಜದ ಅವಲಕ್ಷಣವೇ ಸರಿ.

ಪ್ರಾಥಮಿಕ ಮಟ್ಟದ ಮೊದಲಿನ ಎರಡು ವರ್ಷಗಳು ಅಕ್ಷರಾಭ್ಯಾಸಕ್ಕಾಗಿ ಹೋಗುತ್ತವೆಯೆಂದು ತಿಳಿಯುವಾ. ಓದು-ಬರಹ ಈ ವರ್ಷಗಳ ಮುಖ್ಯ ಅಭ್ಯಾಸ ಈಗಲೇ ಅಕ್ಷರಾಭ್ಯಾಸಕ್ಕಾಗಿ "ಇವ ಬಸವ; ಈಕೆ ಕಮಲ" ಎಂದು ಚಿತ್ರದ ಸಹಾಯದಿಂದ ಕಲಿಸಲಿ ನಂತರ ಇವ ಹೋಗಿ 'ಈಕೆ' 'ಇವರು' ಪುಲ್ಲಿಂಗ, ಸ್ತ್ರೀಲಿಂಗದ ಪ್ರತ್ಯಯ ಶುರುವಾಗುವಂಥ ಪಾಠಗಳನ್ನೂ ರಚಿಸಿ, ಉತ್ತಮ ಪುರುಷ-ಮಧ್ಯಮ ಪುರುಷ-ಪ್ರಥಮ ಪುರುಷಗಳ ವಾಕ್ಯ, ಅದರಿಂದ ಕ್ರಿಯಾಪದದಲ್ಲಿ ಆಗುವ ಬದಲಾವಣೆ, ಕಾರಕಾರ್ಥದ ವಿವಿಧ ರೂಪಗಳು, ಎಲ್ಲ ಪ್ರತಿಬಿಂಬಿಸಬಲ್ಲ ಪಾಠ್ಯಕ್ರಮ,

ಜೊತೆಗೆ ಅಭಿಜ್ಞೆಯಿಂದ ಅವುಗಳ ಹೆಸರು ಹೇಳುವದು, ಉದಾ : ವಿಶೇಷ, ನಾನು ಪುಲ್ಲಿಂಗ, ಪುರುಷ, ಇವುಗಳ ಲೇಬಲ್ಲುಗಳು ಕೊಟ್ಟಿರುವ ನೋಟ್ಸ್ ಬರಬೇಕು ಈಗಿನಂತೆ ಭಾಷೆಯನ್ನು Impressionistic ಆಗಿ ಕಲಿಯುವ–ಕಲಿಸುವ ಪ್ರಭಾವ ಹೋಗಬೇಕು. ಟೆಕ್ಸ್ಟ್ ರಂಜಕವಾಗಿರಲಿ, ಜೊತೆಗೆ ಕಷ್ಟಪಟ್ಟು ಅಭ್ಯಾಸ ಮಾಡುವ, ಕೆಲವು ಕಡೆ ಮುಖೋದ್ಗತ ಮಾಡುವ, ಪದ್ಧತಿ ಬರಬೇಕು. ಅಭಿಜ್ಞಾಪೂರ್ವಕ, ಸ್ವಪ್ರವ್ಯವನಾತ್ಮಕ ವ್ಯಾಕರಣಾಭ್ಯಾಸವಿಲ್ಲದೆ, ಮಾತೃಭಾಷೆ ಇತರ ವಿಷಯಗಳ ಅಧ್ಯಯನದ ಮಾಧ್ಯಮವಾಗುವದು ಕಷ್ಟ. ನಮ್ಮ ಉದ್ದೇಶ ಮಾತೃಭಾಷೆಯು ಇತರ ವಿದ್ಯೆಗಳ ಅಧ್ಯಯನಕ್ಕೆ ಸಮರ್ಥ ಮಾಧ್ಯಮವಾಗುವದೇ ಆಗಿದೆ.

ಇದರ ಬಗ್ಗೆ ಪಾಶ್ಚಾತ್ಯ ವಿಜ್ಞಾನಿಯೊಬ್ಬನ ಅಭಿಪ್ರಾಯ ಉದ್ಧರಿಸುತ್ತೇನೆ. ಅವನ ಉದ್ಧರಣೆ ಡೈರೆಕ್ಟ್ ಮೆಥಡ್‌ದ ನಿರಾಕರಣೆಯೂ ಹೌದು. (Roger L. Snook : Papers in Contrastive Linguistics : C.U.P. 1971)

Often the procedure makes two great demands on the learners at all events, it is time-wasting and pointless unless instruction making use of the Second Language is impracticable. The method of teaching meaning by explanation in the TL (Third Language) is freguenlty inaffectual even with advanced learners. largely because we lack a metalanguage for discourse on the conceptufal elements and structures involved… (ಇಲ್ಲಿ ನೋಡತಕ್ಕ ಮಾತೆಂದರೆ, ಪಾಣಿನಿ ನಿಂದಿನ ಕಾರಣಾರ್ಥ ಜಾತ್ರೆಗೇ ಮೊದಲು ಬಂದ operational metalanguage ಅದರ ಲಾಭ ಪಡೆಯುವುದೇ ನಮ್ಮ ಉದ್ದೇಶ)…

In this context it is pertinent to observe that LI (mother tunge) at 12 learning are very diferent processes LI learning is largely coincident with process of cpncept formation and to some extent conditions the latter. By the time L.2 acqusition begins, the larner has built up a complex system of concepts. These concepts do not have to be re-learnt during L-2 acqustion. They have to be connceted up to gramneticl aud lexical froms of the L-2. Since the semologies of differcant languages are not isomorphons at all points a certain amount of regroupging of conceptul elements already acquired will be nesesceary to fit them into semological categaries of L-2 : but many of the basic semological elements (sememes structural terminology) seem to be common to a large number of languages.

[Roger L. Snook-Sturtgart University]

ರೋಜರ್ ಸ್ಕೊನರು ತಮಗರಿಯದೆಯೇ ಮೂರು ಮಹತ್ವದ ಮುದ್ದೆಗಳನ್ನು ನಮ್ಮ ಮುಂದಿಟ್ಟಿದ್ದಾರೆ.

1. ಮಾತೃಭಾಷೆಯ ಅಧ್ಯಯನದ ಗುರಿ ಏನು ಇರಬೇಕು ?

2. ಈ ಅಧ್ಯಯನದ ಸಹಾಯದಿಂದ ಬೇರೆ ಭಾಷೆ ಬೇರೆ ವಿಷಯಗಳನ್ನು ಕಲಿಯಲು ಹೇಗೆ ಅನುಕೂಲವಾಗುತ್ತದೆ ?

3. ಪಾಶ್ಚಾತ್ಯ ಭಾಷೆಗಳಲ್ಲಿ ಪರಸ್ಪರ Functional ಸಂಬಂಧಗಳನ್ನು ತೋರಿಸಲಿಕ್ಕೆ ಬೇಕಾದ ಉಪಭಾಷೆಯ [metalaguage] ಅಭಾವ. [ಇಂಥ ಉಪಪರಿಭಾಷೆ–ಉದಾ : ಕಾರಣಾರ್ಥ ನಮ್ಮಲ್ಲಿ ಇದ್ದೂ, ನಾವು ಅದನ್ನು ಶಿಕ್ಷಣಕ್ಕಾಗಿ ಬಳಸದ ನಮ್ಮ ಅದೂರ ದರ್ಶಿತ್ವದ ಸೂಚನೆಯನ್ನು ನಾವು ಭಾರತೀಯರು ಪಡೆಯಬಹುದು ಸ್ಫೂರ್ತಿ ಉತ್ಸಾಹ ಪಡೆಯಬಹುದು.

ಮೊದಲನೆಯ ಮತ್ತು ಎರಡನೆಯ ಉದ್ದೇಶಗಳತ್ತ ತಮ್ಮ ವಿಶೇಷ ಗಮನ ಸೆಳೆಯಬೇಕು. ['ತಮಗರಿಯದೆಯೇ' ಎಂದು ಹೇಳಲಿಕ್ಕೆ ಕಾರಣ ಎಲ್ಲ ಪಾಶ್ಚಾತ್ಯ ಶಿಕ್ಷಣ ತಜ್ಞರಂತೆ ಸ್ಕೂನರೂ ಶಿಕ್ಷಣಕ್ಕೆ ಸಾಮಾನ್ಯ ತತ್ವದ ಮಹತ್ವವನ್ನು ಇನ್ನೂ ಅರಿತುಕೊಂಡಿಲ್ಲ. ಎಲ್ಲರಂತೆ ಅವರೂ ಸಾಮಾನ್ಯ ತತ್ವಕ್ಕೂ ಶಿಕ್ಷಣ ಕ್ಷೇತ್ರಕ್ಕೂ ಯಾವ ಸಂಬಂಧವಿಲ್ಲವೆಂದು ನಂಬುವವರೇ. ಆದಗೆ ಮೊದಲನೆ ಮುದ್ದೆ ಮಾಡುವಾಗ ತಮಗರಿಯದೇ ಚೊಮ್ಸ್ಕಿತತ್ವ ಪ್ರತಿಪಾದಿಸಿದ್ದಾರೆ.]

ಮಾತೃಭಾಷೆಯನ್ನು ಕಲಿಯುವ ವಯಸ್ಸಿನಲ್ಲೇ ವಸ್ತುಗಳ ಪರಿಕಲ್ಪನೆಯ ರಚನೆಯತ್ತ, ವರ್ಗೀಕರಣದತ್ತ, ಮಕ್ಕಳ ಗಮನ ಸೆಳೆಯುವದು ಅಗತ್ಯ. 'ಕರಿಮರಿ ನಾಯಿ ಕುಯ್ಯುಗುಡುತ್ತಿತ್ತು' ಈ ವಾಕ್ಯವನ್ನು ಕಲಿಸಬೇಕಾದರೆ 'ಕರಿ' ಮತ್ತು 'ಮರಿ' ಇವುಗಳ ವಿಶೇಷ ತತ್ವದ ಪರಿಕಲ್ಪನೆಯನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡದೆ ಗುರುವು ಏನು ಕಲಿಸಿದಂತಾಯ್ತು. ಶಿಕ್ಷಣದಲ್ಲಿ ಸೊಗಸುಗಾರಿಕೆಗೂ ಸ್ಥಾನವಿದೆ. ಆದರೆ ಸರಳ ಪರಿಕಲ್ಪನೆ (concept) ರಚನೆಗೆ ಈ ಶಬ್ದಗಳನ್ನು ಬಳಸದಿದ್ದರೆ, ಮಾತೃಭಾಷೆಯ ಶಿಕ್ಷಣವೇ ಮೊಟಕಾದಂತೆ. ಇವು 'ಗುಣವಾಚಕ ವಿಶೇಷಣಗಳು' ಎಂಬ ಮಾತನ್ನು ಹೇಳದೆ ಗುರುವು ಅದನ್ನು ಬರಿ ಹಾಡಾಗಿ, ಸೊಗಸಾಗಿ, ಕಲಿಸಿ ತೇಲಿಸಿಕೊಂಡು ಹೋದರೆ, ರಂಜನೆಯೇ ಮಾತೃಭಾಷೆಯ ಶಿಕ್ಷಣದ ಉದ್ದೇಶವೇ, ಎಂಬ ಪ್ರಶ್ನೆ ಬರುತ್ತದೆ. ಮಾತೃಭಾಷೆಯ ಶಿಕ್ಷಣದ ಇಂಥ ಸುಲಭೀಕರಣ ಆತ್ಮಘಾತಕವಾದದ್ದು ಇದೇ ವಯಸ್ಸಿನಲ್ಲಿ ಎಲ್ಲ concept formation ನಡೆದಿರುತ್ತದೆ. ತಳದ ವ್ಯಾಕರಣ ಕಲಿಸದೇ ಹೋದರೆ ಬರಿಯ ರಂಜನೆಯಾಗುವುದೆಯೇ ಹೊರತು ವಿಶೇಷಣದ ವಿಶೇಷವು. ನಾಮಪದದ ನಾಮಪದತ್ವ ಕ್ರಿಯಪದದ ಕ್ರಿಯೆ, ಹಾಗೇ ಉಳಿದು ಹೋಗುತ್ತದೆ. ಮಾತೃಭಾಷೆಯ

ಶಿಕ್ಷಣದ ಮೂಲ ಉದ್ದೇಶಗಳಲ್ಲಿ ಮಹತ್ವದ ಪಾತ್ರವಾಗಬೇಕಾಗಿದ್ದ concept formations ಕೆಲಸ ನಿರ್ಲಕ್ಷಗೊಳ್ಳುತ್ತದೆ.

ನಾನು ಒಮ್ಮೆ ಭಾವವಾಚಕ ನಾಮಂಗಳನ್ನು ಕಲಿಸುವಾಗ ಸುಲಭೀಕರಣಕ್ಕಾಗಿ 'ನಮಗೆ ಕಣ್ಣಿಗೆ ಕಾಣಿಸದೇ ಇದ್ದ ವಸ್ತುಗಳು ಭಾವವಾಚಕನಾಮಗಳು' ಎಂದು ಹೇಳಿದ್ದೆ. ಒಬ್ಬ ವಿದ್ಯಾರ್ಥಿ ಎದ್ದು, 'ನಮಗೆ ನಮ್ಮ ಬೆನ್ನು ನಮಗೆ ಕಾಣಿಸುವುದಿಲ್ಲ' ಎಂದು ಹೇಳಿದ ಎಂಟು ಹತ್ತು ವಿದ್ಯಾರ್ಥಿಗಳು' ಮುಟ್ಟಿ ನೋಡಬಹುದು. ಕನ್ನಡಿಯಲ್ಲಿ ನೋಡಬಹುದು ಎಂದು ಒಮ್ಮೆಲೇ ಹೇಳಿದರು. ಪ್ರಶ್ನೆ ಕೇಳಿದ ವಿದ್ಯಾರ್ಥಿಯೂ ಇದೇ ಉದ್ದೇಶಕ್ಕಾಗಿ ಕೇಳಿದ್ದ. ಇತರ ವಿದ್ಯಾರ್ಥಿಗಳೂ ಇದೇ ಉದ್ದೇಶಕ್ಕಾಗಿ ಆತಂಕ ತಂದರು. ನನಗೆ ಸಂತೋಷವಾಯಿತು. ಭಾವಾಚಕ ನಾಮಗಳೂ conceptualisation ಕ್ರಿಯೆ ಶುರುವಾಗಿದೆ ಎಂಬ ವಿಚಾರದಿಂದ.

ಡಾ. ಪ್ನೂಕರು ಮಾಡಿದ ಎರಡನೇ ಮುದ್ದೆಯೂ ಅರ್ಥಪೂರ್ಣವಾಗಿದೆ. ಎರಡನೇ ಭಾಷೆ ಕಲಿಯುವುದರಲ್ಲಾಗಲೀ, ಎರಡನೇ ವಿಷಯ ಕಲಿಯುವಲ್ಲಾಗಲೀ, ಈ ಮೂಲಭೂತ ಪರಿಕಲ್ಪನೆಗಳು ಸಾಮಾನ್ಯವಾಗಿ ಒಂದೇ ಆಗಿರುತ್ತವೆ. ಅವನ್ನು ಮಾತೃಭಾಷೆಯ ಶಿಕ್ಷಣದಲ್ಲಿ ಕಲಿತ ಪರಿಕಲ್ಪನೆಗಳನ್ನು ಇಂಗ್ಲಿಷ್-ಸಂಸ್ಕೃತ, ಹಿಂದೀ ಭಾಷೆಗಳಿಗೂ ಅನ್ವಯಿಸಬಹುದು. ಇಲ್ಲಿದ್ದ ವಿಶೇಷಣವೇ ಅಲ್ಲಿಯೂ ವಿಶೇಷಣವಾಗುತ್ತದೆ. ಇಲ್ಲಿ 'ಕರಿ ಮರಿನಾಯಿ' ಅಲ್ಲಿ Black little pup ಆಗುತ್ತದೆ. ಇಲ್ಲಿಯೂ ವಿಶೇಷಣ ಮೊದಲಿಗೆ ಬಂದಿದೆ, ಅಲ್ಲಿಯೂ ಮೊದಲಿಗೆ ಬಂದಿದೇ ವ್ಯಾಕರಣ ರಚನೆಗಳು ಪರಿಕಲ್ಪನೆಯಿಂದ ನಾವು ಬೇರೆ ಬೇರೆ ಭಾಷೆಗಳನ್ನು ಕಲಿಯುವದು ಸಾಧ್ಯ. ಆದರೆ ಮೂಲ ಪರಿಕಲ್ಪನೆ ಮಾತೃಭಾಷೆಯ ಶಿಕ್ಷಣದಲ್ಲೆ ಸುಲಭ ಸಾಧ್ಯ. ಇದನ್ನೇ ಕೆಮಿಸ್ಟ್ರಿಯಲ್ಲಿ Acidic in taste ರೂಪದಲ್ಲಿ ಕಲಿಯುವುದು ಸಾಧ್ಯ. ಅದೇ ಬೆಳೆದು Burning Sensation ಎಂದೂ ಆಗಬಹುದು. ಈ ಅನುಭವ ವಿಸ್ತಾರದಲ್ಲಿ ಆಧಾರವಾದ ವಿಶೇಷಣದ ವಿಶೇಷಣತ್ವದ ಮೂಲ ಆಧಾರ. ಇದನ್ನೇ chomsky deep structure ಎಂದು ವರ್ಣಿಸಿ ಮುಂದಿನ ಪೀಳಿಗೆಗಳಿಗೆ ದಾರಿ ಮಾಡಿಕೊಟ್ಟಿದ್ದಾನೆ. ಶಿಕ್ಷಣವೇತ್ತರು ಆತನ ಕಾರ್ಯದ ಲಾಭ ಶಿಕ್ಷಣ ಕ್ಷೇತ್ರದಲ್ಲಿ ಪಡೆಯದಿದ್ದರೆ, ಚೋಮ್ಸ್ಕಿಯ ತಪ್ಪೇ ? ಚೋಮ್ಸ್ಕಿ ತನ್ನ ವ್ಯಾಸಂಗ ಪರಿಕಲ್ಪನೆ ಶಿಕ್ಷಣಕ್ಕೆ ಸಂಬಂಧಿಸಿದ್ದಲ್ಲವೆಂದು ಹೇಳಿದ್ದ ನಿಜ. ಅದಕ್ಕೆ ಕಾರಣ, ಅದು ಬಹಳ ಮಟ್ಟಿಗೆ Philosophical ಇದ್ದದು. ಆದರೆ ಅವನು ಹಾಗೆ ಹೇಳಿದ್ದನ್ನು ಕಂಡು ಶಿಕ್ಷಣವೇತ್ತರು ಮೊದ್ದುಮತಿಗಳಾಗಿ ಕಂಡುಬರುವುದು ಶೋಭಿಸದು.

2

ಕನ್ನಡ ಭಾಷೆ ಶಿಕ್ಷಣ ಮಾಧ್ಯಮವಾಗಬೇಕೆಂದು ಬರಿಭಾವುಕ ಘೋಷಣೆಯಿಂದ ಈವರೆಗೆ ನಾವು ಚಳುವಳಿ ಮಾಡುತ್ತ ಬಂದಿದ್ದೇವೆ. ನಿಜವಾದ ಶಿಕ್ಷಣ ಮಾಧ್ಯಮ

ವಾಗಬೇಕಾದರೆ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗುವಂತೆ ಪಳಗಿಸಬೇಕಾಗುತ್ತದೆ. ಹಾಗಾಗಬೇಕಾದರೆ, ಬರಿ ನಮ್ಮ ಬಿ.ಎಡ್. ಕಾಲೇಜುಗಳು ಪಳೆಯ ವರ್ಣನಾತ್ಮಕ, ಶೈಲಿ ಪ್ರಧಾನ ಒಳ್ಳೆಯ ಬೋಧಕರನ್ನಷ್ಟೇ ಪಳಗಿಸಿದರೆ ಸಾಲದು. ವ್ಯಾಕರಣಕ್ಕೆ ತಕ್ಕ ತತ್ವವನ್ನು ಸಾರಿ ಹೇಳಬೇಕು. ಬೋಧನಾ ಕ್ರಮದಲ್ಲಿ ಅದಕ್ಕೆ ತಕ್ಕ ಸ್ಥಾನಮಾನ ಬೇಕು. ಇದರ ಸಹಾಯದಿಂದಲೇ ಇತ್ತೀಚೆಗೆ ಬೆಳೆದುಬಂದ Structuralism ದಂಥ ವಿಮರ್ಶಾ ಪದ್ಧತಿ ಕನ್ನಡದಲ್ಲಿ ಬೆಳೆಯಬಹುದು. ನಮ್ಮ ಸುದೈವಕ್ಕೆ ಕನ್ನಡ ಶಿಕ್ಷಕರು ತಂಸುವಂಟ್ಟಿಗೆ ವ್ಯಾಕರಣ ಓದಿರುತ್ತಾರೆ. ಅದರ ಲಾಭ ವರ್ಗದಲ್ಲಿ ಪಡೆಯುವದಕ್ಕೆ ತಕ್ಕ ವೈಚಾರಿಕ ಹಿನ್ನೆಲೆ ಸಡಿಲಾಗಿದೆ. ಅಷ್ಟೆ. ಅದನ್ನು ದೃಢ ಗೊಳಿಸುವ ಕಾಲ ಬಂದಿದೆ. ಭಾವುಕಶಿಕ್ಷಣವಷ್ಟೇ ಸಾಲದು ಎಂದು ಅರಿಕೆ ಮಾಡಿ ಕೊಳ್ಳುತ್ತೇನೆ.

ಭಾಷೆಗಳ ಬಹಳಷ್ಟು ವ್ಯಾಕರಣ ರಚನೆಗಳು ಒಂದೇ ಆಗಿದ್ದರೂ, ಕೆಲವೊಂದು ರಚನೆಗಳು ಒಂದೇ ಇರುವುದಿಲ್ಲ. ಇಂಥವಕ್ಕೆ somorphic ರಚನೆಗಳೆಂದು snook ಕರೆದಿದ್ದಾರೆ. ಇಂಗ್ಲಿಷಿನಲ್ಲಿ SOV ರಚನೆ ಪ್ರಧಾನವಾಗಿರುತ್ತದೆ. ಆದರ ವ್ಯಾಕರಣದ ಅಭಿಜ್ಞಾಪೂರ್ವ ಅಭ್ಯಾಸ ಮಾತೃಭಾಷೆಯಲ್ಲಿ ಮಾಡಿ ಸಾಕಷ್ಟು ತಳ ಪರಿಕಲ್ಪನೆ ಗಳು ಮೈಗೂಡಿಸಿದ ಮೇಲೆ, ಬೇರೆ ಭಾಷೆಯಲ್ಲಿ ಬರುವ isomarphic ರಚನೆ ಗಳನ್ನು ಅವುವಳ ಸಹಾಯದಿಂದ ಬೇರ್ಪಡಿಸಲೂ ಸಾಧ್ಯವೆಂಬ ವಿಚಾರವನ್ನು ನೀಡಿ Snookರು ತಮ್ಮ ವಿಚಾರವನ್ನು ಪರಿಪೂರ್ಣಗೊಳಿಸಿದ್ದಾರೆ.

ಇದೆಲ್ಲ ಕೈಗೂಡಬೇಕಾದರೆ ನಾವು ಮೊದಲಿನ Grammar Translation ಪದ್ಧತಿಗೆ ಮರಳಬೇಕು. ಸ್ನೂಕರೇ Translation ಶಬ್ದ ಬಳಸಿದ್ದಾರೆ. Grammar ಸಾಲದು Translation ಸಾಲದು. ನಮ್ಮನಂತಲೇ ನೀಡಿದ ಶುಷ್ಕ, ಸಂದರ್ಭರಹಿತ ಬಿಡಿ ವಾಕ್ಯಗಳನ್ನು ಬಳಸಿದ ಪದ್ಧತಿ. ಹೊಸ ಪೀಳಿಗೆಗೆ ರುಚಿಸು ವುದಿಲ್ಲ. ಅವರಿಗೆ ಪೂರ್ಣ ಅರ್ಥದ ಉಚಿತ ರಸಮಯ ಸಂದರ್ಭದ ಪರಿಚ್ಛೇದ ವನ್ನೇ ನೀಡಬೇಕು. ಆದರೆ ಬರೆಯುವವನು sub structureಗಳ ಮೇಲೆ ಲಕ್ಷವಿತ್ತು ಅವುಗಳ ವ್ಯಾಕರಣ ರೀತಿಯ ಡ್ರಿಲ್‌ಗಳನ್ನು ತಯಾರಿಸಬೇಕು. ಪಾಠ್ಯ-ಪಾಠ್ಯಗಳಲ್ಲಿ ಸಾಮರಸ್ಯಬೇಕು. ಇನ್ನು ಇಂಗ್ಲಿಷ್ ಚಿಕ್ಕ ಪುಟ್ಟ ಶಬ್ದಗಳಿಗೆ ತಡಕಾಡು ತ್ತಿರುವ ವಿದ್ಯಾರ್ಥಿಗೆ ಮಾಡತಕ ಮಧುಮಟಕ ವರ್ಣನಾತ್ಮಕ ಶೈಲಿಯಲ್ಲಿ ಬರೆದ sets, series ಮುಂತಾದ ಶಬ್ದಗಳು ದುರ್ಬೋಧವಾಗುತ್ತವೆ. ಕನ್ನಡವಲ್ಲಿ ಆ ಶಬ್ದಗಳಿಗೆ ಸಮಾನಾರ್ಥದ ಶಬ್ದಗಳೂ ಇನ್ನೂ ತಯಾರಾಗಿಲ್ಲ. ಇಂಥ ಸಂದರ್ಭದಲ್ಲಿ ಪ್ರಾಥಮಿಕ ಮಾಧ್ಯಮಿಕ ಶಿಕ್ಷಕನು ಮಾತೃಭಾಷೆಯಲ್ಲಿ ಅವನ್ನು ಹೇಗೆ ಕಲಿಸಬೇಕು. ಎಂಬ ಪ್ರಶ್ನೆ ಬರುತ್ತದೆ. ಹಾಗೆಯೇ ಸಾಮಾಜಿಕ ವಿಜ್ಞಾನಗಳಲ್ಲಿಯೂ ಭೌತ-ರಸಾಯನ ಶಾಸ್ತ್ರಗಳಲ್ಲಿಯೂ ಅನೇಕಾರ್ಥದ, ಅನೇಕ ತೂಕಗಳಿದ್ದು ಕೆಲವು

ಶಬ್ದಗಳು ಬರುತ್ತವೆ. ಸಂದರ್ಭಕ್ಕೆ ಉಚಿತವಾಗಿ ಅವುಗಳ ತೂಕವೂ ಬದಲಾಗುತ್ತದೆ. ಉದಾ : Law ಶಬ್ದ Law of Diminising Return ದಲ್ಲಿಯ Law ಶಬ್ದಕ್ಕೂ Ohm's Law ಎಂಬ ವಿದ್ಯುತ್ ಶಾಸ್ತ್ರದಲ್ಲಿ ಬರುವ Law ಅರ್ಥದ ತೂಕದಲ್ಲಿ ಅಂತರವಿದೆ. ನನ್ನ ನಿಜ ಅಭಿಪ್ರಾಯ ಹೇಳುವುದಾದರೆ ಇಂಥ ಭಿನ್ನ ತೂಕದ ಅರ್ಥಗಳಿಗಾಗಿ ಬೇರೆ ಸಮಾನ ಶಬ್ದಗಳನ್ನು ಹುಟ್ಟಿಸುವ ಕಾರಣವೇ ಇಲ್ಲ. ಸೆಲ್, ನೀರಿಜ, ಲಾ, ಇವು ಕನ್ನಡ ಶಬ್ದಗಳೇ ತಿಳಿದುಕೊಂಡರೆ ಈ ಸಮಸ್ಯೆ ಬರುವುದೇ ಇಲ್ಲ. ಇದು ಬೇಡವಾದರೆ, 'ಪುಂಜ', 'ನೀತಿ', 'ನಯ', 'ನಡಾವಳಿ', 'ನಡೆ' ರೀತಿ ಇಂಥ ಅಷ್ಟೇ ಭಾರವಾದ ಕನ್ನಡ polysemic ಶಬ್ದಗಳನ್ನು–ಅನೇಕ ಮುಖಿ ಶಬ್ದಗಳನ್ನು ಬಳಸಬಹುದು.

ಇನ್ನೂ ಜಟಿಲ ಪಾರಿಭಾಷಿಕ ನಾಮಗಳು ಒಂದಕ್ಕೆ ಡಾ. ರಘುವೀರರು ಕೆಲವು ಪಾಶ್ಚಾತ್ಯದ ಶಬ್ದಗಳನ್ನು ನಿರ್ಮಿಸಿದರು. ರೇಲ್ವೆ ಸ್ಟೇಶನ್‌ಗೆ 'ಅಗ್ನಿರಥವಿಶ್ರಾಮ ಧಾಮ' ನೆಕ್‌ಟೈಗೆ 'ಕಂಠ' ಪೇಟ' ಇಂಥ ಶಬ್ದಗಳು ನಗೆಗೀಡಾದವು. Prissic Acid ದಂಥ ಸಹಜ ಶಬ್ದಗಳನ್ನು ಹಾಗೆಯೇ ಇಟ್ಟುಕೊಂಡುದರಲ್ಲಿ ಅನೇಕ ಅನುಕೂಲತೆಗಳಿವೆ. ಮಾತೃ ಭಾಷೆಯ ಬಳಕೆ ಉಚ್ಚಮಟ್ಟದ ಶಿಕ್ಷಣಕ್ಕೆ ಅಡ್ಡಿ ಯಾಗಬಾರದು ಪರಿಭಾಷೆಯ ಶಬ್ದಗಳನ್ನು ಇಂಗ್ಲಿಷದಲ್ಲಿ ಗುರುತಿಸಲು ಅನುಕೂಲ ವಾಗಬೇಕು. ಇಂಥ Medical Dictionary ತನ್ನ ಒಳಗೆ ಇದೆ. ಪ್ರತಿ ಶಬ್ದದ ವ್ಯುತ್ಪತ್ತಿಯನ್ನೂ ಸವಾಲಾಗಿ ನೀಡುತ್ತದೆ. ಅದರಿಂದ ಅರ್ಥವೂ ಸ್ಪಷ್ಟವಾಗುತ್ತದೆ ಕನ್ನಡಭಾಷೆಯ ಬಳಕೆ ಇಂಗ್ಲಿಷಿಗಾಗಲಿ, ಆಯಾ ವಿಜ್ಞಾನವನ್ನು ಕಲಿಯುವ ದಕ್ಕಾಗಲಿ ಅಡ್ಡಿಯಾಗುವಂತೆ ಆಗಬಾರದು. ಕನ್ನಡದಲ್ಲಿ ಶಿಕ್ಷಣ ಕೊಡುವುದರ ಉದ್ದೇಶ ಜಗತ್ತಿನ ಅತ್ಯಂತ ಉಚ್ಚಮಟ್ಟದ ವಿಜ್ಞಾನಗಳ ಸಂಶೋಧನ ಮಟ್ಟದ ಶಿಕ್ಷಣಕ್ಕೆ ನೆರವಾಗುವದೇ ಇದೆ. ವ್ಯಾಕರಣ-ವ್ಯುತ್ಪತ್ತಿಗಳ ಪೂರ್ವಾಭ್ಯಾಸದ ಮೂಲಕ ಇದು ಸಹಜವಾಗಿ ನಡೆಯುವಂತೆ ಆಗಬೇಕು. ಕನ್ನಡ ಶಿಕ್ಷಣ ಮಾಧ್ಯಮ Opereational, Functional ರೀತಿಯ ಬಳಕೆಯಿಂದಲೇ ಹೊರತು ಹೊಸ ಪರಿಭಾಷೆಯ ನಿರ್ಮಾಣದಿಂದಲ್ಲ, ಇದನ್ನು ಶಿಕ್ಷಣದಲ್ಲಿ ಇಡಬೇಕು. ಪರಿಕಲ್ಪನೆಗಳ ವಿಸ್ತಾರ ವಿಕಾಸ ಮತ್ತು ವಿಜ್ಞಾನಿಗೆ ವಿಸ್ತೃತ ವಿಷಯ ಸಂಗ್ರಹಕ್ಕೆ ಅನು ಕೂಲವಾಗಬೇಕೆಂದೇ ನಮ್ಮ ಉದ್ದೇಶವಾಗಿರಬೇಕು.

3

ಇನ್ನು ಕೊನೆಯ ಪ್ರಶ್ನೆ. ಮಿಶ್ರಿತ ಭಾಷಾಪಂಗಡಗಳು ಒಂದು ವರ್ಗದಲ್ಲಿ ಇದ್ದಾಗ ಕನ್ನಡದಲ್ಲಿ ಹೇಗೆ ವಿಷಯ ನಿರೂಪಣೆ ಮಾಡಬೇಕು ? –ಭಾರತದಲ್ಲಿ ಇಂಥ ಸಮಸ್ಯೆ ಎಂದೂ ಬಂದಿರಲಿಲ್ಲ. ನಾನು ಹೈಸ್ಕಲು ಕಲಿಯುವಾಗ ವರ್ಗದಲ್ಲಿ

ಎಂಟು ಹತ್ತು ಮರಾಠಿ ವಿದ್ಯಾರ್ಥಿಗಳು ಇರುತ್ತಿದ್ದರು. 'ನೀವು ಕನ್ನಡದಲ್ಲಿ ಕಲಿಸಿದರೆ ನಮಗೆ ತಿಳಿಯುವುದಿಲ್ಲ' ಎಂದು ಅವರು ತಕರಾರು ಮಾಡುತ್ತಿದ್ದಿಲ್ಲ. ಭಾಷಾಪರಿಸರದಲ್ಲಿ ಹೊಂದಿಕೊಂಡು ಹೋಗುತ್ತಿದ್ದರು. ಅದು-ಕನ್ನಡವನ್ನು ಪರಿಸರದ ಮೂಲಕವೇ ಕಲಿಯುತ್ತಿದ್ದರು. ಅವರಿಗೆ ಮಾತೃಭಾಷೆ ಕಲಿಸುವುದಕ್ಕಾಗಿ ಇಡೀ ಶಾಲೆಗೆ ಒಬ್ಬ ಶಿಕ್ಷಕ ಇರುತ್ತಿದ್ದ. ಅಷ್ಟೇ. ಉಳಿದ ವಿಜ್ಞಾನವಿಷಯಗಳಾದ Physics, Chemistry ಗಣಿತಗಳಲ್ಲಿ ಕನ್ನಡವೇ ಮಾಧ್ಯಮವಾಗಿತ್ತು. ಇದು ಭಾವುಕ ಸಮಸ್ಯೆಯಾಗಿರಲಿಲ್ಲ. ಇತ್ತೀಚೆಗೆ ಭಾಷಾಭಿಮಾನವು ಒಂದು ಭಾವುಕ ಸಮಸ್ಯೆಯಾಗಿಬಿಟ್ಟ ಮೂಲಕ ಕಾಲ್ಪನಿಕ ಸಮಸ್ಯೆಗೇ ನೈಜಸಮಸ್ಯೆಯ ಸ್ಥಾನಮಾನ ಸಿಕ್ಕಿದೆ ಅಷ್ಟೇ. ಮುಕ್ತ ಮನಸ್ಸಿನ ಅಭಾವದಿಂದಾಗಿಯೇ ಹೈರೆತ್ವ ಮೆಥಡ್ ವಿಫಲವಾಯಿತು. ಹಳೆಯ ಭಾಷಾಂತರ-ವ್ಯಾಕರಣ ಪದ್ಧತಿಯಲ್ಲಿ ಯಾವುದು ಹಠದ ಪ್ರಶ್ನೆ ಹುಟ್ಟುವುದಿಲ್ಲ. ಶಿಕ್ಷಕರೇ ಒಂದು ತರಹ ವಿಷಯ ಕಲಿಸುವಾಗ ದುರ್ಬೋಧವೆಂದು ಅನಿಸಿದಲ್ಲಿ ವಿದ್ಯಾರ್ಥಿಗಳನ್ನೇ ಕೇಳಿ, ಹೇಳಬಹುದು. ಅಥವಾ ವಿದ್ಯಾರ್ಥಿಗಳೇ ಹೇಳಬಹುದು. ಪರಸ್ಪರ ವಿನಿಮಯ (give and take) ವರ್ಗದಲ್ಲಿ ನಡೆಯುವ ಮುಕ್ತ ಮನಸ್ಸು ಬಂದರೆ, ಈ ಸಮಸ್ಯೆ ಸಮಸ್ಯೆಯೇ ಉಳಿಯುವದಿಲ್ಲ. ಶಿಕ್ಷಕರಿಗೆ ವಿದ್ಯಾರ್ಥಿಗಳ ಶಿಕ್ಷಣದ ಬಗ್ಗೆ ಕಾಳಜಿ ಹುಟ್ಟಿದರೆ, ಇಂಥಾ ಭಾಷೆಯಲ್ಲೇ ಕಲಿಸುವೆನೆಂಬ ಹಟವೂ ಮಾಯವಾಗುತ್ತದೆ. ಪರಸ್ಪರ ಕೇಳಿ ತಿಳಿಕೊಳ್ಳುವ ಪ್ರವೃತ್ತಿ ಬೆಳೆಯ ಬೇಕೇ ಹೊರತು ಶಿಕ್ಷಣ ಮಾಧ್ಯಮವು ಹಟದ ವಿಷಯವಾಗ ಬಾರದು. ದ್ವಿತೀಯ–ತೃತೀಯ ಭಾಷೆಯ ನರವು ಇದ್ದೇ ಇರುತ್ತದೆ.

4

Direct Method ಸೂಚಿಸಿದ ಹಟವೇ ಈ ಎಲ್ಲ ಭಾವುಕ ಸಮಸ್ಯೆಗಳ ತಾಯಿ ಅದನ್ನು ಬಿಟ್ಟುಕೊಟ್ಟರೆ, Grammar Translation Methodಗೆ ಮರಳಿ ಮೊರೆ ಹೋದರೆ, ಮುಕ್ತಮನಸ್ಸಿನ ವಿಚಾರಸರಣಿ ಮತ್ತೆ ದೇಶದಲ್ಲಿ ಹೊಸ ಗಾಳಿಯಂತೆ ಬೀಸಿ ನಮ್ಮ ಶಿಕ್ಷಣವನ್ನು ಪುನರುಜ್ಜೀವನಗೊಳಿಸುತ್ತದೆ. Grammar Translation ಪದ್ಧತಿ, Bilingual ಶಿಕ್ಷಣ ವ್ಯವಸ್ಥೆ ಬಂದರೆ, ಕೃತ್ರಿಮ ಭಾಷಾ ಪರಿಸರವನ್ನು ಹುಟ್ಟಿಸುವ ಆತ್ಮಘಾತಕ ಪ್ರವೃತ್ತಿಯೂ ತೊಲಗುವುದು; ಅನೇಕ ಜೀವಂತ ಭಾಷೆಗಳನ್ನು ಕಲಿತುಕೊಳ್ಳುವ ಅನುಕೂಲವೂ ಆಗುವುದು.

ಅದಕ್ಕಾಗಿ ನಮ್ಮ ಸೂಚನೆಯೆಂದರೆ—

ಕನ್ನಡದಲ್ಲೇ ಇಂಗ್ಲೀಷ್–ಹಿಂದಿ–ಸಂಸ್ಕೃತಗಳನ್ನು ಕಲಿಸಬೇಕು. ಕೃತ್ರಿಮ ಇಂಗ್ಲೀಷ-ಹಿಂದೀ ಭಾಷಾ ಪರಿಸರವನ್ನು ಸೃಷ್ಟಿಸುವ ಮನೋವೃತ್ತಿ ತೊಲಗಬೇಕು.

ಕನ್ನಡದಲ್ಲಿ ಕಲಿಸುವಾಗ ವಿಜ್ಞಾನ ಪರಿಭಾಷೆಯಲ್ಲಿ ಬರುವ ಇಂಗ್ಲಿಷ್ ಪದಗಳನ್ನು ಮುಕ್ತ ನಿರ್ಭೀತರೀತಿಯಿಂದ ಬಳಸಬೇಕು. ಅವು ಕನ್ನಡ ಶಬ್ದಗಳೆಂದೇ ತಿಳಿಯಬೇಕು. ವಿದ್ಯಾರ್ಥಿ ಬೆಳೆದು ನಾಳೆ ಸಂಶೋಧಕನಾಗುವವನೆಂಬ ಅರಿಕೆ ಶಿಕ್ಷಕರಲ್ಲಿ ಬರಬೇಕು. ಅವನಿಗೆ ಕನ್ನಡ ಮಾಧ್ಯಮ ಅನುಕೂಲವಾಗಬೇಕೆ ಹೊರತು ಅವನ ತಿಳಿವಳಿಕೆ ಮೊಟಕುಗೊಳ್ಳಬಾರದು. ಕೃತ್ರಿಮ ಸಮಾನಾಂತರ ಪರಿಭಾಷೆ ಸೃಷ್ಟಿಸುವ ಯತ್ನ ನಿಲ್ಲಬೇಕು. 'ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸೋಣ' ಎಂಬ ವಾಕ್ಯದಲ್ಲಿಯ ಸ್ಪಷ್ಟತೆ 'ಸದೇಹಸಾಕ್ಷಿ ಅರ್ಜಿ ಸಲ್ಲಿಸೋಣ' ಎಂಬ ವಾಕ್ಯದಲ್ಲಿ ಬರುವುದಿಲ್ಲ. 'ಕಾರ್ಡಿಯೋಗ್ರಾಫ್‌ದ ರೀಡಿಂಗ್ಸ್ ತೆಗೆದುಕೊಳ್ಳಬೇಕು' ಎಂದು ಕಲಿಸುವುದು 'ಹೃದಯ ಬಡಿತ ಕಂಪಯಂತ್ರ ದಾಖಲೆ ನೋಡಬೇಕು ಎಂಬ ವಾಕ್ಯದ ದುರ್ಬೋಧತೆಗಿಂತ ಎಷ್ಟೋಪಾಲು ಅನುಕೂಲ. ಸಮಾಂತರ ಪರಿಭಾಷೆ ಹುಟ್ಟಿಸುವ ಪ್ರಯತ್ನ ವ್ಯರ್ಥ.

ಶಿಕ್ಷಣದಲ್ಲಿ ಮಾತೃಭಾಷೆಯ ಉಪಯೋಗ functional operations ಅರ್ಥದಲ್ಲೇ ಹೊರತು ಭಾವುಕ ಅಭಿಮಾನಕ್ಕಾಗಿ ಅಲ್ಲ, ಎಂಬುದನ್ನು ಅರಿತಿರಬೇಕು. Room Temperature ಶಬ್ದ 'ಕೋಣೆಯ ಕಾವು' ಎಂದು ಮಾಡುವ ಇಚ್ಛೆ ಮೋಹಕವಾದರೂ ಬಿಟ್ಟುಬಿಡಬೇಕು,

ಕನ್ನಡವನ್ನು ವಿಜ್ಞಾನ ಶಿಕ್ಷಣದ ಭಾಷೆಯನ್ನಾಗಿ ಪಳಗಿಸುವುದಕ್ಕೆ ಕನ್ನಡ ವ್ಯಾಕರಣವೇ ಮುಖ್ಯಭಾಗ ವಹಿಸುತ್ತದೆ. ಸಮಾಂತರ ಪರಿಭಾಷೆಯಲ್ಲ.

ವ್ಯಾಕರಣಸಹಿತ ಕನ್ನಡವನ್ನು ಪ್ರಾಥಮಿಕ-ಮಾಧ್ಯಮಿಕ ಮಟ್ಟಗಳಲ್ಲಿ ಕಲಿಸಿದರೆ ಪರಿಕಲ್ಪನೆಗಳ-ವಸ್ತುವಿನ್ಯಾಸಕ್ಕೆ–ಪರಸ್ಪರ ಸಂಬಂಧದ, ಒಳರಚನೆ ತಿಳಿಯುತ್ತದೆ. ವ್ಯಾಕರಣವಿಲ್ಲದೆ ಮಾತೃಭಾಷೆಯೂ ಸೊರಗುತ್ತದೆ. ಈಗಿನ Impressionistic study of mother tongueದಿಂದ ಯಾವ ಲಾಭವೂ ಇಲ್ಲ. ಅದು ಮುಂದು ವರಿದರೆ ಮೇಲ್ಮಟ್ಟದ ಶಿಕ್ಷಣಕ್ಕೆ ಆತಂಕವಾಗುತ್ತದೆ. ಪ್ರಾಥಮಿಕ ಮಾಧ್ಯಮಿಕ ಮಟ್ಟದಲ್ಲಿ ಅಭಿಜಾತ ಸಂಸ್ಕಾರವನ್ನು ಕನ್ನಡಕ್ಕೆ ತಂದುಕೊಟ್ಟು, ಮೇಲ್ಮಟ್ಟದ ವಿಜ್ಞಾನ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡಬೇಕೆಂದು ಬೇಡುತ್ತೇನೆ.

ಕಾಸರಗೋಡಿನ ಆರ್ಯ ಮರಾಠಾ ಕ್ಷತ್ರಿಯರು - ಒಂದು ಸಾಂಸ್ಕೃತಿಕ ಅಧ್ಯಯನ

ಮೋಹನ್ ಕುಂಟಾರ್

ಮೂಲ

ಕಾಸರಗೋಡು ಪ್ರದೇಶದಲ್ಲಿ ವಾಸಿಸುವ ಆರ್ಯ ಮರಾಠ ಕ್ಷತ್ರಿಯರು ಮೂಲತಃ ಮಹಾರಾಷ್ಟ್ರದವರು ಇವರಿಗೆ ಆರ್ಯ ಮಹಾರಾಷ್ಟ್ರ ಕ್ಷತ್ರಿಯರು ಎಂಬ ಹೆಸರೂ ಇದೆ. ಇವರು ಮೂಲದಲ್ಲಿ ಯುದ್ಧವನ್ನೇ ತಮ್ಮ ಜೀವನ ವೃತ್ತಿಯನ್ನಾಗಿರಿಸಿಕೊಂಡಿದ್ದರು, ಎಂಬುದನ್ನು ಇವರ ಸಾಂಸ್ಕೃತಿಕ ಅಧ್ಯಯನದಿಂದ ಕಂಡುಕೊಳ್ಳಬಹುದು. ಈ ಯೋಧರು ಪರಿಸರದ ಪ್ರಚೋದನೆಯಿಂದಲೋ, ರಾಜಕೀಯ ಕಾರಣದಿಂದಲೋ ವಲಸೆ ಬಂದು ಈ ಪ್ರದೇಶದಲ್ಲಿ ನೆಲೆಯೂರಿ ಸುಮಾರು ೩–೪ ಶತಮಾನಗಳೇ ಕಳೆದಿರಬಹುದು. ಮಹಾರಾಷ್ಟ್ರದಿಂದ ಕರ್ನಾಟಕದ ಪ್ರದೇಶಗಳಲ್ಲಿ ವಾಸಿಸ ಹೊರಟು ಬಳಿಕ ಈ ಪ್ರದೇಶಕ್ಕೆ ಬಂದಿರಬೇಕು. ಆ ಹೊತ್ತಿಗಾಗಲೇ ಕನ್ನಡವನ್ನು ತಮ್ಮ ಮಾತೃಭಾಷೆಯಾಗಿರಿಸಿಕೊಂಡಿರಬೇಕು. ೧೭ ನೇ ಶತಮಾನದ ಆರಂಭದಲ್ಲಿ ಇಕ್ಕೇರಿ ಅರಸನಾದ ಶಿವಪ್ಪನಾಯಕನು ತೊಲತನಾಡಿನ ಅರಸನನ್ನು ಸೋಲಿಸಿ ಕಾಸರಗೋಡು, ಚಂದ್ರಗಿರಿ ಕೋಟೆಗಳನ್ನು ಬಲಪಡಿಸಿದನು. ಬಂಟರೂ, ನಾಯಕರೂ, ಬಲ್ಲವರು, ತೀಯರರೂ ಈ ಜಿಲ್ಲೆಯಲ್ಲಿ ಆಳುತ್ತಿದ್ದ ಜೈನರಾಜರ ಮತ್ತು ತೊಲತನಾಡಿನ ಅರಸರ ಸೈನಿಕರಾಗಿದ್ದುದರಿಂದ ಆವರಲ್ಲಿ ನಂಬಿಕೆಯಿಲ್ಲದೆ ಶಿವಪ್ಪನಾಯಕನು ರಾಮರಾಜ ಕ್ಷತ್ರಿಯರೆಂಬ ಜಾತಿಯವರನ್ನು ಉತ್ತರ ಕನ್ನಡದಿಂದಲೂ ಇಕ್ಕೇರಿಯಿಂದಲೂ ಕರೆತಂದು ಅವರಲ್ಲಿ ಕೆಲವರನ್ನು ಜಮೇದಾರ, ಹವಾಲದಾರ, ಸುಬೇದಾರ ಮುಂತಾದ ದೊಡ್ಡ ಹುದ್ದೆಗಳಿಗೆ ನೇಮಿಸಿದನು"* ಸುಮಾರು ಇದೇ ವೇಳೆಗೆ ಆರ್ಯ ಮರಾಠ ಕ್ಷತ್ರಿಯರೂ ಈ ಪ್ರದೇಶಕ್ಕೆ ಬಂದಿರಬೇಕು. ಇಂದಿಗೂ ಇಲ್ಲಿ ವಾಸಿಸುವ ರಾಮರಾಜ ಕ್ಷತ್ರಿಯರ ಭಾಷೆಗೂ, ಆರ್ಯ ಮರಾಠ ಕ್ಷತ್ರಿಯರ ಭಾಷೆಗೂ ಸಾಮ್ಯವಿದೆ ಎಂಬುದು ಕುತೂಹಲಕರವಾದ ವಿಚಾರ. ದಕ್ಷಿಣ ಕನ್ನಡದ ಮೂಲ್ಕಿ. ಕಾರ್ಕಳಗಳಲ್ಲಿ ನೆಲೆಸಿರುವ ಆರ್ಯ ಮರಾಠ ಕ್ಷತ್ರಿಯರು

---

*ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ-ಎಂ. ಗಣಪತಿರಾವ್ (ಪು. 378)
(ಮೊದಲ ಮುದ್ರಣ - 1923)

ಇಂದೂ ಸಹ ತಮ್ಮ ಮಾತೃಭಾಷೆಯಾದ ಮರಾಠಿಯನ್ನು ಉಳಿಸಿಕೊಂಡಿದ್ದಾರೆನ್ನು ವುದು ಗಮನಿಸಬೇಕಾದ ಅಂಶ.

ಕಾಸರಗೋಡು ಪ್ರದೇಶದಲ್ಲಿ ಕನ್ನಡ ಹಾಗೂ ಅದರ ಉಪಭಾಷೆಯು ಮಾತೃಭಾಷೆಯಾಗುಳ್ಳ ಜನಾಂಗಗಳಲ್ಲಿ ಹವ್ಯಕ ಬ್ರಾಹ್ಮಣ, ರಾಮರಾಜ ಕ್ಷತ್ರಿಯ ಮತ್ತು ಆರ್ಯಮರಾಠ ಕ್ಷತ್ರಿಯ ಜನಾಂಗಗಳು ಪ್ರಮುಖವಾದವುಗಳು. ಕನ್ನಡ ಮನೆಮಾತುಗುಳ್ಳ ಕೋಟ ಬ್ರಾಹ್ಮಣರು ಹಾಗೂ ಮಾದಿಗ ಮತ್ತು ಬೈರ ಜನಾಂಗದ ಬೆರಳೆಣಿಕೆಯ ಕೆಲವು ಮನೆಗಳೂ ಈ ಪರಿಸರದಲ್ಲಿ ಇವೆ. ಆರ್ಯಮರಾಠ ಕ್ಷತ್ರಿಯರ ಶುಭ ಸಮಾರಂಭಗಳಲ್ಲಿ ಪೌರೋಹಿತ್ಯ ನಿರ್ವಹಿಸುವ ಕರ್ಹಾಡ ಬ್ರಾಹ್ಮಣರು ಹಾಗೂ ಇವರ ಸಹಾಯಕರಾಗಿ ಜೊತೆಗೆ ಬಂದವರೆನ್ನಲಾಗುವ ಗಿರಿಜನವರ್ಗದವರೂ ಮರಾಠಿಯ ಉಪಭಾಷೆಯೊಂದನ್ನು ತಮ್ಮ ಮಾತೃಭಾಷೆ ಯಾಗಿರಿಸಿಕೊಂಡಿದ್ದಾರೆ. ಉಳಿದವರೆಲ್ಲ ತುಳು. ಮಲೆಯಾಳ, ಕೊಂಕಣಿ ಮಾತೃ ಭಾಷೆಯಾಗುಳ್ಳ ಜನಾಂಗದವರೇ ಈ ಪ್ರದೇಶದಲ್ಲಿ ವಾಸಿಸುತ್ತಿರುವುದು. ಇವುಗಳಲ್ಲಿ ಆರ್ಯ ಮರಾಠ ಕ್ಷತ್ರಿಯರ ಮನೆಗಳು ಸುಮಾರು ೩೦೦—೪೦೦ ಆಗಬಹುದು. ಈ ಜನಾಂಗದವರು ಕಾಸರಗೋಡಿನಲ್ಲಿ ವಾಸಿಸಹೊರಟು ಶತಮಾನಗಳು ಕಳೆದರೂ ತಮ್ಮದೇ ಆದ ಆಚರಣೆ, ಸಂಪ್ರದಾಯಗಳನ್ನು ಉಳಿಸಿಕೊಂಡು, ಇಲ್ಲಿನ ಸಂಸ್ಕೃತಿ ಗೊಂದು ಹೊಳಪು ನೀಡಿದ್ದಾರೆ. ಇವರ ಸಂಪ್ರದಾಯ ಆಚರಣೆಗಳಿಗೆ ಇತರ ಜನಾಂಗಗಳೊಳಗೆ ಸಾದೃಶ್ಯವಿದ್ದಂತೆ ವೈದೃಶ್ಯವೂ ಇದೆ.

ವೃತ್ತಿ :

ಒಂದು ಕಾಲದಲ್ಲಿ ಯೋಧರಾಗಿದ್ದ ಇವರು ಇಂದು ಜೀವನೋಪಾಯಕ್ಕಾಗಿ ಕೃಷಿ, ವ್ಯವಸಾಯ, ವ್ಯಾಪಾರ ಅಲ್ಲದೆ ಸರಕಾರಿ ನೌಕರಿಗಳನ್ನು ಅವಲಂಬಿಸಿದ್ದಾರೆ. ಈ ಜನಾಂಗದ ಬಹುಮಂದಿ ಇಂದಿಗೂ ಪೊಲೀಸು ಇಲಾಖೆಯಲ್ಲಿ, ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹೆಚ್ಚು ವಿದ್ಯಾವಂತರಿಲ್ಲದ ಈ ಪಂಗಡದ ಹಿರಿಯರಲ್ಲಿ ಬಹು ಮಂದಿ ಅರಣ್ಯರಕ್ಷಕರು, ಪೊಲೀಸು ಅಧಿಕಾರಿಗಳು, ಸೈನ್ಯಾಧಿಕಾರಿಗಳಾಗಿ ಕೆಲಸ ನಿರ್ವಹಿಸಿದವರೇ ಆಗಿದ್ದಾರೆ.

ಹೆಸರುಗಳು :

ಈ ಜನಾಂಗದಲ್ಲಿನ ಗಂಡಸರ ಹೆಸರುಗಳು ಅಪ್ಪೋಜಿ, ಅಣ್ಣೋಜಿ, ರಾಮೋಜಿ, ಸೋಮೋಜಿ ಹೀಗೆ 'ಓಜಿ' ಪ್ರತ್ಯಯದಿಂದ ಕೊನೆಗೊಳ್ಳುವ ಕಾರಣದಿಂದ ಇವರನ್ನು 'ಓಜಿ' ಎಂಬ ಉಪನಾಮದಿಂದ ಕಾಸರಗೋಡಿನ ಪ್ರದೇಶದಲ್ಲಿ ಗುರುತಿಸುತ್ತಾರೆ. ಸಾಧಾರಣವಾಗಿ ಇವರನ್ನು ಕನ್ನಡಿಗರು 'ರಾಯರು' ಎಂದೂ, ತುಳುವರು 'ಚೇರಾರು' ಎಂದೂ, ಮಲೆಯಾಳಿಗರು 'ಚೇರಿತ್ತಾರರೆಂದೂ ಕರೆಯುತ್ತಾರೆ. ಇವರ

ಹೆಂಗುಸರ ಹೆಸರುಗಳು ಸಾಮಾನ್ಯವಾಗಿ ಎಲ್ಲಮ್ಮ, ಗೌರಮ್ಮ, ಚೆನ್ನಮ್ಮ, ಸಣ್ಣಮ್ಮ ಇತ್ಯಾದಿಯಾಗಿ 'ಅಮ್ಮ'ದಿಂದ ಕೊನೆಗೊಳ್ಳುತ್ತದೆ. ಈ ಹೆಂಗುಸರನ್ನು ತುಳುವರು 'ಬೊಳುವತ್ತಿ'ಗಳೆಂದು ಮಲೆಯಾಳಿಗರು 'ಚೇರಿಕಾರ್ತಿ' ಎಂದೂ ಗುರುತಿಸುತ್ತಾರೆ. ಈ ವರ್ಗದ ಹಿರಿಯರಲ್ಲಿ ಇಂತಹ ಹೆಸರುಗಳನ್ನು ಇಂದೂ ಗುರುತಿಸಬಹುದು.

ಕೌಟುಂಬಿಕ ವ್ಯವಸ್ಥೆ

ಪುರುಷ ಪ್ರಧಾನವಾದ ಈ ಜನಾಂಗದ ಕೌಟುಂಬಿಕ ವ್ಯವಸ್ಥೆ ವಿಶಿಷ್ಟ ರೀತಿಯದು. ಕೆಲವು ಕುಟುಂಬಗಳವರು ತಮ್ಮನ್ನು ಒಂದೇ ಮೂಲಕ್ಕೆ ಆರೋಪಿಸಿ ಕೊಂಡು ಒಂದು ಮನೆತನವಾಗಿ ಗುರುತಿಸಿಕೊಂಡಿದ್ದಾರೆ. ಈ ಮನೆತನಗಳು ಜಾದವ್, ಜಗತಾಪ್, ಬಹುಮಾನ್, ಸಿಂಧ್ಯ, ಸಿರಿಯಾರ್, ವಾಗ್ಮಾನ್, ಲಾಡ್, ಪವಾರ್, ಪಟಾಲ್, ಕೌಮಾರ್, ಕಟ್‌ವಾಟ್, ಥರೇಕರ್, ಬೋಂಸ್ಲೆ ಎಂಬ ಹೆಸರು ಗಳಿಂದ ಕರೆಯಲ್ಪಡುತ್ತವೆ. ಈ ಮನೆತನಗಳ ಸಂಪ್ರದಾಯಗಳು ಅಲ್ಪ ಸ್ವಲ್ಪ ವ್ಯತ್ಯಸ್ಥವಾಗಿವೆ. ಪ್ರತಿಯೊಂದು ಮನೆತನಕ್ಕೂ ಒಂದೊಂದು ದೇವರ ಮನೆ*ಇದೆ. ಆ ದೇವರ ಮನೆಯಲ್ಲಿ ತಮ್ಮ ಕುಟುಂಬದ ಕುಲದೇವಿಯನ್ನು ಪ್ರತಿಷ್ಠಾಪಿಸುತ್ತಾರೆ. ಒಂದೊಂದು ಮನೆತನದ ದೇವಿಯೂ ಒಂದೊಂದು ದೇವಾಲಯದ ದೇವಿಯ ಹೆಸರಿನಿಂದ ಗುರುತಿಸಲಾಗುತ್ತದೆ. ಉದಾಹರಣೆಗೆ ಜಾದವ್ ಮನೆತನಕ್ಕೆ ಕೊಲ್ಲೂರು ಮೂಕಾಂಬಿಕೆ ಕುಲದೇವಿಯಾದರೆ ಪವಾರ್ ಮನೆತನಕ್ಕೆ ಮಹಿಷಾಸುರ ಮರ್ಧಿನಿಯೆ ಕುಲದೇವಿ. ಥರೇಕರ್ ಮನೆತನಕ್ಕೆ ಆರ್ಯಕಾತ್ಯಾಯಿನಿಯೇ ಕುಲದೇವಿ. ದೇವರ ಮನೆಯಲ್ಲಿ ದಿನನಿತ್ಯ ದೇವರಿಗೆ ಪೂಜೆಸಲ್ಲಿಸುವ ವ್ಯಕ್ತಿ ಕುಲಗುರುವಾಗಿ ದೀಕ್ಷೆ ಪಡೆ ದಿರುತ್ತಾನೆ. ಈ ಕುಲಗುರು ಆ ಮನೆತನದಲ್ಲಿ ಸತ್ತವನ ಉತ್ತರಕ್ರಿಯೆಗಳ ಹಾಗೂ ಕುಲಸಂಬಂಧವಾದ ಕ್ರಿಯೆಗಳಲ್ಲಿ ಪೌರೋಹಿತ್ಯ ನಡೆಸಿಕೊಡುವ ಹೊಣೆಯನ್ನು ಹೊತ್ತಿರುತ್ತಾನೆ.

ಆದರೆ ಮದುವೆಯಂತಹ ಶುಭ ಸಮಾರಂಭಗಳಲ್ಲಿ ಪೌರೋಹಿತ್ಯವನ್ನು ನಡೆ ಸುವವರು ಕ್ಹರಾಡ ಬ್ರಾಹ್ಮಣರು. ಇತ್ತೀಚೆಗೆ ಹವ್ಯಕ, ಶಿವಳ್ಳಿ ಬ್ರಾಹ್ಮಣರ ಪೌರೋಹಿತ್ಯಗಳಲ್ಲೂ ನಡೆಯುತ್ತದೆ. ಯುಗಾದಿ, ಗಣೇಶ ಚತುರ್ಥಿ, ಮಹಾಲಯ ಅಮಾವಾಸ್ಯೆ, ನವರಾತ್ರಿ, ನಾಗರ ಪಂಚಮಿ, ದೀಪಾವಳಿ ಇತ್ಯಾದಿ ಹಬ್ಬದ ದಿನಗಳಲ್ಲಿ ದೇವರ ಮನೆಯಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಈ ಪೂಜೆಯ ವೆಚ್ಚಕ್ಕಾಗಿ ದೇವರಿಗೆ ಉಂಬಳಿಯಾಗಿ ದೊರೆತ ಭೂಮಿ ಇರುತ್ತದೆ. ಈ ಭೂಮಿಯನ್ನು 'ದೇವರ ಮನೆ'ಯ ಯಜಮಾನ ವ್ಯವಸಾಯ ಮಾಡಿಯೋ, ಗೇಣಿಗೆ ನೀಡಿಯೋ ಬಂದ ಉತ್ಪತ್ತಿಯಿಂದ ದೇವರ ಕೆಲಸಗಳನ್ನು ನಿರ್ವಹಿಸಬೇಕು. ಭೂಮಿ ಇಲ್ಲ

*ಕುಲದೇವರನ್ನು ಪ್ರತಿಷ್ಠಾಪಿಸಿದ ಮನೆ, ಪ್ರತಿ ಮನೆತನಕ್ಕೆ ಒಂದು ದೇವರ ಮನೆ ಇರುತ್ತದೆ

ವಾದಲ್ಲಿ ಪ್ರತಿ ಕುಟುಂಬಗಳು ಸೇರಿ ವಂತಿಗೆ ರೂಪದಲ್ಲಿ ದೇವರ ಮನೆಯ ವೆಚ್ಚ ವನ್ನು ಭರಿಸಬೇಕು. ಕುಟುಂಬದ ಎಲ್ಲಾ ಹಿರಿಯರು ಈ ವಿಶೇಷ ಪೂಜೆಗಳಲ್ಲಿ ಪಾಲ್ಗೊಳ್ಳಬೇಕು. ಈ ಹಬ್ಬ ಹರಿದಿನಗಳಲ್ಲಲ್ಲದೆ ಪ್ರತಿ ತಿಂಗಳಿಗೊಮ್ಮೆ ವಿಶೇಷ ಪೂಜೆಯನ್ನು ನೆರವೇರಿಸುತ್ತಾರೆ. ಈ 'ತಿಂಗಳ ಪೂಜೆ'ಗಳನ್ನು ಸಾಮಾನ್ಯವಾಗಿ ತಿಂಗಳ ಮೊದಲ ಸೋಮವಾರ, ಮಂಗಳವಾರ ಯಾ ಶುಕ್ರವಾರಗಳಲ್ಲಿ ನಡೆಸಲಾಗುತ್ತದೆ.

ವೈವಾಹಿಕ ಸಂಬಂಧಗಳೂ ಮತ್ತು ಹಕ್ಕುಗಳು :

ಒಂದೇ ಮನೆತನದ ಹೆಣ್ಣು ಗಂಡುಗಳೊಳಗೆ ಪರಸ್ಪರ ವೈವಾಹಿಕ ಸಂಬಂಧ ಗಳು ಏರ್ಪಡುವುದಿಲ್ಲ. ಮದುವೆಯಾಗದ ಹೆಣ್ಣು ಹುಟ್ಟಿದ ಮನೆತನದ ಕುಲ ದೇವತೆಯ ಸಂಬಂಧವಾದ ಯಾವುದೇ ಪೂಜಾಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವ ಹಿಸುವಂತಿಲ್ಲ. ಮದುವೆಯಾದ ಮೇಲೆ ಗಂಡನ ಮನೆತನದ ದೇವರ ಮನೆಯಲ್ಲಿ ಸೇರಿಸಿಕೊಳ್ಳುವ ಕಾರ್ಯಕ್ರಮದ ಬಳಿಕವೇ ಆ ಮನೆತನದಲ್ಲಿ ಹೆಣ್ಣು ಈ ಹಕ್ಕನ್ನು ಪಡೆಯುತ್ತಾಳೆ. ಹೆಣ್ಣು ತನ್ನ ತಂದೆಯ ಮನೆತನಕ್ಕೆ ಹೊರಗಿನವಳಾಗಿರುತ್ತಾಳೆ. ಗಂಡು ಮಕ್ಕಳು ಮದುವೆಗೆ ಮೊದಲು ದೇವರ ಮನೆಯಲ್ಲಿ ದೀಕ್ಷೆವಹಿಸಿ* ಕುಲ ದೇವತೆಯ ಸಂಬಂಧವಾದ ಹಕ್ಕನ್ನು ಪಡೆಯಬೇಕು.

ಸಹೋದರಿಯ ಮಗನಿಗೆ ಸಹೋದರನ ಮಗಳು ಪ್ರಾಯ ಹೊಂದುವುದಾದರೆ ಮದುವೆಯ ಹಕ್ಕಿನ ಹೆಣ್ಣಾಗಿರುತ್ತಾಳೆ. ಅಂದರೆ ಹುಡುಗನ ಸೋದರ ಮಾವ (ತಾಯಿಯ ಸಹೋದರ)ನ ಮಗಳು ಮತ್ತು ಹುಡುಗಿಯ ಸೋದರತ್ತೆ (ತಂದೆಯ ಸಹೋದರಿ)ಯ ಮಗಂದಿರೊಳಗೆ ಪರಸ್ಪರ ಏರ್ಪಡುವ ಮದುವೆ ಹಕ್ಕಿನ ಮದುವೆ ಯಾಗಿರುತ್ತದೆ. ಇದನ್ನು 'ಪ್ರಥಮ ಸೋದರಿಕೆ' ಎನ್ನಲಾಗುತ್ತದೆ. ತನ್ನ ಮಗ ಳಿಗೆ ಗಂಡನಾಗುವ ವಯಸ್ಸಿನ ಮಗ ತನ್ನ ಅಕ್ಕನಿಗಿದ್ದರೆ ಆ ಮಗಳನ್ನು ಅಕ್ಕನ ಅನುಮತಿ ವಿನಾ ಹೊರಗೆ ಮದುವೆ ಮಾಡಿಕೊಡುವಂತಿರಲಿಲ್ಲ. ಇಂದು ಈ ಕ್ರಮ ಅಷ್ಟಾಗಿ ಆಚರಣೆಯಲ್ಲಿಲ್ಲ. ಅಲ್ಲದೆ ಸಹೋದರಿಯ ಮಗಳನ್ನು ಸಹೋದರನ ಮಗನಿಗೆ ಕೊಟ್ಟು ಮದುವೆಮಾಡುವುದೂ ಇದೆ. ಇದನ್ನು 'ಹಿಂಬಳಿ ಸೋದರಿಕೆ' ಎನ್ನುವರು. ಮದುವೆ ಮಾಡಿಕೊಟ್ಟ ಬಳಿಕ ಹೆಣ್ಣು ತಾಯಿಯ ಮನೆಯ ಸಂಬಂಧ ವನ್ನು ಕಡಿದುಕೊಳ್ಳದಂತೆ ಇಂತಹ ಸಂಬಂಧಗಳು ಏರ್ಪಡುತ್ತಿದ್ದುವು. ಒಬ್ಬ ತಾಯಿಯ ಇಬ್ಬರು ಗಂಡು ಮಕ್ಕಳು ಒಬ್ಬ ತಾಯಿಯ ಇಬ್ಬರು ಹೆಣ್ಣು ಮಕ್ಕಳನ್ನು

---

* ಇದನ್ನು 'ದೇವರ ಒಳಗೆ ಹಾಕುವುದು' ಎನ್ನಲಾಗುತ್ತದೆ. ಮದುವೆಗೆ ಮೊದಲು ಗಂಡು, ಮದುವೆಯ ಬಳಿಕ ಹೆಣ್ಣು ಕುಲದೇವರ ಸಂಬಂಧವಾದ ಕ್ರಿಯೆಗಳಿಗೆ ಅರ್ಹರನ್ನಾಗಿಸುವ ಒಂದು ಪೂಜಾಕ್ರಮ ಇದು ದೇವರ ಮನೆಯಲ್ಲಿ ನಡೆಯುತ್ತದೆ.

ಮದುವೆಯಾಗುವುದು ನಿಷಿದ್ಧ. ಅಲ್ಲದೇ ಒಂದೇ ವರ್ಷದಲ್ಲಿ ಒಬ್ಬ ತಾಯಿಯ ಇಬ್ಬರು ಗಂಡು ಮಕ್ಕಳು ಮದುವೆಯಾಗಕೂಡದು. ಹೆಣ್ಣು ಮಕ್ಕಳ ಮದುವೆಯಲ್ಲಿ ಈ ನಿಯಮವಿಲ್ಲ. ಒಂದೇ ಚಪ್ಪರದಲ್ಲಿ 3-4 ಮಂದಿ ಹೆಣ್ಣು ಮಕ್ಕಳಿಗೆ ಏಕಕಾಲದಲ್ಲಿ ಧಾರೆಯೆರೆದು ಕೊಡುವುದೂ ಇದೆ. ಹಿಂದೆ ಈ ಜನಾಂಗಗಳಲ್ಲಿ ಬಾಲ್ಯ ವಿವಾಹ ಪದ್ಧತಿ ಜಾರಿಯಲ್ಲಿತ್ತು. ಹೆಣ್ಣು ಮೈ ನೆರೆಯುವುದಕ್ಕೆ ಮುನ್ನ ಆಕೆಯನ್ನು ಮದುವೆ ಮಾಡಿಕೊಡಬೇಕಾಗಿತ್ತು. ಹೆಣ್ಣು ಮೈ ನೆರೆದ ಮೇಲಷ್ಟೇ ಆಕೆಯನ್ನು ಗಂಡನ ಮನೆಗೆ ಕಳುಹಿಸುತ್ತಿದ್ದುದು ವಿಧವಾ ವಿವಾಹಕ್ಕೆ ಈ ಜನಾಂಗದಲ್ಲಿ ಆಸ್ಪದವಿಲ್ಲ.

ಹಿಂದಿನ ಕಾಲದಲ್ಲಿ ಮದುವೆ ಮಾಡಿಕೊಟ್ಟ ಬಳಿಕ ತಂದೆಯ ಪಾಲಿನ ಸಂಪತ್ತಿನಲ್ಲಿ ಗಂಡುಮಕ್ಕಳಿದ್ದರೆ ಹೆಣ್ಣುಮಕ್ಕಳಿಗೆ ಯಾವುದೇ ಹಕ್ಕಿರಲಿಲ್ಲ. ತಾಯಿಯ ಪಾಲಿನ ಆಸ್ತಿ ಇದ್ದರೆ ಮಾತ್ರ ಅದಕ್ಕೆ ಗಂಡು ಮಕ್ಕಳಷ್ಟೆ ಹಕ್ಕುದಾರಳಾಗುತ್ತಾಳೆ ಹೆಣ್ಣು. ಮದುವೆಯಾದ ಒಂದು ವರ್ಷ ಸತ್ಕಾರಗಳು, ಹಬ್ಬ ಹರಿದಿನಗಳಲ್ಲಿ ಮಗಳನ್ನು, ಅಳಿಯನನ್ನು ಕರೆಸಿ ಸಮ್ಮಾನ* ಮಾಡುವುದು ಚೊಚ್ಚಲ ಗರ್ಭಿಣಿಗೆ ಬಾಗಿನ* ಕೊಟ್ಟು ಕರೆತರುವುದು, ಇತ್ಯಾದಿ ಆಚರಣೆಗಳೆಲ್ಲ ಹೆತ್ತವರ ಪಾಲಿಗೆ. ಚೊಚ್ಚಲ ಬಾಣಂತನವನ್ನು ಮಾಡಿ ಮಗುವಿನೊಂದಿಗೆ ತೊಟ್ಟಿಲು. ವಸ್ತ್ರಾಭರಣಗಳನ್ನು ನೀಡಿ ಕಳುಹಿಸಿಕೊಟ್ಟ ಬಳಿಕ ತೌರಿನವರ ಜವಾಬ್ದಾರಿ ಮುಗಿದಂತೆಯೇ ಸರಿ. ಅವಳ ಮುಂದಿನ ಜೀವನದ ಸಂಪೂರ್ಣ ಹೊಣೆ ಗಂಡನ ಮನೆಯವರಿಗೆ ಸೇರಿದ್ದು.

ಸಾಹಿತ್ಯ :

ಈ ಕ್ಷತ್ರಿಯ ಜನಾಂಗಗಳವರು ಇತರ ಜನಾಂಗಗಳಲ್ಲಿರುವಂತೆ ಮದುವೆಯಂತಹ ಶುಭ ಸಮಾರಂಭಗಳಲ್ಲಿ, ಮಗುವಿಗೆ ನಾಮಕರಣ ಸಂದರ್ಭಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರು. ದುಡಿಮೆಯ ವೇಳೆಯಲ್ಲಿ ಶ್ರಮ ಪರಿಹಾರಕ್ಕಾಗಿ ಹಾಡುಗಳನ್ನು ಹಾಡಿದರೆ ಬಿಡುವಿನ ವೇಳೆ ಹಾಡುಗಳನ್ನು ಹಾಡುವ ಮೂಲಕವೋ ಇಲ್ಲವೇ ಕತೆಗಳನ್ನು ಹೇಳುವುದರ ಮೂಲಕವೊ ಸಂತೋಷ ಪಡುತ್ತಿದ್ದರು.ಈ ಜನಾಂಗದ ಹೆಚ್ಚಿನ ಹೆಂಗಸರು ಅನಕ್ಷರಸ್ಥರಾಗಿದ್ದುದರಿಂದ ಸ್ವತಹ ಕಟ್ಟಿದ ಹಾಡುಗಳು, ಕತೆಗಳು ಅಲ್ಪ, ಸ್ವಲ್ಪ ಇಂದಿಗೂ ಉಳಿದುಕೊಂಡು ಬಂದಿದೆ. ಈ ಜನಪದರದ ಸಾಹಿತ್ಯದ ಅಭ್ಯಾಸದಿಂದ ಅದರ ವೈಶಿಷ್ಟ್ಯವನ್ನು ಕಂಡುಕೊಳ್ಳಬಹುದು.

---

*ಸನ್ಮಾನ

* ಸೀಮಂತಕ್ಕೆ ಈ ಹೆಸರು

ಹೊತ್ತು, ಹೆತ್ತು, ಸಾಕಿ, ಸಲಹಿ ಮಗಳನ್ನು ಮದುವೆ ಮಾಡಿ ಕೊಡಲೇ ಬೇಕಾದ ಅನಿವಾರ್ಯ ಸ್ಥಿತಿ ಬಂದೊದಗಿದಾಗ ಹೆತ್ತಕರುಳು ಮಿಡಿಯುತ್ತದೆ. ಆಕೆ ತನ್ನ ಕರುಳಿನ ಬೇನೆಯನ್ನು ಪ್ರಕಟಪಡಿಸುತ್ತಾಳೆ.

ಬಾಲವ್ವ ಇಂದಿನ ದಿನ ಜಗುಲಿಯಲಿ ನಡುದಾಡಿ
ಓಡೋಡಿ ಹಿತ್ಲಕಡೆ ಬಾಗ್ಲಲಿ ಇಳ್ದು ಹೋಗ್ಯಾಳು
ಹೂವಿನ ತೋಟಕೆ ಹೋಗ್ಯಾಳು
ತಾಯಿ ಹೆತ್ರಮ್ಮ ಹೇಳಿ ಮರುಗ್ಯಾಳು
ಇನ್ನು ಯಾರೋ ಮಗಳೇ ಹಿತ್ಲಕಡೆ ಬಾಗ್ಲಲಿಳಿದು
ಹೂವಿನ ತೋಟಕೆ ಹೋಗಿ ಹೂವ ಕೊಯ್ವೋರು.

ಇದು ತನಕ ಹೂ ಮುಡಿದು ಮನೆ ತುಂಬ ಓಡಾಡುತ್ತಿದ್ದ ಮಗಳು ಹಾಗೂ ಮುಂದೆ ಕೊಯ್ಯಲು ಮಗಳಿಲ್ಲದೆ ಹೂಗಳು ಗಿಡದಲ್ಲೆ ಬಾಡ ಬೇಕಾದ ಸ್ಥಿತಿಯನ್ನು ಈ ಹಾಡು ಕಣ್ಮುಂದಿರಿಸುತ್ತದೆ.

ಮದುವೆಯ ಮೊದಲದಿನ ಕಲಶ ಹೂಡಿ ಹೆಂಗಳೆಯರು ಹಾಡುತ್ತಾರೆ.

ಕಳುಸ ಕಳುಸ ಚಂದ ಕಳುಸದ ಗಿಂಡಿ ಚಂದ
ಕಳುಸದ ಮೇಲಾಡೋ ಗಿಣಿಚಂದ । ನಮ್ಮನೆ
ಹೆಣ್ಮಕ್ಕಳು ಚಂದ ಮದುವೇಲಿ ॥
ಕುಂಭ ಕುಂಭ ಚಂದ ಕುಂಭದ ಗಿಂಡಿ ಚಂದ
ಕುಂಭದ ಮೇಲಾಡೋ ಗಿಣಿ ಚಂದ । ನಮ್ಮನೆ
ಹೆಣ್ಮಕ್ಕಳು ಚಂದ ಮದುವೇಲಿ ॥

ಹೀಗೆ ಕಲಶ, ಗಿಂಡಿಗಳ ಸೊಗಸು ಅದರೊಂದಿಗೆ ಮದುವೆಗೆ ಬಂದ ಹೆಣ್ಣು ಮಕ್ಕಳ ಚೆಲುವನ್ನು ಹೊಗಳಿ ಹಾಡುವ ಇಂತಹ ಹಾಡುಗಳು ಅದೆಷ್ಟೊ !

ದಾರೆಗೆ ಬರುವ ಮದುಮಣಗನನ್ನು ಅಕ್ಕ ತಂಗಿಯರು ಬಾಗಿಲು ತಡೆಯುವ ಸಂದರ್ಭವನ್ನು ಗಮನಿಸಬಹುದು.

ದಾರಕಾ ಪುರದಿಂದ
ದಾರೆ ಮಂಟಪದಿಂದ
ನಾರಿ ರುಕ್ಮಿಣಿ ಬಿಡಗೊಂಡು
ಬರುವಾಗ ಅಕ್ಕ ಬಾಗಿಲು ತಡೆದಾಳು.

ಬಾಗಿಲು ತಡೆದ ಅಕ್ಕನಲ್ಲಿ ಹುಡುಗ ವಿನಂತಿಸಿಕೊಳ್ಳುತ್ತಾನೆ. (ಮದುಮಣಗನ ಜೊತೆಗಿರುವ ಹೆಂಗಳೆಯರೇ ಹಾಡುತ್ತಾರೆ).

ಬಾಗಿಲು ತಡೆದಕ್ಕಾಗೆ
ಊರ ಉಂಬಳಿ ಕೊಡುವೆ
ಸುರರ ಪೊಂಗೆಜ್ಜೆ ನಿನಗೀವೆ
ಬಾಗಿಲು ಬಿಡೆ ಅಕ್ಕವ್ವ

ಆಗ ಅಕ್ಕ (ತಂಗಿ)

ಎನ್ನ ಮಗನಿಗೆ ನಿನ್ನ ಮಗಳನು
ಕೊಡುವೆ ನೆನುತ ಭಾಷೆಯ ನಿತ್ತರೆ ಕದಬಿಡುವೆ

ಎನಲು ಮಂದುವಣಿಗ

ಕದ ಬಿಡೆ ತಂಗಿ ಮೋಹನಾಂಗಿ
ಚಿಕ್ಕವಳೆನ್ನ ಮಡದಿ !
ಗಂಡ ಹೆರುತಾಳೋ, ಹೆಣ್ಣ ಹೆರುತಾಳೋ ? ಶಿವಬಲ್ಲ !

ನಾನೇನೆಂದು ಭಾಷೆಯನೀಯಲಿ—ಎಂದು ತನ್ನ ಅಸಹಾಯ ಕತೆಯನ್ನು ತೋಡಿಕೊಳ್ಳಲು ಅಕ್ಕ (ತಂಗಿ).

ಗಂಡ್ಹೆತ್ತರೆ ನಿನ್ನ ಭೂಮಂಡಲವನಾಳಲಿ
ಹೆಣ್ಣೆತ್ತರೆ ನಿನ್ನ ಸೊಸೆಯಾಗಿ ಸುಖಿಯಾಗಿರಲಿ—

ಎಂದು ಸವಾಲು ಹಾಕುತ್ತಾಳೆ.

ಗಂಡ್ಹೆತ್ತರೆ ಭೂಮಂಡಲವನಾಳಲಿ
ಹೆಣ್ಣೆತ್ತರೆ ನಿನ್ನ ಸೊಸೆಯಾಗಲು
ಕೊಡುವೆನೆನ್ನುತ ಭಾಷೆಯನಿತ್ತೆ
ಕದ ಬಿಡೆ ತಂಗಿ ಮೋಹನಾಂಗಿ

ಈ ಮಾತಿಗೆ ಹತ್ತು ಜನ, ಹತ್ತು ಕಂಬ, ಪುರೋಹಿತರ ಸಾಕ್ಷಿಪಡೆದು ಬಳಿಕ ದಾರಿಬಿಡುತ್ತಾರೆ. ಪಲ್ಲವಿಯೊಂದಿಗೆ ಎರಡೂ ಕಡೆಯುವರು ಪರಸ್ಪರ ಸಂಭಾಷಣೆಯ ರೂಪದಲ್ಲಿ ಈ ಹಾಡನ್ನು ಹಾಡುತ್ತಾರೆ. ಸಹೋದರ ಮದುವೆಯಾಗುವಾಗಲೇ ಸಹೋದರಿ ತನ್ನ ಮಗನಿಗೆ ಹಕ್ಕಿನ ಹುಡುಗಿಯನ್ನು ಕೊಡುವಂತೆ ಭರವಸೆ ಪಡೆಯುತ್ತಾಳೆ. 'ಗಂಡ್ಹೆತ್ತರೆ ನಿನ್ನ ಭೂ ಮಂಡಲವನಾಳಲಿ' ಎನ್ನುವ ಹಾರೈಕೆಯಲ್ಲಿ ಕ್ಷತ್ರಿಯ ಧರ್ಮ ವ್ಯಕ್ತವಾಗುತ್ತದೆ.

ಮದುವೆಯ ಔತಣ ತೀರಿಸಿ ದಾರೆ ಚಪ್ಪರದಲ್ಲಿ ಬೀಗರು ವಿಶ್ರಾಂತಿ ತೆಗೆದುಕೊಳ್ಳುವ ವೇಳೆ ಹಾಡುವ ಹಾಡುಗಳಿವೆ. ಇವುಗಳಿಗೆ ಬೀಗರ ಹಾಡುಗಳು ಎಂದು ಹೆಸರು. ಗಂಡು ಮತ್ತು ಹೆಣ್ಣಿನ ಕಡೆಯುವರು ಎದುರು ಬದಿರಾಗಿ ಕುಳಿತು ಪರಸ್ಪರರು ಒಗಟಿನ ರೂಪದಲ್ಲಿ ಈ ಹಾಡುಗಳನ್ನು ಹಾಡುತ್ತಾರೆ. ಇವುಗಳಲ್ಲಿ ಸ್ಪರ್ಧೆಯಿದ್ದು ಸೋತವರು ಗೆದ್ದವರಿಗೆ ಉಡುಗೊರೆ ಕೊಡಬೇಕು.

ಗಿಡವಾಗಿ ಹುಟ್ಟೋದು ಮರವಾಗಿ ಬೆಳೆಯೋದು
ಅದು ನಮ್ಮನೆ ದೇವ್ರಿಗೆ ಸಲುವೋದು । ಸತಿಯೋರೆ
ಇದರರುತ ನೀವು ತಿಳಿದ್ಹೇಳಿ ॥

— ಎಂದು ಗಂಡಿನವರು ಕೇಳಿದರೆ ಹೆಣ್ಣಿನ ಕಡೆಯಿಂದ

ಅರುತ ನಾವು ಹೇಳ್ಕೇವು ಲಾಲಿಸಿ ನೀವು ಕೇಳಿ
ಈ ಮಾರಾಯಣ್ಣನ ದೇವ್ರಿಗೆ । ಸಲುವೋದು
ಬಿಲಪತ್ರಿಸಲ್ಲವೇನೇ ಸತಿಯೋರೆ-

ಎಂದು ಉತ್ತರಿಸುತ್ತಾರೆ.

ಅಂಗ ವಂಗದ ಹಕ್ಕಿ ನುಂಗಿತು ಮನುಷ್ಯನ
ಅಂಗಾಲು ಹೊರಗೆ ತಲೆ ಹೊರಗೆ । ಸತಿಯೋರೆ
ಇದರರುತ ನೀವು ತಿಳಿದೇಳಿ ।

— ಎಂಬ ಒಗಟಿಗೆ ಉತ್ತರವಾಗಿ ಎದುರು ಕಡೆಯವರು

ಅರುತ ನಾವು ಹೇಳ್ಕೇವು ಲಾಲಿಸಿ ನೀವು ಕೇಳಿ
ಈ ಮಾರಾಯಣ್ಣನ ಪೆಟ್ಟಿಗೇಲಿ । ಇರುವುದು
ಶರಟುನಲ್ಲವೇನೆ ಸತಿಯೋರೆ ॥

ಹೀಗೆ ವಿವಿಧ ವಸ್ತುಗಳು ಉತ್ತರವಾಗಿ ಬರುವಂತೆ ಒಗಟುಗಳನ್ನು ಹೆಣೆದು ಹಾಡುತ್ತಾರೆ. ಬಳಿಕ ಗೆದ್ದವರು ಸೋತವರನ್ನು ಜರೆಯುವುದೂ ಇದೆ.

ಉದಾಹರಣೆಗೆ

ಕೋಳಿ ಗೂಡೊಳಗೆ ಏನ್ಮಾಡ್ತಿಯೇ ಬೀಗುತಿ
ಕೋಳಿಗೂ ನಿನಗೂ ಒಳಮಾತು । ಹೊರಮಾತು
ಕೋಳ್ಕಂತ ಬೊಡ್ಡಿ ಹೊರಗಿಳಿಯೆ ॥
ಹರಕು ಮಿಸೇಲಿ ಸುರಕೊಂಬು ಸೀಂಬ್ಳುಳ
ಸೆರೆ ಸೆರೆಯೆಲ್ಲ ನೊಣ ಕೊತಾವು । ಅವನಣ್ಣನ
ಡೊಳ್ಳೊಟ್ಟೆಗೆ ಹಗ್ಗ ಹಾಕಿ ಎಳೆತನ್ನಿ ॥

ಹೀಗೆ ತಮಾಷೆ ಮಾಡುತ್ತಾರೆ. ಇಂತಹ ಸನ್ನಿವೇಶಗಳೆಲ್ಲ ಸೃಜನಶೀಲ ಹೆಂಗಳೆಯರ ಪ್ರತಿಭೆಗೆ ಸವಾಲಾಗಿವೆ.

ಬತ್ತ ಕುಟ್ಟುವುದು, ರಾಗಿ ಬೀಸುವುದು, ಮೊದಲಾದ ದುಡಿಮೆಯ ವೇಳೆ ಶ್ರಮ ಪರಿಹಾರಕ್ಕಾಗಿ ಹಾಡುಗಳನ್ನು ರಚಿಸಿ ಹಾಡುತ್ತಿದ್ದರು. ಇಂತಹ ಹಾಡುಗಳು ತಮ್ಮದೇ ಆದ ರಾಗ ಲಯದಲ್ಲಿದ್ದು ಕೇಳುಗರಿಗೆ ಗಾನದ ಇಂಪನ್ನು ಉಣಿಸುತ್ತಿದ್ದುವು. ಜೊತೆಗೆ ನೀತಿಯನ್ನು ಸಾರುತ್ತಿದ್ದುವು.

ಸೀರೆ ಹರಿದರೆ ಸೇರಿಸಿ ಉಡಬಹುದು
ನಾರಿ ತಪ್ಪಿದರೆ ತರಬಹುದು । ಅಣ್ಣಯ್ಯ
ಬಿಡ ಹುಟ್ಟೆಲ್ಲಿ ದೊರೆತ್ಯಾವು ॥

ಹರಿದ ಸೀರೆಯನ್ನು ಹೊಲಿದು ಮತ್ತೆ ಉಡಬಹುದು, ಹೆಂಡತಿ ನಡತೆಗೆಟ್ಟರೆ ಇನ್ನೊಬ್ಬಳನ್ನು ತರಬಹುದು. ಆದರೆ ಒಡಹುಟ್ಟು ದೊರೆಯಲಾರದು ಎನ್ನುವ ಈ ಮುಕ್ತಕದಲ್ಲಿ ಅಣ್ಣ ತಮ್ಮಂದಿರ ಸ್ನೇಹದ ಹಿರಿಮೆಯನ್ನು ಹೇಳಲಾಗಿದೆ.

ಮುದುಕನಿಗ್ಯಾಕ ಮುದ್ದು ಹೆಣ್ಣಿನ ಸಂಗ
ಗದ್ದೆ ಹುಣಿಲಿರುವ ಕರುಗಳ ಕಾಯುವ । ಮುದುಕ
ಬಿದ್ದರೆ ಹೋಯ್ತಲ್ಲೋ ಸಂಸಾರ ॥

ಮೊದಲ ಹೆಂಡತಿ ಸತ್ತ ಬಳಿಕ ಮತ್ತೆ ಹರೆಯದ ಹೆಣ್ಣನ್ನು ಮದುವೆಯಾಗುವ ಮುದುಕ ಗಂಡನ್ನು ಹಾಗೂ ಹರೆಯದ ಹೆಣ್ಣಿನಲ್ಲಿ ಅನುರಕ್ತನಾದ ಮುದುಕನನ್ನು ಈ ಹಾಡಿನಲ್ಲಿ ಲೇವಡಿ ಮಾಡಲಾಗಿದೆ. ಅವನು ದನ ಮೇಯಿಸುವ ಕೆಲಸಕ್ಕೇ ಯೋಗ್ಯ.

ಅಕ್ಕ ತಂಗೇರು ನಾವು ನೆಚ್ಚಿನ ಗರುತೇರು
ಸಕ್ಕರೆ ಒಳಗೆ ಬಿಳಿ ಎಳ್ಳು । ಸೇರಿಸಿ
ಅಕ್ಕ ತಂಗೇರಿಗೆ ಹಗಲೂಟ ॥

ಸಕ್ಕರೆ ಮತ್ತು ಬಿಳಿ ಎಳ್ಳನ್ನು ಸೇರಿಸಿದರೆ ಅದೆಷ್ಟು ಏಕರಸ ಗಂಡನ ಮನೆಯಲ್ಲಿ ಪ್ರೀತಿಯಿಂದ ಬಾಳುವ ಅಕ್ಕ ತಂಗಿಯರ ಜೀವನವು ಅಷ್ಟೇ ಏಕರಸವಾಗಿದ್ದು ಪ್ರತ್ಯೇಕಿಸುವುದು ಅಸಾಧ್ಯ. ಅಣ್ಣ ತಮ್ಮಂದಿರ ಹೆಂಡಿರ ಅನ್ಯೋನ್ಯ ಸೌಹಾರ್ದ ಬದುಕಿನ ಚಿತ್ರವನ್ನು ಈ ಹಾಡು ಕಣ್ಣ ಮುಂದಿರಿಸುತ್ತದೆ. ಹಳ್ಳಿಯ ಗರತಿ ಕೌಟುಂಬಿಕ ಸುಖ ಜೀವನದ ಮೂಲವನ್ನು ಗುರುತಿಸಿದವಳು. ಅದನ್ನು ಅನುಭವಿಸಿ ಅವಳ ಹೃದಯದಿಂದ ವಾಕ್ ರೂಪದಲ್ಲಿ ಹೊರಬಿದ್ದ ಮಾಣಿಕ್ಯ ದೀಪ್ತಿಗಳಿವು.

ಗಾದೆಗಳು

ದೈನಂದಿನ ವ್ಯವಹಾರದ ನಮ್ಮ ಮಾತುಗಳಲ್ಲಿ ನಮಗರಿಯದಂತೆ ಸಂದರ್ಭಾನುಸಾರಿಯಾಗಿ ಗಾದೆಗಳು ನುಸುಳಿಕೊಳ್ಳುತ್ತವೆ. ತಮ್ಮ ಜೀವನಾನುಭಾವದಿಂದ ಕಂಡುಕೊಂಡ ವಿಚಾರಗಳ ಸಾರಸಂಗ್ರಹಗಳು ಗಾದೆಗಳ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಇಂತಹ ಗಾದೆಗಳು ದೈನಂದಿನ ಆಗು ಹೋಗುಗಳಲ್ಲಿ ಬಂದೊದಗಿದ ತೊಡಕುಗಳನ್ನು ಪರಿಹರಿಸುವಲ್ಲಿ ನೆರವಾಗುತ್ತವೆ. ಗಾದೆಗಳು ಸಮಸ್ಯೆಗಳ ಕಾರ್ಗತ್ತಲೆಯನ್ನು ಕಳೆದು ದಾರಿಗಾಣಿಸುವ ದಾರಿದೀಪಗಳು, ಕೆಲವೊಮ್ಮೆ ನೀತಿಯನ್ನು ಅರ್ಥಗರ್ಭಿತವಾಗಿ ಮನಮುಟ್ಟುವಂತೆ ಉಪಮೆಗಳ ಮೂಲಕ ನೀಡುತ್ತವೆ. ಪ್ರಾಸಾನುಪ್ರಾಸಗಳ

ಸೊಗಸಿನಿಂದ ಹಾಗೂ ಲಯಬದ್ಧವಾದ ಸರಳ ಶಬ್ದಗಳಿಂದ ಪೋಣಿಸಿದ ಗಾದೆಗಳು ವ್ಯಕ್ತಿಯ ಮನಸ್ಸನ್ನು ಆಕರ್ಷಿಸಿ ಒಂದು ರೀತಿಯ ಆನಂದವನ್ನು ಜೊತೆಗೆ ನೀತಿಯನ್ನು ಹೇಳುವಲ್ಲಿ ಯಶಸ್ವಿಯಾಗುತ್ತವೆ. ಶಬ್ದಗಳ ಪುನರಾವರ್ತನೆಯ ಸೊಗಸಿನಿಂದ ಕೇಳಿದವನ ಸ್ಮೃತಿಯಲ್ಲಿ ಬಹುಕಾಲ ಬಾಳುತ್ತವೆ. ಸಂದರ್ಭವನ್ನನುಸರಿಸಿ ಮತ್ತೆ ಅವನಿಂದ ಉಚ್ಚರಿಸಲ್ಪಡುತ್ತದೆ. ಇಂತಹ ಗಾದೆಗಳು ಆರ್ಯ ಮರಾಠ ಕ್ಷತ್ರಿಯರ ದಿನನಿತ್ಯದ ವ್ಯವಹಾರಗಳಲ್ಲೂ ಹೊರತಲ್ಲ.

ಬದನೆ ಕೊಟ್ಟು

ಕುದನೆ ಕೊಳ್ಳುವುದು—ಪೆರವರಿಗೆ ಉಪಕಾರಕ್ಕೆಂದು ಏನಾದರೂ ಒಳ್ಳೆಯ ಕೆಲಸಗಳನ್ನು ಮಾಡಿದರೆ ಅದಕ್ಕೆ ಪ್ರತಿಯಾಗಿ ಅಪವಾದಗಳು ಬರುವುದು ಸಹಜ. ಅಂತಹ ಕೆಲಸ ಮಾಡಹೊರಟು ಅಪವಾದಕ್ಕೆ ಗುರಿಯಾದುದನ್ನು ಕುರಿತು ಹೇಳಿದ ಗಾದೆಯಿದು. ಕಠಿಣ ಶ್ರಮದಿಂದ ದೊರೆತ ಕಡಿಮೆ ಫಲಿತಾಂಶವನ್ನು ಈ ಗಾದೆ ಧ್ವನಿಸುತ್ತದೆ.

ಅಕ್ಕಿ ಹಾಕಿದಷ್ಟೆ ಅನ್ನ

ಬೆಲ್ಲ ಹಾಕಿದಷ್ಟೆ ಸಿಹಿ—ಈ ಗಾದೆಯಲ್ಲಿ ಪ್ರಯತ್ನಕ್ಕೆ ತಕ್ಕಷ್ಟೇ ಪ್ರತಿಫಲ ದೊರೆಯುತ್ತದೆಂಬ ನೀತಿ ಸುಲಭವಾದ ದೃಷ್ಟಾಂತದಿಂದ ಸೂಚಿಸಲಾಗಿದೆ. ಕಡಿಮೆ ಶ್ರಮದಿಂದ ಹೆಚ್ಚನ್ನು ನಿರೀಕ್ಷಿಸುವುದು ವ್ಯರ್ಥ ಎಂಬ ನಿತ್ಯ ಸತ್ಯದ ತತ್ವ ಈ ಗಾದೆಯಲ್ಲಿ ಹುದುಗಿದೆ. ತನ್ನ ಮನೆಯ ಹುಳುಕನ್ನು ಇತರರಿಗೆ ಹೇಳಿ ಸುಖಪಡುವವನನ್ನು ಕುರಿತು—

ತನ್ನ ಹಲ್ಲಿಗೆ ಕಡ್ಡಿ ತುತ್ತಿ (ಚುಚ್ಚಿ) ಇನ್ನೊಬ್ಬನಿಗೆ ಮೂಸಲು (ಆಘ್ರಾಣಿಸಲು) ಕೊಡುವುದೇಕೆ ?—ಎಂಬ ಗಾದೆಯಲ್ಲಿ ಹೇಳಲಾಗಿದೆ.

ತನ್ನ ಕುಂಬಳ (ಕಾಯಿ) ಉರುಳುವಾಗ ಇನ್ನೊಬ್ಬನ ಸಾಸಿವೆಗೇಕೆ ಉರುಳು ಹಾಕುವುದು—ನಾಶವಾಗುತ್ತಿರುವ ತನ್ನ ಹೇರಳ ಸಂಪತ್ತನ್ನು ಗಮನಿಸದೆ ಇನ್ನೊಬ್ಬನ ಅಲ್ಪ ಸಂಪತ್ತನ್ನು ತನ್ನದಾಗಿಸುವ ಪ್ರಯತ್ನ ಮಾಡುವವರನ್ನು ಈ ಗಾದೆಯಲ್ಲಿ ವಿಡಂಬಿಸಲಾಗಿದೆ. ನಾಶವಾಗುವ ತನ್ನ ಸಂಪತ್ತನ್ನು ರಕ್ಷಿಸಿಕೊಳ್ಳಬೇಕೆನ್ನುವ ನೀತಿ ಈ ಗಾದೆಯಲ್ಲಿದೆ. ಯಾವುದೇ ಕೆಲಸ ಮಾಡುವಾಗ ಹಿಂದಿನ ಹಾಗೂ ಮುಂದಿನ ಅಡೆತಡೆಗಳನ್ನು ಚೆನ್ನಾಗಿ ನೋಡಿ ವ್ಯವಹರಿಸಬೇಕು ಎಂಬ ನೀತಿ—ಅಡಿ ಎಡಗುವುದನ್ನು ತಲೆ ತಡಿಯುವುದನ್ನು ನೋಡಬೇಕು—ಎಂಬ ಗಾದೆಯಲ್ಲಿ ವ್ಯಕ್ತವಾಗಿದೆ.

ಉಗುಳಿದರೆ ನೆಲ ಕೆಡುತ್ತದೆ, ನುಂಗಿದರೆ ಗಂಟಲು ಸಜಡುತ್ತದೆ—ಈ ಮಾತು ವ್ಯಕ್ತಿಯ ಇಬ್ಬಂದಿತನವನ್ನು ಧ್ವನಿಸಿದರೆ - ಏಡಿಯ ಕಾಲು ಮುರಿದು ಹೊಟ್ಟೆಗೆ

ಚುಚ್ಚಿದಂತೆ - ಎನ್ನುವಲ್ಲಿ ತನ್ನ ಮುಳ್ಳು ತನಗೆ ಕೇಡು ಎಂಬ ಅರ್ಥ ಧ್ವನಿಸುತ್ತದೆ. ಕೆಟ್ಟವರ ಸಹವಾಸದಿಂದ ಕೇಡು ತಪ್ಪಿದ್ದಲ್ಲ ಎಂಬ ಸತ್ಯವನ್ನು ಸೊಗಸಾದ ದೃಷ್ಟಾಂತದೊಂದಿಗೆ - ಬಾಳೆಗೆ ಮುಳ್ಳು ಬಿದ್ದರೂ ಮುಳ್ಳಿಗೆ ಬಾಳೆ ಬಿದ್ದರೂ ಒಂದೇ - ಎಂಬ ಗಾದೆಯಲ್ಲಿ ಹೊರಗೆಡಹಲಾಗಿದೆ.

'ಕಮ್ಮಾರನಿಗೆ ಕಡಿಯಲು ಕತ್ತಿಯಿಲ್ಲ. ಕುಂಬಾರನಿಗೆ ಅಡಲು ಮಡಿಕೆಯಿಲ್ಲ'
'ಓಜೆಗಾರನ* ಹೆಂಡತಿಯು ಕಣ್ಣು ಕುರುಡು'
'ಎಲ್ಲರಿಗೂ ಕೆಸುವು ತುರಿಸುವಾಗ ನನಗೆ ಹರಿವೆ ತುರಿಸುತ್ತದೆ'

ಇತ್ಯಾದಿ ಗಾದೆಗಳಲ್ಲಿ ಅಸಂಗತ ವಿಚಾರಗಳ ಮೂಲಕ ಉದ್ದೇಶಿಸಿದ ಭಾವನೆಯನ್ನು ಹೊರಗೆಡಹಲಾಗಿದೆ. ಊರವರಿಗೆಲ್ಲ ಕತ್ತಿ ಮಾಡಿಕೊಡಬೇಕಾದವ ಕಮ್ಮಾರ. ಮಡಿಕೆ ಮಾಡಬೇಕಾದವ ಕುಂಬಾರ. ಅವನ ಮನೆಯಲ್ಲಿಯೇ ಅವನ ಉಪಯೋಗಕ್ಕೆ ಆ ವಸ್ತುಗಳು ಇಲ್ಲವಾದರೆ ವಿರೋಧಾಭಾಸವಲ್ಲವೇ ? ಓಜೆಗಾರನು ಎಲ್ಲರಿಗೂ ತಿಳಿಯ ಹೇಳಬೇಕಾದವ, ಹೇಳುವವ. ಅವನ ಹೆಂಡತಿಯು ಕಣ್ಣೇ ಕುರುಡಾದರೆ ಹೇಗೆ ? ಬುದ್ಧಿವಾದ ಹೇಳುವ ಮೊದಲು ತಾನು ಹಾಗೆ ನಡೆದು ಕೊಳ್ಳಬೇಕು ಎಂಬುದನ್ನು ಇದು ಧ್ವನಿಸುತ್ತದೆ. ಕೆಸುವು ತುರಿಸುವುದು ಸಹಜ. ಹರಿವೆಯೂ ತುರಿಸ ಹೊರಟರೆ ಅದಕ್ಕಿಂತ ವೈಪರೀತ್ಯ ಬೇರೇನಿದೆ ? ಅಸಂಭಾವ್ಯ ವಿಚಾರಗಳನ್ನು ಹೇಳುವ ಗಾದೆಗಳಲ್ಲಿ ಉದ್ದೇಶಿಸಿದ ಅರ್ಥದ ತೀವ್ರತೆಯಿದೆ.

'ಮಕ್ಕಳ ಮಾತು ಕೇಳಿ ಒಕ್ಕಲು ಹೋದಂತೆ'
'ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತೆ'

— ಈ ಗಾದೆಗಳಲ್ಲಿ ಉಪಮೆಗಳ ಮೂಲಕ ಕ್ಷುಲ್ಲಕ ವಿಚಾರಗಳನ್ನು ಮಹತ್ವದ ವಿಚಾರವೆಂದು ತಿಳಿದು ವ್ಯವಹರಿಸುವುದನ್ನು ಮಕ್ಕಳ ಮಾತು ಕೇಳಿ ಒಕ್ಕಲು ಹೋಗುವುದಕ್ಕೂ, ಕಾರ್ಯ ಸುಲಭದಲ್ಲಿ ಸಿದ್ಧಿಯಾಯಿತು ಎನ್ನುವುದನ್ನು ರೊಟ್ಟಿ ಜಾರಿ ತುಪ್ಪದಲ್ಲಿ ಬೀಳುವುದಕ್ಕೂ ಹೋಲಿಸಲಾಗಿದೆ.

'ಕಾಡು ಕೋಳಿಗೇಕೆ ಕಾವೇರಿ ಸಂಕ್ರಮಣ ?'
'ಪಾಪಿ ಹೋದಲ್ಲಿ ಪಾತಾಳ'
'ಉರಿವ ಗಾಯಕ್ಕೆ ಉಪ್ಪು ಹಾಕುವುದು'

— ಮೊದಲಾದವುಗಳಲ್ಲಿ ಗಾದೆಗಳು ವಿಸ್ತೃತಾರ್ಥವನ್ನು ಪಡೆಯುವುದರೊಂದಿಗೆ ಅಕ್ಷರಗಳ ಪುನರಾವರ್ತನೆ ಗಾದೆಗಳಿಗೊಂದು ಸೊಗಸನ್ನು ನೀಡಿದೆ.

---

* ಮಾರ್ಗದರ್ಶಕ ಎಂದರ್ಥ (ಒವಜ-ಒವಜೆ-ಓಜೆ ಆಗಿರಬೇಕು.)

ಕೆಲವೊಮ್ಮೆ ಸಹಜ ಮಾತುಗಳೇ ಗಾದೆಗಳಾಗಿ ಪರಿವರ್ತನೆ ಹೊಂದಿ ನೀತಿಯನ್ನು ಸಾರುತ್ತವೆ. ಉದಾಹರಣೆಗೆ–

'ತಲೆಗೆರೆದ ನೀರು ಕಾಲಿಗೆ'
'ಆಡಿ ತಪ್ಪಿದರೆ ಆನೆಯೂ ಬಿದ್ದೀತು'
'ಕಳೆದ ವರ್ಷ ನೇಗಿಲು ಹೊತ್ತ ಮಗನಿಗೆ ಈ ವರ್ಷ ನೊಗ ಹೊರಲಾಗುವುದಿಲ್ಲ'

ಹೀಗೆ ಗಾದೆಗಳು ಜನಜೀವನದ ನಾಡಿಯಿಂದ ಮಿಡಿದು ಸಮಷ್ಟಿಯಲ್ಲಿ ಬೆಳೆದು ಅರ್ಥವ್ಯಾಪ್ತಿಯನ್ನು ಪಡೆಯುತ್ತವೆ. ಜೊತೆಗೆ ತಮ್ಮದೇ ಆದ ಸಹಜ ಸೊಗಸಿನಿಂದ ಅನಂಗಾಲವೂ ಬಾಳುತ್ತವೆ.

ನುಡಿಗಟ್ಟುಗಳು :

ಅನಿಷ್ಟ ನಿವಾರಣೆಗಾಗಿಯೋ, ಅಶ್ಲೀಲತೆಯನ್ನು ಮರೆ ಮಾಚಲೋ, ಇಲ್ಲವೇ ಭಾವ ತೀವ್ರತೆಯನ್ನು ಹೇಳುವ ಸಲುವಾಗಿಯೋ ಭಾಷೆಯಲ್ಲಿ ನುಡಿಗಟ್ಟುಗಳನ್ನು ಬಳಸಲಾಗುತ್ತದೆ. ಎರಡು ಅಥವಾ ಅದಕ್ಕಿಂತ ಹೆಚ್ಚಿನ ಶಬ್ದಗಳನ್ನು ಪರಸ್ಪರ ಸೇರಿಸಿ ಉಚ್ಚರಿಸಿದಾಗ ಹೊಸದೊಂದು ಅರ್ಥವನ್ನು ತಿಳಿಸುವುದಿದ್ದರೆ ಅದನ್ನು ನುಡಿಗಟ್ಟು (Idiom) ಅಥವಾ ಪಡೆನುಡಿ ಎನ್ನಬಹುದು. ಈ ಪಡೆನುಡಿಗಳು ಅರ್ಥವನ್ನು ಸೂಚ್ಯವಾಗಿ, ವ್ಯಂಗ್ಯವಾಗಿ ಹಾಗೂ ಧ್ವನಿಯ ಮೂಲಕ ತಿಳಿಸುತ್ತವೆ. ಎಲ್ಲಾ ಭಾಷೆಗಳಲ್ಲಿ ಇವುಗಳ ಬಳಕೆ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಇಂತಹ ನುಡಿಗಟ್ಟುಗಳು ಬಳಕೆಯಿಂದಲೇ ಹೊಸ ನಿರ್ದಿಷ್ಟ ಅರ್ಥವನ್ನು ಪ್ರತಿಫಲಿಸುತ್ತವೆ.

'ಅನ್ನ ಕೊಡುವುದು' ಎಂದರೆ ಪದಗಳ ಅರ್ಥ ಬೇರೆ. ಎರಡು ಪದಗಳನ್ನು ಒಟ್ಟಿಗೆ ಉಚ್ಚರಿಸಿದಾಗ ಮಗುವಿಗೆ 'ಅನ್ನಪ್ರಾಶನ' ಮಾಡುವುದನ್ನು ಸೂಚಿಸುತ್ತದೆ ಎರಡು ಪದಗಳನ್ನು ಸೇರಿಸಿ ಉಚ್ಚರಿಸಿದಾಗ ಇಲ್ಲಿ ವಿಸ್ತೃತಾರ್ಥವನ್ನು ತಿಳಿಸುತ್ತದೆ, ಹಾಗೆಯೇ 'ಅನ್ನ ಪಾಯಸ' ಎಂದರೆ ಮದುವೆಯ ನಿಶ್ಚಿತಾರ್ಥ ಕಾರ್ಯಕ್ರಮ. ಅನ್ನ, ಪಾಯಸ ಬೇರೆ ಬೇರೆಯಾಗಿ ಉಚ್ಚರಿಸಿದಾಗ ಆಗಬಹುದಾದ ಅರ್ಥಕ್ಕಿಂತ ಭಿನ್ನವಾದ ವಿಸ್ತೃತಾರ್ಥವನ್ನು ಇಲ್ಲಿ ಗಮನಿಸಬಹುದು.

ಹೊಟ್ಟೆ ಕಿಚ್ಚು, ಅಕ್ಕಿಕಾಳು ತಲೆಗೆ ಹಾಕುವುದು, ತಲೆ ತಗ್ಗಿಸುವುದು ಈ ನುಡಿಗಟ್ಟುಗಳೆಲ್ಲ ವಾಚ್ಯಾರ್ಥದಿಂದಲೇ ಹೊಸದೊಂದು ಅರ್ಥವನ್ನು ನೀಡುತ್ತವೆ. ಪ್ರತ್ಯೇಕ, ಪ್ರತ್ಯೇಕವಾಗಿ ಉಚ್ಚರಿಸಿದಾಗ ಇವುಗಳಿಗೆ ಬೇರೆಯೇ ಅರ್ಥಗಳಿವೆ.

ಬಸಿರಾಗುವುದನ್ನು 'ನೀರು ನಿಲ್ಲುವುದು' ಎಂದು ಸೂಚ್ಯವಾಗಿ ಹೇಳಲಾಗುದೆತ್ತ. ಹಾಗೆಯೇ 'ಕಾಗೆ ಮುಟ್ಟುವುದು' ಎಂದರೆ ಮುಟ್ಟಾಗುವುದು. ಇವುಗಳಲ್ಲೆಲ್ಲ ಅಶ್ಲೀಲತೆಯು ಸೋಂಕಿಲ್ಲದೆ ಸೂಚ್ಯವಾಗಿ ತಿಳಿಸುವುದನ್ನು ಗಮನಿಸ

ಬಹುದು. ಅನಿಷ್ಟ ನಿವಾರಣೆಗಾಗಿ ಕೆಲವೊಂದು ನುಡಿಗಟ್ಟುಗಳನ್ನು ಬಳಸುವುದಿದೆ. ಉದಾಹರಣೆಗಾಗಿ ಹಾವು ಕಚ್ಚಿದುದನ್ನು 'ವಿಷ ಮುಟ್ಟಿತು', ಮರಣವನ್ನು ಇಲ್ಲವಾಗು, ಕಣ್ಣು ಮುಚ್ಚು, ತೀರಿಕೊಳ್ಳು ಎಂದೇ ಹೇಳುತ್ತಾರೆ. ಈ ಎಲ್ಲಾ ಪಡೆ ನುಡಿಗಳಲ್ಲಿ ಸೂಚ್ಯಾರ್ಥದ ಮೂಲಕವೇ ಉದ್ದೇಶಿಸಿದ ಅರ್ಥವನ್ನು ತಿಳಿಸಲಾಗಿದೆ.

ಇನ್ನು ಕೆಲವು ವೇಳೆ ಬಸಿರಾಗುವುದನ್ನು 'ಮೇಲೆ ಬರು', ಸಾಯುವುದನ್ನು ಮಣ್ಣು ತಿನ್ನು' ಅನೈತಿಕ ವ್ಯವಹಾರವನ್ನು 'ಬೇಲಿ ಹಾರು' ಸಾವು ಸಮೀಪಿಸುವುದನ್ನು 'ಮಣ್ಣು ಪರಿಮಳ ಬರು' ಹೀಗೆ ನುಡಿಗಟ್ಟುಗಳ ಮೂಲಕ ವ್ಯಂಗ್ಯವಾಗಿ ಹೇಳಲಾಗುತ್ತದೆ.

'ಅನ್ನ ತೆಗಿ', ಹೊಟ್ಟೆಗೆ ಹೊಡಿ ; ಎಂಬ ನುಡಿಗಟ್ಟುಗಳು ಅನ್ನದ ದಾರಿಯಾಗಿದ್ದ ಉದ್ಯೋಗವನ್ನು ಇಲ್ಲದಂತೆ ಮಾಡಿದ ಎಂಬ ಅರ್ಥವನ್ನು ಧ್ವನಿಸುತ್ತದೆ. 'ಮೋಡ ಬರು', 'ಹೊಗೆ ಹಿಡಿ' ಎಂಬಿವುಗಳು ಸಿಟ್ಟಾಗುವುದನ್ನು ತಿಳಿಸುತ್ತವೆ.

ನಂಬಿಕೆಗಳು

ಮಾನವನ ಹುಟ್ಟು ಎಂದಾಯಿತೋ ಅಂದೇ ನಂಬಿಕೆಗಳು ಹುಟ್ಟಿಕೊಂಡುವು. ಮಾನವನಿಗೆ ಸಾವಿನ ಕುರಿತಾದ ಭಯವೇ ನಂಬಿಕೆಗಳ ಉಗಮಕ್ಕೆ ಮೂಲ ಕಾರಣ. ತಮ್ಮನ್ನು ನಿಯಂತ್ರಿಸುವ ಅದೃಶ್ಯ ಶಕ್ತಿಗೆ ತಲೆಬಾಗಿ ಜೀವಿಸುವುದರಿಂದ ಕಷ್ಟ ದೂರವಾಗಿ ಬದುಕು ಹಸನಾಗುತ್ತದೆ ಎಂಬ ಮಾನಸಿಕ ನೆಮ್ಮದಿಯೇ ನಂಬಿಕೆಯಾಗಿ ಮಾರ್ಪಟ್ಟಿದೆ. ಇಂತಹ ನಂಬಿಕೆಗಳಿಗೆ ನಿಷ್ಠರಾಗಿ ಬದುಕಲು ಕೈಗೊಂಡ ಆಚರಣೆಗಳು ತಲೆಮಾರಿನಿಂದ ತಲೆಮಾರಿಗೆ ಮುಂದುವರಿದು ಸಂಪ್ರದಾಯವಾಗಿ ಮಾರ್ಪಟ್ಟಿದೆ. ನಂಬಿಕೆಗಳ ಹಿಂದೆ ಹೇರಳವಾದ ಅನುಭವಗಳಿರಬಹುದು. ನಂಬಿಕೆಯ ಹಿಂದೆ ತಿಳುವಳಿಕೆಗಳು ಇಲ್ಲದಿರಲೂ ಬಹುದು. ನಿರಾಧಾರವಾದ ನಂಬಿಕೆಗಳನ್ನು ಸುಳ್ಳೆಂದು ಪರಿಗಣಿಸಲಾಗುವುದಿಲ್ಲ, ಆದರೆ ನಂಬಿಕೆಯೇ ತಿಳುವಳಿಕೆ ಅಲ್ಲ. ನಂಬಿಕೆಗಳು ಪ್ರಭಾವಿ ವ್ಯಕ್ತಿಯಲ್ಲಿ ಹುಟ್ಟಿಕೊಂಡು ಸಮಷ್ಟಿಯನ್ನು ವ್ಯಾಪಿಸಿ ಆಳತೊಡಗುತ್ತದೆ. ಸಮಾಜಕ್ಕೊಂದು ಜೀವಂತಿಕೆಯನ್ನು ನೀಡುತ್ತದೆ. ಇಂತಹ ನಂಬಿಕೆಗಳು ಹಲವು ಸಂಪ್ರದಾಯಗಳನ್ನು ಹುಟ್ಟು ಹಾಕುತ್ತವೆ. ಆದರೆ ಸಂಪ್ರದಾಯಗಳಿಗೆ ನಂಬಿಕೆಗಳೇ ಮೂಲ ಎನ್ನಲಾಗುವುದಿಲ್ಲ. ಸಂಪ್ರದಾಯಗಳೂ ನಂಬಿಕೆಗಳಿಗೆ ಕಾರಣವಾಗಿರಬಹುದು. ನಂಬಿಕೆ ಹಾಗೂ ಸಂಪ್ರದಾಯಗಳು ಸಾವಯವ ಸಂಬಂಧವುಳ್ಳವುಗಳು ಎಂಬುದಂತೂ ಸತ್ಯ. ಜನಪದರ ಬದುಕು ಇಂತಹ ನಂಬಿಕೆ ಸಂಪ್ರದಾಯಗಳಿಂದಲೇ ಹೆಚ್ಚು ಜೀವಂತವಾಗಿವೆ. ಜನಾಂಗವೊಂದರ ಸಂಸ್ಕೃತಿಯನ್ನು ತಿಳಿಯುವಲ್ಲಿ ಈ ನಂಬಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ.

ಆಧುನಿಕ ಸಮಾಜದಲ್ಲಿ ನಂಬಿಕೆಗಳು ತಮ್ಮ ಜೀವಂತಿಕೆಯನ್ನು ಕಳೆದು ಕೊಳ್ಳುತ್ತಾ ಬಂದಿದ್ದರೂ ಸಂಪ್ರದಾಯಗಳ ರೂಪದಲ್ಲಿ ಅವಿನ್ನೂ ಜನಮನದಲ್ಲಿ ಬೇರೂರಿದೆ. ಇಂತಹ ಸಂಪ್ರದಾಯಗಳು ಜನಾಂಗದ ಸಂಸ್ಕೃತಿಯ ಜೀವನಾಡಿಗಳು. ವಿದ್ಯಾವಂತ ಸಮಾಜ ಇಂತಹ ಸಂಪ್ರದಾಯಗಳನ್ನು ಕಡೆಗಣಿಸಿದರೂ ಕೆಲವೊಮ್ಮೆ ಇವು ಜೀವನಕ್ಕೆ ಅನಿವಾರ್ಯವೆಂಬಂತೆ ಅಪರಿಗರಿಯದೆ ಬದುಕಿನಲ್ಲಿ ನುಸುಳಿ ಕೊಳ್ಳುತ್ತವೆ. ಇನ್ನು ಕೆಲವೊಮ್ಮೆ ಸಂಪ್ರದಾಯಗಳನ್ನು, ನಂಬಿಕೆಗಳನ್ನು ವೈಜ್ಞಾನಿಕ ವಾಗಿ ವಿಶ್ಲೇಷಿಸ ಹೊರಟಾಗ ಅದರ ಸತ್ಯ ಪ್ರಕಟವಾಗುತ್ತದೆ. ಆರ್ಯ ಮರಾಠ ಕ್ಷತ್ರಿಯ ಜನಾಂಗದಲ್ಲೂ ಇಂತಹ ನಂಬಿಕೆಗಳು ಹಾಸುಹೊಕ್ಕಾಗಿವೆ.

ಮನೆಯಲ್ಲಿ ಯಾರಾದರೂ ಸತ್ತಾಗ ಶವ ಸಂಸ್ಕಾರ ಮಾಡುವುದಕ್ಕೆ ಹೊತ್ತು ಗೊತ್ತು ಏನೂ ಇರುವುದಿಲ್ಲ ರಾತ್ರಿಯಾದರೂ ಸರಿ. ಆಗ ಸಂಸ್ಕಾರಕ್ಕೆ ಬೇಕಾದ ಕಟ್ಟಿಗೆ ಕಡಿಯುವುದು, ಸಂಸ್ಕಾರದ ಬಳಿಕ ಬಟ್ಟೆ ಒಗೆದು ಸ್ನಾನಮಾಡಿ ಬಂದು ಗಂಜಿ ಮತ್ತು ಚಟ್ನಿಮಾಡಿ ಊಟಮಾಡುವುದು ಇತ್ಯಾದಿಗಳೆಲ್ಲ ಸಾಮಾನ್ಯಕ್ರಮ. ಇಂತಹ ಕೆಲಸಗಳನ್ನು ರಾತ್ರಿ ಇತರ ದಿನಗಳಲ್ಲಿ ಮಾಡಕೂಡದು ಎಂಬ ನಂಬಿಕೆ ಬಲವಾಗಿದೆ. ರಾತ್ರಿ ಬಟ್ಟೆ ಒಗೆಯುವುದು, ಕಟ್ಟಿಗೆ ಒಡೆಯುವುದು, ಗಂಜಿ ಮತ್ತು ಚಟ್ನಿ ಊಟಮಾಡುವುದು ಇತ್ಯಾದಿಗಳೆಲ್ಲ ಸತ್ತಮನೆಯಲ್ಲಿ ಮಾತ್ರ ಎಂಬ ನಂಬಿಕೆ ಬೇರೂರಿದೆ.

ಪಿತೃಶ್ರಾದ್ಧವನ್ನು ಪ್ರತಿ ಅಮಾವಾಸ್ಯೆಯ ದಿನ ಈ ಜನಾಂಗದವರು ಆಚರಿಸು ತ್ತಾರೆ. ತಂದೆಯ ಹಿರಿಮಗ ತೀರಿದ ತಂದೆಗೆ ಅನ್ನ ಇಡಬೇಕು. ರಾತ್ರಿ ಊಟವನ್ನು ವರ್ಜಿಸಬೇಕು. ಇಂತಹ ಸಂಪ್ರದಾಯ ನಡೆದುಬಂದುದರಿಂದ ತಂದೆ ತಾಯಿಯರು ಜೀವಿಸಿರುವಾಗ ಅಮಾವಾಸ್ಯೆಯ ದಿನ ಮಕ್ಕಳು ರಾತ್ರಿ ಊಟ ಮಾಡಲೇಬೇಕು ಅಲ್ಲವೆ ಆ ದಿವಸಗಳಲ್ಲಿ ಅವರ್‍ಯಾರೂ ತಲೆಗೆ ಸ್ನಾನಮಾಡಕೂಡದು.

ರಾತ್ರಿ ಮನೆಯ ಒಳಗಿನ ಕಸಗುಡಿಸಿ ಹೊರಹಾಕುವಾಗ ಮನೆಯ ಒಳಗೆ ಬಿದ್ದಿದ್ದ ಅಮೂಲ್ಯ ವಸ್ತುಗಳು ಕಾಣದೆ ಕಸದ ಜೊತೆ ಹೋಗಿರಬಹುದು. ಹಾಗಾಗಿ ಇನ್ನುಮುಂದೆ ರಾತ್ರಿ ಕಸಗುಡಿಸಿ ಹೊರಹಾಕಬಾರದು ಎಂಬ ತೀರ್ಮಾನ ಕೈಗೊಂಡಿರ ಬೇಕು. ಅದು ಮುಂದೆ ನಂಬಿಕೆಯಾಗಿ ಬೆಳೆದು ಬಂದಿರಬಹುದು. ರಾತ್ರಿ ಕಸ ಗುಡಿಸಿ ಹೊರ ಹಾಕಿದರೆ ಭಾಗ್ಯಲಕ್ಷ್ಮಿ ಹೊರಗೆ ಹೋಗುತ್ತಾಳೆ ಎಂಬ ನಂಬಿಕೆಯಿದೆ. ಅಮಾವಾಸ್ಯೆಯ ದಿನ ಜನಿಸಿದ ಮಗುವಿನ ತಂದೆಯೊಬ್ಬ ತೀರಿಕೊಂಡಿರಬೇಕು. ಅದರ ನಂತರ ಅಮಾವಾಸ್ಯೆಯ ದಿನ ಮಗು ಜನಿಸಿದರೆ ಶಾಂತಿ ಮಾಡುವ ಸಂಪ್ರದಾಯ ಆಚರಣೆಗೆ ಬಂತು. ಹಾಗಾಗಿ ಅಮಾವಾಸ್ಯೆಯ ದಿನ ಮಗು ಜನಿಸಿದರೆ ತಂದೆಗೆ ಮರಣ ಎಂಬ ನಂಬಿಕೆ ಬೆಳೆದು ಬಂದಿರಬಹುದು.

ಇನ್ನು ಕೆಲವೊಮ್ಮೆ ಇಂತಹ ನಂಬಿಕೆಗಳಲ್ಲಿ ವೈಜ್ಞಾನಿಕ ಸತ್ಯವೂ ಅಡಗಿರುವುದನ್ನು ಗಮನಿಸಬಹುದು. ಎಡ ಮಗ್ಗುಲಿನಿಂದ ಮಲಗಬೇಕು, ಬಲಮಗ್ಗುಲಿನಿಂದ ಏಳಬೇಕು ; ಮುಟ್ಟಾದ ಹೆಂಗಸರು ಏಕಾಂತದಲ್ಲಿರಬೇಕು- ಇತ್ಯಾದಿ ನಂಬಿಕೆಗಳು ಕೇವಲ ನಂಬಿಕೆಗಳು ಮಾತ್ರವೇ ಅಲ್ಲ. "ಶರೀರದ ಬಲ ಬಾಗದಲ್ಲಿ ಪಿತ್ತಕೋಶವಿದೆ ಅನ್ನಕೋಶಕ್ಕೆ ಪಿತ್ತರಸವು ತೊಟ್ಟು ತೊಟ್ಟಾಗಿ ಬರುತ್ತದೆ. ಆಸಿಡಿಕ್ ಜ್ಯೂಸ್ ಅಥವಾ ಡೈಜಸ್ಟಿಕ್ ಜ್ಯೂಸ್ (ಪಚನರಸ) ಆಹಾರ ಜೀರ್ಣವಾಗಲು ಸಹಕರಿಸುತ್ತದೆ. ಆಸಿಡಿಕ್ ಜ್ಯೂಸ್ ಸ್ಲೀನ್‌ನಿಂದ ಅನ್ನಕೋಶಕ್ಕೆ ಬರುತ್ತದೆ. ಆ ಜ್ಯೂಸ್ ಹೆಚ್ಚಾದರೆ ಹೈಪರ್ ಆಸಿಡಿಟಿಯಾಗುತ್ತದೆ. ಬಲಕ್ಕೆ ಎದ್ದಾಗ ಅಸಿಡಿಕ್ ಜ್ಯೂಸ್ ಸಮತೋಲನ (Balance) ಆಗುತ್ತದೆ. ಎಡಕ್ಕೆ ಎದ್ದರೆ ಗ್ಯಾಸ್ಟ್ರಿಕ್ ಹೆಚ್ಚಾಗಿ ಆರೋಗ್ಯ ಕೆಡುತ್ತದೆ. ಅಜೀರ್ಣವಾಗುತ್ತದೆ.* ಮುಟ್ಟಾದ ಹೆಣ್ಣುಮಕ್ಕಳು ಹೆಚ್ಚಾಗಿ ಮಾನಸಿಕವಾದ ಅಸ್ವಸ್ಥ್ಯಕ್ಕೊಳಗಾಗಿರುತ್ತಾರೆ. ಈ ವೇಳೆ ಆಕೆಗೆ ಏಕಾಂತ ಅಗತ್ಯ. ಇಂತಹ ನಂಬಿಕೆಗಳೆಲ್ಲ ವೈಜ್ಞಾನಿಕ ಸತ್ಯವನ್ನು ತಿಳಿದೆ ಹುಟ್ಟಿಕೊಂಡುದಲ್ಲ ಎಂಬುದು ಕುತೂಹಲಕರವಾದ ವಿಚಾರ.

ಕೆಲವೊಮ್ಮೆ ಪೌರಾಣಿಕ ಕತೆಗಳ ಆಧಾರದಿಂದಲೇ ನಂಬಿಕೆಗಳು ಬೆಳೆದು ಬರುತ್ತವೆ. ಕಾಲು ತೊಳೆಯುವಾಗ ಹಿಮ್ಮಡಿ ಒದ್ದೆಯಾಗಬೇಕು ಎಂಬ ನಂಬಿಕೆಗೆ ನಳರಾಯನಿಗೆ ಶನಿಹಿಡಿದ ಸಂದರ್ಭದ ಕತೆಯೇ ಕಾರಣ. ಗಜಪತಿಗೆ ಬಡಗು ದಿಕ್ಕಿಗೆ ತಲೆಹಾಕಿ ಮಲಗಿದ ಪ್ರಾಣಿಯ ತಲೆಯನ್ನು ಕಡಿದು ತಂದು ಇರಿಸಿದ ಕತೆಯಿಂದ-ಬಡಗು ದಿಕ್ಕಿಗೆ ತಲೆ ಹಾಕಿ ಮಲಗಬಾರದು ಎಂಬ ನಂಬಿಕೆ ಹುಟ್ಟಿಕೊಂಡಿದೆ ಇದಕ್ಕೆ ವೈಜ್ಞಾನಿಕ ಸತ್ಯವೂ ಇದೆ.

ಮೇಲೆ ಹೇಳಿದ ನಂಬಿಕೆಗಳು ಎಲ್ಲಾ ಜನಾಂಗಗಳಲ್ಲೂ ಸಾಮಾನ್ಯವಾಗಿ ಪ್ರಚಾರದಲ್ಲಿರುತ್ತವೆ. ನಂಬಿಕೆಗಳಿಲ್ಲದ ಮಾನವನೇ ಇರಲಾರನು. ಆದರೂ ಕೆಲವು ನಂಬಿಕೆಗಳು ಒಂದು ಜನಾಂಗದ ಇಲ್ಲವೇ ಒಂದು ಪ್ರದೇಶದ ವೈಶಿಷ್ಟ್ಯವಾಗಿರಲೂ ಬಹುದು.

ಇದು ತನಕ ಕಾಸರಗೋಡು ಪ್ರದೇಶದಲ್ಲಿ ವಾಸವಾಗಿರುವ ಆರ್ಯ ಮರಾಠ ಕ್ಷತ್ರಿಯ ಜನಾಂಗದ ಸಂಸ್ಕೃತಿಯ ಸ್ಥೂಲ ಪರಿಚಯವನ್ನು ಮಾಡಿದ ಹಾಗಾಯಿತು. ಇದರಿಂದ ಈ ಜನಾಂಗದ ಸಂಸ್ಕೃತಿಯ ವೈಶಿಷ್ಟ್ಯವನ್ನು ಸ್ವಲ್ಪ ಮಟ್ಟಿಗೆ ಅರ್ಥಮಾಡಿಕೊಳ್ಳಬಹುದು. ಸಾಂಸ್ಕೃತಿಕ ಇತಿಹಾಸದ ದೀರ್ಘ ಪರಂಪರೆಯುಳ್ಳ ಈ ಜನಾಂಗದ ಅಧ್ಯಯನಕ್ಕೆ ಸಾಕಷ್ಟು ಅವಕಾಶಗಳಿವೆ. ಇಂತಹ ಅಧ್ಯಯನದಿಂದ ಅವರ ಸಂಸ್ಕೃತಿಯ ವೈಶಿಷ್ಟ್ಯವನ್ನು ಕಂಡುಕೊಳ್ಳಬಹುದು.

---

* ನಮ್ಮ ಜನಪದ ನಂಬಿಕೆಗಳು—ಜಿ. ವಿ. ದಾಸೇಗೌಡ (ಪು- 59)

ಗ್ರಂಥಋಣ

1. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ— ಎಮ್. ಗಣಪತಿರಾವ್
2. ನಮ್ಮ ಜನಪದ ನಂಬಿಕೆಗಳು— ಜಿ. ವಿ. ದಾಸೇಗೌಡ
3. ಮಲೆನಾಡ ಸಂಪ್ರದಾಯಗಳು— ಅಂಬಳಿಕೆ ಹಿರಿಯಣ್ಣ

ಹಾಡುಗಳನ್ನು ಒದಗಿಸಿದವರು :

1. ವೆಂಕಮ್ಮ ಮಾಟೆಅಡ್ಕ (75)
2. ರಾಜೀವಿ ಕುಂಟಾರು (45)

ಕ್ಷೇತ್ರ ಕಾರ್ಯದಲ್ಲಿ ನೆರವು : 1. ಸತೀಶ್ ಕುಮಾರ್ ಪರಂಗೋಡು
2. ಪುರುಷೋತ್ತಮ ರಾವ್ ಮಾಟೆಡ್ಕ

ಹಠಯೋಗಿಗಳು ಹಾಗೂ ಪವಾಡಗಳ ಬಗೆಗಿದ್ದ ಶರಣರ ವಿಚಾರ

ವ್ಹಿ. ಜಿ. **ಪೂಜಾರ**

ಸಾಮಾನ್ಯವಾಗಿ ಜಗತ್ತಿನ ಎಲ್ಲ ಮಹತ್ವದ ಧರ್ಮಗಳು ಜ್ಞಾನಿಗಳ, ವಿಚಾರವಾದಿಗಳ, ಮಹಾಪುರುಷರ ಪ್ರಯತ್ನದ ಫಲವಾಗಿವೆ. ಅವುಗಳಲ್ಲಿ ಕೆಲವು ಅವರಿಂದ ಸ್ಥಾಪಿತವಾದಂಥವು. ಇನ್ನು ಕೆಲವು ಮಹಾನ್ ವ್ಯಕ್ತಿಗಳಿಂದ ಪುನರುದ್ಧಾರ ಹೊಂದಿ ಪ್ರಸಿದ್ಧಿ ಪಡೆದಂಥವು. ಅವರೆಲ್ಲರೂ ಸಾಮಾನ್ಯರಂತೆಯೇ ಬಾಳಿದವರು. ತಮ್ಮ ಪ್ರಭಾವೀಯುತ ವ್ಯಕ್ತಿತ್ವ ಮತ್ತು ಕರ್ತೃತ್ವ ಶಕ್ತಿಯಿಂದ ಜನತೆಯನ್ನು ತಮ್ಮತ್ತ ಆಕರ್ಷಿಸಿಕೊಂಡು ಧರ್ಮದ ತತ್ವಗಳನ್ನು ಅರುಹಿದವರು. ತಾವು ನಡೆದ ಧರ್ಮಮಾರ್ಗದಲ್ಲಿಯೇ ಜನತೆಯೂ ಮುನ್ನಡೆಯುವಂತೆ ಯತ್ನಿಸಿದವರು. ಅವರು ಗತಿಸಿದ ಮೇಲೆ ಆಯಾ ಮತ ಧರ್ಮದ ಕವಿಗಳಿಗೆ, ಪುರಾಣಕಾರರಿಗೆ ಅವರ ಚರಿತ್ರೆಯನ್ನು, ಅವರು ಬೋಧಿಸಿದ ತತ್ವಗಳನ್ನು ಸಾಮಾನ್ಯ ಜನತೆಗೆ ತಿಳಿಸಿಕೊಡುವ ಅವಶ್ಯಕತೆ ಎನಿಸಿದಂತೆ ತೋರುತ್ತದೆ. ಕಠಿಣವಾದ, ತರ್ಕಬದ್ಧವಾದ ಧರ್ಮದ ತತ್ವಗಳನ್ನು ಗ್ರಹಿಸುವ ಶಕ್ತಿ ಸಾಮಾನ್ಯ ಜನತೆಗೆ ಇರುವುದಿಲ್ಲ. ಕವಿಗಳು ಇದನ್ನು ಮನದಂದು ಧರ್ಮದ ತತ್ವಗಳನ್ನು ಹಿನ್ನೆಲೆಯಾಗಿರಿಸಿಕೊಂಡು ಸಾಂಕೇತಿಕ ಕಥೆ, ಪವಾಡ ಕಟ್ಟಿ ತಂತಮ್ಮ ಕೃತಿಗಳಲ್ಲಿ ವರ್ಣಿಸುತ್ತ ಬಂದುದನ್ನು ಕಾಣುವೆವು.

ಬಹುಸಂಖ್ಯೆಯ ಮತಧರ್ಮಗಳ ಸಾಹಿತ್ಯದಲ್ಲೂ ಇಂಥ ಪದ್ಧತಿ ನಡೆದುಕೊಂಡು ಬಂದಂತಿದೆ. ಇದಕ್ಕೆ ವೀರಶೈವ ಸಾಹಿತ್ಯವೂ ಹೊರತಲ್ಲ. ಕೆಲ ವೀರಶೈವ ಕವಿಗಳೇ ಬಸವಾದಿ ಶರಣರನ್ನು ಕುರಿತು ರಚಿಸಿದ ಕಾವ್ಯ, ಪುರಾಣಗಳಲ್ಲಿ ಅನೇಕ ಪವಾಡ ಕಥೆಗಳನ್ನು ಕಟ್ಟಿ ವರ್ಣಿಸಿದ್ದಾರೆ. ಹೀಗೆ ವರ್ಣಿಸಿದ ಕಾರಣ ಶರಣರು ಮಹಿಮಾ ಪುರುಷರೆಂದೂ, ವೀರಶೈವ ಧರ್ಮದ ತತ್ವಗಳು ಶ್ರೇಷ್ಠವಾದುವೆಂದೂ ಸಾಮಾನ್ಯ ಜನತೆಗೆ ತಿಳಿಸಿ ಧರ್ಮ ಪ್ರಚಾರ ಮಾಡುವುದೇ ಆಗಿದೆಯೆಂದು ಬೇರೆ ಹೇಳಬೇಕಿಲ್ಲ. ಆದರೆ ಭಾರತೀಯ ಯೋಗಶಾಸ್ತ್ರವು ಹಠಯೋಗ ಸಾಧನೆಯಿಂದ ಸಾಧಕನು ಹಂತ ಹಂತವಾಗಿ ಅಣಿಮಾಡಿ ಅಷ್ಟೈಶ್ವರ್ಯಗಳನ್ನು, ಪವಾಡಗಳಂತಹ ಸಿದ್ಧಿಗಳನ್ನು ಪಡೆದುಕೊಳ್ಳಬಹುದೆಂದು ಹೇಳುತ್ತದೆ. ಶ್ರೀ ಷಣ್ಮುಖ ಶಿವಯೋಗಿಗಳೂ

1 ಸ್ವಾಮಿ ಆದಿದೇವಾನಂದ (ಸಂ) : ಪಾತಂಜಲ ಯೋಗದರ್ಶನ, ಸೂತ್ರ–45

ತಮ್ಮೊಂದು ವಚನದಲ್ಲಿ ಇದೇ ಅಭಿಪ್ರಾಯ ವ್ಯಕ್ತಪಡಿಸಿರುವರು[2] ದೇಹದಲ್ಲಿರುವ ಷಟ್‌ಚಕ್ರಗಳ ಮುಂಖಾಂತರ ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸಿಕೊಳ್ಳುವವರು ಪವಾಡ ಸಾಮರ್ಥ್ಯವನ್ನು ಹೊಂದಬಹುದೆಂದು ವಿದ್ವಾಂಸರೊಬ್ಬರು ಅಭಿಪ್ರಾಯಪಡುವರು.[3] ಕುಂಡಲಿನಿ ಶಕ್ತಿಯನ್ನು ಜಾಗ್ರತಗೊಳಿಸಿಕೊಳ್ಳುವುದು ಎಲ್ಲರಿಗೂ ಸಾಧ್ಯವಾಗದು. ಇದು ತುಂಬಾ ಕಠಿಣವಾದುದು. ವಿಶೇಷ ಪರಿಶ್ರಮವಹಿಸಿ ಅಷ್ಟಾಂಗಯೋಗಗಳ ಆಚರಣೆಯಲ್ಲಿ ಸಾಧಕ ತೊಡಗಬೇಕಾಗುವುದು. 'ಇವುಗಳ ಸಾಧನೆಯಲ್ಲಿ ಸಾಧಕ ವಿವಿಕ್ತವಾಗಿದ್ದು ಅತ್ಯುಗ್ರವಾದ ವ್ರತಗಳನ್ನು ಆಚರಿಸಬೇಕಾಗುತ್ತದೆ. ಪ್ರಾಣಾಯಾಮದಿಂದ ಪ್ರಾಣವನ್ನು ನಿಯಂತ್ರಿಸುವಲ್ಲಿ ಅನೇಕ ಸಾರೆ ಪ್ರಾಣಕ್ಕೆ ಅಪಾಯವೊದಗುವ ಭಯವೂ ಉಂಟು. ಕುಂಡಲಿನಿಯನ್ನು ಜಾಗೃತಗೊಳಿಸಿ ಅದನ್ನು ಮೇಲಕ್ಕೇರಿಸುವಲ್ಲಿ ಅನೇಕ ಸಲ ವ್ರತಚ್ಯುತರಾಗುವ ಸಂಭವವೂ ಉಂಟು.'[4] ವ್ರತಚ್ಯುತರಾಗದೆ ಇಂಥ ಗಂಡಾಂತರಕಾರಿಯಾದ ಯೋಗವನ್ನಾಚರಿಸಿ ಕುಂಡಲಿನಿಯನ್ನು ಜಾಗೃತಗೊಳಿಸಿಕೊಂಡ ಅನೇಕ ಧಾರ್ಮಿಕ ಮಹಾಪುರುಷರು ಪಡೆದುಕೊಂಡು ಪ್ರದರ್ಶಿಸಬಲ್ಲರೆಂದು ಸಾಮಾನ್ಯಜನ ಪ್ರಾಚೀನ ಕಾಲದಿಂದಲೂ

---

2. "ಬಳಿಕೀ ಪ್ರಕಾರದ ಹಠಯೋಗ ರೂಪಮಪ್ಪ ಅಷ್ಟಾಂಗಗಳಂ
ನಿರಾಲಸ್ಯದಿಂ ಎಡೆಬಿಡುವಿಲ್ಲದೆ ಮಾಡಿದಾತಂಗೆ ಆಗುವ ಸಿದ್ಧಿ ಪ್ರಕಾರಗಳೆಂತೆನೆ :
ಮೊದಲನೆ ವರ್ಷದಲ್ಲಿ ನಿರೋಗಿಯಾಗಿ ಸಕಲಜನಪ್ರೀತನಾಗುವನು
ಎರಡನೆಯ ವರ್ಷದಲ್ಲಿ ಸಂಸ್ಕೃತ ಭಾಷೆಯಿಂದೆ ಕವಿತ್ವಮಂ ಮಾಡುವನು.
ಮೂರನೆಯ ವರ್ಷದಲ್ಲಿ ಸರ್ಪಾದಿ ದುಷ್ಟಪ್ರಾಣಿಗಳಿಂದೆ ಬಾಧಿಸಿಕೊಳ್ಳುತಿರನು.
ನಾಲ್ಕನೆಯ ವರ್ಷದಲ್ಲಿ ಹಸಿವು, ತೃಷೆ, ವಿಷಯ, ನಿದ್ರೆ, ಶೋಕ, ಮೋಹಾದಿಗಳಂ
ಬಿಡುವನು.
ಐದನೆಯ ವರ್ಷದಲ್ಲಿ ದೂರಶ್ರವಣ ವಾಕ್‌ಸಿದ್ಧಿ ಪರಕಾಯ ಪ್ರವೇಶಾಧಿಕ
ವುಳ್ಳಾತನಾಹನು.
ಆರನೆಯ ವರ್ಷದಲ್ಲಿ ವಜ್ರಾದ್ಯಾಯುಧಗಳಿಂದೆ ಬೇಧಿಸಲ್ಪಡದಾತನಾಗಿ ಶೀಘ್ರಗಾಮಿ
ಯಾಗಿ ದೂರದರ್ಶನವುಳ್ಳಾತನಾಹನು.
ಏಳನೆಯ ವರ್ಷದಲ್ಲಿ ಖೇಚರಗಾಮಿಯಾಗುವನು.
ಎಂಟನೆಯ ವರ್ಷದಲ್ಲಿ ಅಣಿಮಾದಿ ಅಷ್ಟಮಹದೈಶ್ವರ್ಯ ಸಂಪನ್ನನಾಹನು.
ಒಂಬತ್ತನೆಯ ವರ್ಷದಲ್ಲಿ ಸ್ವೇಚ್ಛಾಗಮನಿಯಾಗಿ ವಜ್ರಶರೀರಿಯಾಹನು.
ಹತ್ತನೆಯ ವರ್ಷದಲ್ಲಿ ಮನೋಯೋಗಿಯಾಗಿ ಇಚ್ಛಾವಿಷಯಂಗಳ ಪಡೆಯುವನು.
ಹನ್ನೊಂದನೆಯ ವರ್ಷದಲ್ಲಿ ಸಕಲಲೋಕಂಗಳಿಗೆ ಆಜ್ಞಾಕರ್ತೃವಾಹನು.
ಹನ್ನೆರಡನೆಯ ವರ್ಷದಲ್ಲಿ ಶಿವನ ಸಮಾನನಾಗಿ ಸೃಷ್ಟಿಸ್ಥಿತಿಲಯಂಗಳಂ
ಮಾಡುತಿರ್ಪುದೇ ಹಠಯೋಗಸಿದ್ಧಿ ನೋಡಾ ಅಖಂಡೇಶ್ವರಾ"
—ಶಿವಾನಂದ, ವಿ. (ಸಂ) 'ಶ್ರೀ ಷಣ್ಮುಖ ಶಿವಯೋಗಿಕೃತ ಅಖಂಡೇಶ್ವರ ವಚನಗಳು'
ವಚನ-63, 1980

3. Gopikrishna : 'HIGHER CONCIOUS : Thc evolutionary thrust of Kundalini'. Page 128.

4. ಹಿರೇಮಠ, ಆರ್.ಸಿ. : ಷಟ್‌ಸ್ಥಲಪ್ರಭೆ, ದ್ವಿ.ಮು. 1972, ಪುಟ 412

ನಂಬಿಕೊಂಡು ಬಂದಂತಿದೆ ಮತ್ತು ಧಾರ್ಮಿಕ ಮಹಾಪುರುಷರೆಂದರೆ ಪವಾಡಗಳನ್ನು ಪ್ರದರ್ಶಿಸುವರೆಂದೂ, ಪವಾಡಗಳನ್ನು ಮಾಡದವರು ಧಾರ್ಮಿಕ ಮಹಾಪುರುಷರೇ ಅಲ್ಲವೆಂದೂ ಅವರು ಅಭಿಪ್ರಾಯ ಪಡುವರು. ಯೇಸು ಕ್ರಿಸ್ತ, ಮಹಮ್ಮದ ಪೈಗಂಬರ, ಶಂಕರಾಚಾರ್ಯರು, ಮಹಾವೀರ, ಬುದ್ಧ, ಕಬೀರ ಮತ್ತು ಬಸವೇಶ್ವರ ಮುಂತಾದ ಧಾರ್ಮಿಕ ಮಹಾಪುರುಷರು ಯೋಗ ಸಾಧನೆಗೈಯದೆ, ಯಾವ ಪೂರ್ವ ತಯಾರಿಯೂ ಇಲ್ಲದೆ ಸ್ವಾರ್ಥ, ಸ್ವಲಾಭವನ್ನೂ ಇರಿಸಿಕೊಳ್ಳದೆ ಸಂಕಷ್ಟದಲ್ಲಿ, ಗಂಡಾಂತರದಲ್ಲಿ ಮುಳುಗಿದವರನ್ನು ಪಾರುಮಾಡಲು ಅನೇಕ ಪವಾಡಗಳನ್ನು ಪ್ರದರ್ಶಿಸಿದರೆಂದೂ ಕೆಲ ಸಾಮಾನ್ಯ ಜನತೆಯು ನಂಬುಗೆ.

ಶರಣರು ಮಾತ್ರ ಪವಾಡಗಳಂತಹ ಸಿದ್ಧಿಗಳನ್ನು ಪಡೆದುಕೊಂಡು ಪ್ರದರ್ಶಿಸಿದವರಲ್ಲ, ಅತಿಮಾನುಷ ಶಕ್ತಿಗಳನ್ನೂ ಪುರಸ್ಕರಿಸಿದವರಲ್ಲ. ಇದಕ್ಕೆ ಅವರ ವಚನಗಳೇ ಸಾಕ್ಷಿ. ಹಠಯೋಗಿಗಳನ್ನು ಮತ್ತು ಅವರು ಪ್ರದರ್ಶಿಸುತ್ತಿದ್ದರೆನ್ನಲಾದ ಕ್ಷುದ್ರಶಕ್ತಿಗಳನ್ನು, ಪವಾಡಗಳನ್ನು, ಶರಣರು ಕಡೆಗಣಿಸಿ ನುಡಿದಿರುವರೇ ವಿನಾ ಅವುಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸಿ ಒರೆಗೆ ಹಚ್ಚುವ ಪ್ರಯತ್ನವನ್ನು ಮಾಡಿದಂತೆ ತೋರುವುದಿಲ್ಲ. ಹಠಯೋಗಿಗಳು ಮತ್ತು ಪವಾಡಗಳ ಬಗೆಗೆ ಅವರು ವ್ಯಕ್ತಪಡಿಸಿದ ವಿಚಾರಗಳನ್ನು ಅವರ ವಚನಗಳಿಂದಲೇ ಕಂಡುಕೊಳ್ಳುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ.

ಶರಣರು ಹಠಯೋಗ ಸಾಧನೆಯಿಂದ ಸಿದ್ಧಿಸುತ್ತವೆಯೆಂದು ನಂಬಲಾದ ಅಣಿಮಾದಿ ಅಷ್ಟೈಶ್ವರ್ಯಗಳನ್ನು, ಪವಾಡಗಳನ್ನು ತೃಣವಾಗಿ ಗಣಿಸಿದರು. ಸಿದ್ಧರಾಮನು ಹಠಯೋಗಿಗಳಿಗೆ 'ಅಷ್ಟಾಂಗಯೋಗವನರಿದಿಹೆವೆಂದು ಘಟಕೆಟ್ಟು ನಷ್ಟವಾದವರ ಕಂಡೆ'[5] ಎಂದಿರುವನು. ಹಠಯೋಗಿಗಳು ಪ್ರಾಣಾಯಾಮದ ಮೂಲಕ ಪ್ರಾಣಶಕ್ತಿಯ ದುರುಪಯೋಗ ಮಾಡಿಕೊಂಡು ದುರಂತಕ್ಕೀಡಾಗುವರು, ಎಂದು ಶರಣರು ಅಭಿಪ್ರಾಯಪಟ್ಟಿರುವರು. ಪ್ರಭುದೇವರು ತಮ್ಮ ವಚನವೊಂದರಲ್ಲಿ ಹಠಯೋಗವನ್ನಾಚರಿಸುತ್ತಿದ್ದ ಕಾಪಾಲಿಕರನ್ನು ಮತ್ತು ಅವರು ಪ್ರದರ್ಶಿಸುತ್ತಿದ್ದ ಬಿನುಗು ದೃಷ್ಟಗಳನ್ನು ಖಂಡಿಸುತ್ತ, ಶರಣರು ಇಂಥ ಆಚರಣೆಯುಳ್ಳವರಲ್ಲವೆಂದುದನ್ನಿಲ್ಲಿ ನೋಡಬಹುದು :

"ಹಠಯೋಗ ಲಂಬಿಕೆಯೆಂದು, ಆಕುಂಚನವೆಂದು
ವಜ್ರ ಅಮರಿಯ ಕಲ್ಪವೆಂದು
ಮಲಮೂತ್ರಂಗಳ ಸೇವಿಸುತ
ಇದು ಪೂರ್ವ ನವನಾಥ ಸಿದ್ಧರ ಮತೋಕ್ತವೆಂದು
ಕಾಪಾಲಿಕರಾಚರಣೆಯನಾಚರಿಸುವರಲ್ಲ ಶರಣರು ।
ಮೇಣು,

5. ಹಿರೇಮಠ, ಆರ್.ಸಿ. (ಸಂ) ಸಿದ್ಧರಾಮೇಶ್ವರ ವಚನಗಳು.

ತಲೆಯೊಳಗಣ ವಾತಪಿತ್ತ ಶ್ಲೇಷ್ಮವ ತೆಗೆದು
ಅಮೃತವೆಂದು ಬಿನುಗು ದೃಷ್ಟವ ತೋರುವರಲ್ಲ ಶರಣರು ।
ದ್ರವಿಸುವ ದೇಹದಲ್ಲಿ
ಅಪ್ಪುವಿನ ಫಲರಸ ಕ್ಷೀರ ಮೊದಲಾದುವ ಸೇವಿಸುತ್ತ
ಅನ್ನವ ಬಿಟ್ಟೆವೆಂಬ ಭೂತಚೇಷ್ಟಿಕರಲ್ಲ ಶರಣರು
ಇವೆಲ್ಲವು ಕಾಕು ಸಟೆ ಭ್ರಾಂತೆಂದು
ತಿಳಿದು ನಿರ್ಧರ ನಿಜದಿ ನಿಂದರು
ಗುಹೇಶ್ವರ ನಿಮ್ಮ ಶರಣರು ಅಗ್ರಗಣ್ಯರು" [16]

ಶರಣ ಮಾರ್ಗದಲ್ಲಿ ಕುಟಿಲ ಕುಹಕ ಕಪಟಿಗಳಿಗೆ ಎಡೆಯಿಲ್ಲ, ಚಮತ್ಕಾರಗಳಿಗೆ ಆಸ್ಪದವಿಲ್ಲವೆಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿದೆ. ಹಠಯೋಗ ಸಾಧನೆಯಿಂದ ದೇಹವನ್ನು ವಜ್ರದಂತೆ ಗಟ್ಟಿ ಮಾಡಿಕೊಂಡು ಅದರಿಂದ ಏನೆಲ್ಲವನ್ನು ಸಾಧಿಸಬಹುದೆಂದು ತಿಳಿದಿದ್ದ ಗೋರಕ್ಷನನ್ನು ಪ್ರಭುದೇವರು ಒಮ್ಮೆ ಸಂಧಿಸಿ ಆತನ ದೇಹಕ್ಕಿರುವ ಮಿತಿಯನ್ನು ತೋರಿಸಿಕೊಟ್ಟುದನ್ನು ಚಾಮರಸ ಕವಿಯು ವರ್ಣಿಸಿದ್ದಾನೆ[7]. ಶ್ರೀ ತೋಂಟದ ಸಿದ್ಧಲಿಂಗೇಶ್ವರರು ಹಠಯೋಗಿ, ಲಯಯೋಗಿ, ಲಂಬಿಕಾಯೋಗಿ ಮತ್ತು ಅಷ್ಟಾಂಗಯೋಗಿಗಳು ಯೋಗ ಸಾಧನೆಯಿಂದ ಪಡೆದ ಸಿದ್ಧಿಗಳನ್ನು ಕುರಿತು ಇವು 'ನಿತ್ಯವನೆ ಮರೆತು ಅನಿತ್ಯವನೆ ಹಿಡಿದು ಸತ್ತು ಹೋದಂತೆ' ಎಂದಿದ್ದಾರೆ. ಮುಂದುವರಿದು ಅವರು :

"ಲಂಬಿಕಾಯೋಗಿಗಳಿಗೆ ಡೊಂಬರಿಗೆ ಸರಿಯೆಂದೆಂಬೆ
ಹಠಯೋಗಿಗಳಿಗೆ ಆಟಮಟಕಾರರೆಂದೆಂಬೆ
ಅಷ್ಟಾಂಗಯೋಗಿಗಳ ಕಷ್ಟಕರ್ಮಿಗಳೆಂದೆಂಬೆ
ಲಯಯೋಗಿಗಳ ನಾಯಿಗಿಂತ ಕಡೆಯೆಂದೆಂಬೆ
... ...
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ !"[8]

ಎಂದು ಆ ಯೋಗಿಗಳನ್ನು ಹೀಗಳೆದು ನುಡಿದಿರುವರು. 'ಇಂಥವುಗಳ ಆಧಾರದಿಂದ ವಚನ ಶಾಸ್ತ್ರಕಾರರು (ಶರಣರು) ಯೋಗ ವಿರೋಧಿಗಳೆಂದು ಮಾತ್ರ ಕಲ್ಪಿಸಬಾರದು. ಅವರ ಟೀಕೆಯು ಯೋಗದ ಮುಖ್ಯ ಧ್ಯೇಯವಾದ ಅಂತರಂಗ ಶುದ್ಧಿಯನ್ನೂ, ಈಶ್ವರ ಸಿದ್ಧಿಯನ್ನೂ ಮರೆತು ಕೇವಲ ಬಾಹ್ಯಶರೀರ ಚಮತ್ಕಾರ (feats) ಗಳನ್ನು ಸಾಧಿಸಿದ ಈ ಹಠಯೋಗಿಗಳನ್ನುದ್ದೇಶಿಸಿ ಮಾಡಲ್ಪಟ್ಟಿದೆಯೆಂಬುದನ್ನು ಲಕ್ಷ್ಯದಲ್ಲಿಡಬೇಕು.'[9]

---

6. ಬಸವರಾಜು, ಎಲ್. (ಸಂ) : ಅಲ್ಲಮನ ವಚನಗಳು, (ವಚನ-339)
7. ಪ್ರಭುಲಿಂಗಲೀಲೆ (ಗೋರಕ್ಷಾದಿಗಳಿಗೆ ಉಪದೇಶದ ಗತಿ)
8. ಹಿರೇಮಠ, ಆರ್. ಸಿ. (ಸಂ.) : 'ತೋಂಟದ ಸಿದ್ಧಲಿಂಗೇಶ್ವರರ ಷಟ್‌ಸ್ಥಲ ಜ್ಞಾನ ಸಾರಾಮೃತ' 1964.
9. ಬಸವನಾಳ, ಶಿ. ಶಿ. (ಸಂ) : 'ವೀರಶೈವ ತತ್ವ ಪ್ರಕಾಶ' ಪುಟ-123. 1975. 'ಯೋಗವೂ ವೀರಶೈವರೂ'-ಎಂಬ ಲೇಖನ.

ನಮ್ಮ ದೇಹದಲ್ಲಿಯೇ ಅರುಹಿನ ರೂಪದಲ್ಲಿ ಅಂತರ್ಗತವಾಗಿರುವ ಶಿವರೂಪಿ ಶಕ್ತಿಯನ್ನು ಅರಿತುಕೊಳ್ಳುವುದಕ್ಕಾಗಿ ಯೋಗವನ್ನಾಚರಿಸಬೇಕೇ ವಿನಾ ಬಾಹ್ಯ ಶರೀರ ಚಮತ್ಕಾರಗಳನ್ನು, ಸಿದ್ಧಿಗಳನ್ನು ಪಡೆದುಕೊಂಡು ಪ್ರದರ್ಶಿಸುವುದಕ್ಕಲ್ಲ ವೆಂದು ಮಹಾದೇವಿಯಕ್ಕ ತನ್ನ ವಚನವೊಂದರಲ್ಲಿ ಸ್ಪಷ್ಟಪಡಿಸಿರುವಳು. ಅದನ್ನಿಲ್ಲಿ ನೋಡಬಹುದು :

'ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯವ ನುಡಿದಡೇನು ?
ಆದಿ ಅನಾದಿಯ ಶುದ್ಧಿಯ ಕೇಳಿದಡೇನು, ಹೇಳಿದಡೇನು ?
ತನ್ನಲ್ಲಿದ್ದುದ ತಾನರಿಯದನ್ನಕ್ಕರ
ಉನ್ಮನಿಯ ರಭಸದ ಮನ ಪವನದ ಮೇಲೆ
ಚನ್ನಮಲ್ಲಿಕಾರ್ಜುನಯ್ಯನ ಬೇಧಿಸಲರಿಯರು'[10]

ಯೋಗಿಯು ತನ್ನ ದೇಹವನ್ನು ದಂಡಿಸಿ ಪಡೆದುಕೊಳ್ಳುವ ಸಿದ್ಧಿಗಳು ಕ್ಷಣಿಕ ತೃಪ್ತಿಯನ್ನೀಯುವಂಥವು. ಅವು ಪರಮಾತ್ಮನನ್ನರಿಯಲು ಸಹಾಯಕವಾಗ ಲಾರವು. ಅಂತಹ ಸಿದ್ಧಿಗಳು ಸಾಧಕನಿಗೂ ದೇವರಿಗೂ ನಡುವೆ ಹಿಡಿದ ಕಪ್ಪು ಪರದೆಗಳು ಎಂದು ಅನೇಕ ಧಾರ್ಮಿಕ ಮಹಾಪುರುಷರು, ಸಾಧು ಸಂತರು ಮತ್ತು ಶರಣರು ಅಭಿಪ್ರಾಯಪಟ್ಟಿರುವರು. ತಮಿಳುನಾಡಿನ ನಾಯನ್ಮಾರರು 'ಕಾಡಿನ ಕ್ರೂರ ಪ್ರಾಣಿಗಳನ್ನೂ ವಿಷಸರ್ಪಗಳನ್ನೂ ಮಣಿಸುವುದು, ರಸಸಿದ್ಧಿ ಮಾಡು ವುದು, ಅಗೋಚರರಾಗಿ ಚಲಿಸುವುದು, ನೀರಿನ ಮೇಲೆ ನಡೆಯುವುದು, ಬೆಂಕಿಯ ಮೇಲೆ ಕುಳಿತುಕೊಳ್ಳುವುದು, ಪರಕಾಯ ಪ್ರವೇಶಮಾಡುವುದು, ನಿತ್ಯಯೌವನ ವನ್ನುಳಿಸಿಕೊಳ್ಳುವುದು ಇತ್ಯಾದಿ ಸಿದ್ಧಿಗಳ ಸಿದ್ಧಿಯಾಗಬಹುದು. ಆದರೆ ಮನುಷ್ಯ ನನ್ನು ಸ್ವಾಧೀನದಲ್ಲಿಟ್ಟು ನಿಶ್ಚಲತೆಯನ್ನು ಪಡೆಯುವುದು ಕಷ್ಟಸಾಧ್ಯ ಎಂದಿದ್ದಾರೆ. ಇದೇ ಅಭಿಪ್ರಾಯ ಹೊಂದಿದ ಕಾಶ್ಮೀರದ ಸ್ತ್ರೀಸಂತಳಾದ ಲಲ್ಲೇಶ್ವರಿಯು ಹೇ ಯೋಗಿಯೇ ! ಅಗ್ನಿಯ ಬಿಸುಪನ್ನೇಕೆ ಆರಿಸುವೆ ? ನದಿಯನ್ನು ತಡೆಯುವೆ ಏಕೆ ? ತಲೆಕೆಳಗು ಕಾಲುಮೇಲೆ ಮಾಡಿ ನಡೆಯುವೆ ಏಕೆ ? ಈ ಐಂದ್ರ ಜಾಲಿಕ ಮಾಟಗಳೇಕೆ ?"[11] ಎಂದು ಮಾರ್ಮಿಕವಾಗಿ ಪ್ರಶ್ನಿಸುವಳು. "ಅಗ್ನಿ ವಸನವನ್ನು ತೊಟ್ಟರೇನು ? ಕಬ್ಬಿಣವನ್ನು ತಿಂದರೇನು ? ನಭೋ ಮಂಡಲವನ್ನೇ ಕಿರಿ ಬೆರಳಿನಲ್ಲಿ ಹೊತ್ತರೇನು ? ಅಸಾಧ್ಯವಾದುದನ್ನು ಮಾಡಿ ತೋರಿದರೇನು ? ದೇವರ ಕೃಪೆಗೆ ಪಾತ್ರರಾಗದೆ ಇಂಥ ಕಾರ್ಯಗಳನ್ನೆಸಗುವುದು ವ್ಯರ್ಥ"[12] ವೆಂದು

---

10. ಹಿರೇಮಠ, ಆರ್. ಸಿ.(ಸಂ) : ಮಹಾದೇವಿಯಕ್ಕನ ವಚನಗಳು, (ವಚನ-230)
11. ಮಹಾದೇವನ್, ಟಿ. ಪಿ. (ಲೇ)
ಮರಿಯಪ್ಪ ಭಟ್ಟ (ಅನು) ; ಸಂತರ ಚರಿತೆ, ಪುಟ-10.
12, ಗೋಪಾಲಸಿಂಗ (ಲೇ)
ಜವರೇಗೌಡ, ದೇ. (ಅನು): ಗುರುನಾನಕ, ಪುಟ-63.

ಗುರುನಾನಕರು ಇಂಥ ಸಿದ್ಧಿಗಳನ್ನು ಮತ್ತು ಇವುಗಳನ್ನು ಪ್ರದರ್ಶಿಸುವ ಯೋಗಿಗಳನ್ನು ಹೀಗಳೆದು ನುಡಿದಿದ್ದಾರೆ. ಸ್ವಾಮಿ ವಿವೇಕಾನಂದರೂ ತಮ್ಮ 'ರಾಜಯೋಗ' ಗ್ರಂಥದಲ್ಲಿ ಹಠಯೋಗಿಗಳಿಗಿದ್ದ ಮಿತಿಯನ್ನು ವಿವರಿಸುತ್ತ ಅವರು ಕೇವಲ ಆರೋಗ್ಯವಂತ ಪ್ರಾಣಿಗಳೆಂದು ನುಡಿದುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು.[13]

ದೇಹವನ್ನು ದಂಡಿಸುವ ಹಠಯೋಗಿಗಳು ದೇವರ ಪ್ರೀತಿಗೆ ಪಾತ್ರರಾಗರು. ನಶ್ವರವಾದ ದೇಹವೇ ನಿತ್ಯವೆಂದು ನಂಬಿದ ಅವರಿಗೆ ಮುಕ್ತಿ ಲಭಿಸದು ಎಂದು ಶರಣರ ನಂಬುಗೆ. 'ಯೋಗಗಳ ಈ ಕಾಠಿಣ್ಯವನ್ನು ಹೋಗಲಾಡಿಸಿ ಸುಲಭಸಾಧ್ಯವಾದ ಶಿವಯೋಗವನ್ನು ವೀರಶೈವರು (ಶರಣರು) ಕಂಡುಹಿಡಿದರು. ಅಷ್ಟಾಂಗಯೋಗದೊಳಗಿನ ಮೊದಲಿನ ಐದಂಗಗಳನ್ನು ಬಿಟ್ಟು ಧ್ಯಾನ, ಧಾರಣ, ಸಮಾಧಿ – ಈ ಮೂರನ್ನೇ ಶಿವಯೋಗದಲ್ಲಿ ಇಟ್ಟುಕೊಳ್ಳಲಾಯಿತು. ಇಷ್ಟಲಿಂಗ ಧಾರಣ, ಪ್ರಾಣಲಿಂಗ ಧ್ಯಾನ, ಭಾವಲಿಂಗ ಸಮಾಧಿ ಇವು ವೀರಶೈವರಲ್ಲಿ ಮುಖ್ಯವಾದುವು. ವೀರಶೈವರು ನಿತ್ಯಮಾಡುವ ಶಿವಪೂಜೆಯೇ ಶಿವಯೋಗವಾಗುವಂತೆ ಏರ್ಪಡಿಸಿ, ವ್ಯವಹಾರಕ್ಕೆ ಪರಮಾರ್ಥವನ್ನು ಬೆರಸಿದರು'.[14] ಈ ಯೋಗವನ್ನು ಎಲ್ಲರೂ ಸುಲಭವಾಗಿ ಆಚರಣೆಯಲ್ಲಿ ತರಬಹುದೆಂದರು. ಇದಕ್ಕೆ ಇನ್ನುಳಿದ ಯೋಗಗಳು ಸರಿಸಮಾನವಾಗಲಾರವು ಎಂಬುದು ಅವರ ಅಭಿಪ್ರಾಯ. ಶಿವಯೋಗವು ಎಂಥದೆಂಬುದನ್ನು ಪ್ರಭುದೇವರು ಒಂದೆಡೆ ನುಡಿದುದನ್ನಿಲ್ಲಿ ಉದಾಹರಿಸಬಹುದು :

> "ನಾರು ಬೇರಿನ ಕುಟಿಲ ಕಪಟ ಯೋಗವಲ್ಲದು ಸಿಲ್ಲಿಭೋ ।
> ಕಾಯ ಸಮಾಧಿ, ಕರಣ ಸಮಾಧಿ ಯೋಗವಲ್ಲದು ಸಿಲ್ಲಿಭೋ ।
> ಜೀವ ಸಮಾಧಿಯೆಂಬುದಲ್ಲ ನಿಜ ಸಹಜ ಸಮಾಧಿ ಗುಹೇಶ್ವರ"[15]

---

13. 'He (Hathayogi) is determined not to fall sick, and he never dies. He lives long, a hundred years nothing to him. He is quite young and fresh when he is 150, with-out one hair turned gray. But that is all. A Banyan tree lives sometimes 5000 years, but it is a banyan tree and nothing more. So if a man lives long, he is only a healthy animal' — Swamy Vivekananda : Rajayoga, (Page-14)
14. ಹಿರೇಮಠ, ಆರ್. ಸಿ. : ಷಟ್‌ಸ್ಥಲ ಪ್ರಭೆ, ಪುಟ-412, ದ್ವಿ.ಮು. 1972.
15. ಭೂಸನೂರಮಠ, ಸಂ.ಶಿ. (ಸಂ) : ವಚನ ಸಾಹಿತ್ಯ ಸಂಗ್ರಹ, (ಯೋಗ-ಶಿವಯೋಗ) (ವಚನ-115), 1965.

ಶಿವನನ್ನರಿಯಲು ಸಹಜವಾದ ಶಿವಯೋಗವಿರಲು ಶರಣರಿಗೆ ಅಷ್ಟಾಂಗ ಯೋಗಗಳ ಹಂಗೇಕೆ ? ಎಂದು ಮಹಾದೇವಿಯಕ್ಕ ತನ್ನ ವಚನವೊಂದರಲ್ಲಿ ಪ್ರಶ್ನಿಸಿದುದನ್ನು ಕಾಣಬಹುದು :

"ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯಾ ?
ಕ್ಷಮೆ ದಮೆ ಶಾಂತಿ ಸೈರಣೆಯಿರಲು ಸಮಾಧಿಯ ಹಂಗೇಕಯ್ಯಾ ?
ಚೆನ್ನಮಲ್ಲಿಕಾರ್ಜುನಾ"[16]

ಅಷ್ಟಾಂಗಯೋಗಗಳು ಕೃತ್ರಿಮವಾದವು ಎಂದು ಮಹಾದೇವಿಯಕ್ಕ ಅಭಿಪ್ರಾಯಪಡುತ್ತ, ಶರಣರಿಗೆ ಇಂಥ ಯೋಗಗಳ ಅವಶ್ಯಕತೆಯಿಲ್ಲವೆನ್ನುವಳು. ಇಲ್ಲಿ ಆಕೆ ಶಿವಯೋಗದ ಆಚರಣೆಯನ್ನು ಎತ್ತಿ ಹಿಡಿದುದನ್ನು ಗುರುತಿಸಬಹುದು. ಕುಟಿಲ ವಿದ್ಯೆಗಳನ್ನು, ಅಷ್ಟಸಿದ್ಧಿಗಳನ್ನು ವಶಮಾಡಿಕೊಂಡಿದ್ದ ವಿಕಾರಿ ಸಿದ್ಧರು, ಹಠಯೋಗಿಗಳು ಸಿದ್ಧರಾಮನ ಶಿವಯೋಗದ ನಿಲುವಿಗೆ ಸಮಾನರಲ್ಲವೆಂದು ರಾಘವಾಂಕ ಕವಿ ನುಡಿದುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು.[17] ಇದರಿಂದ ಶರಣರೆಲ್ಲರೂ ಶಿವಯೋಗದಾಚರಣೆಯುಳ್ಳವರಾಗಿದ್ದರೆಂಬುದು ವಿದಿತವಾಗುವುದು.

ಶಿವೈಕ್ಯಮಾರ್ಗವನ್ನು ಬೋಧಿಸುವ ಶಿವಯೋಗ ಮಾರ್ಗದಲ್ಲಿ ಮುನ್ನಡೆದ ಶರಣರು ಹಿಂದೆಯೇ ಹೇಳಿದಂತೆ, ಪವಾಡಗಳಂತಹ ಸಿದ್ಧಿಗಳನ್ನು ಪಡೆದುಕೊಂಡು ಪ್ರದರ್ಶಿಸಲಿಲ್ಲವೆಂಬ ಮಾತು ಸೂರ್ಯಪ್ರಕಾಶದಷ್ಟು ಸತ್ಯ. ಆದರೆ ಅವರು ಗತಿಸಿದ ನಂತರ ಅವರ ಚರಿತ್ರೆಯ ಸುತ್ತ ಅನೇಕ ಕಟ್ಟುಕಥೆಗಳು, ಪವಾಡ ಕಥೆಗಳು ಹುಟ್ಟಿಕೊಂಡವು. ಬಸವಣ್ಣನವರ ಜೀವಿತಾವಧಿಯಲ್ಲಿಯೇ ಅವರನ್ನು ಮಹಾದೇವಿಯಕ್ಕ[18], ಸಿದ್ಧರಾಮ[19] ಮುಂತಾದ ಶರಣ–ಶರಣೆಯರು ದೇವರೆಂದೂ, ಮಹಿಮಾ

---

16. ಹಿರೇಮಠ, ಆರ್.ಸಿ. (ಸಂ) : ಮಹಾದೇವಿಯಕ್ಕನ ವಚನಗಳು (ವಚನ-229)
17. ವೆಂಕಣ್ಣಯ್ಯ, ಟಿ.ಎಸ್. ಮತ್ತು ನರಸಿಂಹಾಚಾರ್ ಡಿ.ಎಲ್. (ಸಂ) : ಸಿದ್ಧರಾಮಚಾರಿತ್ರ, ಸಂ-1, ಪ-9.
18. "ದೇವಲೋಕದವರಿಗೂ ಬಸವಣ್ಣನೆ ದೇವರು
ಮರ್ತ್ಯಲೋಕದವರಿಗೂ ಬಸವಣ್ಣನೆ ದೇವರು
ನಾಗಲೋಕದವರಿಗೂ ಬಸವಣ್ಣನೆ ದೇವರು
ಮೇರುಗಿರಿ ಮಂದರಗಿರಿ ಮೊದಲಾದವೆಲ್ಲಕ್ಕೂ ಬಸವಣ್ಣನೆ ದೇವರು
ಚೆನ್ನಮಲ್ಲಿಕಾರ್ಜುನಯ್ಯಾ
ನಿಮಗೂ ಎನಗೂ ನಿಮ್ಮ ಶರಣರಿಗೂ ಬಸವಣ್ಣನೆ ದೇವರು"
— ಹಿರೇಮಠ, ಆರ್.ಸಿ. (ಸಂ): ಮಹಾದೇವಿಯಕ್ಕನ ವಚನಗಳು, (ವಚನ-208)
19. 'ಕಾಲಿಲ್ಲದವಂಗೆ ಕಾಲು ಕೊಟ್ಟೆ ಬಸವಾ, ಕಣ್ಣಿಲ್ಲದವಂಗೆ ಕಣ್ಣುಕೊಟ್ಟೆ ಬಸವಾ, ಎನ್ನ ಕಣ್ಣು ಕಾಲಿಂಗೆ ನೀನೇಯಯ್ಯಾ ಬಸವಾ, ಕಪಿಲಸಿದ್ಧಮಲ್ಲಿನಾಥಯ್ಯಾ' —ಹಿರೇಮಠ, ಆರ್.ಸಿ. (ಸಂ) : ಸಿದ್ಧರಾಮೇಶ್ವರ ವಚನಗಳು. ಇಲ್ಲಿ ಕಾಲು ಮತ್ತು ಕಣ್ಣು ಕ್ರಿಯೆ ಮತ್ತು

ಪುರುಷರೆಂದೂ ಸ್ತುತಿಸಿರುವರು. ಅವರ ಸಮಕಾಲೀನ ಶರಣರೇ ಅವರನ್ನು ಹೀಗೆ ಸ್ತುತಿಸಿರುವಾಗ ಸಾಮಾನ್ಯ ಜನರಂತೂ ಸರಿಯೇ. ಅವರು ಬಸವಣ್ಣನವರನ್ನು ಶಿವನ ಅವತಾರಿಗಳೆಂದೂ, ಮರ್ತ್ಯರೇ ಅಲ್ಲವೆಂದೂ, ಪವಾಡ ಪುರುಷರೆಂದೂ ನಾನಾವಿಧವಾಗಿ ಆರಾಧಿಸತೊಡಗಿದಂತೆ ತೋರುತ್ತದೆ. ರೂಪಕಮಯವಾದ ಅವರ ಸಮಕಾಲೀನ ಶರಣರ ಸ್ತುತಿಪರ ವಚನಗಳನ್ನು ಮತ್ತು ಸಾಮಾನ್ಯ ಜನತೆಯ ಹೊಗಳಿಕೆಯ ನುಡಿಗಳನ್ನು ಕೇಳಿ ವಿನಯಮೂರ್ತಿಗಳಾದ ಬಸವಣ್ಣನವರಿಗೆ ಕಸಿವಿಸಿಯಾಗಿರಬೇಕು. ಏನಿದು ನನ್ನನ್ನು ಈ ರೀತಿ ಸ್ತುತಿಸುವರಲ್ಲ ಎನ್ನುತ್ತ ಅವರು :

"ಎಂಬತ್ತೆಂಟು ಪವಾಡವ ಮೆರೆದು
ಹಗರಣದ ಚೋಹದಂತಾಯಿತ್ತೆನ್ನ ಭಕ್ತಿ"[20]

ಎಂದು ತಮ್ಮನ್ನೇ ತಾವು ವಿಡಂಬನೆಗೊಳಪಡಿಸಿಕೊಂಡಿದ್ದಾರೆ. ಸ್ವತಃ ಬಸವಣ್ಣನವರೇ ಪವಾಡ ಮೆರೆದೆನೆಂದು ನುಡಿದಿದ್ದಾರೆಂದು ವಿದ್ವಾಂಸರೊಬ್ಬರು 'ಆ ಮಾತನ್ನು ಅವರ ಹಿರಿಯ ಜೀವನದಲ್ಲಿ ಅಲ್ಲಗಳೆಯಲಾಗದು ...... ಪವಾಡಗಳನ್ನು ಮೆರೆಯುವ ಮಹಾ ಮಹಿಮರೇ ಇಲ್ಲ. ಬಸವಣ್ಣನವರ ಜೀವನದಲ್ಲಿಯೂ ಪವಾಡಗಳು ಅಧಿಕ ಸಂಖ್ಯೆಯಲ್ಲಿ ನಡೆದಿವೆ'[21] ಎಂದು ಅಭಿಪ್ರಾಯಪಡುವರು. ಇವರಂತೆಯೇ ನಮ್ಮ ಜನ ಅವರ ಪವಾಡಗಳನ್ನು ಎಣಿಸಲಿಕ್ಕೆ ಹೋಗುವರೇ ವಿನಾ ಅಣ್ಣನವರ ಇಂಗಿತವೇನಿತ್ತು ಎಂಬುದನ್ನರಿತುಕೊಳ್ಳಲು ಯತ್ನಿಸರು. ಇಲ್ಲಿ ಬಸವಣ್ಣನವರು ತಮ್ಮ ಭಕ್ತಿಯ ಬೆಳವಿಗೆ ಪವಾಡಗಳು ಆತಂಕಕಾರಿಗಳಾದುವು ಎಂದು ಅವುಗಳನ್ನು ಮಾರ್ಮಿಕವಾಗಿ ಹೀಗಳೆದಿದ್ದಾರೆ. ಇದರರ್ಥ ಅವರು ಪವಾಡಗಳನ್ನು ಪ್ರದರ್ಶಿಸಿದರೆಂದಲ್ಲ. 'ಅನಂತರ ಬಂದ ಭಕ್ತರು ಅವರ ತಲೆಗೆ ನೂರಾರು ಪವಾಡಗಳನ್ನು ಕಟ್ಟಿದರಾದರೂ ಅವರು ಸ್ವತಃ ಪವಾಡ ವಿರೋಧಿಗಳು, ಪುರುಷ ಪ್ರಯತ್ನವಾದಿಗಳು'.[22] ಅಂದಿನ ಜನತೆಗೆ ಅವರ ಪ್ರತಿಯೊಂದು ಕಾರ್ಯವೂ ಪವಾಡ ಸದೃಶವಾಗಿ ಕಂಡಿರಬೇಕು. ಅವರ ಘನ ವ್ಯಕ್ತಿತ್ವಕ್ಕೆ ಮಾರುಹೋಗಿ ಜನ ಅವರನ್ನು ದೈವೀ ಪುರುಷ, ಪವಾಡ ಪುರುಷ ಎಂದು ಕೊಂಡಾಡಿರಬೇಕು. ಈ ರೀತಿಯ ಸ್ತುತಿ ಪರವಾದ ಮಾತುಗಳು ಬಾಯಿಂದ ಬಾಯಿಗೆ, ಕಾಲದಿಂದ ಕಾಲಕ್ಕೆ ಹರಿದು ಬಂದಿರಲು ಸಾಕು. ಇಂಥ ಸ್ತುತಿಪರವಾದ ಜನತೆಯ ನುಡಿಗಳನ್ನೇ ಸಂಗ್ರಹಿಸಿ ಕವಿಗಳು, ಪುರಾಣಕಾರರು ಅವರ ಚರಿತ್ರೆಯನ್ನು ರಚಿಸಿದರು. ಶರಣರ ಚರಿತ್ರೆಯಲ್ಲಿ

ಜ್ಞಾನಗಳನ್ನು ಸೂಚಿಸುತ್ತವೆ. ಕ್ರಿಯೆ-ಜ್ಞಾನಗಳ ಸಾಮರಸ್ಯದ ಅರಿವು ನನಗೆ ಬಸವಣ್ಣನಿಂದಾಯಿತು ಎಂದೂ ಸಿದ್ಧರಾಮನು ನುಡಿದಿರುವನು. ರೂಪಕಮಯವಾದ ಈ ಮಾತಿನಿಂದ ಪ್ರೇರಿತರಾಗಿ ವೀರಶೈವ ಕವಿಗಳು ತಮ್ಮ ಪುರಾಣಗಳಲ್ಲಿ. ಬಸವಣ್ಣನವರು [illegible] ಕಾಲಿಲ್ಲದವರಿಗೆ ಕಾಲುಕೊಟ್ಟು-ಕಣ್ಣಿಲ್ಲದವರಿಗೆ ಕಣ್ಣುಕೊಟ್ಟು ಪವಾಡ ಕಥೆಗಳನ್ನು ಕಟ್ಟಿ ವರ್ಣಿಸಿರುವಂತಿದೆ

20. ಹಿರೇಮಠ, ಆರ್.ಸಿ. (ಸಂ) : ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು. (ವ-891)
21. ಜವಳಿ, ಬಿ.ಡಿ.: 'ಧರ್ಮಭಂಡಾರಿ ಬಸವಣ್ಣನವರು.' ಪ್ರಸ್ತಾವನೆ. (ಪುಟ-viii)
22. ತಿಪ್ಪೇರುದ್ರಸ್ವಾಮಿ, ಎಚ್. : 'ವಚನಸಾಹಿತ್ಯ-ವೈಚಾರಿಕ ಅಧ್ಯಯನ' (ಪುಟ-33)

ಪವಾಡಕಥೆಗಳನ್ನು ಹಾಸುಹೊಕ್ಕಾಗಿ ನೆಯ್ದು ಅವರೆಲ್ಲರನ್ನು ಪವಾಡಪುರುಷರನ್ನಾಗಿಸಿದರು. ಸಾಮಾನ್ಯ ಜನ ಅವರ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿ ಪೂಜಿಸತೊಡಗುವಂತೆ ಮಾಡಿದರು. ಈ ರೀತಿ ಪುರಾಣಕಾರರು ಸಾಮಾನ್ಯ ಜನರ ಮನೋಮಂದಿರದಲ್ಲಿ ಶರಣರು ದೇವರಾಗಿ ರಾರಾಜಿಸುವಂತೆ ಮಾಡಿದರು.

ಚೆನ್ನಬಸವಣ್ಣನವರು ಶರಣ ಕಕ್ಕಯ್ಯಗಳ ಪ್ರಸಾದದಿಂದ ಜನಿಸಿದರೆಂದು ಪವಾಡಕಥೆಯೊಂದು ವರ್ಣಿಸುತ್ತದೆ. ವಾಸ್ತವಿಕತೆಗೆ ಬಹುದೂರವಾದ, ವಿಚಿತ್ರವೆನ್ನಿಸುವ 'ಇಂತಹ ಕಥೆಗಳು ಪ್ರಾಯಂಶಃ ಎಲ್ಲ ಮತಧರ್ಮಗಳ ಸಾಹಿತ್ಯದಲ್ಲಿಯೂ ಕಾಣಸಿಗುವವು. ಇವುಗಳ ನಿರೂಪಣೆಯ ಹಿನ್ನೆಲೆಯಲ್ಲಿ ಅಡಕವಾಗಿರುವ ತತ್ವ ತಂತಮ್ಮ ಮತಧರ್ಮಗಳ ಮಹಾಪುರುಷರು ಅಯೋನಿಜರೆಂದು, ಅಲೌಕಿಕ ರೀತಿಯಿಂದ ಜನಿಸಿದರೆಂದು ಸಾಧಿಸುವುದೇ ಆಗಿದೆ'.[23] ಬಸವಣ್ಣನವರು ತಮ್ಮ ವಚನವೊಂದರಲ್ಲಿ,

"ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ
....
....
ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ"[24]

ಎಂದು ಲೋಕಸತ್ಯವನ್ನು ತೀಕ್ಷ್ಣವಾಗಿ ವ್ಯಕ್ತಪಡಿಸುವುದರ ಜೊತೆಗೆ ವೈಚಾರಿಕತೆಗೆ ಮಾನ್ಯತೆಯಿತ್ತು ಪವಾಡಗಳನ್ನು ಕಡೆಗಣಿಸಿ ನುಡಿದಿದ್ದಾರೆ. ಪ್ರಭುದೇವರು ತಮಿಳು ಪುರಾತನರನ್ನು ಕುರಿತಿದ್ದ ಪವಾಡ ಕಥೆಗಳನ್ನು ಕೇಳಿ ಭಾವುಕಭಕ್ತರಿಗೆ, ಮುಗ್ಧ ಜನತೆಗೆ ಹೀಗೆ ಪ್ರಶ್ನಿಸಿದ್ದಾರೆ.

"ಅಂಗನೆಯರ ಮೊಲೆ ಲಿಂಗವೆ, ಬಳ್ಳಲಿಂಗವೆ, ಕಿತ್ತು ಬಪ ಸಾಣೆ ಲಿಂಗವೆ
ಆಡಿನ ಹಿಕ್ಕಿ ಲಿಂಗವೆ, ಮೆಚ್ಚುವರೆ ಪ್ರಮಥರು ಮೆಚ್ಚುವರೆ ಪುರಾತನರು"

ಭಾವುಕ ಭಕ್ತರು ಜಡಮೋಹದ ನಿದ್ರೆಯಿಂದೆಚ್ಚೆತ್ತು ವಾಸ್ತವ ಲೋಕದಲ್ಲಿ ಕಣ್ದೆರೆದು ಬಾಳಬೇಕೆಂಬುದು ಅವರ ಆಶಯವಾಗಿದೆ.

"ಬರಡು ಕರೆವಾಗ ಈಯಿತ್ತೆ ?
ಆ ಕೊರಡು ಚಿಗುರುವಲ್ಲಿ ಹುಟ್ಟಿತ್ತೆ ?
ಆಗ ತೃಣ ನುಡಿವಲ್ಲಿ ಆತ್ಮ ಜೀವಿಸಿತ್ತೆ ?
ಆಗ ಕಾಷ್ಠವೇಷವೆದ್ದು ನಡೆವಲ್ಲಿ ಅರಿವು ಕರೆಗೊಂಡಿತ್ತೆ ?
ಇಂತಿವು ವಿಶ್ವಾಸದ ಹಾಹೆ ....
....
ಮಾತುಳಂಗ ಮಧುಕೇಶ್ವರನು"[26]

---

23. ಹಿರೇಮಠ, ಆರ್.ಸಿ. : 'ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು,' (ಪುಟ40-41) ಕ.ವಿ.ವಿ, 1965,
24. ಹಿರೇಮಠ, ಆರ್.ಸಿ. (ಸಂ) : ಭಕ್ತಿಭಂಡಾರಿ ಬಸವಣ್ಣನವರ ವಚನಗಳು, (ವಚನ-589)
25. ಸುಂಕಾಪುರ. ಎಂ.ಎಸ್. (ಸಂ) : ಸಕಲ ಪುರಾತನರ ವಚನಗಳು, (ವ-1345)
62. ಸುಂಕಾಪುರ, ಎಂ.ಎಸ್. (ಸಂ) : ಸಕಲ ಪುರಾತನರ ವಚನಗಳು, (ವ–1145)

ಬಸವಣ್ಣನವರನ್ನು ಕುರಿತು ಅನಂತರ ಹುಟ್ಟಿಕೊಂಡ ಪವಾಡ ಕಥೆಗಳಿಗೆ ಭಕ್ತ ಜನತೆಯ ಶ್ರದ್ಧೆ, ವಿಶ್ವಾಸಗಳೇ ಕಾರಣವೆಂದು ದಾಸೋಹದ ಸಂಕಣ್ಣಗಳು ತಮ್ಮ ಮೇಲಿನ ವಚನದಲ್ಲಿ ಮೊದಲೇ ನುಡಿದಿರುವಂತಿದೆ. (ಈ ವಚನವನ್ನು ಅನಂತರ ಬೇರೆಯವರು ಬರೆದು ಅವರ ಹೆಸರಿಗೆ ಸೇರಿಸಿರುವ ಸಾಧ್ಯತೆಯೂ ಇದೆ.)

ಹೀಗೆ ವಾಸ್ತವತೆಗೆ ಪ್ರಾಧಾನ್ಯವಿತ್ತ, ಸ್ವತಂತ್ರ ವಿಚಾರಶೀಲರಾದ ಶರಣರು, ವೀರಶೈವ ಕವಿಗಳು, ಪುರಾಣಕಾರರು ವರ್ಣಿಸಿರುವಂತೆ, ಪವಾಡಗಳಂತಹ ಅತಿ ಮಾನುಷ ಕಾರ್ಯಗಳನ್ನೆಸಗಿದರೆನ್ನುವುದು–ಹುರುಳಿಲ್ಲದುದು. ಪವಾಡ ವಿರೋಧಿಗಳಾದ, ಮನುಷ್ಯ ಶಕ್ತಿಯಲ್ಲಿ ದೃಢವಾದ ನಂಬುಗೆಯಿಟ್ಟ ಶರಣರು ಹಠಯೋಗಿಗಳನ್ನು, ಹಠಯೋಗ ಸಾಧನೆಯಿಂದ ಸಿದ್ಧಿಸುತ್ತವೆಯೆಂದು ಜನ ನಂಬಿದ ಕ್ಷುದ್ರ ಶಕ್ತಿಗಳನ್ನು ಮತ್ತು ಪವಾಡಗಳಂತಹ ಅತಿಮಾನುಷ ಕಾರ್ಯಗಳನ್ನು ತುಚ್ಛೀಕರಿಸಿ, ನೈಜವಾದ ಜ್ಞಾನ-ಕ್ರಿಯೆಗಳಿಗೆ, ವೈಚಾರಿಕತೆಗೆ ಮಹತ್ವಕೊಟ್ಟಿದ್ದರೆಂಬುದು ಮೇಲಿನ ವಿವೇಚನೆಯಿಂದ ತಿಳಿಯುವುದು.

ಶರಣರು ಪವಾಡಶಕ್ತಿಯೇ ಇರಲು ಸಾಧ್ಯವಿಲ್ಲವೆಂದು ನಂಬಿರಲಿಕ್ಕಿಲ್ಲ. ಇಷ್ಟೊಂದು ಸುದೀರ್ಘ ಅವಧಿಯ ನಂತರ ಇದರ ಬಗೆಗೆ ನಮಗಿಂದು ಆಧಾರಗಳೂ ದೊರಕುತ್ತಿಲ್ಲ. ಪವಾಡ ಸಾಮರ್ಥ್ಯ ಇರಲು ಸಾಧ್ಯವಿದ್ದರೂ ಅದು ಮಹತ್ವದ್ದಲ್ಲವೆಂದು ಮಾತ್ರ ಅವರ ಖಚಿತವಾದ ಅಭಿಪ್ರಾಯವಾಗಿತ್ತೆನ್ನಬಹುದು.

ಅಲದಿ ಮಹಾಂತ ಸ್ವಾಮಿಗಳ ಪುರಾಣ

ವಿ. ಚನ್ನಬಸವಯ್ಯ

ಕರ್ನಾಟಕದ ವೀರಶೈವ ಮಠಗಳ ಇತಿಹಾಸವನ್ನು ಶೋಧಿಸುವ ಕಾರ್ಯ ನಮ್ಮಲ್ಲಿ ಸರಿಯಾಗಿ ನಡೆದಿಲ್ಲ. ಈ ದಿಕ್ಕಿನಲ್ಲಿ ಸಂಶೋಧನೆಯನ್ನು ಕೈಕೊಳ್ಳುವವರಿಗೆ ಹಲವು ತೊಂದರೆಗಳು ಎದುರಾಗುವುದೇ ಇದಕ್ಕೆ ಕಾರಣವೆನ್ನಬಹುದು. ಪ್ರಾಚೀನ ದಾಖಲೆಗಳನ್ನು ಸರಿಯಾಗಿ ಇಡದಿರುವುದು. ಪ್ರವಾದಗಳಿಂದ ಆವೃತವಾದ ಚಾರಿತ್ರ್ಯ–ಚರಿತ್ರ್ಯಗಳು ಕಾರಣವಾಗಿ ವಸ್ತು ವಿಷಯ ಮರೆಮಾಚಿದೆ. ಆದರೆ ಇವುಗಳನ್ನು ವ್ಯವಸ್ಥಿತವಾದ ಅಧ್ಯಯನಕ್ಕೆ ಒಳಪಡಿಸಿದರೆ ಪ್ರಾಚೀನ ಕಾಲದಿಂದಲೂ ನಡೆದುಬಂದ ಅವುಗಳ ದೀರ್ಘ ಇತಿಹಾಸವಲ್ಲದೆ, ವಿದ್ಯಾ ಸಂಸ್ಥೆಯಾಗಿ, ನ್ಯಾಯಸ್ಥಾನವಾಗಿ, ಆಧ್ಯಾತ್ಮದ ಕೇಂದ್ರವಾಗಿ ಪ್ರಸಿದ್ಧಿ ಪಡೆದ ವಿಷಯವೂ ಬೆಳಕಿಗೆ ಬರುವುದು. ಇಂತಹ ಸಂದರ್ಭದಲ್ಲಿ ಮಠಗಳ ಇತರ ದಾಖಲೆಗಳನ್ನೂ ಬಳಸಿಕೊಳ್ಳಬೇಕಾಗುತ್ತದೆ.

ಪ್ರಸ್ತುತ ನಾವು ಗುಲಬರ್ಗ ಜಿಲ್ಲೆಯ ತಾಲೂಕು ಸ್ಥಳವಾದ ಆಳಂದದ ಹಿರೇಮಠದಲ್ಲಿ ದೊರೆತ 'ಅಲದಿ ಮಹಾಂತಸ್ವಾಮಿಗಳ ಪುರಾಣ'ವೆಂಬ ಅಪ್ರಕಟಿತ ಪುರಾಣವನ್ನು ಮತ್ತು ಅದರ ಕವಿ–ಕಾಲ–ದೇಶ–ವಸ್ತು ವಿಚಾರಗಳನ್ನು ವಿವರಿಸುತ್ತಿದ್ದೇವೆ.

'ಅಲದಿ ಮಹಾಂತಸ್ವಾಮಿ ಪುರಾಣ'ದ ಎರಡು ಕಾಗದ ಪ್ರತಿಗಳು ದೊರೆತಿವೆ.[1] ಎರಡೂ ಪ್ರತಿಗಳು ಶುದ್ಧವೂ ಪೂರ್ಣ ಪ್ರಮಾಣದವೂ ಆಗಿವೆ. ಇವುಗಳನ್ನು ಕ್ರಮವಾಗಿ 'ಅ' ಮತ್ತು 'ಕ' ಎಂಬ ಸಂಕೇತಗಳ ಮೂಲಕ ಗುರುತಿಸ

---

1. ನಾನು ಎಂ. ಎ. ಅಂತಿಮ ವರ್ಷದಲ್ಲಿದ್ದ (1985)ವರ್ಷ. ಆಕಸ್ಮಿಕವಾಗಿ ನಮ್ಮ ಮಾವನವರಿಂದ ನನಗೊಂದು ಕಾಗದ ಪ್ರತಿಯ ಪುರಾಣ ದೊರೆಯಿತು. ಅದನ್ನು ಸಂಪಾದನೆ ಮಾಡಿಕೊಡುವಂತೆ ಅವರು ಕೇಳಿಕೊಂಡಿದ್ದರು. ಸಂಪಾದನಾ ಶಾಸ್ತ್ರವನ್ನು ಅಧ್ಯಯನ ಮಾಡುತ್ತಿದ್ದೆನಾದರೂ ಸಂಪಾದಕನಾಗಿ ಕಾರ್ಯ ಮಾಡುವ ಧೈರ್ಯ ನನಗಿರಲಿಲ್ಲ. ಆದ್ದರಿಂದ ವಿದ್ಯಾಗುರುಗಳಾದ ಡಾ. ಬಿ. ವಿ. ಮಲ್ಲಾಪುರ ಅವರನ್ನು ಕಂಡು ಅದನ್ನು ಸಂಪಾದಿಸಿಕೊಡುವಂತೆ ವಿನಂತಿಸಿಕೊಂಡೆ. ಆದರೆ ಅವರು ನನಗೇ ಸಂಪಾದನೆ ಮಾಡುವಂತೆ ಹೇಳಿ ತಾವು ಮಾರ್ಗದರ್ಶನ ಮಾಡುವ ಭರವಸೆಯನ್ನು ಕೊಟ್ಟರು. ಸಂಪಾದನೆಗೆ ಕನಿಷ್ಠ ಎರಡಾದರೂ ಪ್ರತಿಗಳಿರಬೇಕೆಂದು ಭಾವಿಸಿ ಆಳಂದಕ್ಕೆ ಒಮ್ಮೆ ಭೇಟಿ ಕೊಟ್ಟೆ. ಅಲ್ಲಿ ಇನ್ನೊಂದು ಪ್ರತಿಯಲ್ಲದೆ ಮಠದ ವಂಶಾವಳಿಯೂ ದೊರೆಯಿತು.

ಲಾಗಿದೆ. 'ಅ' ಪ್ರತಿ ಸಮಾಪ್ತಿಗೊಂಡ ಮಿತಿ ಹಾಗೂ ಲಿಪಿಕಾರನ ಹೆಸರನ್ನೊಳಗೊಂಡ ಭಾಗ ಹೀಗಿದೆ :

"ಪುರಾಣ ಸಮಾಪ್ತವಾದ ಮಿತಿ – ಇದುವೆ ಮಹಾಂತಪುರಾಣವ ಲಿಖಿಸಿದ
ಮುಂದದೊಳ್ ಬರಿದಗತಕಲಿವತ್ಸರವದು ಪದಿನೆಂಟರ
ನಾಲ್ವತ್ತರ ಮಿತಿ ಅದು ಕಾಳಯುಕ್ತಿ ॥ ಸದಮಲವತ್ಸರ ಮಾಘಮಾಸದಲ್ಲಿ
ಚದುರತ್ವದ ಪಡು ಮಿತಿ ಗುರುವಾರದ ॥ ಮುದದಲಿ ಮೊದಲನೆ ಪ್ರಹರದಿ
ವಿಧಿಸಿದ ವ್ಯಾಖ್ಯದಲಿದು ಸಮ ॥೧॥ ಬರಿದವರಾರೆಂದೆನೆ ವಿರಚಿಸುವೆನು
ವರಗುರು ಚರಣದ ರವಿಯಂಕರಕರ । ಚಿರಕರ ಪುರ ನಂದನಗ್ರಾಮ
ವಿಮರ ಪರತರ ಮಠಕಧಿಕ ॥ ಸ್ಥಿರತುಂಗಾಧರ ಕರುಣೆ ಗಂಗಸಮ–
ನೆರೆನಾಮಂ ರಾಚಾಂಬೆ । ಯುವರ ಪತಿವರಧರ ನೆರೆ ಸಾಂತಾರ್ಯರ
ಗರ್ಭಾಂಕುರವರ ಸಿದ್ಧಲಿಂಗಪ್ಪಾರ್ಯ್ಯಂ ॥ ೨ ॥

'ಕ' ಪ್ರತಿಯನ್ನು ಬರೆದವನ ಹೆಸರು ಮತ್ತು ಕಾಲಗಳ ಉಲ್ಲೇಖ ಹೀಗಿದೆ:

"ಈ ಮಹಂತ ಪುರಾಣ ಬರೆದವ
ರಾಮಹಾಮರರಾಷ್ಟ್ರ ದೊಳ್ಪರ
ನಾಮವಸ ವಾಂದೆಲಿಯ ತಾಲೂಕು ನೆಲ್ಲಿಗೆಯ ಸಮತಾ
ವಾಮ ಬೆಳ್ಳುಂಡಿಗಿಯ ಹಿರೇಮಠ
ಕಾಮಹರ ದೇಶಿಕ ಶಿಖಾಮಣಿ
ನಾಮವೀರ್ಸ್ವಸವಾಮ್ಯನೆಂದರಿವುದು ಬರೆದಮಿತಿಯೂ ॥ ೧ ॥

ಶಾಲಿವಾಹನ ಶಕ ಶತಾಷ್ಟಕ
ಮೂಲ ಸಾವಿರ ಚತುರ್ದಶಾಬ್ದದಿ
ಲೋಲ ಪಾಲ್ಗುಣ ಕೃಷ್ಣ ಪಕ್ಷ ಸುಪಂಚಮಿಯ ದಿನವೂ
ಮೇಲೆನಿಪ ಮಂಗಲಸುವಾರದ
ಲಾಲಿತ ದುಷಃ ಕಾಲ ಸ್ವಾತಿಯ
ಶುಭತಾರೆಯು ಧೃವವಿಯೋಗದಿ ಲಿಖಿತ ಮುಗಿದಿಹುದೂ" ॥ ೨ ॥

ಇದರಿಂದ 'ಅ' ಪ್ರತಿಯನ್ನು ಕ್ರಿ.ಶ. 1918ರಲ್ಲಿ 'ಕ' ಪ್ರತಿಯನ್ನು 1892 ಬರೆದು ಮುಗಿಸಲಾಯಿತೆಂದು ಸ್ಪಷ್ಟವಾಗುತ್ತದೆ.

ಕವಿ-ಕಾಲ-ದೇಶ :

'ಅಲದಿ ಮಹಾಂತಸ್ವಾಮಿಗಳ ಪುರಾಣ'ವನ್ನು ಬರೆದ ಕವಿಯು ತನ್ನ ಹೆಸರನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಆ ಭಾಗ ಹೀಗಿದೆ:

"ಈ ಕವಿತ್ವವ ರಚಿಸಿದವರಾ
ರೇಕ ಮೇವಾದ್ವಿತಿಯ ಬ್ರಹ್ಮವ
ನೇಕ ಚಿತ್ರದಿ ನಿಜವೆ ತಾನೆಂದರಿದ ಮಹಿಮನಿವಂ

ಸಕಲ ದೇಶದೊಳಧಿಕವೆನಿಸುವ
ಸುಕರ ತುರುಷ್ಕ ದೊಳಲದಿ ಪುರದೊಳೆ
ಗಖಿಳ ಜನರೊಳಗಧಿಕವೆನಿಸುವ ಹಿರೆ ಮಠಾಧಿಪನೂ (1-24)

ಸರಗಣಾಚಾರಿಯು ವಿಮಲಗುರು
ವರನಧಿಕ ಘನಲಿಂಗಪಟ್ಟದ
ಚರಕಧಿಕ ಗುರು ಮಹಂತಸ್ವಾಮಿಯ ಕರಕಮಲಜಾತಾ
ಮರಿಮಹಂತನು ಪೇಳ್ದನಿದರೊಳು
....
.............................." (1-25)

ಮೇಲಿನ ಪದ್ಯಗಳಲ್ಲಿ ಹೇಳಿರುವಂತೆ, ಈ ಪುರಾಣದ ಕರ್ತೃ ಅಲದಿ (ಇಂದಿನ ಆಳಂದದ)ಯ ಹಿರೇಮಠದ ಪಟ್ಟಾಧಿಕಾರಿಯಾದ ಮರಿಮಹಂತನು. ಆಳಂದವು ಮುಸಲ್ಮಾನರ ಆಳ್ವಿಕೆಗೊಳಪಟ್ಟ ಪ್ರದೇಶದಲ್ಲಿತ್ತು ಎಂಬುದು 'ತುರುಷ್ಕ'ಪದದಿಂದ ವ್ಯಕ್ತವಾಗುತ್ತದೆ.

ಮರಿಮಹಂತನು ತನ್ನ ಕಾವ್ಯ ಪೂರ್ಣಗೊಂಡ ಮಿತಿಯನ್ನು ಕೊನೆಯ ಸಂಧಿಯಲ್ಲಿ ಕೊಟ್ಟಿದ್ದಾನೆ ಅದು:

ಶ್ರೀಮಹಾನೃಪ ಶಾಲಿವಾಹನ
ರಾಮುವಷ್ಟಶತಂ ಸಹಸ್ರವಿ
ರಾಮು ಚತುರ್ದಶವತ್ಸರಂ ಶ್ರೀನಂದನಾಮದೊಳು
ವಾಮು ಮಾಘವಿ ಶುದ್ಧಪಕ್ಷದೊ
ಳಾ ಮಹಾಚತುರ್ದಶಿ ಭೌಮ ದಿನ
ರಾಮಣೀಯ್ಯಕ ಪ್ರಥಮ ಪ್ರಹರದಿ ಪೂರ್ಣವೀಕವಿತೇ (21-57)

ಇದರ ಪ್ರಕಾರ ಈ ಪುರಾಣವನ್ನು ಕ್ರಿ.ಶ. 1892ರಲ್ಲಿ ಬರೆದು ಮುಗಿಸಲಾಗಿದೆ. 'ಕ' ಪ್ರತಿಯನ್ನು ಮುಗಿಸಿದ ಕಾಲವೂ ಇದೇ ಆಗಿದೆ. ಆದರೆ ವಾರವನ್ನು ತಪ್ಪಾಗಿ ಬರೆದಿದ್ದಾರೆ.

ಪುರಾಣದ ವಸ್ತು ವಿಷಯ :

ಮರಿಮಹಂತನು ತನ್ನ ಮಠದ ಮೂಲ ಪಟ್ಟಾಧಿಕಾರಿಗಳಾದ ಮಹಾಂತ ಸ್ವಾಮಿಗಳ ಚರಿತ್ರೆಯನ್ನು ಹಾಗೂ ಅವರು ಮಾಡಿದ ಕೆಲವು ಪವಾಡಗಳನ್ನು ಇದರಲ್ಲಿ ನಿರೂಪಿಸಿದ್ದಾನೆ. ಭಾಮಿನಿ ಷಟ್ಪದಿಯಲ್ಲಿ ಬರೆಯಲಾದ ಈ ಪುರಾಣದಲ್ಲಿ ಒಟ್ಟು 21 ಸಂಧಿಗಳಿವೆ. ಪದ್ಯಗಳ ಒಟ್ಟು ಸಂಖ್ಯೆ 1315. ಕವಿಯು ಪುರಾಣದಲ್ಲಿ ತಾನು ಹೇಳುವ ಮಾತುಗಳಿಗೆ ಆಧಾರಗಳಾಗಿ ಸಂಸ್ಕೃತ ಗ್ರಂಥಗಳ ಪದ್ಯಗಳನ್ನು ಕೊಟ್ಟಿದ್ದಾನೆ. ಆ ಗ್ರಂಥಗಳೆಂದರೆ - ಛಂದೋಂಬುಧಿ, ಪಾಶುಪತತಂತ್ರ, ಗರುಡ ಪುರಾಣ, ವೀರಾಗಮ, ಗುರುಗೀತ, ಶಿವರಹಸ್ಯ, ಕ್ರಿಯಾಸಾರ, ಶೃತಿ, ಶಿವಾಗಮ,

ವೀರಶೈವ ಪ್ರದೀಪಿಕೆ, ಸ್ವಯಂಭು ಆಗಮ, ಸಿದ್ಧಾಂತ ಶಿಖಾಮಣಿ, ಲಿಂಗಪುರಾಣ ಬ್ರಹ್ಮಾಂಡಪುರಾಣ ಮತ್ತು ಭಗವದ್ಗೀತೆಗಳು.

ಕವಿಯು ಪುರಾಣದ ಆರಂಭದಲ್ಲಿ ಬಸವಣ್ಣ, ಚನ್ನಬಸವಣ್ಣರನ್ನು, ಶಿವಕವಿಗಳಾದ ಹರಿಹರ, ರಾಘವಾಂಕ, ಪಂಡಿತ ಮಲ್ಲಿಕಾರ್ಜುನ, ಭೀಮ, ನಂಜುಂಡರಲ್ಲದೆ ಬಾಣ, ಮಯೂರ, ಮಲುಹಣ, ಕಾಳಿದಾಸ, ಭೋಜರನ್ನೂ ಸ್ತುತಿಸಿದ್ದಾನೆ. ಪ್ರತಿ ಸಂಧಿಯ ಮೊದಲನೆಯ ಪದ್ಯವನ್ನು ಶಿವನನ್ನು ಸ್ತುತಿಸುವುದಕ್ಕಾಗಿಯೇ ಮೀಸಲಿರಿಸಿದ್ದಾನೆ. ಅಲ್ಲದೆ ಪ್ರತಿಸಂಧಿಯ ಕೊನೆಗೆ ಈ ಕೆಳಗಿನ ಪದ್ಯವು ಬರುತ್ತದೆ.

ಇದು ವಿಮಲಗುರು ಪಾದ ಪಂಕಜ
ಮದವಿಷಟ್ಪದಿಯನಿಪ ಶ್ರೀಗುರು
ಸದಮಲಸು ಶಿವಲಿಂಗ ಕರುಣವನೊಲವಿ ದಾಶ್ವಶಿತಾ
ವಿಧಿತವೇದಾಂತಾದಿ ಶಾಸ್ತ್ರವ
ಶೋಧಿಸಿದ ಗುರುಮಹಂತನುಸುರಿದ
ಮುದದಿ ಮೂಲ ಮಹಂತ ಚರಿತೆಯೊ...

ಮಹಾರಾಷ್ಟ್ರದಲ್ಲಿ ಗಂಗಖೇಡ ಎಂಬ ಗ್ರಾಮ. ಅಲ್ಲಿಯ ಶಿವಲಿಂಗಯ್ಯ ಮತ್ತು ಬಸವಮ್ಮರ ಮಗ ಮಹಾಂತ ಸ್ವಾಮಿಯು ರೇಣುಕನಿಂದ (ಕೆಲವುಕಡೆ ರೇವಣಸಿದ್ಧ ಪ್ರಯೋಗವೂ ಇದೆ) ದೀಕ್ಷೆ ಪಡೆದ ಮಹಾಂತಸ್ವಾಮಿಯು ಮುಂದೆ ಆತನೊಂದಿಗೆ ಕಲ್ಯಾಣಕ್ಕೆ ಬರುತ್ತಾನೆ. ಅಲ್ಲಿ ಇವರನ್ನು ಬಿಜ್ಜಳ ದೊರೆಯು ಸತ್ಕರಿಸುತ್ತಾನೆ.

ಮಹಂತಸ್ವಾಮಿಯು ರೇಣುಕನ ಶಿಷ್ಯನಾದ ಕೆಲವು ವರ್ಷಗಳ ಮೇಲೆ ಶಿವಲಿಂಗಯ್ಯ ಮತ್ತು ಬಸವಮ್ಮರಿಗೆ ಗುರುಬಸವ ಹಾಗೂ ಭವಹರ ಎಂಬ ಇಬ್ಬರು ಗಂಡು ಮಕ್ಕಳು ಜನಿಸಿದರು. ಇವರಲ್ಲಿ ಗುರುಬಸವನು ಸಂಸಾರಿಯಾದರೆ ಭವಹರನು ಸನ್ಯಾಸಿಯಾದನು. ಭವಹರನು ಗುರುವನ್ನು ಹುಡುಕುತ್ತಿರುವಾಗ ಬಹುಮನಿಸುಲ್ತಾನನು (ಹೆಸರನ್ನು ಹೇಳಿಲ್ಲ) ಭೆಟ್ಟಿಯಾಗುತ್ತಾನೆ. ಇವರಿಬ್ಬರೂ ಗಂಗಾಬೇಡದಿಂದ ಹೊರಟು ಉಂಬರಗಿಗೆ ಬರುತ್ತಾರೆ. ಅಲ್ಲಿಯ ಸೇನುಬೋವೆಯರ ಮಗ ಮುದ್ದನು ಇವರೊಂದಿಗೆ ಸೇರಿಕೊಳುತ್ತಾನೆ. ಈ ಮೂವರೂ ಕಲ್ಯಾಣಕ್ಕೆ ಬರುತ್ತಾರೆ. ಅಲ್ಲಿಯ ಸದಾನಂದನ ಮಠದ ಸ್ವಾಮಿಗಳನ್ನೇ (ಹೆಸರನ್ನು ಹೇಳಿಲ್ಲ) ತಮ್ಮ ಗುರುಗಳೆಂದು ಸ್ವೀಕರಿಸಿ, ಅವರಿಂದ ಉಪದೇಶವನ್ನು ಪಡೆದುಕೊಂಡರು.

ರೇಣುಕನ ನಂತರ ಘನಲಿಂಗರುದ್ರಮುನಿಯು ಮತ್ತು ಈತನ ನಂತರ ಈತನ ಶಿಷ್ಯನಾದ ಮಹಾಂತಸ್ವಾಮಿಯು ಪಟ್ಟಕ್ಕೆ ಬಂದರು. ಮಹಾಂತಸ್ವಾಮಿಗಳು ನಂದಗ್ರಾಮದಲ್ಲಿರುವಾಗ ಒಂದು ದಿನ ಜೈನ ಮುನಿಯು ದಾರಿಯಲ್ಲಿ ತೆಂಗಿನಕಾಯಿಯನ್ನು ಮಂತ್ರಿಸಿ ಹಾಕಿದನು. ಮಹಾಂತಸ್ವಾಮಿಯು ಅದನ್ನು ದಾಟಿದಾಗ ಆತನಿಗೆ

ಏನೂ ಆಗಲಿಲ್ಲ. ಬದಲಿಗೆ ಜೈನ ಮುನಿಯೇ ರಕ್ತಕಾರಿಕೊಳ್ಳತೊಡಗಿದನು. ನಂತರ ಆತನನ್ನು ಕ್ಷಮಿಸಿ ಮಹಾಂತನು ಗುಣಪಡಿಸಿದನು. ಆಗ ಊರಿನ ಜನರೆಲ್ಲ ಬಂದು ಮಹಾಂತನಿಗೆ ನಮಸ್ಕರಿಸಿ ಅಲ್ಲಿ ಒಂದು ಮಠವನ್ನು ಕಟ್ಟಿಸಿ, ಅದರ ಆದಾಯಕ್ಕಾಗಿ ಕೆಲವು ತೆರಿಗೆಗಳನ್ನು ಬಿಟ್ಟರು. ಈ ಭಾಗದಲ್ಲಿ ಬರುವ ಪದ್ಯಗಳು ಗಮನೀಯ ವಾಗಿವೆ.

"ಮದದಿ ಬರಸಿದರೆಂತೆನೆನಲು ಶ್ರೀ
ಸದಮಲನೃಪ ಶಾಲಿವಾಹನ
ವದವಿದ ಸಹಸ್ರಾಸ್ವನಿಧಿ ಶತ ಪಿಂಗಳಾಬ್ದದಲೀ
ಪುದಿದು ಹಿರೆಮಠವಿದಕೆ ಕ್ಷೇತ್ರವು
ತದಮಿತದೊಳಚ್ಚರ ವೃತ್ತಿಯು
ವಧಿಕ ವಾಗಿಯೆ ತೀರ್ಥಗಾಣಿಕೆ ಕಲಶಗಾಣಿಕೆಯೂ" (13-47)

ಇದಲ್ಲದೆ ಉಡಿಕೆ–ಬಿಡಿಕೆ, ಹಳಿದ್ರ, ತೈಲ, ವಸ್ತ್ರ, ವೀಳೆ, ಲಿಂಗಧಾರಣ, ಹೋಮ, ಪ್ರಯಾಣ, ನ್ಯಾಯ, ಪ್ರಾಯಶ್ಚಿತ್ತ ವೊದಲಾದ ಕಾರ್ಯಗಳಲ್ಲಿ ಬರುವ ಸುಂಕದಾ ದಾಯವನ್ನು ಮಠಕ್ಕೆ ಬಿಟ್ಟರು.

ಮಹಾರಾಷ್ಟ್ರದ ಪಂಡರಿ ವಿಷಯದಲ್ಲಿರುವ ಚನ್ನಿಗಾಯಿ ಚನ್ನಪುರದ ಹಿರಿ ಪ್ರಭುಗಳಾದ ಗಾಯೊಂಡ ಖಂಡೆರಾಯರು ಮತ್ತು ಈತನ ತಮ್ಮ ಜಾಯೊಂಡರು ಭೀಮಾನದಿಯನ್ನು ದಾಟಿಬಂದು ಹಿರಿಯ ಪಳ್ಳಿಯಲ್ಲಿ ನೆಲೆಸಿದರು. ಇವರು ಮುತ್ತುಗಳ ವ್ಯಾಪಾರಕ್ಕೆಂದು ವಿಜಯಪುರ (ವಿಜಾಪುರ)ಕ್ಕೆ ಹೋಗುತ್ತಿದ್ದರು. ಒಂದು ವಿಶೇಷ ಮುತ್ತಿನ ರಹಸ್ಯವನ್ನು ವಿವರಿಸಿದ್ದಕ್ಕಾಗಿ ಬಾದಶಹನಿಂದ ಜಹಗೀರನ್ನು ಪಡೆದು ಆ ಪ್ರದೇಶವನ್ನು ಆಳತೊಡಗಿದರು. ಮುಂದೆ ಗಾಯೊಂಡನು ಅಲದಿಯ ಮಹಾಂತಸ್ವಾಮಿಯಿಂದ ದೀಕ್ಷೆಯನ್ನು ಪಡೆದು ಆತನ ಶಿಷ್ಯನಾದನು.

ಮಹಾಂತಸ್ವಾಮಿಗೆ ಬೇರೆ ಬೇರೆ ಊರುಗಳ ಭಕ್ತರು ತಮ್ಮ ತಮ್ಮ ಊರು ಗಳಲ್ಲಿ ಮಠಗಳನ್ನು ಕಟ್ಟಿಸಿಕೊಟ್ಟರು. ಅವು ಅಲದಿ, ಹಂಗರಗಿ, ಹತ್ತರಕಿ, ಹಿಪ್ಪರಿಗೆ ಬಟಗೇರಿ, ಬಾಲಖೇಡ, ಚಿಂತಕೋಟಿ, ಗಿಲಿಕಿ, ಚೊಂಚನೂರು, ಅಡಕೆ, ಅಷ್ಟಂದ, ಬೈನೂರು, ಹಲಕರಟಿ, ಹಸರಗುಂಡಿಗಿ, ಕಂಗಟಿ, ರಂಜೇರಿ, ಶಾಪುರ, ಜಾಲವಾದಿಗೆ ಗ್ರಾಮಗಳು.

ಮೇಲೆ ಹೇಳಿರುವ ಮಠಗಳಿಗೆ ಮಹಾಂತಸ್ವಾಮಿಗಳು ಬೇರೆ ಬೇರೆ ಮರಿಗಳನ್ನು ನೇಮಕಮಾಡಿದರು. ಅವರೆಂದರೆ ಅಲದಿ ಮಠಕ್ಕೆ ಮಹಾಂತನನ್ನು (?) ಬಾಲಖೇಡ, ಚಿಂತಕೋಟಿ, ಗಿಲಕಿ, ಹಿಪ್ಪರಿಗೆ, ಹತ್ತರಕಿ ಮತ್ತು ಬಟಗೇರಿಗಳಿಗೆ ಜಬ್ಬನನ್ನು, (ಹೆಸರನ್ನು ಹೇಳಿಲ್ಲ ಬಹುಶಃ ನಾರಾಯಣಪುರದ ಚರನಿರಬೇಕು), ಅಡಕೆ ಮತ್ತು ಚೊಂಚನೂರಿಗೆ ಸಿದ್ದಮಲ್ಲದೇಶಿಕರನ್ನು, ಬೈನೂರಿಗೆ ಶಿವಲಿಂಗ ಮರಿಯನ್ನು,

ಹಲಕರಟಿಗೆಗೆ ಪಾವಡಿಯ ಮರಿ ಮಹೇಶನನ್ನು, ಹಸರಗುಂಡಿಗಿಗೆ ಚನ್ನಬಸವನನ್ನು, ಕಂಗಟಿಗೆ ಬಸವಲಿಂಗನನ್ನು, ರಂಜೇರಿಗೆ ಶಿವಲಿಂಗದೇಶಿಕರನ್ನು ಜಾಲವಾದಿಗಿಗೆ ಮಡಿವಳ ಮರಿಯನ್ನು ನೇಮಿಸಿದರು.

ಗುಂಡಲಗೇರಿಯ ಸಿದ್ಧಪ್ರಭುವು ಮಹಾಂತಸ್ವಾಮಿಗಳ ಶಿಷ್ಯನಾಗಿದ್ದನು. ಒಮ್ಮೆ ಈತನು ಗುರುಗಳ ಸೇವೆಯಲ್ಲಿರುವಾಗ ವಿಜಯಪುರದ ಬಾದಶಹನು ಕರೆಯ ಕಳಿಸಿದನು. ಬಾದಶಹನ ಸೈನ್ಯದ ಅಧಿಕಾರಿಯಾದ ಸಿದ್ಧ ಪ್ರಭು ಗುರುಗಳ ಅಪ್ಪಣೆಯನ್ನು ಪಡೆದು ಅರಸನಲ್ಲಿಗೆ ಹೋದನು. ಬಾದಶಹನ ಅಪ್ಪಣೆಯಂತೆ ಅವನು ಆತನೊಂದಿಗೆ ಬೇಟೆಗೆ ಹೋದನು. ಕಾಡಿನ ಮಧ್ಯದಲ್ಲಿ ಗಂಟೆ ಜಾಗಟೆಗಳ ಶಬ್ದವನ್ನು ಕೇಳಿದ ಅರಸನು ಅದರ ಬಗ್ಗೆ ಪ್ರಶ್ನಿಸಿದನು. ಅದಕ್ಕೆ ಸಿದ್ಧಪ್ರಭು ಅವರು ತಮ್ಮ ಗುರುಗಳೆಂದೂ ಮತ್ತು ಈಗ ಪೂಜೆಗೆ ಕುಳಿತಿರುವರೆಂದೂ ತಿಳಿಸಿದನು. ಮಹಾಂತಸ್ವಾಮಿಗಳನ್ನು ಉದಾಸೀನತೆಯಿಂದ ಭಾವಿಸಿ ತಾನು ಬೇಟೆಯಾಡಿದ ಪ್ರಾಣಿಯ ಮಾಂಸವನ್ನು ಪ್ರಸಾದಕ್ಕೆಂದು ಕಳಿಸಿಕೊಟ್ಟನು. ಸ್ವಾಮಿಗಳ ಕೃಪೆಯಿಂದ ಮಾಂಸದ ತುಂಡುಗಳು ಮಲ್ಲಿಗೆಯ ಹೂವುಗಳಾದವು ಇದರಿಂದ ಪಶ್ಚಾತ್ತಾಪಪಟ್ಟ ಬಾದಶಹನು ಕ್ಷಮೆ ಕೋರಿದನು. ಅಲ್ಲದೆ ತನ್ನ ಆಳ್ವಿಕೆಯಲ್ಲಿಯ ನಂದವಾಡಿಗಿಯನ್ನು ಮಾನ್ಯವಾಗಿ ಕೊಟ್ಟನು. ನಂದವಾಡಿಗಿ, ಕನಕಗಿರಿ, ಇದ್ದಲಗಿ, ಇಲಕಲ್ಲ ಮತ್ತು ಕ್ಯಾತನಟ್ಟಿಗಳಲ್ಲಿ ಮಠಗಳನ್ನು ಸ್ಥಾಪಿಸಿಕೊಟ್ಟನು. ಮಹಾಂತಸ್ವಾಮಿಗಳು ನಂದಗ್ರಾಮ (ನಂದವಾಡಿಗಿ)ಕ್ಕೆ ಮಹಾಂತನನ್ನು, ಇಲಕಲ್ಲು ಮತ್ತು ಇದ್ದಲಗಿ ಮಠಗಳಿಗೆ ಗುರುಲಿಂಗ ಸಂಗಯ್ಯರನ್ನು, ಕ್ಯಾತನಟ್ಟಿಗೆ ಕೆಂಪದ ಅಯ್ಯನನ್ನು, ಕನಕಗಿರಿ ಹಾಗೂ ಕುಪಲಿಗೆ ಸ್ವಾಮಿ ಚನ್ನಶಿವಲಿಂಗರನ್ನು ಮರಿಗಳಾಗಿ ನೇಮಿಸಿದರು.

ನಂದವಾಡಿಗಿ ಗ್ರಾಮದಲ್ಲಿ ಮಹಾಂತಸ್ವಾಮಿಯು ಮರಿಯೊಂದನ್ನು ಬಿಟ್ಟನಂತೆ. ಈ ಮರಿಯು ಅಲ್ಲಿಯ ಮಠದಲ್ಲಿ ಶಿವಪುರಾಣವನ್ನು ಆರಂಭಿಸಿದನಂತೆ. ಹೀಗೆ ಪುರಾಣ ಪ್ರಾರಂಭಿಸಿದ ಮರಿ ಉರಿಲಿಂಗದೇವನೆಂದು ಪುರಾಣವು ಹೇಳುತ್ತದೆ. ಉರಿಲಿಂಗದೇವನು ಕೆಳವರ್ಗದವನಾದ ಪೆದ್ದಿಗೆ ಲಿಂಗದೀಕ್ಷೆಯನ್ನು ಕೊಡಲು ಹಿಂದೆ ಮುಂದೆ ನೋಡಿದನು. ಏಕೆಂದರೆ 'ನಂದರಾಜನ ಭವಿಷ್ಯ' ಆತನನ್ನು ಹಾಗೆ ಮಾಡಲು ಬಿಡಲಿಲ್ಲ. ಆದರೆ ಪೆದ್ದಿಯು ಪ್ರತಿದಿನ ಪೀಡಿಸುವುದರಿಂದ ಬೇಸರಗೊಂಡ ಉರಿಲಿಂಗದೇವನು ಪಕ್ಕದಲ್ಲಿದ್ದ ಗುಂಡನ್ನೊಂದು ಒಗೆದು 'ಅವುಜಾವೇ'ಂದನು. ಅಂದಿನಿಂದ ಪೆದ್ದಿಗೆ ಕಲ್ಲುಗುಂಡೇ 'ಲಿಂಗ' 'ಅವುಜಾವೇ' ಮಂತ್ರವಾದವು.

ನಂದವಾಡಿಗಿಗೆ ಬರ ಬಂದಾಗ ನಂದರಾಜನು ಕೆರೆಯನ್ನು ಅಗೆಸತೊಡಗಿದನು. ಆದರೂ ನೀರು ಬರಲಿಲ್ಲ. ಕೊನೆಗೆ ಅರಸನು ಪ್ರತಿಯೊಂದು ಮನೆಗೂ ಸರತಿಯ ಪ್ರಕಾರ ಅಗೆಯುವ ಆಜ್ಞೆ ಹೊರಡಿಸಿದನು. ಒಂದು ದಿನ ಮಠದ ಸರತಿ ಬಂದಿತು.

ಉರಿಲಿಂಗದೇವರು ಚಿಂತಾಕ್ರಾಂತರಾದರು. ಗುರುವಿನ ಚಿಂತೆಯ ಕಾರಣವನ್ನು ತಿಳಿದ ಪೆದ್ದಿಯು ತಾನೇ ಕೆರೆಯನ್ನು ಅಗೆಯಲು ಹೋದನು. ಕೆರೆಯ ಕಲ್ಲಿನ ಮೇಲೆ ತನ್ನ ಲಿಂಗವನ್ನು ಇಟ್ಟು ತಾನು ದೂರದಲ್ಲಿ ನಿಂತು ಆವುಜಾವೆಂದನು. ಕೂಡಲೆ ಸಿಡಿಲಿನ ಬಾಣದಂತೆ ಶಬ್ದಮಾಡುತ್ತ ಲಿಂಗವು ಬಂದಾಗ ಕೆರೆಯಲ್ಲಿ ನೀರು ಬರತೊಡಗಿತು. ಇದನ್ನು ಕಂಡ ಅರಸ ಮತ್ತು ಊರಿನ ಜನರು ಸಂತೋಷಪಟ್ಟರು. ಮತ್ತು ಪೆದ್ದಿಯ ಗುಣಗಾನ ಮಾಡಿದರು. ಅಷ್ಟರಲ್ಲಿ ಕೈಲಾಸದಿಂದ ಬಂದ ವಿಮಾನವು ಉರಿಲಿಂಗದೇವ ಮತ್ತು ಪೆದ್ದಿಯರನ್ನು ಕೈಲಾಸಕ್ಕೆ ಕರೆದೊಯ್ದಿತು.

ಪೆದ್ದಿಯ ಪವಾಡವನ್ನು ಹಂಪೆಯಲ್ಲಿದ್ದ ಮಹಾಂತಸ್ವಾಮಿಯು ಕೇಳಿ ಸಂತೋಷಪಟ್ಟನು. ಮುಂದೆ ಮಹಾಂತನು ಗೋಕರ್ಣಕ್ಕೆ ಹೋದಾಗ ಸ್ವಾದಿಯ ಅರಸ (ಹೆಸರನ್ನು ಹೇಳಿಲ್ಲ)ನು ಅವರನ್ನು ತನ್ನ ಪಟ್ಟಣಕ್ಕೆ ಕರೆದುಕೊಂಡು ಹೋದನು. ತನ್ನ ಆಳ್ವಿಕೆಗೆ ಒಳಪಟ್ಟ ಯಲ್ಲಾಪುರದಲ್ಲಿ ಒಂದು ಮಠವನ್ನು ಕಟ್ಟಿಸಿಕೊಟ್ಟನು. ಅಲ್ಲದೆ ಹಾವೇರಿ, ಸಿದ್ಧಗಿರಿ, ಚಿಕ್ಕಲಿಕೆ ಗ್ರಾಮಗಳ ಭಕ್ತರು ಕಟ್ಟಿಸಿಕೊಟ್ಟ ಮಠಗಳನ್ನು ಸ್ವೀಕರಿಸಿ ಅಲ್ಲಿ ಮರಿಗಳನ್ನು (ಹೆಸರನ್ನು ಹೇಳಿಲ್ಲ) ಬಿಟ್ಟನು.

ಮಹಾಂತಸ್ವಾಮಿಯು ಸ್ವೀಕರಿಸಿದ ಒಟ್ಟು ಮಠಗಳು ಮೂವತ್ತೆರಡು. ಇವುಗಳಲ್ಲಿ ಪ್ರಧಾನಮಠ ಸುಂದಗ್ರಾಮದ್ದು. ಆಯಾ ಮಠಗಳಿಗೆ ನೇಮಕಗೊಂಡ ಮರಿಗಳು ಆರ್ಥಿಕ ಹಾಗೂ ಧಾರ್ಮಿಕ ಚಟುವಟಿಕೆಗಳಿಂದ ಸ್ವತಂತ್ರರಾಗಿದ್ದರೂ ಅವರೆಲ್ಲ ಪ್ರಧಾನ ಮಠದ ಸ್ವಾಮಿಗಳಿಗೆ ಅಧೀನರಾಗಿ,ಅವರ ಸಲಹೆ ಸೂಚನೆಗಳನ್ನು ಪಡೆದು ಮುನ್ನಡೆಯಬೇಕಾಗುತ್ತದೆ.

ಮಹಾಂತಸ್ವಾಮಿಗಳು ತಮ್ಮ ಶಿಷ್ಯರಾದ ಮರಿಮಹಾಂತಸ್ವಾಮಿಗಳಿಗೆ ಪಟ್ಟ ಮತ್ತು ಚರಟ ಅಧಿಕಾರವನ್ನುಕೊಟ್ಟು ಮುಂದಿನ ಪೀಠಾಧಿಪತಿಗಳನ್ನಾಗಿ ಮಾಡಿದರು. ಈ ಸಮಯದಲ್ಲಿ ಸರಕಾರಿ ಕಾಜಿಗಳು, ದೇಶಮುಖ-ದೇಶಪಾಂಡೆ-ಗೌಡರು ಹಾಜರಿದ್ದು ಪತ್ರಕ್ಕೆ ಸಾಕ್ಷಿಯ ರುಜು ಹಾಕಿದರು. ಅಧಿಕಾರವನ್ನು ಕೊಟ್ಟಮೇಲೆ ಗುರುಗಳು ಮರಿಮಹಾಂತಸ್ವಾಮಿಗಳಿಗೆ ನಿಜಗುಣ ಶಿವಯೋಗಿಗಳು ತಮ್ಮ 'ಕೈವಲ್ಯ'ದಲ್ಲಿ ಬರೆದಿರುವದನ್ನು ತಿಳಿಸಿ ಹೇಳಿದರಂತೆ.

ಕೆಲವು ದಿನಗಳ ಮೇಲೆ ಮೋತಿಸೆಟ್ಟಿ ಮೊದಲಾಗಿ ಇತರ ಭಕ್ತರು ಮಠಕ್ಕೆ ಬಂದು ಮಹಾಂತಸ್ವಾಮಿಗಳಿಗೆ ನಮಸ್ಕರಿಸಿ ರೇಣುಕನ ಜನ್ಮವೃತ್ತಾಂತವನ್ನು ಹೇಳುವಂತೆ ಕೇಳಿಕೊಂಡರು. ಭಕ್ತರ ಇಚ್ಛೆಯಂತೆ ಗುರುಗಳು ರೇಣುಕನ ಜನನ ಮೊದಲಾಗಿ ವಿವರವಾಗಿಯೇ ಆತನ ಸಾಧನೆಗಳನ್ನು ಹೇಳತೊಡಗಿದರು. ಒಂದು ಸಲ ರೇಣುಕನು (ಈ ಭಾಗದ ಕೆಲವು ಕಡೆ ರೇವಣಸಿದ್ಧನೆಂದೂ ಹೇಳಲಾಗಿದೆ)

ಮಂಗಳವೇಡೆಗೆ ಬಂದಾಗ ಬಿಜ್ಜಳನು ಆತನನ್ನು ಸತ್ಕರಿಸಿ, ತನ್ನ ಮಗಳನ್ನು ಕೊಟ್ಟು ಮದುವೆಯನ್ನು ಮಾಡಿದನು. ಮುಂದೆ ರೇಣುಕನು ಚೋಳ ಮಂಡಲಕ್ಕೆ ಹೋದಾಗ ರಾಜೇಂದ್ರಚೋಳನು ತನ್ನ ಮಗಳಾದ ಸೌಂದರ ದೇವಿಯನ್ನು ಆತನಿಗೆ ಕೊಟ್ಟು ಮದುವೆ ಮಾಡಿದನು. ಇವರಿಬ್ಬರ ಮಗನೇ ಘನಲಿಂಗ ರುದ್ರಮುನಿಯು. ಮುಂದೆ ಆತನಿಗೆ ಪಟ್ಟಾಭಿಷೇಕವನ್ನು ಮಾಡಿದನು. ಅಲ್ಲದೆ ರೇಣುಕನು ರುದ್ರಮುನಿಯೊಂದಿಗೆ ಮಹಾಂತಸ್ವಾಮಿಯನ್ನೂ ಅಲ್ಲಿರಿಸಿ ಇಬ್ಬರಿಗೂ ಹರಸಿದನು, ಎಂಬ ಕಥೆಯನ್ನು ಅವರು ಹೇಳಿದರು.

ಮಹಾಂತಸ್ವಾಮಿಗಳು ಅಲದಿ ಗ್ರಾಮದಲ್ಲಿದ್ದಾಗ ಭಕ್ತಾದಿಗಳು ಮಠಕ್ಕೆ ಬಂದು ತಮ್ಮ ತಮ್ಮ ಇಷ್ಟಾರ್ಥಗಳನ್ನು ಸಲ್ಲಿಸಿ ಹೋಗುತ್ತಿದ್ದರು. ಕೆಲವು ದಿನಗಳ ಬಳಿಕ ತಾವು ಯೋಗದಲ್ಲಿ ಕೂಡುವುದಾಗಿ ಹೇಳಿದರು. ತಮ್ಮ ಶಿಷ್ಯನಾದ ಮರಿಮಹಾಂತನನ್ನು ಹತ್ತಿರಕ್ಕೆ ಕರೆದು ಮುಂದೆ ಇಲ್ಲಿಗೆ 'ಯತಿಪತಿ ಜಿತೇಂದ್ರಿ'ಯೊಬ್ಬನು ಬರುವನು. ಆತನನ್ನು ಕಂಡು ನಾವು ಐಕ್ಯವಾಗುತ್ತೇವೆಂದು ಹೇಳಿದರು. ನಂತರ ಊರ ಪಶ್ಚಿಮದ ಪವಿತ್ರ ಸ್ಥಳದಲ್ಲಿ ಯೋಗಾಸೀನರಾದರು. ಭಕ್ತಾದಿಗಳು ಅವರು ಕುಳಿತ ಸ್ಥಳದಲ್ಲಿ ಕಾಯಿ-ಕರ್ಪೂರಗಳನ್ನು ಮಾಡಿಸತೊಡಗಿದರು. ಆಮೇಲೆ ಭಕ್ತಾದಿಗಳು ಮರಿಮಹಾಂತನನ್ನೇ ಪೀಠದ ಮೇಲೆ ಕೂಡಿಸಿದರು.

ಕೆಲವು ದಿನಗಳ ಮೇಲೆ 'ಲಾಡ್ಲೆಮಶಾಯಕರು' ಅಲದಿಗೆ ಬಂದರು. ಅವರು ಮಹಾಂತಸ್ವಾಮಿಗಳು ಯೋಗದಲ್ಲಿ ಕುಳಿತ ಸ್ಥಳದಲ್ಲಿಯೇ ಬೀಡುಬಿಟ್ಟರು. ಮುಂದೆ ಒಂದು ದಿನ ಮರಿಮಹಾಂತನು ತಮ್ಮ ಗುರುಗಳ ದರ್ಶನ ಪಡೆಯುವುದಕ್ಕಾಗಿ ಶಿಷ್ಯ ಸಮೂಹದೊಂದಿಗೆ ಪಲ್ಲಕ್ಕಿಯಲ್ಲಿ ಕುಳಿತು ಹೊರಟನು. ದಾರಿಯಲ್ಲಿ ಲಾಡ್ಲೆಮಶಾಯಕರ ಭಕ್ತರು ಇವರನ್ನು ತಡೆದು ನಿಲ್ಲಿಸಿದರು. ಲಾಡ್ಲೆ ಮಶಾಯಕರ ಮಾತಿನಂತೆ ಮರಿಮಹಾಂತನು ಪಲ್ಲಕ್ಕಿ ಸಮೇತನಾಗಿ ಆಕಾಶಮಾರ್ಗವಾಗಿ ಬಂದನು. ಇತ್ತ ಮಶಾಯಕರು ತಾವು ಕುಳಿತ ಗೋಡೆ ಸಮೇತವಾಗಿ ಬಂದು ಅವರಿಗೆ ಇದಿರಾದರು, ನಂತರ ಇಬ್ಬರೂ ಒಂದುಗೂಡಿ ಮಹಾಂತಸ್ವಾಮಿಗಳು ಯೋಗಕ್ಕೆ ಕುಳಿತಲ್ಲಿಗೆ ಬಂದರು. ಇಬ್ಬರೂ ಗುರುಗಳಿಗೆ ವಂದಿಸಿ, ಎರಡೂ ಸ್ಥಳಗಳು ಒಂದೇ ಎಂದು ಸಾರಿ ಭೇದಭಾವ ಮಾಡಬಾರದೆಂದು ಲಾಡ್ಲೆಮಶಾಯಕರು ಭಕ್ತರಿಗೆ ತಿಳಿಸಿದರು.

ಹೀಗೆ 'ಅಲದಿ ಮಹಾಂತಸ್ವಾಮಿಗಳ ಪುರಾಣ'ವು ವೀರಶೈವ ಮಠದ ಪೀಠಾಧಿಪತಿಗಳ ಜೀವನ, ಪವಾಡ ಮತ್ತು ಅವರ ಸಮಕಾಲೀನ ಐತಿಹಾಸಿಕ ವ್ಯಕ್ತಿಗಳ ಚಿತ್ರಣವನ್ನು ನೀಡುತ್ತದೆ. ಇಲ್ಲಿಯ ಬಹಮನಿ ಸುಲ್ತಾನನು ಯಾರೆಂಬುದು ಸ್ಪಷ್ಟವಾಗದಿದ್ದರೂ ಮರಿಮಹಾಂತನು ಲಾಡ್ಲೆಮಶಾಯಕರನ್ನು ಸಂದರ್ಶಿಸುವುದನ್ನು ಗಮನಿಸಿ ಈತನ ಸಮಕಾಲೀನನಾದ ಸುಲ್ತಾನನೊಬ್ಬನಾಗಿರಬಹುದೆಂದು ಸ್ಥೂಲವಾಗಿ ಹೇಳಬಹುದಾಗಿದೆ. ಲಾಡ್ಲೆಮಶಾಯಕರು ಹಿಜರಿ 720ರಲ್ಲಿ ಜನಿಸಿ

775ರಲ್ಲಿ ಆಳಂದದಲ್ಲಿ ಕಾಲವಾದರೆಂದು ಆತನ ಚರಿತ್ರೆಯಲ್ಲಿ ಹೇಳಲಾಗಿದೆ.[2] ಇವರು ಗುಲಬರ್ಗಾದ ಖಾಜಾ ಬಂದೇ ನವಾಬರ ಧಾರ್ಮಿಕನಾಯಕರಾಗಿದ್ದರು.[3] ಖಾಜಾ ಬಂದೇ ನವಾಬರು ಬಹಮನಿ ಸುಲ್ತಾನ ಫಿರೋಜ ಮತ್ತು ಆತನ ತಮ್ಮ ಅಹ್ಮದ್ ಷಾರ ಸಮಕಾಲೀನರಾಗಿದ್ದರು[4].

ಮರಿಮಹಾಂತನ ಕಾವ್ಯ ಅಪ್ಪಟ ಪುರಾಣವೆಂಬುದರಲ್ಲಿ ಸಂದೇಹವಿಲ್ಲ. ಆದರೆ ತಾನು ಬರೆಯುತ್ತಿರುವ ಪುರಾಣ "ಗುರು ಮಹಂತನ ಮರಿಮಹಂತನು। ಸುರಳಿಯೊಳ್ಬರದಿರುವದು ತಿಳಿದಿಂದೆ ಕವಿತೆಯು ರಚಿಸಿದೆನು ಸುಳ್ಳಿದು ನುಡಿಯೆಂದಿರೀ." (21-53) ಎಂದಿದ್ದಾನೆ. ಅಂದರೆ ಪುರಾಣ ಕರ್ತೃವಾದ ಮರಿ ಮಹಾಂತನಿಗಿಂತ ಬೇರೆಯಾದ ಇದೇ ಪೀಠದ ಮರಿಮಹಂತನೆಂಬುವವನು ಬರೆದಿರುವ ಸಂಗತಿಗಳನ್ನು ತಾನು ಕಾವ್ಯರೂಪದಲ್ಲಿ ಹೇಳಿರುವೆನೆಂದಾಗಿ ವಿನಯದಿಂದಲೇ ಒಪ್ಪಿಕೊಂಡಿದ್ದಾನೆ. ನಮಗೆ ಈ ಮಠದ ವಂಶಾವಳಿಯೊಂದು ದೊರೆತಿದೆ. ಅಲ್ಲಿ ಮೂವರು ಮರಿಮಹಂತ ಸ್ವಾಮಿಗಳಿದ್ದಾರೆ. ಇವರಲ್ಲಿ ಸುರಳಿಯಲ್ಲಿ ಬರೆದಿರುವವನು ಮತ್ತು ಪುರಾಣವನ್ನು ಬರೆದವನು ಯಾರೆಂಬುದು ನಿರ್ಧರಿಸಲು ತೊಂದರೆ ತೊಂದರೆಯಾಗಿದೆ. ಆದರೂ 'ನಂದವಾಡಿಗಿಯಲ್ಲಿ ದೇಹವಿಟ್ಟ (ಸಂಖ್ಯೆ21) ಮರಿಮಹಂತನೇ ಪುರಾಣಕರ್ತೃವಾಗಿರಬೇಕೆಂದು ಊಹಿಸಿದ್ದೇವೆ. ವಂಶಾವಳಿ ಹೀಗಿದೆ.

ಆಳಂದೆ ಮಠದ ವಂಶಾವಳಿ

1	ಮೂಲ ಮಹಂತಸ್ವಾಮಿ	ಪಟ್ಟಾಚರ ಚಕ್ರವರ್ತಿ ಬಾಳಿಹಳ್ಳಿ ವೀರಸಿಂಹಾಸನ ರೇವಣಸಿದ್ಧಾಚಾರ್ಯ ವೀರಗೋತ್ರ ;ಪಡುವಡೆ ಮಹಾಸೂತ್ರ ಪಶ್ಚ ಕಂಥಾನಿಜಸೂತ್ರ ಘನಲಿಂಗ ಶಿಷ್ಯ ವರ್ಗ.

---

2 ಸವಾನೇ ಉಮ್ರಿ ಹಜರತ್ ಅಲಾವುದ್ದೀನ್ ಅನ್ಸಾರಿ ಲಾಡ್ಲೆಮಶಾಯ - (ಉರ್ದು ಭಾಷೆಯಲ್ಲಿರುವ ಇದರ ವಿಷಯವನ್ನು ನಮ್ಮ ವಿಭಾಗದ ಮುಖ್ಯಸ್ಥರಾದ ಜಿ. ಕಿಶನರಾವ ಅವರು ಕನ್ನಡಿಸಿಕೊಟ್ಟಿದ್ದಾರೆ). ದರಗಾ ಹಜರತ ಬಂದೇನವಾಜು. 1986. (ಕಾಲ ಕ್ರಿ. ಶ. 1299-1344)

3 Antiquarian remains in Hyderabad State, director of archaeological dept. Hyderabad, 1953, P. 20. "This is the Dargah or H. Shaik Alauddin Ansari (locally known as Ladlay sahib) who was the spiritual leader of H. Khawja Bande Nawaz of Gulbarga.

4 Ibid. P. 12.

5 ಇದರ ಕೆಳಗೆ "ಮೂಲ ಪುರುಷರ ನಾಮ ಮಹಂತಸ್ವಾಮಿಗಳೆಂದಿರುವುದಾಗಿ ಪಟ್ಟಾಧಿಕಾರವಾದವರಿಗೆ ಮೂಲನಾಮ ಯಾವದಿದ್ದರೂ ಮಹಂತದೇವರೆಂದೇ ವರ್ತಿಸುವುದು" ಎಂದು ಬರೆದಿದೆ.

2 ಮಹಂತಸ್ವಾಮಿ
3 ಗುರುಮಹಂತಸ್ವಾಮಿ
4 ಮರಿಮಹಂತಸ್ವಾಮಿ
5 ಬಸವಲಿಂಗಸ್ವಾಮಿ
6 ಮಹಂತಸ್ವಾಮಿ
7 ಮಹಲಿಂಗದೇವರು
8 ಬಸವಲಿಂಗದೇವರು
9 ಮಹಂತ ದೇವರು
10 ಗುರುಮಹಂತದೇವರು
11 ಮರಿಮಹಂತದೇವರು
12 ಮಹಲಿಂಗದೇವರು
13 ಬಸವಲಿಂಗದೇವರು
14 ನಿರಂಜನಸ್ವಾಮಿ
15 ಮಹಂತಸ್ವಾಮಿ
16 ಯೋಗಿ ಮಹಂತಸ್ವಾಮಿ
17 ಪ್ರಭುಸ್ವಾಮಿ
18 ಮಹಲಿಂಗದೇವರು
19 ಮಹಂತದೇವರು
20 ವೈರಾಗ್ಯಮಹಂತಸ್ವಾಮಿ
21 ಮರಿಮಹಂತಸ್ವಾಮಿ–ಇವರು ನಂದವಾಡಿಗಿ ಮಠದಲ್ಲಿ ದೇಹವಿಟ್ಟರು.
22 ಮಹಂತದೇವರು
23 ಪ್ರಭುದೇವರು
24 ನಿರಂಜನ ಸ್ವಾಮಿ–ಇವರು ಸ್ವಾದೀಶೀಮಿ ಮೇಲಗೈ ಉಲ್ಲಾಪುರ ಮಠದಲ್ಲಿ ದೇಹವಿಟ್ಟರು.
25 ಗುರುಸಿದ್ಧದೇವರು
26 ವೀರಸಂಗದೇವರು–ಇವರು ಜಾಲವಾದಿಯಲ್ಲಿ ದೇಹವಿಟ್ಟರು
27 ಚನ್ನಬಸವ ದೇವರು–ದೇಶಿಕರು
28 ಮಹಂತದೇವರು
29 ಬಸವಲಿಂಗದೇವರು–ಇವರ ತರುವಾಯ
30 ಚನ್ನಬಸವದೇವರು–ಇವರು ದೇಶಿಕರು

ಕನಕದಾಸರ ಕೀರ್ತನೆಗಳ ಕಳವು

ಹಂಪನಾ

ಕನ್ನಡದ ಕೀರ್ತನ ಸಾಹಿತ್ಯವನ್ನು ಸತ್ವಶಾಲಿಯಾಗಿಸಿದ ಬಹುಪಾಲು ಹಿರಿಮೆ ಕನಕದಾಸರಿಗೆ ಸಲ್ಲುತ್ತದೆ. ಅವರ ಹಾಡುಗಳಲ್ಲಿ ಕಾವ್ಯವೂ ಧರ್ಮವೂ ನೀತಿಯೂ ಸಾಮಾಜಿಕತೆಯೂ ಬಂಡಾಯಪ್ರಜ್ಞೆಯೂ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ಕಾವ್ಯದ ಭಾವನಿರ್ಭರತೆ, ಪ್ರತಿಭೆ–ಸ್ಫೂರ್ತಿ, ಶಿಲ್ಪ, ಕಲಾವಂತಿಕೆ ಮೊದಲಾದ ಗುಣಗಳು ಅವರ ಎಷ್ಟೋ ಹಾಡುಗಳಲ್ಲಿ ಕಂಡುಬರುತ್ತವೆ. ಕನಕದಾಸರ ಉಪಲಬ್ಧ ಕೀರ್ತನೆಗಳು ಸಾಕಷ್ಟಿವೆಯೆಂಬುದು ಗಣಿತದ ಮಾತು ; ಈ ಸಂಖ್ಯಾದೃಷ್ಟಿಯನ್ನು ಬಿಟ್ಟು ಕೇವಲ ಸಾಹಿತ್ಯದ ಆಧಾರದಿಂದಷ್ಟೇ ನೋಡುವಾಗಲೂ ಅವರ ಹಾಡುಗಳಿಗಿರುವ ಹಿನ್ನೆಲೆ, ಹಿರಿಮೆ ಮತ್ತು ಮಹಿಮೆ ಏನೆಂಬುದನ್ನು ಸಾಹಿತ್ಯಕಾರರು ಗುರುತಿಸಿದ್ದಾರೆ. ಇದುವರೆಗೆ ವಿಮರ್ಶಕರು ಹೆಚ್ಚಾಗಿ ಗುರುತಿಸಿ ಚರ್ಚಿಸಿ ತೀರ್ಮಾನಗಳಿಗೆ ತಲಪದೆ ಇರುವ ಒಂದು ಮುಖ್ಯ ವಿಷಯದತ್ತ ಈ ಸಂಪ್ರಬಂಧದ ಪ್ರಯತ್ನ ಹರಳುಗೊಂಡಿದೆ.

ಕನಕದಾಸರ ಕೀರ್ತನೆಗಳನ್ನು, ಉಳಿದ ಕೀರ್ತನಕಾರರ ಕೀರ್ತನೆಗಳೊಂದಿಗೆ, ತೌಲನಿಕವಾಗಿ ನೋಡತೊಡಗಿದಾಗ ಕೆಲವು ಸಮಾನ ಹಾಡುಗಳು ಕಂಡುಬಂದಿವೆ. ಸಮಕಾಲೀನ ಹಿರಿಯ ಕೀರ್ತನಕಾರರಾದ ಕನಕದಾಸ ಮತ್ತು ಪುರಂದರದಾಸ ಇವರ ಕೀರ್ತನೆಗಳಿಗಷ್ಟೇ ಈ ತುಲನಾತ್ಮಕ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ. ಒಂದೇ ಪ್ರಕಾಶನದ ವತಿಯಿಂದ ಪ್ರಕಟವಾಗಿರುವ ಇವರಿಬ್ಬರ ಹಾಡುಗಳಿರುವ ಸಂಕಲನ ಪುಸ್ತಕಗಳನ್ನು ಆರಿಸಿಕೊಂಡು ಈ ತೌಲನಿಕ ಸಮೀಕ್ಷೆ ಕೈಗೊಂಡಿದ್ದೇನೆ. ನಾನು ಪ್ರಧಾನವಾಗಿ ಅವಲಂಬಿಸಿರುವ ಆ ಎರಡು ಪುಸ್ತಕಗಳ ವಿವರಗಳು :

ಅ. ಶ್ರೀ ಕನಕದಾಸರ ಹಾಡುಗಳು: ಸಂ. ಕೃಷ್ಣಶರ್ಮಾ ಬೆಟಗೇರಿ ಮತ್ತು ಮುಕ್ತ್ಯಾರಾವ ಬೆಂಗೇರಿ, ಸಮಾಜ ಪುಸ್ತಕಾಲಯ, ಧಾರವಾಡ, 1972.

ಆ. ಪುರಂದರದಾಸರ ಹಾಡುಗಳು : ಸಂ. ಕಾವ್ಯಪ್ರೇಮಿ, ಸಮಾಜ ಪುಸ್ತಕಾಲಯ, ಧಾರವಾಡ, 1976.

ಈ ಎರಡು ಸಂಕಲನಗಳಿಗಿಂತ ಇನ್ನೂ ಉತ್ತಮವೂ ಅಧಿಕೃತವೂ ಗಮನಾರ್ಹವೂ ಎನಿಸುವ ಅನ್ಯಾನ್ಯ ಸಂಪಾದಿತ ಕೃತಿಗಳಿರಬಹುದಾದರೂ ಪ್ರಸ್ತುತ ಪರಿಶೀಲನೆಗೆ ಈ ಆವೃತ್ತಿಗಳು ಸಾಕು.

ಈ ಇಬ್ಬರು ಪ್ರಮುಖ ದಾಸವರೇಣ್ಯರ ಕೀರ್ತನೆಗಳಲ್ಲಿ ಅನೇಕ ಸಾದೃಶ್ಯಗಳಿವೆ. ತೀರ ಆಕಸ್ಮಿಕ ಹಾಗೂ ಆನುಷಂಗಿಕವೆನಿಸುವ ಸಾದೃಶ್ಯಗಳನ್ನು ಕೈಬಿಟ್ಟು, ಕೇವಲ ಪ್ರಧಾನವಾಗಿ ಪರಿಗಣಿಸಬೇಕಾದ ಸಮಾನ ಹಾಡುಗಳನ್ನು ಪ್ರಸ್ತಾಪಿಸುವ ಔಚಿತ್ಯವಿದೆ. ಕೀರ್ತನೆಗಳ ಆರಂಭದ ಪಾದದಲ್ಲಿ, ಅಂದರೆ ಪಲ್ಲವಿ ಅನುಪಲ್ಲವಿಗಳಲ್ಲಿ ಮಾತ್ರ ಸಾಮ್ಯವಿದ್ದು ಅನಂತರದ ಸಾಲುಗಳಲ್ಲಿ, ಅಂದರೆ ಚರಣಗಳಲ್ಲಿ ಬೇರಾವ ಸಂಬಂಧವನ್ನೂ ಸ್ಥಾಪಿಸಿಕೊಳ್ಳದ ಇತರ ಕೆಲವು ಕೀರ್ತನೆಗಳನ್ನು ಈ ವಿವೇಚನೆಯ ಕಕ್ಷೆಯಿಂದ ಆಚೆಗಿರಿಸಿದ್ದೇನೆ. ಉದಾಹರಣೆಗಳು : ಅಣು ಮಹತ್ತಾದಿ ದೇವ ಎಂಬ ಕನಕದಾಸರ ಹಾಡಿಗೆ (ಪು. 78) ಹೊಂದಿಕೊಂಡಂತೆ, ಪುರಂದರರ ಸುಳಾದಿ– ಅಣುವಾಗಬಲ್ಲ ಮಹತ್ತಾಗ ಬಲ್ಲ (ಪು. 183) ಇದೆ. ಆರು ಹಿತವರು ಎಂದು ನಂಬಬೇಡ (ಪು. 37) ಎಂಬುದು ತಟ್ಟನೆ ಆರು ಹಿತವರು ನಿನಗೆ ಈ ಮೂವರೊಳಗೆ (ಪು. 163) ಎಂಬ ಹಾಡನ್ನು ನೆನಪಿಸುತ್ತದೆ: ಇದರಲ್ಲಿ ನಾರಿಧಾರುಣಿ ಬಲುಧನದ ಸಿರಿಯೆಂಬ ಮೂರೂ ಹಿತವಲ್ಲವೆಂಬ ಪುರಂದರರ ರಚನೆಯ ಆಶಯಕ್ಕೆ ಸಂವಾದಿಯಾಗಿ ತಂದೆ ತಾಯಿ ಮಗ– ಈ ಮೂರೂ ಜನ, ಆಪತ್ತು ಬಂದಾಗ ರಕ್ಷಿಸುವುದಿರಲಿ, ಸ್ವಯಂ ತಾವೇ ಆಪತ್ತಿಗೆ ಮೂಲಕಾರಣರಾದರೆಂಬುದನ್ನು ಕನಕದಾಸರ ಪ್ರತಿಪಾದನೆ ದೃಷ್ಟಾಂತಪೂರ್ವಕ ತೋರಿಸುತ್ತದೆಂಬ ಅಂಶವೂ ಪರಿಭಾವನೀಯ.

ಈತನೀಗ ವಾಸುದೇವನು (ಪು. 83) ಎಂಬ ಕನಕದಾಸರ ಬರವಣಿಗೆಗೆ ಪುರಂದರರ ‘ಕಣ್ಣಾರೆ ಕಂಡೆನಚ್ಯುತನ’ (ಪು. 41) ಎಂಬುದರಲ್ಲಿರುವುದು ಭಾವಸಾಮ್ಯವೆ ಹೊರತು, ಕೀರ್ತನೆಯ ಶಬ್ದಶರೀರ ಉದ್ದಕ್ಕೂ ಬೇರೆ ಆಗಿದೆ. ಇದರಂತೆ ನಂಬಬೇಡಿ ಸಿರಿಯು ತನ್ನದೆಂದು (ಪು. 140) ಮತ್ತು ನೆಚ್ಚದಿರು ಸಂಸಾರ ನೆಲೆಯಲ್ಲವೀಕಾಯ ಎಂಬ ಕನಕದಾಸರ ಹಾಡುಗಳಲ್ಲಿರುವ ಆದಿವಾಕ್ಯ ಸಾದೃಶ್ಯ, ಪುರಂದರರ ‘ನಂಬದಿರು ಈ ದೇಹ ನಿತ್ಯವಲ್ಲ’ (ಪು. 50) ಎಂಬಲ್ಲಿ ಸುವ್ಯಕ್ತವಾಗಿದ್ದರೂ, ಇಲ್ಲಿ ವೈದೃಶ್ಯಗಳೂ ಇವೆ. ಹೀಗೆಯೇ ಮರೆಯದಿರು ಮರುಳು ಮನುಜಾ (ಪು. 39), ಸಾಲದೆ ನಿನ್ನದೊಂದು ದಿವ್ಯನಾಮ (ಪು. 202) ಮತ್ತು ಸಾಕು ಸಾಕು ಮನುಜ ಸೇವೆಯು (ಪು. 47) ಎಂಬ ಕನಕದಾಸರ ಹಾಡುಗಳು ಪುರಂದರರ ಮರೆವರೇನೋ ಹರಿಯೆ (ಪು. 153) ಸ್ಮರಣೆ ಒಂದೇ ಸಾಲದೆ ಗೋವಿಂದನ (ಪು. 30) ಸಾಕು ಸಾಕಿನ್ನು ಸಂಸಾರ ಸುಖವು (ಪು. 53)–ಎಂಬುವನ್ನು ಥಕ್ಕನೆ ಜ್ಞಾಪಿಸುತ್ತವೆ. ಆದರೆ ಇವನ್ನು ಅಕ್ಕಪಕ್ಕ ತಕ್ಕಡಿಯ ತಟ್ಟೆಯಲ್ಲಿಟ್ಟು ತೂಗಿದರೆ ರಚನಾತ್ಮಕ ಅಂತರಗಳಿರುವುದು ವೇದ್ಯವಾಗುತ್ತದೆ.

ಆದುದರಿಂದ, ಇದುವರೆಗೆ ಹೆಸರಿಸಿ ಸಮೀಕ್ಷಿಸಿದಂಥ ಇನ್ನೂ ಹತ್ತಾರು ಹಾಡುಗಳಲ್ಲಿರುವ, ಸಾದೃಶ್ಯ-ವೈದೃಶ್ಯಗಳು ನಮ್ಮನ್ನು ಯಾವ ನಿಶ್ಚಯದ ನೆಲೆಗೂ ತಲಪಿಸುವುದಿಲ್ಲ. ಇವುಗಳನ್ನು ಹಿಡಿದು ನಡೆಸುವ ಜಿಜ್ಞಾಸೆಯಿಂದ ಕೈಗೊಳ್ಳ

ಬಹುದಾದ ಯಾವುದೇ ತೀರ್ಮಾನ, ತೀರ ಏಕಪಕ್ಷೀಯವಾಗಿ, ಅಪಾಯಕಾರಿಯಾಗ ಬಹುದು. ಅದಕ್ಕಾಗಿ ಇಂಥ ಸಡಿಲ ನಿದರ್ಶನಗಳನ್ನು ತಾತ್ಕಾಲಿಕವಾಗಿ ಕೈಬಿಟ್ಟು, ಇನ್ನೂ ಗಟ್ಟಿಯಾದ ಆಧಾರಗಳನ್ನು ಹುಡುಕಬೇಕಾಗುತ್ತದೆ. ಸ್ವಾರಸ್ಯವೆಂದರೆ ಅಂಥ ಪ್ರಬಲ ಆಧಾರಗಳೂ ಪರಾಮರ್ಶೆಗೆ ದೊರೆತಿವೆ. ಆ ಬಗೆಯ ಏಕಮೂಲ ನಿಷ್ಪನ್ನ ಕೀರ್ತನೆಗಳ ವಿಶ್ಲೇಷಣೆಗೆ ತೊಡಗುವ ಮೊದಲು, ಇಲ್ಲಿಯೇ ಉಲ್ಲೇಖಿಸಿ ವಿವರಿಸಬೇಕಾದ ಇನ್ನೊಂದು ವಿಚಾರವಿದೆ. ಕನಕದಾಸರ 'ದೇವಿ ನಮ್ಮ ದೇವರು ಬಂದರು ಬನ್ನಿರೆ' (ಪು. 85) ಎಂಬುದೂ ಪುರಂದರರ ದೇವ ಬಂದ ನಮ್ಮ ಸ್ವಾಮಿ ಬಂದನೊ (ಪು. 81) ಎಂಬುದೂ ಒಂದೇ ಮೂಲದಿಂದ ಬಂದ ಕಲ್ಪನೆಯೊಂದರ ಎರಡು ಕವಲುಗಳು. ಒಂದರಲ್ಲಿ ಕನ್ನಡ ಮಾತುಗಳೊಳಗೆ ಹತ್ತು ಅವತಾರಗಳ ಕಂಡರಣೆ; ಇನ್ನೊಂದರಲ್ಲಿ ಸಂಸ್ಕೃತ ಶಬ್ದಗಳ ಬಳಕೆಯಿಂದ ದಶಾವತಾರದ ಪ್ರಸ್ತಾಪ- ಇಷ್ಟೇ ವ್ಯತ್ಯಾಸ. ಇವೆರಡೂ ಹಾಡುಗಳ ಜೀವನಾಡಿ ಹಿಡಿದು ನೋಡಿದರೆ, ಒಂದಕ್ಕೊಂದು ತೆಕ್ಕೆ ಹಾಕಿಕೊಂಡಿರುವ ರೀತಿಯನ್ನು ಪೃಥಕ್ಕರಿಸಿದರೆ, ಯಾವುದೊ ಒಂದು ಇನ್ನೊಂದಕ್ಕೆ ಆಕರವಾಗಿರುವ ಸಾಧ್ಯತೆಯನ್ನು ಸುಲಭವಾಗಿ ತಳ್ಳಿಹಾಕು ವಂತಿಲ್ಲ. [ಪುಟಗಳ ಸಂಖ್ಯೆ ಪರಿಮಿತಿಯಲ್ಲಿರಲೆಂಬ ಕಾರಣಕ್ಕಾಗಿ ಈ ಎರಡು ಕೀರ್ತನೆಗಳನ್ನೂ, ಇದುವರೆಗೆ ಪ್ರಸ್ತಾಪಿಸಿದ ಯಾವೊಂದು ಹಾಡನ್ನೂ ಇಲ್ಲಿ ಉದಾ ಹರಿಸದೆ ಕೇವಲ ಅವು ಅಚ್ಚಾಗಿರುವ ಪುಸ್ತಕಗಳ ಪುಟ ಸಂಖ್ಯೆಯನ್ನು ನಮೂದಿಸಿ ದ್ದೇನೆ]. ಕನಕದಾಸರಲ್ಲಿ ಕನ್ನಡ ನುಡಿಯ ಹಾಗೂ ದೇಸಿಯ ಚೆಲುವು ಸೂಸಾಡಿದೆ: ಇದನ್ನು ಶಿಷ್ಟದ ಎರಕಕ್ಕೆ ಹಾಕಿ ತೆಗೆದ ಪರಿಷ್ಕಾರ ರೂಪ ಆಮೇಲೆ ರೂಪಗೊಂಡಿರ ಬಹುದೆಂಬ ಸಂಶಯಕ್ಕೆ ಎಡೆಯಿದೆ. ಕೀರ್ತನ ಸಾಹಿತ್ಯ ತಜ್ಞರು ಈ ವಿಚಾರವಾಗಿ ಇನ್ನಷ್ಟು ಕೂಲಂಕಷವಾಗಿ ಅಭ್ಯಸಿಸಬೇಕಾದ ಅಗತ್ಯವಿದೆ.

ಈಗ ತಕ್ಷಣಕ್ಕೆ ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾದ ಕೆಲವು ಸಮಾನ ಕೀರ್ತನೆ ಗಳನ್ನಷ್ಟೇ ಇಲ್ಲಿ ಕೆಳಗೆ ಉದಾಹರಿಸಿದ್ದೇನೆ :

1. ರಾಗ-ಮಧ್ಯಮಾವತಿ ತಾಳ-ಅಟ

ಅ)

ಆರು ಸಂಗಡ ಬಾಹೋರಿಲ್ಲ—ಸಿರಿ
ನಾರಾಯಣನ ಸ್ಮರಣೆ ನೆರೆ ಬಾಹೋದಲ್ಲದೆ ॥ ಪ ॥

ಹೊತ್ತು ನವಮಾಸ ಪರ್ಯಂತ ಗರ್ಭದೊಳು
ಅತ್ಯಂತ ನೋವು ಬೇನೆಗಳಿಂದಲಿ
ಹೆತ್ತ ತುಪ್ಪವನಿಕ್ಕಿ ಸಲಹಿದ ತಾಯ್ತಂದೆ
ಅತ್ತು ಕರೆದುಳಿವರು ಮತ್ತೆ ಬೆನ್ನಲಿ ಬಾಹರೆ ೧

ಮನೆ ಮಕ್ಕಳಿವರೆನ್ನ ತನುವಿಗೊಡೆಯರೆಂದು
ಘನವಾಗಿ ಬಲು ನಂಬಿ ನೆಚ್ಚುತಿಹರು

ಅನುಮಾನವಾಗಿ ಜೀವನ ತೊಳಲಿದಾಕ್ಷಣದಿ
ಮನೆಯೊಳೊಂದರಗಳಿಗೆ ನಿಲ್ಲಿಸಿಕೊಳ್ಳರೊ ೨

ಸುತ್ತ ಮುತ್ತಲು ಕುಳಿತಿದ್ದ ಬಂಧುಜನರು
ಹೊತ್ತು ಹೋಯಿತೇಳಿರೇಳೆಂಬರು
ಒತ್ತಿದ ಕಸಕಿಂತ ಕಡುಕಷ್ಟದೀ ದೇಹ
ಪೊತ್ತೊಯ್ದು ಅಗ್ನಿಯೊಳು ಬಿಸುಟಿಬಾಹರೊ ೩

ಧರೆ ಮಿತ್ರ ಬುಧಜನರ ಅಗ್ನಿಸಾಕ್ಷಿಯ ಮಾಡಿ
ಕರವಿಡಿದು ಧಾರೆಯನೆರಸಿಕೊಂಡ
ತರುಣಿ ತನ್ನನಿಯನ ಮುಟ್ಟಲಂಜಿ ದೂರದಲಿ
ಪೊರೆವರು ತನಗಾರು ಪೇಳೆಂಬಳು ೪

ಹರಣ ಹಿಂಗದ ಮುನ್ನ ಹರಿಯ ಸೇವೆಯ ಮಾಡು
ಪರಲೋಕ ಸಾಧನವನು ಮಾಡು
ಕರುಣಿ ಕೃಪಾಳು ಕಾಗಿನೆಲೆಯಾದಿಕೇಶವನ
ಚರಣ ಕಮಲವ ನಂಬಿ ಸುಖಿಯಾಗು ಮನವೇ ೫

(ಪು. 16–17)

ಆ) ರಾಗ–ಮಧ್ಯಮಾವತಿ ತಾಳ–ಅಟ

ಆರು ಬಾರರು ಸಂಗಡಲೊಬ್ಬರು
ನಾರಾಯಣದ ದಿವ್ಯನಾಮ ಒಂದಲ್ಲವೆ ॥ಪ॥

ಹೊತ್ತು ನವಮಾಸ ಪರಿಯಂತ ಗರ್ಭದಲಿ
ಅತ್ಯಂತ ನೋವು ಬೇನೆಗಳ ತಿಂದು
ತುತ್ತು ಬುತ್ತಿಯ ಕೊಟ್ಟು ಸಲಹಿದ ತಾಯಿಯು
ಅತ್ತು ಕಳುಹುವಳಲ್ಲದೆ ಸಂಗಡ ಬಾರಳು ೧

ಮನೆ ಮಕ್ಕಳಿವರೆನ್ನ ತನುವು ಒಡವೆ ಎರಡು
ಘನವಾಗಿ ನಂಬಿದೆ ನನ್ನವೆಂದು
ಅನುಮಾನವೇತಕೆ ಜೀವಹೋದ ಬಳಿಕ
ಘನ ಹೊತ್ತು ಮನೆಯಲಿ ಇರಿಸಿಕೊಳ್ಳರೊ ದೇವ ೨

ಆತ್ಮ ಬಳಲಿದಾಗ ಬಂಧುಗಳು ಎಂದು
ಹೊತ್ತು ಹೊರಗೆ ಹಾಕು ಎಂತೆಂಬರು
ಹೊತ್ತುಕೊಂಡು ಹೋಗಿ ಅಗ್ನಿಯಲ್ಲಿ ಬಿಸುಟಿ
ಮತ್ತೆ ಬೆನ್ನನು ತಿರುಗದಲೆ ಬಾಹೋರಲ್ಲದೆ ೩

ನೆರೆದಿದ್ದ ಪುರಜನ ವಿಪ್ರರಗ್ನಿಯ ಸಾಕ್ಷಿ
ಕರವಿಡಿದು ಕೈಧಾರೆ ಎರಸಿಕೊಂಡು
ತರುಣಿ ತನ್ನಯ ಗಂಡನನು ಮುಟ್ಟಲಮ್ಮದೆ
ನೆರೆ ಏನುಗತಿ ಗತಿ ತನಗೆ ಹೇಳಲಮ್ಮಳಲ್ಲದೆ ೪

ಹರಣ ಹೋಗದ ಮುನ್ನ ಹರಿಯ ಸೇವೆಯ ಮಾಡಿ
ಪರಲೋಕ ಸಾಯುಜ್ಯ ಪಡೆದುಕೊಂಡು
ಕರುಣಿ ಕೃಪಾಳು ಶ್ರೀಪುರಂದರ ವಿಠಲನ
ನೆರೆನಂಬಿ ಭಜಿಸಿ ನೀ ಸುಖಿಯಾಗೊ ಮನುಜಾ ೫

(ಪು. 89–90)

ಇವೆರಡೂ ಹಾಡುಗಳು ಒಂದೇ ಮೂಲದ ನಕಲುಗಳು: ಒಂದು ಇನ್ನೊಂದರ ನಿಜಪ್ರತಿ. 'ಅ'ದಲ್ಲಿರುವ ಚರಣಗಳು 'ಆ'ದಲ್ಲೂ ಇವೆ, ಪಲ್ಲವಿಯೂ ಅಷ್ಟೆ. ರಾಗ ಮತ್ತು ತಾಳ ಕೂಡ ಎರಡರಲ್ಲೂ ಸಮಾನ. 'ಅ'ದಲ್ಲಿ ಆಡುಮಾತಿನ ಗತ್ತೂ, 'ಆ'ದಲ್ಲಿ ಶಿಷ್ಟದ ಒತ್ತೂ ಇದೆ. ಚರಣಗಳ ಅನುಪೂರ್ವಿ 'ಅ'ದಲ್ಲಿ (ಸಂಖ್ಯೆ) ಅದಲು ಬದಲು ಆಗಿದೆ; ಎರಡನೆಯ ಚರಣ ಮೂರನೆಯದೂ, ನಾಲ್ಕನೆಯದು ಎರಡನೆಯದೂ ಆಗಿದೆ. ಅಲ್ಲದೆ 'ಆ'ದಲ್ಲಿ ಶೈಲಿಯ ಶೈಥಿಲ್ಯವೂ, ಆಧುನಿಕ ಕನ್ನಡದ ರಚನೆಯೂ ವ್ಯಕ್ತಗೊಂಡಿದ್ದು ಇದರಲ್ಲಿ ಅನ್ಯರ ಕೈವಾಡವಿರುವ ಗುಮಾನಿಗೆ ಅವಕಾಶವಾಗಿದೆ. 'ಆ'ದಲ್ಲಿ ಎಷ್ಟೇ ಶಿಷ್ಟಪರ ರಚನೆಗೆ ಒಲವು ತೋರಿದ್ದರೂ 'ಅ'ದ ಪಲ್ಲವಿ ಮತ್ತು ಮೂರನೆಯ ಚರಣಾಂತ್ಯದ ಮಾತೊಂದು ಹೇಗೋ ನುಸುಳಿಬಿಟ್ಟಿದೆ- 'ಆ'ದ ನಾಲ್ಕನೆಯ ಪಾದಾಂತ್ಯದ 'ಬಾಹೋರಲ್ಲದೆ' ಎಂಬುದು ನಿಶ್ಚಯವಾಗಿಯೂ 'ಅ'ದ ಎರವಲು ಮಾತಷ್ಟೇ ಅಲ್ಲ, ಇಡೀ 'ಆ'ದ ಶಿಲ್ಪಕ್ಕೆ 'ಅ'ದ ನಕಾಶೆಯೇ ಮೂಲವೆಂಬ ಸುಳಿವು ಕೊಡುವ ಮಾತೂ ಆಗಿದೆ.

2. ಅ. ರಾಗ–ಸೌರಾಷ್ಟ್ರ ತಾಳ–ಏಕ

ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥ಪ॥
ನೆಲ್ಲುಗಳ ಕುಟ್ಟಿ ಕೊಂಡು ಬಿದುರುಗಳ ಹೊತ್ತುಕೊಂಡು
ಕೂಲಿಗಳ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ೧

ನಾಲಕು ವೇದ ಪುರಾಣ ಶಾಸ್ತ್ರ ಪಂಚಾಂಗ ಹೇಳಿಕೊಂಡು
ಕಾಲ ಕಳೆಯುವುದೆಲ್ಲ ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ೨

ಬಡಿದು ಬಡಿದು ಕಬ್ಬಿಣವ ಕಾಸಿ ತುಬಾಕಿ ಮಾಡಿ
ಹೊದೆವ ಗುಂಡು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ೩

ಚಂಡಭಟರೆಲ್ಲ ಮುಂದೆ ಕತ್ತಿ ಹರಿಗೆಯ ಪಿಡಿದು
ಖಂಡ ತುಂಡ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ೪

ದೊಡ್ಡದೊಡ್ಡ ಕುದುರೆಯನೇರಿ ಸೇಜೆ ಹೊತ್ತು ರಾಹುತನಾಗಿ
ಹೊಡೆದಾಡಿ ಸಾಯುವುದು — — — ೫

ಕುಂಟೆ ಕೂರಿಗೆಯಿಂದ ಒಂಟೆ ಮಣ್ಣು ಹದ ಮಾಡಿ
ರಂಟೆ ಹೊಡೆದು ಬೆಳಸುವುದು — — — ೬

ಕೆಟ್ಟತನದಿಂದ ಕಳ್ಳತನವನ್ನೆ ಮಾಡಿ
ಕಟ್ಟಿ ಹೊಡಿಸಿಕೊಂಬುವುದು — — — ೭

ಸನ್ಯಾಸಿ ಜಂಗಮ ಜೋಗಿ ಜಟ್ಟಿ ಮೊಂಡ ಬೈರಾಗಿ
ನಾನಾ ವೇಷ ಕೊಂಬುವುದು — — — ೮

ಉನ್ನತ ಕಾಗಿನೆಲೆ ಆದಿಕೇಶವನ
ಅನುದಿನ ನೆನೆವುದು ಭಕ್ತಿಗಾಗಿ ಪರಮ ಮುಕ್ತಿಗಾಗಿ ೯

(ಪು. ೧೩೦–೧೩೧)

ಆ. ರಾಗ—ಹುಸೇನಿ ತಾಳ—ಆದಿತಾಳ

ಎಲ್ಲರು ಮಾಡುವದು ಹೊಟ್ಟೆಗಾಗಿ । ಗೇಣು ಬಟ್ಟೆಗಾಗಿ ॥ಪ॥
ಸಿರಿ । ವಲ್ಲಭನ ಭಜಿಸುವದು ಮುಕ್ತಿಗಾಗಿ ॥ ಅ. ಪ ॥

ಪಲ್ಲಕ್ಕಿಯ ಹೊರುವದು ಹೊಟ್ಟೆಗಾಗಿ ದೊಡ್ಡ
ಮಲ್ಲರೊಡನಾಡುವದು — — —
ಸುಳ್ಳಾಗಿ ಪೊಗಳುವದು —— ಸಿರಿ
ವಲ್ಲಭನ ಧ್ಯಾನವು ಮುಕ್ತಿಗಾಗಿ

ದೊರೆತನ ಮಾಡುವದು — ಕರಿ
ತುರಗವೇರುವದು —
ದುರಿತನ ಮಾಡುವದು — ಸಿರಿ
ಹರಿಯ ಭಜಿಸುವದು ಮುಕ್ತಿಗಾಗಿ ೧

ಬಿಟ್ಟಿ ಹೊರುವದು ——
ಗಟ್ಯಾಗಿ ಕೂಗುವುದು ——
ದಿಟ್ಟವಾಗಿ ನಮ್ಮ ಶ್ರೀಪುರಂದರ
ವಿಠ್ಠಲನ್ನ ಧ್ಯಾನವು ಮುಕ್ತಿಗಾಗಿ ೨

(ಪು. ೪೬)

ಇವೆರಡು ಹಾಡುಗಳಲ್ಲಿ ಸಾದೃಶ್ಯವೂ ವೈದೃಶ್ಯವೂ ಸಮನಾಗಿ ಹೆಣೆದು ತೆಕ್ಕೆಹಾಕಿ ಕೊಂಡಿವೆ. 'ಅ'ದಲ್ಲಿ ದ್ವಿಪದಿಯೂ 'ಆ'ದಲ್ಲಿ ಚತುಷ್ಪದಿಯೂ ಇದೆ. ರಾಗ ತಾಳಗಳೂ ಬೇರೆಯಾಗಿವೆ. 'ಆ'ದಲ್ಲಿ ಒಂದು ಅನುಪಲ್ಲವಿ ಹೆಚ್ಚಾಗಿದೆ. ಎರಡರ ಅಂತಿಮ ಆಶಯ ಒಂದೇ ಗುರಿಯತ್ತ ಸಾಗಿಕೊಂಡಿದೆ; ಆದರೆ ವಿವರಣೆಯಲ್ಲಿ ಕೆಲವು ಅಂತರಗಳುಂಟಾಗಿವೆ. 'ಅ'ದಲ್ಲಿರುವ ವಿಸ್ತಾರವನ್ನು 'ಆ'ದಲ್ಲಿ ಸಂಗ್ರಹಿಸಲಾಗಿದೆ. 'ಅ'ದಲ್ಲಿ ಇಡೀ ಕೀರ್ತನೆಯ ಕಡೆಯಲ್ಲಿರುವ 'ಪರಮ ಮುಕ್ತಿಗಾಗಿ' ಎಂಬುದನ್ನು 'ಆ'ದಲ್ಲಿ ಪ್ರತಿ (ಮೂರೂ) ಚರಣದ ಅಂತ್ಯದಲ್ಲಿ ಕಳಶವಾಗಿಟ್ಟಿದೆ. 'ಅ'ದಲ್ಲಿರುವ ಭಾವ ತೀವ್ರತೆಯ ಮಿಂಚು 'ಆ'ದಲ್ಲಿಲ್ಲ; 'ಬಿಟ್ಟಿ ಹೊರುವುದು' ಎಂಬ ಮಾತು ಜಾಳು ಜಾಳಾಗಿದೆ, ಆಲೋಚನಾ ಸರಣಿಯ ಒಟ್ಟು ಬೆಳವಣಿಗೆ–ಸರಪಣಿಗತಿಯಲ್ಲಿ ಸಾಂಗತ್ಯ ಸೌಷ್ಠವ ಸಾಲದೆನಿಸುತ್ತದೆ.

3. ಅ. ರಾಗ—ನಾಂಟಿ ತಾಳ—ಝಂಪೆ

ನಂಬು ನಾರಾಯಣನ ನಂಬೊ ನರಹರಿಯ
ನಂಬಿದಾ ಭಕ್ತರ ಕುಟುಂಬ ಸಾರಥಿಯ ॥ಪ॥
ಬಲಿನಂಬಿ ಪಾತಾಳ ಲೋಕಕರಸಾದನದೆ
ಕುಲದ ಪ್ರಹ್ಲಾದನು ನಿಜವ ಕಂಡ
ಕಲಿ ವಿಭೀಷಣ ನಂಬಿ ಲಂಕೆಯಲಿ ಸ್ಥಿರವಾದ
ಛಲದ ಪಾರ್ಥನು ನಂಬಿ ವಿಶ್ವರೂಪವ ಕಂಡ ೧

ಅಂಬರೀಷನು ನಂಬಿ ವೈಕುಂಠವೇರಿದನು
ಹಂಬಲಿಸಿ ಶಶಿಧರನು ಉರಿಯ ಗೆದ್ದ
ಕುಂಭಿನೀ ದೇವಿ ತಾ ಬಂಧನವ ಕಳೆಗಳು
ಅಂಬುಜಾಕ್ಷಿ ದ್ರೌಪದಿಯು ಮಾನ ಉಳುಹಿಕೊಂಡಳು ೨

ಅತಿಭಕುತರಿಗೆ ಮೆಚ್ಚಿ ಗತಿಮೋಕ್ಷವಿತ್ತನು
ಮತಿಭ್ರಷ್ಟ ಅಜಮಿಳನ ಉದ್ಧಾರ ಮಾಡಿದ
ಕ್ಷಿತಿಯೊಳಗೆ ಕಾಗಿನೆಲೆಯಾದಿ ಕೇಶವನಾದ
ಪತಿತಪಾವನ ಪರಮ ಪುರುಷೋತ್ತಮನನು ೩

(ಪು. 58-59)

ಆ. ರಾಗ–ಯಮುನಾ ಕಲ್ಯಾಣಿ ತಾಳ–ಅಟ

ನಂಬಿ ಕೆಟ್ಟವರುಂಟೆ ಕೃಷ್ಣಯ್ಯನ
ನಂಬಲಾರದೆ ಕೆಟ್ಟುದು ॥ಪ॥

ಅಂಬುಜನಾಭನ ಪಾದವ ನೆನೆದರೆ
ಇಂಬುಗೊಡದ ದುಃಖ ಹರಿಸುವ ಶ್ರೀಕೃಷ್ಣ ॥ಅ.ಪ॥

ಬಲಿಯ ಪಾತಾಳಕಿಳುಹಿ ಭಕ್ತ ಬಾ
ಗಿಲವ ಕಾಯುವೆ ನಾನೆಂದ
ಛಲದೊಳು ಅಸುರರ ಶಿರಗಳ ತರಿದು ತಾ
ನೊಲಿದು ವಿಭೀಷಣಗೆ ಪಟ್ಟಗಟ್ಟಿದ ಕೃಷ್ಣ ೧

ತರಳ ಪ್ರಹ್ಲಾದಗೊಲಿದು ಉಗುರಿನಿಂದ
ಹಿರಣ್ಯನುದರ ಸೀಳಿದ
ಕರಿರಾಜಗೊಲಿದು ನೆಗಳು ನುಂಗುತಿರಲಾಗ
ಶಿರವ ತರಿದು ಕಷ್ಟ ಪರಿಹರಿಸಿದ ಕೃಷ್ಣ ೨

ಪಾಂಡವರಿಗೊಲಿದು ಕೌರವರನು
ತುಂಡು ಛಿದ್ರವ ಮಾಡಿದ
ಗಂಡರೈವರ ಮುಂದೆ ದ್ರೌಪದಿ ಕೂಗಲು
ಕಂಡುಕರುಣದಿ ಕಾಯ್ದ ಪುರಂದರ ವಿಠಲ ೩

(ಪು. 79)

ಈ ಬಗೆಯ ಹಾಡುಗಳು ಕೂಡ ಕೆಲವು ಸವಾಲುಗಳನ್ನೊಡ್ಡುತ್ತವೆ. ಏಕ ಪ್ರಕಾರವಾದ ಭಾವದ ಬೆಳವಣಿಗೆಯಲ್ಲಿರುವ, ಸಾಮತಿಗಳ ಆಯ್ಕೆಯಲ್ಲಿರುವ ಒಟ್ಟು

ತಾತ್ಪರ್ಯ ಹೊಂದಾಣಿಕೆಯನ್ನು ಅರ್ಥೈಸುವ ಬಗೆ ಹೇಗೆ ಎಂಬುದು ಮುಖ್ಯ ಪ್ರಶ್ನೆ. ಎರಡರಲ್ಲೂ ಇರುವ ಮೂರು ಚರಣಗಳ ಲೆಕ್ಕದಲ್ಲಿ ಏರುಪೇರುಗಳಿಲ್ಲ; ಈ ಸರಿ ಸಮಾನತೆ ಏನೋ ತೀರ ಆಕಸ್ಮಿಕವಾಗಿರಬಹುದೆನಿಸದೆ ಪರಸ್ಪರ ಪ್ರಭಾವವನ್ನು ಸೂಚಿಸುತ್ತದೆ. ಶಬ್ದಗಳೂ, ಪ್ರಾಸಸ್ಥಾನವೂ ವ್ಯತ್ಯಾಸವಾಗಿರುವಂತೆ ತೋರುತ್ತದೆಯಾದರೂ ಉದ್ದೇಶದಲ್ಲಿ ದೂರಾನ್ವಯಗಳಿಲ್ಲ. ಬಲಿ, ಪ್ರಹ್ಲಾದ, ವಿಭೀಷಣ ದ್ರೌಪದಿ–ಇವರ ದೃಷ್ಟಾಂತಗಳು ಎರಡರಲ್ಲೂ ಬಂದಿವೆ. ರಾಗ ತಾಳ ಎರಡಕ್ಕೂ ಪ್ರತ್ಯೇಕವಾಗಿ ನಮೂದಾಗಿವೆ. 'ಆ'ದಲ್ಲಿ ಅನುಪಲ್ಲವಿಯೊಂದು ಜಿಗಿದಿದೆ.

4ಅ. ರಾಗ-ಕಾಂಭೋದಿ ತಾಳ-ಝಂಪೆ

ಪೂರ್ವ ಜನ್ಮದಲಿ ನಾ ಮಾಡಿದಾ ಭವದಿಂದ
ಉರ್ವಿಯೊಳು ಜನಿಸಿದೆನೊ ಕೃಷ್ಣಾ ॥ಪ॥
ಕಾರುಣ್ಯನಿಧಿಯೆನ್ನ ಕಾಯಬೇಕಯ್ಯ ಹರಿ
ವಾರಿಜನಾಭನೇ ಮುದ್ದುಕೃಷ್ಣ ॥ಅ.ಪ॥

ಹುಟ್ಟಿದಂದಿಂದಿಗೂ ಸುಖವ ನಾ ಕಾಣದಲೆ
ಕಷ್ಟನಾದೆನು ಕೇಳೊ ಕೃಷ್ಣಾ
ತೊಟ್ಟಿಲಿನ ಶಿಶುತಾಯ ಬಿಟ್ಟಿತೆರನಂತೆ ಕಂ
ಗೆಟ್ಟು ಸೊರಗಿದೆನಯ್ಯ ಕೃಷ್ಣಾ
ಮುಟ್ಟಿಲಮ್ಮರು ಎನ್ನ ಸತಿಸುತರು ಬಾಂಧವರು
ಅಟ್ಟಿ ಎಳೆಯುತ್ತಿಹರೊ ಕೃಷ್ಣಾ
ಕಷ್ಟದಾರಿದ್ರ್ಯವನು ಪರಿಹರಿಸದಿರೆ ದೂರು
ಮುಟ್ಟುವುದು ನಿನಗಯ್ಯ ಕೃಷ್ಣಾ ೧

ಕಾಶಿಯಾ ವಾಸವನು ಬಯಸಿ ಬಹುದಿನದಿಂದ .
ಆಸೆಯೊಳಗಿದ್ದೆನಯ್ಯ ಕೃಷ್ಣಾ
ಗಾಸಿಯನು ಮಾಡದಲೆ ದೋಷವನು ಪರಿಹರಿಸೊ
ಸಾಸಿರದ ನಾಮದಾ ಕೃಷ್ಣಾ
ಹೇಸಿಕೆಯೊಳಿರ್ದ ಸಂಸಾರವೆಂಬುವ ಮಾಯ
ಪಾಶದಿಂದಲಿ ಬಿಗಿವರೇ ಕೃಷ್ಣಾ
ಕಂಸಮರ್ದನನೆ ನೀ ಕಾಯಬೇಕಯ್ಯ ಹರಿ
ವಾಸುದೇವನೆ ಮುದ್ದುಕೃಷ್ಣಾ ೨

ಲೋಕದೊಳಗೆನ್ನನು ಪೋಲ್ವ ಪಾಪಿಗಳನ್ನು
ನೀ ಕಂಡು ಬಲ್ಲೆಯಾ ಕೃಷ್ಣಾ
ಸಾಕಿನ್ನು ಎನಗೊಂದು ಗತಿಯ ತೋರಿಸಿ ಸದ್ವಿ
ವೇಕಿಯನೆ ಮಾಡಯ್ಯ ಕೃಷ್ಣಾ
ರಾಕೇಂದು ಮುಖಿಯು ದ್ರೌಪದಿಯು ಮಾನವಕಾಯ್ದೆ
ಆಕೆಗಕ್ಷಯವಿತ್ತೆ ಕೃಷ್ಣಾಪಿ
ನಾಕಿಸುಖನಾದಿಕೇಶವನೆ ಉಡುಪಿಯವಾಸ
ಸಾಕಿ ಸಲಹೈ ಎನ್ನ ಕೃಷ್ಣಾ ೩

(ಪು. 7–8)

ಆ. ರಾಗ–ಕಾಂಭೋದಿ ತಾಳ–ಝಂಪೆ

ಪೂರ್ವಜನ್ಮದಲಿ ನಾ ಮಾಡಿದ ಪಾಪದಿಂ
ದುರ್ವಿಯೊಳು ಜನಿಸಿದೆನೊ ಕೃಷ್ಣ ॥ಪ॥
ಕಾರುಣ್ಯ ನಿಧಿಯೆನ್ನ ಕಾಯಬೇಕಯ್ಯ ಹರಿ
ವಾರಿಜನಾಭ ಶ್ರೀ ಕೃಷ್ಣ ॥ಅ. ಪ॥

ಹುಟ್ಟಿದಂದಿಂದಿಗೂ ಸುಖವೆಂಬುದನು ಅರಿಯೆ
ಕಷ್ಟಪಡುತಿಹೆನಯ್ಯ ಕೃಷ್ಣ
ದಟ್ಟದಾರಿದ್ರ್ಯವನು ಪರಿಹರಿಸದಿರೆ ದೂರು
ತಟ್ಟುವದು ನಿನಗಯ್ಯ ಕೃಷ್ಣ ೧

ಕಾಸಿನಾ ಆಸೆಯನು ಮಾಡಿಬಹುದಿನದಿಂದ
ಆಯಾಸದೊಳಗಿರುತಿಹೆನೊ ಕೃಷ್ಣ
ಆಸೆಯನು ಬಿಡಿಸಿ ಮಿಗೆದೋಷವನು ಪರಿಹರಿಸೊ
ಸಾಸಿರನಾಮ ಶ್ರೀಕೃಷ್ಣ ೨

ಮುಟ್ಟಲಂಜುವರು ಬಂಧುಗಳು ಕಂಡರೆ ಎನ್ನ
ಅಟ್ಟಿ ಕೊಲುತಿಹರಯ್ಯ ಕೃಷ್ಣ
ತೊಟ್ಟಿಲಶಿಶು ಬಾಯಬಿಡುವ ತೆರನಂತೆ ಕಂ
ಗೆಟ್ಟು ಶೋಕಿಸುವೆನೋ ಕೃಷ್ಣ ೩

ತಂದೆ ತಾಯಿಯು ಇಲ್ಲ ಬಂಧುಬಳಗವು ಇಲ್ಲ
ಇಂದೆನಗೆ ಗತಿಯೇನೊ ಕೃಷ್ಣ
ಮಂದರಧರ ಶ್ರೀಪುರಂದರ ವಿಠಲ ನೀ
ಬಂದು ನೆಲೆಯಾಗಯ್ಯ ಕೃಷ್ಣ ೪

(ಪುಟ–೬೧)

ಈ ಸಮಾನ ಕೀರ್ತನೆಯಲ್ಲೂ ಛಂದಸ್ಸು, ರಾಗ, ಮತ್ತು ತಾಳಗಳಲ್ಲಿ ಏಕರೂಪತೆಯಿದೆ; ಪಲ್ಲವಿ ಅನುಪಲ್ಲವಿಗಳಲ್ಲೂ ವ್ಯತ್ಯಾಸಗಳಿಲ್ಲ. ಐದೈದು ಮಾತ್ರೆಗಳ ಓಟ ಎರಡೂ ಕಡೆ ಪ್ರಧಾನವಾಗಿದೆ. ಛಂದಸ್ಸಿನ ಲಕ್ಷಣದಿಂದ ಸಾಂಗತ್ಯಕ್ಕೆ ಸಂಗತವಾಗಿದೆ, ಅಲ್ಲಲ್ಲಿ ವಿಷ್ಣುಗಣದ ಬದಲು ರುದ್ರಗಣ ಕಂಡುಬರುತ್ತದೆ; ಅಂಶಗಣದ ಬದಲು ಮಾತ್ರಾಗಣ ಘಟಿತ ಸಾಂಗತ್ಯವೆಂದೂ ಹೇಳಬಹುದು. ಕನಕದಾಸರ ಹಾಡಿನಲ್ಲಿ ಮೂರು ಚರಣಗಳೆಂದು ಸಂಪಾದಕರು ಸೂಚಿಸಿದ್ದಾರೆ: ದ್ವಿತೀಯಾಕ್ಷರ ಪ್ರಾಸದ ಆಧಾರ ಬಲದಿಂದ ಅವರು ಹಾಗೆ ಗ್ರಹಿಸಿರಬಹುದು. ಆದರೆ ಅವನ್ನು ಎಂಟೆಂಟು ಸಾಲುಗಳ ಮೂರು ಚರಣಗಳೆಂದು ತಿಳಿಯುವುದಕ್ಕಿಂತ ನಾಲ್ಕು ಪಾದಗಳ ಆರು ಚರಣಗಳೆಂದೇ ಪರಿಗಣಿಸುವುದು ಉಚಿತ. 'ಆ'ದಲ್ಲಿ ನಾಲ್ಕು ಪಾದಗಳ ನಾಲ್ಕೇ ಚರಣಗಳಿವೆ; 'ಆ'ದಲ್ಲಿರುವ ಎರಡನೆಯ ಚರಣದ ಎರಡನೆಯ ಸಾಲು 'ಆಯಾಸದೊಳಗಿರು...' ಎಂಬುದರಲ್ಲಿನ ಆರಂಭದ ದೀರ್ಘಸ್ವರಾಕ್ಷರವಾದ 'ಆ'ವನ್ನು ಅದರ ಹಿಂದಿನ (ಅಂದರೆ ಮೊದಲನೆಯ) ಸಾಲಿನ ಕಡೆಯಲ್ಲಿಡಬೇಕು, ಹಾಗೆ ಮಾಡಿದರೆ ಆಗ ಪ್ರಾಸ ಪರಿಪಾಲನೆಯಾಗುತ್ತದೆ; ಈಗಿರುವಂತೆ ಪ್ರಾಸೋಲ್ಲಂಘನೆಯಾಗಿದೆ–ಇದು

ಪ್ರಾಯಃ ಸಂಪಾದಕರ ಕಣ್ ತಪ್ಪಿನಿಂದಾಗಿರಬಹುದು. 'ಅ' ಮತ್ತು 'ಆ'ಗಳಲ್ಲಿ ಮೊದಲ ಮೂರು ಪದ್ಯ (ಚರಣ)ಗಳಲ್ಲಿ ಶೇಕಡ ತೊಂಬತ್ತರಷ್ಟು ಸಾಮ್ಯವಿದೆ: 'ಆ'ದಲ್ಲಿರುವ ಕಡೆಯ ಮೂರು ಪದ್ಯಗಳನ್ನು 'ಅ'ದಲ್ಲಿ ಸಂಗ್ರಹಿಸಿ ಒಂದೇ ಪದ್ಯಕ್ಕಿಳಿಸಲಾಗಿದೆ; ಹೀಗೆ ಸಂಕ್ಷೇಪಿಸುವಾಗ ಕಂಸಮರ್ದನ ಹಾಗೂ ದ್ರೌಪದಿಯ ಮಾನವಕಾಯ್ದ ಪ್ರಸ್ತಾಪ ಜಾರಿಹೋಗಿದೆ. ಅಥವಾ ಇದರ ತದ್ವಿರುದ್ಧ ದಿಕ್ಕಿನಲ್ಲಿ ಈ ಕೀರ್ತನೆಯ ಪ್ರಭಾವ ಪ್ರಕ್ರಿಯೆ ಸಂಭವಿಸಿದ್ದರೆ 'ಅ'ದಲ್ಲಿ ಇರದಿದ್ದ ಈ ಎರಡು ಹೊಸ ಸಂಗತಿಗಳ ಸೇರ್ಪಡೆಯಿಂದ 'ಆ'ದಲ್ಲಿ ಇನ್ನೆರಡು ಪದ್ಯಗಳು ಹುಟ್ಟಿಕೊಂಡಿವೆ. ಹೀಗಾಗಿ ಇವೆರಡರಲ್ಲಿ ಯಾವ ಹಾಡು ಯಾವ ಹಾಡಿಗೆ ಮೂಲವಾಗಿದೆಯೆಂಬ ಪ್ರಶ್ನೆಗೆ ಆದಿಕೇಶವನೂ, ಪುರಂದರ ವಿಠಲನೂ ಉತ್ತರ ಕಂಡುಕೊಳ್ಳಲು ಬೆಳಕು ತೋರಿಸಬೇಕಾಗಿದೆ; ಆ ಬೆಳಕು ಮುಂದಿನ ಕೀರ್ತನೆಯಲ್ಲಿರುವ ತೊಡಕನ್ನು ನಿವಾರಿಸಿಕೊಳ್ಳುವುದಕ್ಕೂ ಬೇಕಾಗಿದೆ.

5. ಅ. ರಾಗ–ಸೌರಾಷ್ಟ್ರ ತಾಳ–ಅಟ

ಪರಕವಿಗಳ ಮುಂದೆ ನರಕವಿಗಳ ವಿದ್ಯೆ ತೋರಬಾರದು । ಈ
ಧರಣಿಯು ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದು ॥ಪ॥
ಪಾಟಿಗಳಿದ್ದಲ್ಲಿ ರೂಪಕ್ಕೆ ವಸ್ತ್ರವ ತೋರಬಾರದು । ಬಹು
ಕೋಟಿಗಳಿದ್ದಲ್ಲಿ ಅನುಭಾವಗೋಷ್ಠಿಯ ಮಾಡಬಾರದು ॥೧

ಅಡಿಸತ್ತ ಮುದುಕಿಗೆ ಜೋಡಿಸಿ ಒಲೆಗುಂಡ ಹೂಡಬಾರದು । ಬಹು
ಬಡತನ ಬಂದಾಗ ನೆಂಟರ ಬಾಗಿಲ ಸೇರಬಾರದು ॥ ೨ ॥

ಹರಿಯ ನಿಂದಿಸಿ ಹರ ಘನನೆಂದು ನರಕಕ್ಕೆ ಬೀಳಬಾರದು । ತಾ
ಪರರನು ಬೈದು ಪಾತಕಕೆ ಮುನ್ನೊಳಗಾಗಬಾರದು ॥ ೩ ॥
ಮಡದಿ ನುಡಿಯ ಕೇಳಿ ಜಗಳಕೊಬ್ಬರ ಕೂಡೆ ಹೋಗಬಾರದು । ತಾ
ಮುದುಕರು ಇದ್ದಲ್ಲಿ ಮಸ್ಕಿ ವಿಚಾರವ ಮಾಡಬಾರದು ॥ ೪ ॥

ಮುಂದೆ ಭಲೆ ಎಂದು ನಿಂದಿಕಪರನ್ನು ಕೂಡಬಾರದು । ನಮ್ಮ
ತಂದೆ ಬಾಡದಾದಿ ಕೇಶವನ ಸ್ಮರಣೆಯ ಬಿಡಬಾರದು ॥ ೫ ॥

(—ಜನಪ್ರಿಯ ಕನಕ ಸಂಪುಟ: (ಸಂ.) ದೇಜಗೌ ಮೊದಲಾದವರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, 1988, ಪುಟ ೯೦)

ಆ. ರಾಗ–ಸೌರಾಷ್ಟ್ರ ತಾಳ–ಅಟ

ಪರಕವಿಗಳಿದ್ದಲ್ಲಿ ನರಕವಿಗಳ ಕೊಂಡಾಡಬಾರದು–ಇಂಥ
ಧರಣಿಯ ಕಲ್ಲಿಗೆ ಸ್ಥಿರವೆಂದು ಪೂಜೆಯ ಮಾಡಬಾರದು ॥ ಪ ॥

ಅಡಿಹೋದ ಮುದುಕಿಗೆ ಜೋಡಿಸಿ ಒಲೆಗುಂಡ ಹೂಡಬಾರದು
ಬಡತನ ಬಂದರೆ ನೆಂಟರ ಬಾಗಿಲ ಸೇರಬಾರದು ॥ ೧ ॥

ಮಡದಿಯ ನುಡಿಕೇಳಿ ಬಡವರ ಜಗಳಕ್ಕೆ ಹೋಗಬಾರದು । ಬಹಳ
ಬಡತನ ಬಂದವಳ ಕೈಯಿಂದ ಅಡಿಗೆಯ ಉಣ್ಣಬಾರದು ॥ ೨ ॥

ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವ ತೋರಬಾರದು । ಕಡು
ಕೋಪಿಗಳಿದ್ದಲ್ಲಿ ಅನುಕೂಲ ಗೋಷ್ಠಿ ಮಾತಾಡಬಾರದು ॥ ೩ ॥
ಪರರ ನಿಂದಿಸಿ ಪರಬ್ರಹ್ಮರೂಪೇಂದ್ರನ ಜರೆಯಬಾರದು
ವರದ ಶ್ರೀ ಪುರಂದರ ವಿಠಲನ ಸ್ಮರಣೆಯ ಮರೆಯಬಾರದು ॥ ೪ ॥

(ಪುಟ 129-130)

ಪ್ರಸ್ತುತ ಕೀರ್ತನೆಯ ಚರಣಗಳು ಸಮಾನವಾಗಿದ್ದರೂ, ಅಲ್ಲಲ್ಲಿ ಒಂದೆರಡು ಶಬ್ದಗಳ ಬದಲಾವಣೆಯ ಹೊರತು ಚರಣಗಳ ಸಂಖ್ಯಾನುಕ್ರಮಣಿಕೆಯಲ್ಲಿ 'ಅ' ಮತ್ತು 'ಆ'ಗಳ ನಡುವೆ ತಲೆಕೆಳಗು ಆಗಿವೆ : 'ಅ' ದಲ್ಲಿ ೨, ೪, ೧, ೩ ನೆಯ ಚರಣಗಳು 'ಆ' ದಲ್ಲಿ ೧, ೨, ೩, ೪ ಎಂಬ ಕ್ರಮದಲ್ಲಿವೆ; ಅಥವಾ ಇದನ್ನೇ ವಿಲೋಮವಾಗಿಯೂ ಹೇಳಬಹುದು. ಸಾರಾಂಶದಲ್ಲೇನೂ ವ್ಯತ್ಯಾಸಗಳಿಲ್ಲ. ಛಂದಸ್ಸು, ಅರ್ಥ–ಭಾವ, ಆಶಯ, ರಾಗ–ತಾಳ, ಚರಣಗಳ ಅಳತೆ—ಒಟ್ಟಾರೆ ಎಲ್ಲದರಲ್ಲೂ ಒಂದು ಇನ್ನೊಂದರ ಪ್ರತಿರೂಪವೆಂಬಂತಿವೆ. ಮಾತುಗಳಲ್ಲಿ ಕಾಣುವ ಬದಲಾವಣೆಗಳು : ಇದ್ದಲ್ಲಿ–ಮುಂದೆ, ವಿದ್ಯೆ ತೋರಬಾರದು–ಕೊಂಡಾಡಬಾರದು, ಶರಣೆಂದು–ಸ್ಥಿರವೆಂದು, ಅಡಿಸತ್ತ–ಅಡಿಹೋದ, ಒಬ್ಬರ ಕೂಡೆ-ಬಡವರ, ಬಾಯ್ ಬಡಕರು ಇದ್ದಲ್ಲಿ ಪಸ್ತಿ ಬಿಡಾರವ ಮಾಡಬಾರದು–ಬಡತನ ಬಂದವಳ ಕೈಯಿಂದ ಅಡಿಗೆಯ ಉಣ್ಣಬಾರದು, ಅನುಭಾವಗೋಷ್ಠಿ–ಅನುಕೂಲಗೋಷ್ಠಿ–ಇವು ಎದ್ದು ಕಾಣುತ್ತವೆ : ಜತೆಗೆ 'ಅ' ದಲ್ಲಿರುವ ಮೂರನೆಯ ಚರಣ 'ಆ' ದಲ್ಲಿ ಇಲ್ಲ. ಒಂದರಲ್ಲಿ ಇರುವ ಚರಣ ಇನ್ನೊಂದರಲ್ಲಿ ಇಲ್ಲದಿರುವ ಅಥವಾ ತದ್ವಿರುದ್ಧವಾದ ಕ್ರಿಯೆ ಬೇರೆ ಕೀರ್ತನೆಗಳಲ್ಲಿಯೂ ಘಟಿಸಿರುವುದನ್ನು ಈಗಾಗಲೇ ನೋಡಿದ್ದೇವೆ. ಹೀಗೆ ಒಂದೊ ಎರಡೊ ಚರಣ ಸೇರಿಸಿದ್ದೇಕೆ ಅಥವಾ ಕೈಬಿಟ್ಟಿದ್ದೇಕೆ ಎಂಬ ಪ್ರಶ್ನೆಯೂ ಈ ಜಿಜ್ಞಾಸೆಯಲ್ಲಿ ಮೌಲಿಕವಾಗುತ್ತದೆ; ಶಬ್ದಗಳೂ ಸ್ಥಾಲುಗಳೂ ಸೇರಿದ್ದರಿಂದ ಇಲ್ಲವೆ ಜಾರಿದ್ದರಿಂದ ಕೀರ್ತನೆಯ ಅರ್ಥ ಪ್ರತೀತಿಗೆ ಆಗಿರುವ ಲಾಭಾಲಾಭವನ್ನೂ ಚಿಂತಿಸಬೇಕಾಗುತ್ತದೆ—ಇದು ಈ ದಿಕ್ಕಿನಲ್ಲಿ ಆಳವಾಗಿ ಅಧ್ಯಯನ ಕೈಗೊಳ್ಳುವವರು ಅವಶ್ಯ ಪರಿಭಾವಿಸಿ, ಸ್ಫೋಟಿಸಿ ಉತ್ತರ ಕಂಡುಕೊಳ್ಳಬೇಕಾದ ಅಂಶಗಳಲ್ಲೊಂದು.

6. ಅ. ರಾಗ–ಶಂಕರಾಭರಣ ತಾಳ–ಅಟ

ಹಣ್ಣು ಕೊಂಬುವ ಬನ್ನಿರಿ–ಹರಿದಾಸರು
ಹಣ್ಣು ಕೊಂಬುವ ಬನ್ನಿರಿ । ಪ॥
ಚೆನ್ನಬಾಲಕೃಷ್ಣನೆಂಬ । ಕನ್ನೆಗೊನೆ ಬಾಳೆಹಣ್ಣು ॥ ಅ.ಪ॥

ಸುತ್ತೇಳು ಲೋಕದಿ ಸುರರು ಬಿತ್ತಿದ ಹಣ್ಣು
ಭಕ್ತರ ಬಾಯೊಳು ನೆನೆವ ಹಣ್ಣು
ಅರ್ತಿಯುಳ್ಳವರೆಲ್ಲ ಕೊಳ್ಳಿ ಬೇಕಾದರೆ
ನಿತ್ಯ ಮಾಧವನೆಂಬ ಅಚ್ಚಮಾವಿನ ಹಣ್ಣು । ೧ ।

ಅಜನ ಪಡೆದ ಹಣ್ಣು ಗಜವ ಕಾಯ್ದ ಹಣ್ಣು
ನಿಜ ಮುನಿಗಳಿಗೆ ತೋರಿಸಿದ ಹಣ್ಣು
ತ್ರಿಜಗ ದಂದಿತ ಪಾಲ್ಗ್ರಡಲೊಡೆಯನ ಹಣ್ಣು
ಸುಜನ ಭಕ್ತರೆಲ್ಲ ಕೊಳ್ಳ ಬನ್ನಿರಿ ಹಣ್ಣು ॥ ೨

ತರುವ ಕಾಯ್ದ ಹಣ್ಣು ಉರುಗನ ತುಳಿದಾ ಹಣ್ಣು
ಕರೆದರೆ ಕಂಬದೊಳು ಓಯೆಂಬ ಹಣ್ಣು
ಮರುಗುವ ಧ್ರುವನಿಗೆ ಪಟ್ಟಗಟ್ಟಿದ ಹಣ್ಣು
ಕರುಣಾಳು ಕಾಗಿನೆಲೆಯಾದಿ ಕೇಶವನ ಹಣ್ಣು ॥ ೩

(ಪುಟ. 183-184)

ಆ) ರಾಗ–ಬಿಲಹರಿ ತಾಳ–ಅಟ

ಹಣ್ಣು ಬಂದಿದೆ ಕೊಳ್ಳಿರೊ ಹರಿದಾಸರು
ಹಣ್ಣು ಬಂದಿದೆ ಕೊಳ್ಳಿರೊ ॥ಪ
ಚಿನ್ನ ಬಾಲಕೃಷ್ಣನೆಂಬ
ಚೆನ್ನಾದ ಬಾಳೆಯ ॥ಅ.ಪ॥

ಕೊಳೆತು ಹೋಗುವದಲ್ಲ ಹುಳಿತು ನಾರುವದಲ್ಲ
ಕಳೆದು ಬೀಸಾಡಿಸಿ ಕೊಳುವದಲ್ಲ
ಅಳತೆ ಗೊಂಬುದಲ್ಲ ಗಿಳಿಕಚ್ಚಿ ತಿಂಬುದಲ್ಲ
ಒಳಿತಾದ ಶ್ರೀಹರಿ ಎಂಬ ಮಾವಿನ ಹಣ್ಣು ॥ ೧

ಅಜನ ಪಡೆದ ಹಣ್ಣು ಗಜವ ಸಲಹಿದ ಹಣ್ಣು
ತ್ರಿಜಗದಿ ಮುನಿಗಳಿಗೆ ತೋರಿದ ಹಣ್ಣು
ತ್ರಿಜಗವಂದಿತ ಪಾದವೆಂಬ ಮಾವಿನ ಹಣ್ಣು
ಸುಜನಾನಂದಿಯರು ನೀವು ಕೊಳ್ಳಿ ಬನ್ನಿ ॥ ೨

ತುರುವ ಕಾಯ್ದ ಹಣ್ಣು ಉರುಗನ ತುಳಿದಾ ಹಣ್ಣು
ಕರೆದರೆ ಕಂಬದಿಂದ ಬಂದ ಹಣ್ಣು
ಮರುಗುವ ಧ್ರುವನ ಉನ್ನತನ ಮಾಡಿದ ಹಣ್ಣು
ಪುರಂದರ ವಿಠಲನೆಂಬ ಹಣ್ಣುಕೊಳ್ಳ ಬನ್ನಿ ॥ ೩

(ಪುಟ. 27)

ಇಲ್ಲಿ ಕೆಲವು ವ್ಯತ್ಯಾಸಗಳು ಸಂಭವಿಸಿವೆ: ರಾಗ ಒಂದರಲ್ಲಿ ಶಂಕರಾಭರಣ, ಇನ್ನೊಂದರಲ್ಲಿ ಬಿಲಹರಿ ಇದ್ದರೂ ತಾಳ ಸಮಾನವಾಗಿದೆ. ಸಂಗೀತ ಶಾಸ್ತ್ರ ವಿಶಾರದರು ಈ ಕೀರ್ತನೆ ಯಾವ ರಾಗಕ್ಕೆ ಉಚಿತವಾಗಿ, ಶುದ್ಧವಾಗಿ ಹೊಂದಿ ಕೊಳ್ಳುತ್ತದೆಂಬುದನ್ನು ಹೇಳಬಲ್ಲರು; ಆ ಬಗ್ಗೆ ನಾನು ಏನನ್ನೂ ಹೇಳಲಾರೆ.

ಆದರೆ ಸಾಹಿತ್ಯ ದೃಷ್ಟಿಯಿಂದ ಮಾತ್ರ ನೋಡಿದಾಗ, ಒಂದೇ ಓದಿಗೆ, ಧಾಳರಾವಾಗಿ ಹೇಳಬಹುದಾದ ಮಾತೆಂದರೆ 'ಆ'ದ ಕೀರ್ತನ ಶಿಲ್ಪದಲ್ಲಿ ಶೈಥಿಲ್ಯಗಳಿವೆ. ಮಾವಿನ ಹಣ್ಣು, ತ್ರಿಜಗ ಎಂಬ ಶಬ್ದ ಎರಡೆರಡು ಸಲ ಬಂದಿರುವುದಕ್ಕೆ ಔಚಿತ್ಯವಿಲ್ಲ; ದೈವ ವನ್ನು (ಕೃಷ್ಣನನ್ನು) ಒಂದು ಹಣ್ಣೆಂದು ರೂಪಕವಾಗಿಸಿ ಪುನರುಕ್ತಿ ಮಾಡುತ್ತಾ ಹೊರಟಿರುವುದು ಬೇರೆ–ಅದರ ಅರ್ಥ, ಔಚಿತ್ಯ, ಸ್ವಾರಸ್ಯಗಳಿವೆ; ಇಡೀ ಕೀರ್ತನೆ ನಿಂತಿರುವ ಕೇಂದ್ರವೇ ಅದು. ಹಿಂದಿನ ಉದಾಹೃತ ಕೀರ್ತನೆಗಳಲ್ಲಿ ಗುರುತಿಸಿರುವ ಹಾಗೆ ಇಲ್ಲಿಯೂ ಕೆಲವು ಶಬ್ದಗಳು ಸ್ಥಳಾಂತರಗೊಂಡಿವೆ; ಈ ಬಗೆಯ ಒಂದು ಕಡೆ ಬಳಸಿರುವ ನುಡಿಗಳನ್ನು ಬೇರೊಂದು ಮಾತಿನಿಂದ ಪಲ್ಲಟಿಸಿರುವಿಕೆಯಿಂದ ನಿರೂ ಪಣೆಯಲ್ಲಿ ಯಾವ ಬದಲಾವಣೆಯೂ ಫಲಿಸಲಿಲ್ಲ; ಇವೆರಡೂ ಹಾಡುಗಳು ಒಂದೇ ಬುದ್ಧಿ-ಭಾವದ ಸೃಷ್ಟಿಯೆಂಬ ವಾಸ್ತವಾಂಶ ಮರೆಯಾಗಿಲ್ಲ. ಇನ್ನು ಮತ್ತೆ ಇಡೀ ಕೀರ್ತನೆಯನ್ನು ಉದಾಹರಿಸದೆ ಇಲ್ಲಿಯೇ ಹೇಳಿ ಚರ್ಚಿಸಬಹುದಾದ ಮತ್ತೊಂದು ಮಹತ್ವದ ಕೀರ್ತನೆ 'ಹೂವ ತರುವರ ಮನೆಗೆ ಹುಲ್ಲ ತರುವೆ' ಎಂಬುದು. ಇದರಲ್ಲಿ ಎರಡೂಕಡೆ ರಾಗ ನಿರ್ದೇಶನ ಕಾಂಬೋದಿಯೇ ಆಗಿದ್ದರೂ ತಾಳದಲ್ಲಿ (ಒಂದು ಕಡೆ ಅಟ, ಇನ್ನೊಂದು ಕಡೆ ಝಂಪೆ) ಮತ್ತು ಇಡೀ ಕೀರ್ತನ ಶರೀರದಲ್ಲಿ ಅಂತರ ತುಂಬ ಇದೆ; ಆದರೆ ಹಾಡಿನ ಒಟ್ಟು ಆಂತರ್ಯ ಒಂದೇ ಎನಿಸಿದೆ. ಇದೇ ರೀತಿಯಾಗಿ 'ಈತನೀಗ ವಾಸುದೇವನು' ಮತ್ತು 'ಈತ ಮುಖ್ಯ ಪ್ರಾಣನಾಥ' ಎಂಬ, ಕ್ರಮ ವಾಗಿ ಈ ಇಬ್ಬರ, ಕೀರ್ತನೆಗಳ ಆದಿಯಲ್ಲಿರುವ ಸಾಮ್ಯ ಅನಂತರದ ಚರಣಗಳಲ್ಲಿ ಕಾಣದೆ ಹೋದರೂ, ಒಟ್ಟು ಆಶಯ ಒಂದೇ ಮೂಲಕ್ಕೆ ದುಡಿಯುವಂತಿದೆ. ಹೀಗೆ, ಈ ಪಟ್ಟಿಯನ್ನು ಇನ್ನಷ್ಟು ಉದಾಹರಣೆಗಳನ್ನಿತ್ತು ಪುಷ್ಟಿಗೊಳಿಸಲು, ಸಾಕಷ್ಟು ಗ್ರಾಸ ಸಿಗುತ್ತದೆಂಬೊಂದು ಸೂಚನೆಯನ್ನು ಮುಂದಿನ ಅನ್ವೇಷಕರ ಮಡಿಲಿಗೆ ಹಾಕಬಹುದು. ಈ ನಿದರ್ಶನಗಳನ್ನು ನಿಲ್ಲಿಸಿ, ಸಮಾರೋಪ ರೂಪದ ಕೆಲವು ತೀರ್ಮಾನಗಳಿಗೆ ತೊಡಗುವುದಕ್ಕೆ ಮುಂಚೆ ಇನ್ನೊಂದು ಉದಯರಾಗವನ್ನು ಪ್ರಸ್ತಾಪಿಸಬೇಕಾಗಿದೆ: ಈ ಕಡೆಗೆ ನನ್ನದು ಗಮನ ಸೆಳೆದು ಮಾಹಿತಿಕೊಟ್ಟವರು ಡಾ. ಕಮಲಾ ಹಂಪನಾ.

ಡಾ. ಕಮಲಾಹಂಪನಾ ಅವರು ತಮ್ಮ ನಿಬಂಧ "ತುರಂಗ ಭಾರತ ಒಂದು ಅಧ್ಯಯನ"ದಲ್ಲಿ, ಪರಮದೇವ ಕವಿಯು ತನ್ನ ಕಾವ್ಯದಲ್ಲಿ ಅಳವಡಿಸಿಕೊಂಡಿರುವ, ಪುರಂದರದಾಸರ ಹೆಸರಿನಲ್ಲೂ ಅಚ್ಚಾಗಿರುವ, ಒಂದು ಉದಯರಾಗದ ಆಕರವತ್ತ ಗಮನ ಸೆಳೆದಿದ್ದಾರೆ.: ಅದು 'ದ್ರೌಪದೀ ಮಾನ ಸಂರಕ್ಷಣ' ಎಂಬ ಹೆಸರಲ್ಲಿದೆ, 15 ಷಟ್ಪದಿ ಪದ್ಯಗಳಿವೆ. ಇದು ಕೆಲವು ಹಸ್ತ ಪ್ರತಿಗಳಲ್ಲಿ 'ಮಂಗಳಂ ಶ್ರೀಯರಸ ಪುರಂದರ ವಿಠಲಗೆ' ಎಂದೂ, ಕೆಲವದರಲ್ಲಿ 'ಮಂಗಳಂ ಸಿರಿಕಾಗಿ ನೆಲೆಯಾದಿ ಕೇಶವಗೆ ಎಂದೂ ಕಡೆಯ ನುಡಿಯಲ್ಲಿದ್ದು ಸಂಶೋಧಕರ ಆಖೈರು ತೀರ್ಮಾನಕ್ಕೆ ಇನ್ನೂ ದಾರಿ ಕಾಯುತ್ತಿದೆ. ಪುರಂದರರ ಹಾಡುಗಳ ಸಂಕಲನದಲ್ಲಿ, ಇದು ಅವರ ರಚನೆಗೆ

ಸೇರಿದ್ದಂತೆ, ಈ ಉದಯರಾಗ ಪದ್ಧತಿಯ ಪ್ರಕರಣವೂ ಸೇರ್ಪಡೆಯಾಗಿದೆ; ಹಲವು ಸಂಪಾದಕರುಗಳ ಆವೃತ್ತಿಗಳಲ್ಲಿ ಹೀಗೆ ಸೇರಿಕೊಂಡು ಇದು ಪುರಂದರರದೇ ಇರಬೇಕೆಂಬ ಪ್ರತೀತಿ ನಿಂತುಬಿಟ್ಟಿದೆ. ಪರಮದೇವ ಕವಿಯೂ ಇದನ್ನು ಪುರಂದರರಿಂದಲೇ ಎತ್ತಿ ಹಾಕಿದ್ದಾನೆಂದು ತಾವು ಮೊದಲು ಭಾವಿಸಿ ಬರೆದುದಾಗಿಯೂ, ಈಗ ಈ ಹಾಡು ಕನಕದಾಸರದೇ ಎಂದು ತಮಗೆ ಖಾತ್ರಿಯಾಗಿದ್ದು ಹಿಂದೆ ತಳೆದ ನಿಲುವೆಯನ್ನು ಪೂರ್ತಿ ಬದಲಾಯಿಸಿಕೊಂಡಿರುವುದಾಗಿಯೂ, ಡಾ. ಕಮಲಾ ಹಂಪನಾ ಸ್ಪಷ್ಟಪಡಿಸಿದ್ದಾರೆ. ಆದರೆ ಈ ವಿಚಾರದಲ್ಲಿ ಕರ್ನಾಟಕ ಸರ್ಕಾರದ 'ಪುರಂದರ ಸಾಹಿತ್ಯ ದರ್ಶನ' (1985) ಸಂಪುಟ ನಾಲ್ಕರಲ್ಲಿ (ಪುಟ 22) 'ಇದನ್ನು ಕನಕದಾಸರದ್ದೆಂದೂ ಹೇಳುವುದಿದೆ' ಎಂದು ಅಡ್ಡಗೋಡೆಯ ಮೇಲೆ ದೀಪವಿಡಲಾಗಿದೆ. ಆದರೆ ಬಿ. ಶಿವಮೂರ್ತಿಶಾಸ್ತ್ರಿಗಳು ಇದು ಕನಕದಾಸರ ರಚನೆಯೆಂದು ಕಡಾಕಂಡಿತವಾಗಿ ಹೇಳಿದ್ದಾರೆ.

ಈ ದಿಕ್ಕಿನಲ್ಲಿ ಚಿಂತನೆಯನ್ನು ಮಸೆದು ಸಿಲ್ಲಿಸಿದ ಆದ್ಯರಲ್ಲಿ ಬೆಟಗೇರಿ ಕೃಷ್ಣ ಶರ್ಮರನ್ನು ಮೊದಲು ನೆನೆಯಬೇಕು. ಇದರ ಸಂಬಂಧವಾಗಿ ಅವರ ಹೇಳಿಕೆ ಹೀಗಿದೆ: "ಪುರಂದರ ದಾಸರ – ಕನಕದಾಸರ ಕೆಲವೊಂದು ಗೀತಗಳು ಪರಸ್ಪರ ಅಂಕಿತಗಳನ್ನು ಬದಲಿಸಿಕೊಂಡು ಮುದ್ರಿತವಾಗಿವೆ. ಇವುಗಳ ನಿಜವಾದ ಕರ್ತೃಗಳಾರೆಂಬುದನ್ನು ನಿರ್ಣಯಿಸುವುದಕ್ಕೆ ಪ್ರಾಚೀನ ಹಸ್ತ ಪ್ರತಿಗಳೇ ನಮಗೆ ಸಹಕಾರ ನೀಡಬಲ್ಲುವು. ಆ ಸಹಕಾರವನ್ನು ಉಪಯೋಗ ಮಾಡಿಕೊಂಡುದರಿಂದಲೇ ಈ ಸಂಕಲನದಲ್ಲಿ, ಪುರಂದರದಾಸರವೆಂದು ಪ್ರಚಾರದಲ್ಲಿರುವ ನಾಲ್ಕಾರು ಹಾಡುಗಳು, ಕನಕದಾಸರವೆಂಬ ನಂಬುಗೆಗೆ ಪಾತ್ರವಾಗಿ, ಇದರಲ್ಲಿ ಅಚ್ಚಾಗಿವೆ. ಇದಕ್ಕೆ ಮುಖ್ಯವಾದ ಉದಾಹರಣೆಯನ್ನು ಹೇಳಬೇಕೆಂದರೆ, ದ್ರೌಪದೀ ಮಾನಸಂರಕ್ಷಣೆಯ ಉದಯರಾಗದ ದೀರ್ಘಕವನ ಅಥವಾ ಖಂಡಕಾವ್ಯ. ಇದು ಎಲ್ಲ ಹಸ್ತಪ್ರತಿಗಳಲ್ಲಿಯೂ ಕನಕದಾಸರ ಅಂಕಿತದಿಂದಲೇ ಕೂಡಿರುವುದು". (ಕನಕದಾಸರ ಭಕ್ತಿಗೀತಗಳು; ಸಮಾಜ ಪುಸ್ತಕಾಲಯ, ಧಾರವಾಡ, 1965, ಪುಟ V) ಈ ಅಂಶವನ್ನು, ಅದೇ ಪುಸ್ತಕದಲ್ಲಿ ಮುಂದುವರಿದು, ಅನ್ನೊಂದುಕಡೆ ಮತ್ತೆ ಪ್ರಸ್ತಾಪಿಸುತ್ತ ಹೇಳಿರುವ ಮಾತಗಳಿವು: "ಈ ಸಂಕಲನದಲ್ಲಿ ಪ್ರಕಟವಾಗಿರುವ 'ವಾಸುದೇವಾಯ ನಮೋ' ಎಂಬ ದ್ರೌಪದಿಯ ಮಾನರಕ್ಷಣೆಯ ಕೃತಿಯೂ ಒಂದು ಖಂಡಕಾವ್ಯದಂತಿದೆ. ಕುಮಾರವ್ಯಾಸಕವಿಯ ಈ ಕಥಾಭಾಗದೊಂದಿಗೆ ಕನಕದಾಸರ ಈ ಕೃತಿಯನ್ನು ಹೋಲಿಸಿ ನೋಡಿದರೆ, ಕನಕದಾಸರು ಕುಮಾರವ್ಯಾಸಕವಿಯ ಕೃತಿಯಿಂದ ಪ್ರಭಾವಿತರಾಗಿದ್ದಾರೆಂಬುದು ಕಂಡುಬಾರದಿರದು" (–ಅದೇ–: ಮುನ್ನುಡಿ, ಪುಟ xxvii–xxviii).

ಕೆಲವು ಅಂಶಗಳು ಇಲ್ಲಿ ಸ್ಪಷ್ಟಗೊಳ್ಳಬೇಕಾಗಿವೆ, ಬೆಟಗೇರಿಯವರ ಪ್ರಾಂಜಲ ವಿವೇಚನೆ ಸ್ತುತ್ಯಾರ್ಹವಾದುದು. ಅವರು ಕನಕದಾಸರ ಹಾಡುಗಳನ್ನೂ, ಪುರಂದರ

ದಾಸರ ಹಾಡುಗಳನ್ನೂ ಶ್ರದ್ಧೆಯಿಂದ ಸಂಪಾದಿಸಿ ಪ್ರಕಟಿಸಿದ್ದಾರೆ: ಉಪಲಬ್ಧ ಹಸ್ತಪ್ರತಿಗಳಲ್ಲಿ ಕೆಲವನ್ನು ಆಧರಿಸಿ ಪಾಠಪರಿಷ್ಕರಣ ಮಾಡಿದ್ದಾರೆ. ಕನಕದಾಸರದಲ್ಲವೆಂದು ಅಚ್ಚಾಗಿರುವ ಕೆಲವು ಹಾಡುಗಳು ಅವರವಲ್ಲವೆಂದು ತಿಳಿದು, ಅಂತಹ, ಅಂದರೆ ಅವರವಲ್ಲದ ಕೀರ್ತನೆಗಳನ್ನು ತಮ್ಮ ಸಂಕಲನದಲ್ಲಿ ಸೇರಿಸಿಲ್ಲವೆಂದು ಸ್ಪಷ್ಟವಾಗಿ ಅರಿಕೆಮಾಡಿದ್ದಾರೆ (-ಅದೇ-; ಪುಟ. iv). ಅಷ್ಟೇ ಅಲ್ಲದೆ ಸಂಪಾದಕರಾಗಿ ಅವರು ಗಂಟೆ ಹೊಡೆದಂತೆ ಹೀಗೆ ಹೇಳಿದ್ದಾರೆ: "ಕನಕದಾಸರ ವಲ್ಲದ ಹಾಡುಗಳನ್ನು ಈ ಸಂಕಲನದಲ್ಲಿ ಒಂದನ್ನೂ ತೆಗೆದುಕೊಂಡಿಲ್ಲ" (-ಅದೇ-; ಮುನ್ನುಡಿ ಪುಟ. xxix). ಹೀಗೆ ಹೊಣೆಯನ್ನು ಹೊತ್ತು ಅವರು ಹೊರತಂದ ಕನಕದಾಸರ ಹಾಡುಗಳ ಕಟ್ಟಿನಲ್ಲಿ ಇದುವರೆಗೆ ನಾನು ಉದಾಹರಿಸಿದ ಹಾಡುಗಳು, ಪರಕವಿಗಳ ಮುಂದೆ ಎಂಬುದನ್ನು ಬಿಟ್ಟು, ಸೇರ್ಪಡೆಯಾಗಿವೆ: ಆದರಿಂದ ಆ ಕೀರ್ತನೆಗಳೆಲ್ಲ ಕನಕದಾಸರ ರಚನೆಯೆಂದು ಅವರು, ಪರಿಶೀಲಿಸಿ ಕೈಗೊಂಡ ನಿರ್ಣಯವಾಗಿ, ಒಪ್ಪಿದ್ದಾರೆ. ಹೀಗಿದ್ದೂ ಇಂದಿಗೂ ಆ ಹಾಡುಗಳು ಪುರಂದರದಾಸರ ಹಾಡುಗಳೆಂದೇ ಹೊಸ ಪ್ರಕಟಣೆಗಳಲ್ಲಿ ರಾರಾಜಿಸುತ್ತ ಮುಂದುವರಿಯುತ್ತಿರುವುದೇಕೆ? ಸಂಪಾದಕರಾಗಿ ಅಷ್ಟು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿದ ಬೆಟಗೇರಿಯವರು ಕೂಡ, 'ಪುರಂದರದಾಸರವೆಂದು ಪ್ರಚಾರದಲ್ಲಿರುವ ನಾಲ್ಕಾರು ಹಾಡುಗಳು ಕನಕದಾಸರವೆಂಬ ನಂಬುಗೆಗೆ ಪಾತ್ರವಾಗಿ'ವೆಯೆಂದು (-ಅದೇ-; ಪುಟ. v) ಮೊಗಂ ಆಗಿ ಹೇಳಿದರೇ ಹೊರತು, ಆ ಒಗಟು ಬಿಡಿಸಿ ಇಂತಿಂತಹ ಹಾಡುಗಳೇ ಅವು-ಎಂದು ಡಣಾಡಂಗುರವಾಗಿ ಹೇಳಲಿಲ್ಲ. ನಾನು ಈ ಸಂಪ್ರಬಂಧದಲ್ಲಿ ಆ ಕೆಲಸ ಮಾಡಿ, ಎಲ್ಲವನ್ನೂ ಹುಡುಕಿ ತೆಗೆದು ಉದಾಹರಿಸಿದ್ದು ಇದೇ ಕಾರಣಕ್ಕಾಗಿ.

ಈಗ ಮುಖ್ಯವಾದ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಶೋಧನಕಾರ್ಯ ನಡೆಯಬೇಕಾಗಿದೆ. ಪುರಂದರದಾಸರ ಕೀರ್ತನೆಗಳನ್ನು ಕನಕದಾಸರ ಹಾಡನ್ನಾಗಿಸುವ ಅಥವಾ ಅದರ ತದ್ವಿರುದ್ಧ ಪ್ರಕ್ರಿಯೆಗಳಲ್ಲಿ ಹೆಚ್ಚು ಸಾಧ್ಯತೆ, ಸಂಭಾವ್ಯತೆ ಇರುವುದು ಯಾವುದು? ಮೂಲ ಅಥವಾ ಮೊದಲ ರಚನೆಯಾರದು ಅಥವಾ ಯಾವುದು? ಒಬ್ಬರ ಅಂಕಿತವನ್ನು ತೆಗೆದು ಇನ್ನೊಬ್ಬರ ಅಂಕಿತವನ್ನಿಟ್ಟು ಈ ಅದಲುಬದಲು ಮಾಡುವ ಕೆಲಸ ಯಾವಾಗ ಆರಂಭವಾಯಿತು? ಯಾರಿಂದ, ಯಾಕಾಗಿ ಈ ಕರ್ತೃತ್ವ ವ್ಯತ್ಯಾಸ ತೋರಿಸುವ ಕೆಲಸ ನಡೆಯಿತು? ಈ ಬಗೆಯ ಮೂಲಭೂತವಾದ ಸಂಶಯಗಳು ಸಂಶೋಧಕರನ್ನು ಕಾಡುತ್ತವೆ. ಈ ಬಗ್ಗೆ ವಿವೇಚಿಸುವವರೆಲ್ಲ ನೆನಪಿಡುವ ಒಂದು ಸಂಗತಿಯಿದೆ; ಪುರಂದರ-ಕನಕದಾಸ ಇಬ್ಬರೂ ಶ್ರೇಷ್ಠ ಸಂತರು, ದಾಸವರೇಣ್ಯರು; ಪರಮಜ್ಞಾನಿಗಳಾದ ಪುರಂದರ ಕನಕದಾಸರಲ್ಲಿ ಕೃತಿ ಚೋರತನ ಕಲ್ಪಿಸುವುದು ನಮ್ಮ ಅಜ್ಞಾನವಾದೀತು. ಈ ಅಶ್ವಿನೀ ದೇವತೆಗಳ ವಿಚಾರವಾಗಿ ಇಂಥ ಆರೋಪ ಮಾಡುವುದಿರಲಿ, ಹಾಗೆ

ಆಲೋಚಿಸುವುದು ಕೂಡ ಅಪರಾಧವಾಗಬಹುದು. ಏಕೆಂದರೆ ಅವರಿಬ್ಬರಲ್ಲೂ ಅಂಥ ಪ್ರತಿಭಾದಾರಿದ್ರ್ಯ ಇರಲಿಲ್ಲ; ಕ್ಷಣದಲ್ಲಿ, ನಿಂತ ನಿಲುವಿನಲ್ಲಿ, ಹೊಸ ಕೀರ್ತನೆ ಕಟ್ಟಿ ಹಾಡುವ ಸ್ಫೂರ್ತಿ ಪ್ರತಿಭಾಶಕ್ತಿಗಳಿದ್ದುವು: ಇವರಲ್ಲಿ ಒಬ್ಬರು ಇನ್ನೊಬ್ಬರ ಕೀರ್ತನೆಗಳನ್ನು, ಕೇವಲ ಅಂಕಿತವನ್ನು ಬದಲಾಯಿಸಿಕೊಳ್ಳುವುದರ ಮೂಲಕ, ಅಲ್ಲೊಂದು ಇಲ್ಲೊಂದು ಮಾತೊ ಸಾಲನ್ನೊ ವ್ಯತ್ಯಾಸಗೊಳಿಸಿ, ತಮ್ಮದನ್ನಾಗಿಸಿಕೊಂಡರೆಂದು ತಿಳಿಯುವುದಕ್ಕೆ ಹಿಂಜರಿಕೆಗೆ ಇದೇ ಪ್ರಧಾನವಾದ ಕಾರಣ, ಎರವಲು ಸರಕಿನ ಬಂಡವಾಳದಿಂದ ಬಾಳಬೇಕಾದ ದಿವಾಳಿತನ, ಬಡತನ ಇಬ್ಬರಲ್ಲೂ ಇರಲಿಲ್ಲ.

ಸುಮಾರು ಹದಿನೇಳನೆಯ ಶತಮಾನದಲ್ಲೇ ಈ ಕೀರ್ತನೆಗಳನ್ನು ಹೀಗೆ ಕಲಸು ಮೇಲೋಗರ ಮಾಡುವ ಕೆಲಸ ಆರಂಭವಾಗಿದೆಯೆಂದು ತೋರುತ್ತದೆ. ಇದನ್ನು ಇನ್ನಷ್ಟು ನಿರ್ದಿಷ್ಟಗೊಳಿಸಲು, ಈಗ ಲಭ್ಯವಿರುವ ತಾಳೆಗರಿಯ ಪ್ರಾಚೀನ ಹಸ್ತಪ್ರತಿಗಳನ್ನು ಆಧರಿಸಿದರೆ, ಸಾಧ್ಯವಿದೆ; ಮೊಟ್ಟಮೊದಲು ಯಾವ ಹಾಡನ್ನು ಹೀಗೆ ಬದಲಾಯಿಸಲಾಯಿತೆಂಬುದನ್ನೂ ಇಂಥ ಅಧ್ಯಯನದಿಂದ ಬಹಿರಂಗಗೊಳಿಸಬಹುದು. ಓಲೆಗರಿ/ಕಾಗದದ ಪ್ರಪ್ರಾಚೀನ ಹಸ್ತಪ್ರತಿಗಳ ಸಹಾಯದಿಂದಲೇ ಸೂರಿಗಳು ನಿರ್ಧರಿಸಿ ಹೇಳಬೇಕಾದ ಅಂಶಗಳು ಎರಡು. ಒಂದು, ಎಲ್ಲಿಯವರೆಗೆ ಕೀರ್ತನೆಗಳು ಸಂಕರಗೊಳ್ಳದೆ ಯಥಾಸ್ಥಿತಿಯಲ್ಲಿದ್ದುವು? ಎರಡು, ಯಾವಾಗ ಈ ಕೆಲಸ, ಕರ್ನಾಟಕದ ಯಾವ ಭಾಗದ ಹಸ್ತಪ್ರತಿಗಳಲ್ಲಿ ಪ್ರಾರಂಭವಾಯಿತು ಮತ್ತು ಇದಕ್ಕೆ ಬಲಿಯಾದ ಮೊದಲ ಕೀರ್ತನೆಗಳು ಯಾವುವು? ಇದು ಶುದ್ಧಾಂಗವಾಗಿ, ವಸ್ತುನಿಷ್ಠ ಪರಾಮರ್ಶೆಯಿಂದ ಪತ್ತೆಯಾಗಬೇಕಾದ ಕೆಲಸ. ಆ ದಿಕ್ಕಿನಲ್ಲಿ ಹೆಜ್ಜೆಯಿರಿಸಿದ ಆಪ್ತರು ಬೆಟಗೇರಿಯವರು; ಆದರಿಂದ, ಅವರು ಆಧರಿಸಿದ ಪ್ರತಿಗಳ ಸ್ವರೂಪ, ಕಾಲ–ಇವನ್ನೂ ಗಣನೆಗೆ ತಂದುಕೊಳ್ಳಬೇಕು.

ಈ ಸಮಸ್ಯೆಗೆ ಹಸ್ತಪ್ರತಿಗಳನ್ನು ಜಾಲಾಡಿ, ಜಾತಕ ಬಿಡಿಸಿ ನೋಡುವುದೊಂದೇ ಪರಿಹಾರವಲ್ಲ. ಇದಕ್ಕೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಮುಖಗಳೂ ಇವೆ. ಪುರಂದರರೂ ಕನಕದಾಸರೂ ಸಮಕಾಲೀನರಾದ ವಿಭೂತಿ ಪುರುಷರು. ಪುರಂದರರು–ಶೂದ್ರರು; ವೈಶ್ಯಕುಲ ಸಂಜಾತರಾಗಿದ್ದು ಆಮೇಲೆ ದಾಸರಾದ ಮಹಾಜ್ಞಾನಿ. ಕನಕದಾಸರೂ ದಲಿತರ ಅಂಚಿನಲ್ಲಿರುವ ಶೂದ್ರರು: ಕುರುಬರಾಗಿದ್ದು ದಾಸರಾದರು. ಅವರಿಬ್ಬರೂ ಹುಟ್ಟಿಬಂದ ಜಾತಿಕುಲದ ಹಿನ್ನೆಲೆಯಲ್ಲಿ ಪುರಂದರದಾಸರಿಗೆ ಅವರ ಕಾಲದ ದಾಸರ ಪರಿವಾರದೊಳಗೂ ದೇವಾಲಯಗಳಲ್ಲೂ ಸುಲಭ ಪ್ರವೇಶ ದೊರೆಯಿತು: ಕನಕದಾಸರು ಪಟ್ಟ ಬವಣೆಗೆ ಇಂದಿಗೂ ಕನಕನ ಕಿಂಡಿ ವ್ಯಥೆಯ ಕಥೆಯನ್ನು ಹೇಳುತ್ತಿದೆ. ಸಾಮಾಜಿಕವಾಗಿ ಇವರಿಬ್ಬರೂ ಶೂದ್ರರು; ಆರ್ಥಿಕವಾಗಿ ಕುರುಬರು ಹಿಂದುಳಿದವರು, ಶೈಕ್ಷಣಿಕವಾಗಿಯಂತೂ ಇಂದಿಗೂ ತುಂಬ ಕೆಳಗಿರುವ ಜನಾಂಗ. ಇವೆಲ್ಲದರ ಪರಿಣಾಮವಾಗಿ ದಾಸರ

ಸಮುದಾಯಂದಲ್ಲಿ ಇವರಿಗಿದ್ದ ಸ್ಥಾನಮಾನಗಳ ಚಿತ್ರಣ ಮಸುಕು ಮಸುಕಾಗಿ ಯಾದರೂ ಕಂಡುಬರುತ್ತದೆ.

ಈ ಇಬ್ಬರು ದಾಸರಿಗೆ ಇದ್ದ ಸೃಜನಸಾಮರ್ಥ್ಯ, ಇವರು ರಚಿಸಿದ ಕೃತಿಗಳು, ಬರವಣಿಗೆಯ ಹಿನ್ನೆಲೆಗಳನ್ನು ನೋಡಿದಾಗ ಕನಕದಾಸರು ಹುಟ್ಟುಕವಿಯೆಂಬುದು ನಿಶ್ಚಿತವಾಗುತ್ತದೆ. ಅವರ ಕಾವ್ಯಗಳನ್ನು ಒತ್ತಟ್ಟಿಗೆ ಸರಿಸಿ, ಕೇವಲ ಕೀರ್ತನೆಗಳನ್ನೇ ತನಿಯಾಗಿ ತೆಗೆದು ನೋಡಿದಾಗಲೂ, ಇಲ್ಲಿಯೂ ಉಳಿದ ಕೀರ್ತನಕಾರರದಕ್ಕಿಂತ, ಕನಕದಾಸರ ಹಾಡುಗಳಲ್ಲೇ ಕಾವ್ಯಾಂಶ ಅಧಿಕವೆಂಬುದು ಸಾಹಿತ್ಯ ವಿಮರ್ಶಕರು ಒಪ್ಪುವ ಮಾತು ಹೀಗಿರುವಾಗ ಅವರು ಪುರಂದರದಾಸರ ಕೀರ್ತನೆಗಳನ್ನು ಅಲ್ಲಿ ಇಲ್ಲಿ ತಿದ್ದಿ ತಮ್ಮದನ್ನಾಗಿಸಿಕೊಳ್ಳುವುದೆಂಬುದು ಅಸಂಭಾವ್ಯ ; ಮೇಲುವರ್ಗದವರ ಹಾಡುಗಳನ್ನು ಒಂದು ಸಿದ್ಧ ಮಾದರಿಯಾಗಿಟ್ಟುಕೊಂಡು ರಚಿಸುವಾಗ ಪ್ರಭಾವ ಗಾಢತರವಾಗಿ ಆಗಿರಬಹುದಲ್ಲವೆ ಎಂಬ ಪ್ರಶ್ನೆಯೂ ಕೇವಲ ತರ್ಕದ ಸ್ತರದಲ್ಲೇ ನಿಲ್ಲಬಹುದು.

ಈ ಇಬ್ಬರು ಯೋಗಪುರುಷರೂ ಹೀಗೆ ಒಬ್ಬರಿಂದೊಬ್ಬರು ಕೀರ್ತನೆಗಳನ್ನು ಕಳವು ಮಾಡುವ ಪ್ರವೃತ್ತಿಗೆ ದೂರವಾಗಿ, ಅತೀತರಾಗಿ ಉಳಿದರೆ ಇನ್ನು ಕದ್ದವರು ಯಾರು? ಇದು ಚಿಂತನೀಯವೆ. ನನಗೆ ತೋರುವ ಉತ್ತರವೆಂದರೆ, ಈ ಬಗೆಯಲ್ಲಿ ಕೀರ್ತನೆಗಳ ಅದಲು ಬದಲು ಕೆಲಸ ಮಾಡಿದವರು ಸಂಪ್ರತಿಕಾರರೇ ಇರಬೇಕೆಂಬುದು. ಅಂದರೆ ಹಸ್ತಪ್ರತಿಗಳನ್ನು ಸಿದ್ಧಪಡಿಸುವ, ಅಕ್ಷರವಿದ್ಯೆ ಬಲ್ಲ ಕೆಲವೇ ಕೆಲವು ಸ್ಥಾಪಿತ ಹಿತಾಸಕ್ತಿಗಳವರು, ತಾವು ತುಂಬ ಜಾಣರೆಂದು ಬುದ್ಧಿಯೋಡಿಸಿದ್ದರಿಂದ ಸಂಭವಿಸಿದ ಕೆಲಸವಿದು. ಹಾಗೆ ತಿದ್ದುವಾಗಲೂ ಒಂದು ಮಾನಸಿಕ ಪ್ರತಿಕ್ರಿಯೆ ಸಂಭವಿಸಿದೆ : ಪುರಂದರದಾಸರ ಹಾಡುಗಳನ್ನು ತಿದ್ದುವ ಧಾರ್ಷ್ಟ್ಯ, ಮುಟ್ಟುವ ಧೈರ್ಯ ಎಲ್ಲಿಂದ ಬರಬೇಕು ? ಆದರೆ ಕನಕದಾಸರ ಹಾಡುಗಳ ಅಂಕಿತವನ್ನು ತಿದ್ದಿ ಬದಲಾಯಿಸುವುದಕ್ಕೆ ಅವರಿಗೆ ಕೆಲವು ಅನುಕೂಲಗಳಿದ್ದವು : ಕನಕದಾಸರು ಹುಟ್ಟಿ ಬೆಳೆದು ಬಾಳಿಬಂದ ವರ್ಗಸಮುದಾಯಕ್ಕೆ ಅಕ್ಷರದ ಬಾಗಿಲೂ, ಮೇಲು ಜಾತಿಯವರ ಮನೆ–ಮಂದಿರ–ಮಠಗಳ ಬಾಗಿಲೂ ಮುಚ್ಚಿದ್ದುವು. ಅವರ ವಿಚಾರದಲ್ಲೊಂದು ಅಸಡ್ಡೆ, ಅವರು ತಮ್ಮವರನ್ನೆಲ್ಲ ಮೀರಿ–ಮೀರಿಸಿ ಹೈಮಾಚಲೋನ್ನತವಾಗಿ ಬೆಳೆದ ರೆಂಬ ಅಸಹನೆ ಒಂದು ಹಿಡಿಮುಂದಿಯಲ್ಲಿ ಹೆಡೆಯಾಡುತ್ತಿತ್ತು. ಈ ನಗ್ನಸತ್ಯ ವನ್ನೊಪ್ಪಿಕೊಳ್ಳಲು ಯಾವ ಹಿಂಜರಿಕೆಯೂ ಇರಬೇಕಾಗಿಲ್ಲ. ವಾಸ್ತವವಾಗಿ ಇಡೀ ದಾಸಸಾಹಿತ್ಯವೆಂದು ಯಾವ ಕೀರ್ತನಾದಿ ಸಾಹಿತ್ಯರಾಶಿಯನ್ನು ನಿರ್ದೇಶಿಸುತ್ತೇವೆಯೊ ಅದು, ಪುರಂದರ_ಕನಕರ ಹಾಡು/ಕೃತಿಗಳನ್ನು ಹೊರತುಪಡಿಸಿದರೆ ಉಳಿಯುವು ದಾದರೂ ಏನು ? ಬರೀ ಎಲುಬಿನ ಗೂಡು. ಅದರಲ್ಲೂ ಗಟ್ಟಿ ಕಾಳುಗಳಿರುವುದು ಹೆಚ್ಚಾಗಿ ಕನಕದಾಸರಲ್ಲಿಯೇ. ಹೀಗಾಗಿ ಅವರ ಒಂದೊಂದೇ ಹಾಡನ್ನು ಲಪಟಾಯಿಸಿ,

ಅವರ ಹೊಳಪನ್ನು ತಗ್ಗಿಸುವ, ಅತ್ತ ಅವರ ಕೃತಿರಾಶಿಯಿಂದ ಕದ್ದ ಕಳವಿನ ಮಾಲನ್ನು ಸೇರಿಸಿ ಇನ್ನೊಂದು ಕಡೆ ಬೆಳಕು ಹಾಯಿಸುವ ವ್ಯವಸ್ಥಿತ ಸನ್ನಾಹದಲ್ಲಿ, ಹುನ್ನಾರದಲ್ಲಿ ಒಬ್ಬರಾದರೂ ನಿರತರಾಗಿರದ ಹೊರತು ಈಗ ನಾವು ಕಾಣುವ ವ್ಯತ್ಯಾಸಗಳು ಘಟಿಸುತ್ತಿರಲಿಲ್ಲ.

ಶೈಲಿಯ ದೃಷ್ಟಿಯಿಂದಲೂ, ಕಾವ್ಯನಿರ್ವಹಣೆಯ ಆಧಾರದಿಂದಲೂ, ಪ್ರಸ್ತಾಪಿತ ವಸ್ತು-ವಿಷಯದ ಬಲದಿಂದಲೂ ಇದುವರೆಗೆ ಈ ಸಂಪ್ರಬಂಧದಲ್ಲಿ ಉದಾಹರಿಸಿ ಚರ್ಚಿಸಿದ ಹಾಡುಗಳಷ್ಟೂ ಕನಕದಾಸರದೇ ಎಂಬುದು ನನ್ನ ಖಚಿತ ಅಭಿಪ್ರಾಯವಾಗಿದೆ. ನನ್ನ ಗ್ರಹಿಕೆ ತಪ್ಪೆಂದು ವಿದ್ವಾಂಸರು ಸಾಧಾರಣವಾಗಿ ತೋರಿಸಿ ಸ್ಥಾಪಿಸಿದಲ್ಲಿ ಅವರ ಅಭಿಪ್ರಾಯಕ್ಕೆ ಗೌರವಾದರ ತೋರಿಸಲು ತಯಾರಿದ್ದೇನೆ.

ಪಂಚಾಚಾರ್ಯರ ಬಗೆಗಿನ ವಿವಾದಕ್ಕೆ ಅಂತಿಮ ತೆರೆ

(ಅನುಬಂಧ : "ಸಿದ್ಧಾಂತ ಶಿಖಾಮಣಿ", "ಶ್ರೀಕರ ಭಾಷ್ಯ"ಗಳ ಕಾಲವಿಚಾರ)

ಎಂ. ಚಿದಾನಂದಮೂರ್ತಿ

ಸಂಸ್ಕೃತ ಭಾಷೆಯಲ್ಲಿರುವ ವೀರಶೈವ ಸಿದ್ಧಾಂತ ಗ್ರಂಥಗಳಲ್ಲಿ "ಸಿದ್ಧಾಂತ ಶಿಖಾಮಣಿ"ಗೆ ಅಗ್ರಸ್ಥಾನವು ದೊರಕಿದೆ. ಪಂಚಾಚಾರ್ಯರಲ್ಲಿ ಮೊದಲಿಗರಾದ ಶ್ರೀ ರೇಣುಕರಿಗೂ ಅಗಸ್ತ್ಯಮಹರ್ಷಿಗಳಿಗೂ ನಡೆದಿದೆಯೆಂದು ಹೇಳಲಾದ ಸಂವಾದವನ್ನು ಒಳಗೊಂಡಿದೆ. ಕೊಲ್ಲಿಪಾಕೆಯ ಶಿವಲಿಂಗದಿಂದ ಮೂಡಿ ಬಂದ ಶ್ರೀ ರೇಣುಕರು ಅಗಸ್ತ್ಯರಿಗೆ ಧರ್ಮೋಪದೇಶವನ್ನು ಮಾಡಿದುದು (ಇದರಲ್ಲಿ ವೀರಶೈವ ಸಿದ್ಧಾಂತದ ನಿರೂಪಣೆ ಇದೆ) ಮತ್ತು ಗಗನಯಾನವನ್ನು ಮಾಡಿ ಲಂಕೆಗೆ ಹೋಗಿ ವಿಭೀಷಣನ ಪ್ರಾರ್ಥನೆಯ ಮೇಲೆ ಮೂರು ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಾಪಿಸಿದ್ದು, ಬಳಿಕ ಹಿಂದಕ್ಕೆ ಬಂದು ಅದೇ ಕೊಲ್ಲಿಪಾಕೆಯ ಶಿವಲಿಂಗದಲ್ಲಿ ಲೀನವಾದುದು ಇಷ್ಟು ವಿಷಯಗಳು ಆ ಕೃತಿಯಲ್ಲಿವೆ. ಆ ಕೃತಿಯ ನೆಲೆಗಟ್ಟು ಸಂಪೂರ್ಣವಾಗಿ ಪುರಾಣ ಮತ್ತು (ವೀರಶೈವ) ಸಿದ್ಧಾಂತವೇ ಹೊರತು ಇತಿಹಾಸವಲ್ಲ ಎಂಬುದು ಮೇಲ್ನೋಟಕ್ಕೇ ಸ್ಪಷ್ಟ.

ಆ ಮಹತ್ವದ ಕೃತಿಯ ಕಾಲವಿಚಾರವು ವಿದ್ವಾಂಸರಲ್ಲಿ ತೀವ್ರ ಚರ್ಚೆಯ ವಿಷಯವಾಗಿದ್ದು ಆ ವಿಷಯದಲ್ಲಿ ಒಮ್ಮತಕ್ಕೆ ಬರುವುದು ಇನ್ನೂ ಸಾಧ್ಯವಾಗಿಲ್ಲ. ಆ ಕೃತಿ ವಚನಕಾರರಿಗಿಂತ, ಎಂದರೆ ಕ್ರಿ. ಶ. 1150ಕ್ಕಿಂತ ಹಿಂದಿನದೋ ಈಚಿನದೋ ಎನ್ನುವ ಬಗ್ಗೆ ಸಾಕಷ್ಟು ಜಿಜ್ಞಾಸೆ ನಡೆದಿದೆ. ಆ ಎಲ್ಲ ಚರ್ಚೆಗಳ ವಿವರಗಳನ್ನಾಗಲಿ ಸಾರಾಂಶವನ್ನಾಗಲಿ ಇಲ್ಲಿ ಕೊಡುವುದಕ್ಕೆ ಹೋಗದೆ ನಾನು ಗಮನಿಸಿರುವ ಎರಡು ಮೂರು ಗಟ್ಟಿ ಆಧಾರಗಳ ಮೇಲೆ ಅದರ ಕಾಲ ನಿರ್ಣಯದ ಬಗ್ಗೆ ನನ್ನ ನಿಲುವನ್ನು ಸ್ಪಷ್ಟ ಪಡಿಸುತ್ತೇನೆ. ಆ ಕೃತಿಯಷ್ಟೇ ವಿವಾದಕ್ಕೊಳಗಾಗಿರುವ, ಮತ್ತು ಕೆಲವೊಮ್ಮೆ ಭಾವಾವೇಶಕ್ಕೂ ಎಡೆಮಾಡಿಕೊಟ್ಟಿರುವ ಪಂಚಾಚಾರ್ಯರ ಕಾಲವಿಚಾರದ ಬಗ್ಗೆಯೂ ನನ್ನ ನಿಲುವನ್ನು ಸ್ಪಷ್ಟ ಪಡಿಸುತ್ತೇನೆ. ಪ್ರಾಸಂಗಿಕವಾಗಿ "ಶ್ರೀಕರಭಾಷ್ಯ" ಕಾಲದ ಬಗ್ಗೆಯೂ ಪ್ರಸ್ತಾಪಿಸುತ್ತೇನೆ.

ಈ ಸಂಪ್ರಬಂಧ ರಚನೆಯಲ್ಲಿ ಶ್ರೀ ಎಸ್. ಶಿವಣ್ಣನವರ ಅನೇಕ ರೀತಿಯ ಸಹಾಯವನ್ನು ಪಡೆದಿದ್ದೇನೆ.

I

ಶ್ರೀ ರೇಣುಕರಿಗೆ ರೇವಣಸಿದ್ಧ ಎಂಬ ಹೆಸರೂ ಇದೆ. ಒಂದು ವಿಷಯದಲ್ಲಿ ಎಲ್ಲ ಆಕರಗಳೂ — ಎಲ್ಲ ಕನ್ನಡ ಆಕರಗಳೂ, ಕೆಲವು ಸಂಸ್ಕೃತ ಆಕರಗಳೂ ಏಕಾಭಿಪ್ರಾಯವನ್ನು ಹೊಂದಿವೆ: ಅವರಿಬ್ಬರೂ ಒಂದೇ. ಎಲ್ಲ ಕನ್ನಡ ಆಕರಗಳೂ ಆ ಎರಡು ಹೆಸರುಗಳಿಗೂ ವ್ಯತ್ಯಾಸವನ್ನು ಕಲ್ಪಿಸುವುದು ಹೀಗೆ ''ರೇಣುಕ'' ಎಂಬುದಂ ಕೈಲಾಸದಲ್ಲಿ ಶಿವನ ಬಳಿ ಇದ್ದ ಪ್ರಮಥನ ಹೆಸರು ; ಆ ಪ್ರಮಥನು ಕೊಲ್ಲಿಪಾಕೆಯಲ್ಲಿ ಲಿಂಗದ ಮೂಲಕ 'ಅವತರಿಸಿದ' ಮೇಲೆ ಈ ಲೋಕದಲ್ಲಿ ಕೈಲಾಸದ "ರೇಣುಕ"ರಿಗೆ "ರೇವಣ (ಸಿದ್ಧ)'' ಎಂಬ ಹೆಸರಾಯಿತು. ಕೈಲಾಸದಲ್ಲಿ ರೇಣುಕನು ಅರಿಯದೆ ದಾರುಕನನ್ನು ದಾಟಿದ್ದರಿಂದ ಭೂಮಿಯಲ್ಲಿ ಹುಟ್ಟೆಂದು ಶಿವನಿಂದ ಶಪಿತನಾಗುತ್ತಾನೆ. ಅದರ ಫಲವಾಗಿ ಅವನು ಕೊಲ್ಲಿಪಾಕೆಯ ಸೋಮನಾಥಲಿಂಗದಿಂದ ಮೂಡಿ ಬರುತ್ತಾನೆ—"ನಿಷ್ಠೆ ಮಿಗೆ ಸಿದ್ಧ ರೇವಣ ನಾಮದಿಂ ನೋಡ": ಕೈಲಾಸದ ರೇಣುಕನೇ ಭೂಮಿಯಲ್ಲಿ ರೇವಣ ಎಂದಾದ- ಇದು ಹರಿಹರನ (ಸು. ಕ್ರಿ. ಶ. 1220) "ರೇವಣಸಿದ್ಧೇಶ್ವರ"ಯ ನಿರೂಪಣೆ. "ರೇವಣಸಿದ್ಧೇಶ್ವರ ಪುರಾಣ"ವನ್ನು ಬರೆದ ಚತುರ್ಮುಖ ಬೊಮ್ಮರಸನೂ (ಸು. ಕ್ರಿ. ಶ. 1500) ಅದೇ ಅಭಿಪ್ರಾಯದವನು. ಸಂಪಾದನೆಯ ಪರ್ವತೇಶನ (ಕ್ರಿ. ಶ. 1698) "ಚತುರಾಚಾರ್ಯ ಚಾರಿತ್ರ''ವು ಪಂಚಾಚಾರ್ಯರನ್ನು ಸ್ಮರಿಸಿದರೂ ನಾಲ್ವರು ಆಚಾರ್ಯರ ಮಹಿಮೆಗಳನ್ನು ಮಾತ್ರ ವರ್ಣಿಸುತ್ತದೆ. (ರೇವಣಸಿದ್ಧ, ಮರುಳಸಿದ್ಧ, ಪಂಡಿತಾರಾಧ್ಯ, ಏಕೋರಾಮ). ಶಿವನು ರೇಣುಕ, ದಾರುಕ, ಗೋಕರ್ಣ (ಧೇನುಕರ್ಣ), ಶಂಕುಕರ್ಣ ಎಂಬ ಚತುರಾಚಾರ್ಯರನ್ನು ಉದ್ದೇಶಿಸಿ ಆದಿ ವೃಷಭೇಶ್ವರನೆಂಬ ಪ್ರಮಥನು ಇತರ ಪ್ರಮಥರ ಜೊತೆ ಬಸವ ಎಂಬ ಹೆಸರನ್ನು ಧರಿಸಿ ಭೂಮಿಗೆ ಹೋಗುತ್ತಾನೆಂದೂ ಅವನಿಗೆ ಮುನ್ನವೇ ನೀವು ಹೋಗಿ ''ವೀರಶೈವೋಪದೇಶವ ಮಾಡುತ ಸಾದರದಿ ಧರೆಯ ಪಾವನವ ಮಾಡುವುದು'' ಎಂದು ಆಜ್ಞಾಪಿಸುತ್ತಾನೆ. ಅದರ ಪ್ರಕಾರ ಆ ಚತುರಾಚಾರ್ಯರು ರೇವಣ, ಮರುಳ, ಪಂಡಿತ, ಏಕೋರಾಮ ಎಂಬ ಹೆಸರು ಹೊಂದಿ ಭೂಮಿಗೆ ಅವತರಿಸುತ್ತಾರೆ.[1] ಕೈಲಾಸದ ರೇಣುಕರೇ ಭೂಲೋಕದ ರೇವಣ, ಇದು ಎಲ್ಲ ಕನ್ನಡ ಕವಿಗಳ ಕಲ್ಪನೆಯೂ ಆಗಿದೆ. ಕೈಲಾಸದ ವೃಷಭಮುಖಿ, ನಿರ್ಮಾಯ, ಮಹಾದೇವಿ, ಕಲ್ಪಕುಜೆ, ಆವಿಗಣನಾಥ, ಪುಷ್ಪದಂತರೇ ಅನುಕ್ರಮವಾಗಿ ಭೂಲೋಕದ ಬಸವ, ಅಲ್ಲಮ, ಮಹಾದೇವಿಯಕ್ಕ, ನಿಂಬಿಯಕ್ಕ, ಆದಯ್ಯಂ ಮತ್ತು ನಂಬಿಯಣ್ಣರು. ಇದು ವೀರಶೈವಪುರಾಣಗಳ ಪದ್ಧತಿ.

ಅಷ್ಟೇ ಏಕೆ, ಸಂಸ್ಕೃತ 'ಸಿದ್ಧಾಂತ ಶಿಖಾಮಣಿ'ಗೆ ಕನ್ನಡ ಟೀಕೆಯನ್ನು ಬರೆದ ಸೋಸಲೆ ರೇವಣಾರಾಧ್ಯನೇ (ಕ್ರಿ. ಶ. 1623) ಹೀಗೆ ಹೇಳುತ್ತಾನೆ —''ಅಥ

1. ಚತುರಾಚಾರ್ಯ ಚಾರಿತ್ರ (ಸಂ : ಎನ್. ಬಸವಾರಾಧ್ಯ). ಕಾಂಡ. 1. ಸಂಧಿ 2. ಪದ್ಯ 104 ಮತ್ತು 109.

೨

ಕಲಿಕಾಲ ಪ್ರವೇಶಾನಂತರದಲ್ಲಿ ರೇಣುಕ ಸಿದ್ಧೇಶ್ವರನೆಂದು ಪ್ರಸಿದ್ಧನಾದ ರೇವಣ ಸಿದ್ಧೇಶ್ವರನು ಕುಂಭಸಂಭವನಿಗೆ ಬೋಧಿಸಿದ ಈ ವೀರಶೈವ ಬೋಧಾನಂತರದಲ್ಲಿ...'' ಕನ್ನಡದ ಇನ್ನೊಬ್ಬ ಅಜ್ಞಾತ ಟೀಕಾಕಾರನೂ ಇದೇ ಮಾತು ಹೇಳುತ್ತಾನೆ.[3]

ರೇಣುಕ ಮತ್ತು ರೇವಣ ಎಂಬ ಹೆಸರುಗಳ ವಿಶ್ಲೇಷಣೆ ಗಮನಾರ್ಹವಾದುದು. ''ರೇಣು'' ಎಂಬುದು ಸಂಸ್ಕೃತ ಪದ. ಅದರ ಅರ್ಥ ಧೂಳಿನ ಕಣ, ಆ ಹೆಸರಿನ ಒಬ್ಬಾತ ಋಗ್ವೇದದ ಕೆಲವು ಭಾಗಗಳನ್ನು ರಚಿಸಿದ್ದಾನೆ. ಆ ಹೆಸರಿನ ಕೆಲವು ದೊರೆಗಳೂ ಹಿಂದೆ ಇದ್ದರು. ''ರೇಣುಕ''ವೂ ಸಂಸ್ಕೃತವೇ, ಅದು ಋಗ್ವೇದದಲ್ಲಿ ಆಯುಧಗಳ ಸಂಬಂಧವಾಗಿ ಹೇಳಬೇಕಾದ ಮಂತ್ರದ ಹೆಸರಾಗಿ, ಮಹಾಭಾರತದಲ್ಲಿ ಒಬ್ಬ ಯಕ್ಷನ ಹೆಸರಾಗಿ ಒಂದು ಆನೆಯ ಹೆಸರಾಗಿ ಕಾಣಿಸಿಕೊಂಡಿದೆ. ''ರೇಣುಕಾ'' ಎಂಬಾಕೆ ಜಮದಗ್ನಿಯ ಪತ್ನಿ, ಪರಶುರಾಮನ ತಾಯಿ, ಹೀಗೆ ''ರೇಣುಕ''ವು ಇಡಿಯಾದ ಸಂಸ್ಕೃತ ಪದ, ಅದು ವ್ಯಕ್ತಿನಾಮವೂ ಆಗಬಲ್ಲುದು.[4] ''ರೇವಣ'' ಇದರಿಂದ ಭಿನ್ನವಾದ ಹೆಸರು. ''ರೇವ''–ಭಾಗವು ಸಂಸ್ಕೃತ ಮೂಲದ್ದಾದರೆ,–''ಣ'' ಭಾಗವು ದ್ರಾವಿಡ ಮೂಲದ್ದು. ಅಂತ್ಯದ ''-ಣ''ವು ಅಣ್ಣ ಪದದ ಸವೆದ ರೂಪ.[5] ಸಂಸ್ಕೃತದಲ್ಲಿ ''ರೇವ'' ಎಂಬುದು ಒಬ್ಬ ಪುರುಷವ್ಯಕ್ತಿಯ ಹೆಸರಾಗಿ, ''ರೇವಾ'' ಎಂಬುದು ರತಿಯ ಹೆಸರಾಗಿ, ಒಂದು ನದಿಯ ಹೆಸರಾಗಿ ಕಾಣಿಸಿಕೊಂಡಿದೆ.[6] "ರೇವಣ'' ಎಂಬ ಮೀಮಾಂಸಕನೊಬ್ಬನ ಹೆಸರನ್ನು ಮೋನಿಯರ್ ವಿಲಿಯಂಸರು ದಾಖಲಿಸಿದ್ದಾರೆ.[7] ಇವನು ರೇವಣ ಸಿದ್ಧರಿಂದ ಭಿನ್ನವಾದ, ಬಹುಶಃ ಕರ್ನಾಟಕ ಆಂಧ್ರಗಳಿಗೆ ಸೇರಿದ ಒಬ್ಬ ವಿದ್ವಾಂಸ ''ರೇವಣ್ಣನ್'' ಎಂಬ ಹೆಸರಿನ ವ್ಯಕ್ತಿಯೊಬ್ಬ ಏಳನೇ ಶತಮಾನದ ಶಾಸನದಲ್ಲಿ ಕಾಣಿಸಿಕೊಂಡಿದ್ದಾನೆ.[8] ರೇವಣ್ಣ (ರೇವಣ) ಹೆಸರು ಆಂಧ್ರ ಕರ್ನಾಟಕಗಳಲ್ಲಿ ಪ್ರಚಲಿತವಾಗಿದ್ದಿತು. ಸಾರಾಂಶವೆಂದರೆ 'ರೇವಣ' ಎಂಬುದು ಮನುಷ್ಯರ ಹೆಸರು, "–ಅಣ್ಣ'' ಎಂಬ ವಾರ್ಗಿಕವನ್ನು (generic) ಹೊಂದಿದ ದ್ರಾವಿಡ ವ್ಯಕ್ತಿನಾಮ

---

2. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ. ಸಂಖ್ಯೆ. ಕೆ. 109/1.

3 ಅದೇ ಕೇಂದ್ರದ ಹಸ್ತಪ್ರತಿ.

4 ಮೋನಿಯರ್ ವಿಲಿಯಂಸರ A Sanskrit English Dictonary, P. 887.

5 "ಸಾಯಣ" ಎಂಬ ಹೆಸರಿನ ಪೂರ್ವಾರ್ಧವು "ಸ್ವಾಮಿ"ಪದದ ತದ್ಭವವೆಂದು (ನೋಡಿ-ಗೋಸ್ವಾಮಿ→ಗೋಸಾಯಿ), ಉತ್ತರಾರ್ಧ "ಣ"ವು "ಅಣ್ಣ"ದ ಸಂಕ್ಷಿಪ್ತರೂಪವೆಂದೂ ಈಗಾಗಲೇ ಸಿದ್ಧವಾಗಿದೆ. (ಸ್ವಾಮಿಯಣ್ಣ→ಸಾಯಣ್ಣ→ಸಾಯಣ).

6 ಮೋನಿಯಸ್ ವಿಲಿಯಂಸರ ಮೇಲಿನ ಅರ್ಥಕೋಶವನ್ನು ನೋಡಿ.

7 ಅದೇ.

8 ಎಂ. ಬಿ. ಕೊಟ್ರಶೆಟ್ಟಿ : ಸಿದ್ಧರಾಮ ಶಿವಯೋಗಿ (ಧಾರವಾಡ, 1975).ಪು 291. ರೇವಣಸಿದ್ಧನಿಗಿಂತ ರೇವಣ ಹೆಸರು ಹಳೆಯದು.

(ರೇವ+ಣ) ಕೈಲಾಸದ ಗಣಾಧೀಶ್ವರನ ಹೆಸರು ದೇವಭಾಷೆಯೆಂದು ಪರಿಗಣಿತ ವಾಗಿರುವ ಸಂಸ್ಕೃತದಲ್ಲಿರುವುದೂ (''ರೇಣುಕ''), ಆತನು ಮಾನುಷರೂಪದಲ್ಲಿ ಭೂಮಿಗೆ ಬಂದಾಗ ಆತನಿಗೆ ಆಡುಭಾಷೆಯಲ್ಲಿ ಪ್ರಚಲಿತವಾಗಿದ್ದ ''ರೇವಣ'' ಎಂಬ ನಾಮಕರಣವನ್ನು ಮಾಡಲಾಯಿತು ಎಂಬ ಕಲ್ಪನೆ ತರ್ಕಸಮ್ಮತವಾಗಿದೆ. ಅಥವಾ ಸರಿಯಾಗಿ ಹೇಳಬೇಕಾದರೆ ರೇವಣಸಿದ್ಧನು ಆಂಧ್ರದ ಕೊಲ್ಲಿಪಾಕಿಯಲ್ಲಿ ಎಲ್ಲ ಮಕ್ಕಳಂತೆ ಸಹಜರೀತಿಯಲ್ಲಿ ಹುಟ್ಟಿದಾಗ ಆತನ ತಂದೆ ತಾಯಂದಿರು ಇಟ್ಟಹೆಸರು ''ರೇವಣ'', ಆತ ಸಿದ್ಧನಾದ ಮೇಲೆ ಅವನ ಹೆಸರು ರೇವಣಸಿದ್ಧನೆಂದಾಯ್ತು. ಮುಂದೆ ಆತನನನ್ನು ದೈವೀಕರಿಸಿ ಆತನಿಗೆ ಕೈಲಾಸದಲ್ಲಿ ಒಂದು ಅಸ್ತಿತ್ವವನ್ನು ಕಲ್ಪಿಸಿದಾಗ ಆತನ ಅಲ್ಲಿಯ ಹೆಸರು ''ರೇಣುಕ'' ಎಂದಾಯ್ತು. ಕವಿಗಳ ಪ್ರಕಾರ "ರೇಣುಕ" ಎಂಬಾತ "ರೇವಣ" ಆದ; ಇತಿಹಾಸದ ಪ್ರಕಾರ ''ರೇವಣ" ಎಂಬಾತ ''ರೇಣುಕ'' ಎಂದಾದ. ಇದು ಖಚಿತ.

ರೇವಣ ಸಿದ್ಧನನ್ನು ಬಿಟ್ಟು ರೇಣುಕನ ಕಾಲವನ್ನು ನಿರ್ಧರಿಸಲು ಯತ್ನಿಸು ವುದೂ ಒಂದೇ, ಶಿವನ ಅಥವಾ ಅಗಸ್ತ್ಯನ ಅಥವಾ ವಿಭೀಷಣನ ಕಾಲವನ್ನು ನಿರ್ಧರಿಸಲು ಯತ್ನಿಸುವುದೂ ಒಂದೇ. ಶಿವ, ಅಗಸ್ತ್ಯ, ವಿಭೀಷಣರಿಗೆ ಅಸ್ತಿತ್ವ ಉಂಟು-ಅದು ಪೌರಾಣಿಕ ನೆಲೆಯಲ್ಲಿ, ನಂಬಿಕೆ ಮತ್ತು ಧಾರ್ಮಿಕ ನೆಲೆಗಳಲ್ಲಿ. ಆದರೆ ರೇವಣಸಿದ್ಧರಿಗೆ ಇತಿಹಾಸದ ಅಸ್ತಿತ್ವಉಂಟು. ಅವರ ಕಾಲ ನಿರ್ಣಯ ವಾದರೆ ಅದು ರೇಣುಕರ ಕಾಲವೂ ಆಗುತ್ತದೆ.

ರೇವಣಸಿದ್ಧರ ಕಾಲವನ್ನು ನಾವು ನಿರ್ಧರಿಸಲು ಹೆಚ್ಚು ಶ್ರಮಿಸಬೇಕಾಗಿಲ್ಲ. ಹರಿಹರನು ರೇವಣಸಿದ್ಧರ ಸಮಕಾಲೀನರೆಂದು ಕೊಡುವ ಪೌರಾಣಿಕ ವ್ಯಕ್ತಿಗಳಾದ ಅಗಸ್ತ್ಯ ವಿಭೀಷಣರನ್ನು ಕೈಬಿಡಬಹುದು. ಆದರೆ ಅದೇಕವಿ ರಾಜೇಂದ್ರಚೋಳ ಜಯಂತಿಯ ವಿಕ್ರಮಾದಿತ್ಯ, ಮಂಗಳವಾಡದ ಬಿಜ್ಜಳ, ಹಾವಿನಹಾಳ ಕಲ್ಲಿಶೆಟ್ಟಿ, ರುದ್ರಮುನಿ ಎಂಬ ಮಾನುಷವ್ಯಕ್ತಿಗಳನ್ನು ರೇವಣಸಿದ್ಧರ ಸಮಕಾಲೀನರೆಂದು ನಿರೂಪಿಸಿದ್ದಾನೆ. ಸೊನ್ನಲಿಗೆಯ ಸಿದ್ಧರಾಮನು ತನ್ನ ತಾಯಿ ಗರ್ಭದಲ್ಲಿರುವಾಗ ಆಕೆಯ ಗರ್ಭದಿಂದ ಒಬ್ಬ ಮಹಾತ್ಮ ಜನಿಸುವನೆಂದು ರೇವಣಸಿದ್ಧರು ಭವಿಷ್ಯವನ್ನು ನುಡಿದಂತೆ ರಾಘವಾಂಕ ಕವಿ ವರ್ಣಿಸಿದ್ದಾನೆ. ರಾಜೇಂದ್ರ ಚೋಳನು ಗೋವಿಂದಪೈ ಅವರ ಪ್ರಕಾರ ಎರಡನೆಯ ರಾಜೇಂದ್ರಚೋಳ ಅಥವಾ ಕುಲೋತ್ತುಂಗ ಚೋಳ (ಕ್ರಿ.ಶ. 1070-1118).[9] ಜಯಂತಿಯ ವಿಕ್ರಮಾದಿತ್ಯನು ಬಹುಶಃ ಕಲ್ಯಾಣದ ಆರನೆಯ ವಿಕ್ರಮಾದಿತ್ಯ (ಜಯಂತಿಪುರ ಎಂದರೆ ಬನವಾಸಿ). ಇವನ ಕಾಲ ಕ್ರಿ.ಶ. 1100. ಮಂಗಳವಾಡದ ಬಿಜ್ಜಳನ ಕಾಲ ಕ್ರಿ.ಶ. 1140. ಹಾವಿನಹಾಳ ಕಲ್ಲಯ್ಯ ಮತ್ತು ಸಿದ್ಧರಾಮರು ಸಮಕಾಲೀನರು - ಇವರ ಕಾಲ ಕ್ರಿ.ಶ. 1160. ರುದ್ರಮುನಿಯು ರೇವಣಸಿದ್ಧರ ಮಗ, ಹಾವಿನಹಾಳ ಕಲ್ಲಿಸೆಟ್ಟಿಯ ಗುರು, ಚನ್ನ

---

9 'ರೇವಣಸಿದ್ಧೇಶ್ವರರರೂ ಅವರ ಸಮಕಾಲೀನರೂ', ಶರಣಸಾಹಿತ್ಯ, ಸಂಪುಟ. 7. (ಉದ್ಧೃತ : ಚನ್ನಮಲ್ಲಿಕಾರ್ಜುನರ "ಶ್ರೀ ರೇವಣಸಿದ್ಧರು" ಕೃತಿಯಲ್ಲಿ).

ಬಸವನ (ಕ್ರಿ.ಶ. 1160) ಸಮಕಾಲೀನ. ಈ ಎಲ್ಲ ಐತಿಹಾಸಿಕ ವ್ಯಕ್ತಿಗಳನ್ನು ನೋಡಿದರೆ ರೇವಣಸಿದ್ಧರ ಕಾಲವನ್ನು ಕ್ರಿ.ಶ. 1080-1160 ಈ ಅವಧಿಗೆ ಹೊಂದಿಸಬಹುದು. ಹನ್ನೊಂದನೇ ಶತಮಾನದ ಅಂತ್ಯದಿಂದ ಹನ್ನೆರಡನೆಯ ಶತಮಾನದ ಉತ್ತರಾರ್ಧದ ಅವಧಿಯವರೆಗೆ ರೇವಣಸಿದ್ಧರು ಬದುಕಿದ್ದರೆಂಬಲ್ಲಿ ಅನುಮಾನಗಳಿಲ್ಲ. ಅವರು ಎಷ್ಟೋ ನೂರು ವರ್ಷ ಗುಪ್ತವಾಗಿ ಅಷ್ಟೇ ವರ್ಷ ಪ್ರಕಟವಾಗಿ ಬದುಕಿದ್ದರೆಂಬ ಕತೆ ಅವರ ಬಗ್ಗೆ ಪ್ರಚಲಿತವಾಗಿರುವುದನ್ನು ನೋಡಿದರೆ ರೇವಣಸಿದ್ಧರು ಒಬ್ಬ ಮನುಷ್ಯನ ಆಯುಸ್ಸಿನ ಗರಿಷ್ಠವನ್ನು ಬಾಳಿದರು ಎಂದು ಅನುಮಾನಿಸಲು ಸಾಧ್ಯವಾಗುತ್ತದೆ.

ಕ್ರಿ. ಶ. 1187 ರಲ್ಲಿ ಹುಟ್ಟಿರುವ ಸಿರಿವಾಳ ಶಾಸನದಲ್ಲಿ ಬರುವ ಶಾಂತಿ ಮಯ್ಯಗಳ ಪುತ್ರ (ಶಿಷ್ಯ ?) ರೇವಣಸಿದ್ಧನೂ ಮೇಲಿನ ರೇವಣಸಿದ್ಧನೂ ಅಭಿನ್ನರೆಂದು ಹೇಳಲು ಅವಕಾಶಗಳಿವೆ, ಆಗ ರೇವಣಸಿದ್ಧರ ಕಾಲವನ್ನು ಕ್ರಿ. ಶ. 1190 ರವರೆಗೆ ಚಾಚಬೇಕಾಗುತ್ತದೆ. ಏನೇ ಆದರೂ, ರೇವಣಸಿದ್ಧರು ಬಸವ ಅಲ್ಲಮರಿಗಿಂತ ಸ್ವಲ್ಪ ಹಿಂದಿನವರು ಮತ್ತು ಬಸವ ಅಲ್ಲಮರ ಹಿರಿಯ ಸಮಕಾಲೀನರು.

ರೇವಣಸಿದ್ಧಾದಿ ಚತುರಾಚಾರ್ಯರೂ ಬಸವಾದಿ ವಚನಕಾರರೂ ಸಮಕಾಲೀನರೆಂಬುದಕ್ಕೆ ಸಮಕಾಲೀನ ವಚನಗಳ ಆಧಾರಗಳಿವೆ.ಪಂಚಾಚಾರ್ಯರಲ್ಲಿ ಕೊನೆಯವರಾದ ವಿಶ್ವಾರಾಧ್ಯರು ಈಚಿನ ಸೇರ್ಪಡೆ.(ಈ ಬಗ್ಗೆ ಮುಂದೆ ನೋಡಿ) ಮೊದಲು ಇದ್ದುದು ರೇವಣಸಿದ್ಧ, ಮರುಳಾ ರಾಧ್ಯ, ಪಂಡಿತಾರಾಧ್ಯ ಮತ್ತು ಏಕೋರಾಮಾರಾಧ್ಯರೆಂಬ ಚತುರಾಚಾರ್ಯರೇ.ಆ ನಾಲ್ವರ ಹೆಸರುಗಳೂ ವಚನಗಳಲ್ಲಿ ಹನ್ನೆರಡನೆಯ ಶತಮಾನದ ಶಿವಶರಣರ ಜೊತೆ ಕಾಣಿಸಿಕೊಳ್ಳುವುದು ಗಮನಿಸಲೇಬೇಕಾದ ಸಂಗತಿಯಾಗಿದೆ. ಹಾವಿನಹಾಳ ಕಲ್ಲಯ್ಯನು ತನ್ನ ವಚನವೊಂದರಲ್ಲಿ[10] ಶಂಕರದಾಸಿಮಯ್ಯ, ಉರಿಲಿಂಗ ಪೆದ್ದಿ, ಘಟ್ಟಿವಾಳ ಮುದ್ದಯ್ಯ, ಅಜಗಣ್ಣ, ನಿಜಗುಣ, ಅನಿಮಿಷರನ್ನು ಸ್ಮರಿಸಿ ಬಳಿಕ,

> ಎನ್ನ ಘ್ರಾಣದಲ್ಲಿ ಸ್ವಾಯತವಾದನಯ್ಯಾ ಏಕೋರಾಮಿ ತಂದೆಗಳು
> ಎನ್ನ ಜಿಹ್ವೆಯಲ್ಲಿ ಸ್ವಾಯತವಾದನಯ್ಯಾ ಪಂಡಿತಾರಾಧ್ಯರು
> ಎನ್ನ ನೇತ್ರದಲ್ಲಿ ಸ್ವಾಯತವಾದನಯ್ಯಾ ರೇವಣಸಿದ್ಧೇಶ್ವರ ದೇವರು
> ಎನ್ನ ತ್ವಕ್ಕಿನಲ್ಲಿ ಸ್ವಾಯತವಾದನಯ್ಯಾ ಸಿದ್ಧರಾಮೇಶ್ವರ ದೇವರು
> ಎನ್ನ ಶ್ರೋತ್ರದಲ್ಲಿ ಸ್ವಾಯತವಾದನಯ್ಯಾ ಮರುಳಸಿದ್ಧೇಶ್ವರ ದೇವರು

ಎಂದು ಹೊಗಳಿ ಪ್ರಭುದೇವ, ಚನ್ನಬಸವಣ್ಣ, ಸಂಗನಬಸವಣ್ಣ, ಮಡಿವಾಳಯ್ಯ ಸೊಡ್ಡಳ ಬಾಚರಸ, ಹಡಪದಪ್ಪಣ್ಣ, ಕಿನ್ನರಿ ಬ್ರಹ್ಮಯ್ಯ ಮೊದಲಾದವರನ್ನು ಸ್ಮರಿಸಿ ಅಂತ್ಯದಲ್ಲಿ "ಎನ್ನ ಸರ್ವಾಂಗದಲ್ಲಿ ಸ್ವಾಯತವಾದರಯ್ಯಾ ಗಣಂಗಳು,

---

10. ಎಳಮಲೆಯ ಗುರು ಶಾಂತದೇವರ ವಚನ ಸಂಕಲನಗಳು (ಸಂ. ವೀರಣ್ಣ ರಾಜೂರ, ಗದಗ 1983) ಪು. 135.

ಮಹಾಲಿಂಗ ಕಲ್ಲೇಶ್ವರಾ ನಿಮ್ಮ ಶರಣರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು" ಎಂದು ತನ್ನ ವಿನಯವನ್ನು ವ್ಯಕ್ತಪಡಿಸುತ್ತಾನೆ. ಚತುರಾಚಾರ್ಯರನ್ನು ಉಳಿದವರಂತೆಯೇ 'ಗಣಂಗಳು' 'ಶರಣರು' ಎಂದು ಪರಿಗಣಿಸಿರುವುದನ್ನು ಗಮನಿಸಬೇಕು. ಈ ವಚನದಲ್ಲಿ ಬಂದಿರುವ ಎಲ್ಲ ಶರಣರೂ ಸಮಕಾಲೀನರಾದ್ದರಿಂದ, ಏಕೋರಾಮಿ ತಂದೆ ಪಂಡಿತಾರಾಧ್ಯ ರೇವಣಸಿದ್ಧೇಶ್ವರ ಮತ್ತು ಸಿದ್ಧರಾಮೇಶ್ವರರೂ ಐತಿಹಾಸಿಕ ವ್ಯಕ್ತಿಗಳೂ, ಬಸವ ಚನ್ನಬಸವ ಅಲ್ಲಮರಂತೆ ಅವರು ಶರಣರೂ, ಅದೇ ಶತಮಾನದ ಸಮಕಾಲೀನರೂ ಆಗುತ್ತಾರೆ. ವಚನಕಾರ ಹಾವಿನಹಾಳ ಕಲ್ಲಯ್ಯನಿಗೆ ರೇವಣಸಿದ್ಧರು ತಮ್ಮ ಮಗ ರುದ್ರಮುನಿಯಿಂದ ದೀಕ್ಷೆ ಕೊಡಿಸಿದ ಸಂಗತಿ ಪ್ರಸಿದ್ಧವಾಗಿದೆ.

ಅದೇ ಹನ್ನೆರಡನೇ ಶತಮಾನದ ಮೆಱೆಮಿಂಡಯ್ಯನ ವಚನವೊಂದು ಹೀಗಿದೆ-[11]

ಎನ್ನ ಘ್ರಾಣ ಶುದ್ಧವಾಯಿತ್ತಯ್ಯಾ ಏಕೋರಾಮಿ ತಂದೆಗಳ ಧರ್ಮದಿಂದ
ಎನ್ನ ಜಿಹ್ವೆ ಶುದ್ಧವಾಯಿತ್ತಯ್ಯಾ ಪಂಡಿತಾರಾಧ್ಯರ ಧರ್ಮದಿಂದ
ಎನ್ನ ನೇತ್ರ ಶುದ್ಧವಾಯಿತ್ತಯ್ಯಾ ರೇವಣಸಿದ್ಧೇಶ್ವರ ದೇವರ ಧರ್ಮದಿಂದ
ಎನ್ನ ತ್ವಕ್ಕು ಶುದ್ಧವಾಯಿತ್ತಯ್ಯಾ ಸಿದ್ಧರಾಮೇಶ್ವರ ದೇವರ ಧರ್ಮದಿಂದ
ಎನ್ನ ಶ್ರೋತ್ರ ಶುದ್ಧವಾಯಿತ್ತಯ್ಯಾ ಮರುಳಸಿದ್ಧೇಶ್ವರ ದೇವರ ಧರ್ಮದಿಂದ

ಎಂದು ಹೇಳಿ, ಮುಂದೆ ಹಾಗೆಯೇ ಸಕಲೇಶ ಮಾದರಸ, ತೆಲುಗು ಜೊಮ್ಮಯ್ಯ, ಕೇಶಿ ರಾಜಯ್ಯ, ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ, ವೀರ ಮಡಿವಾಳಯ್ಯ, ಇವರನ್ನು ಆ ವಚನ (ಅಂಕಿತ : "ಐಘಟದೂರ ರಾಮೇಶ್ವರ") "ಸ್ತೋತ್ರ ಮಾಡುತ್ತದೆ.

ಬಾಲ ಬೊಮ್ಮಣ್ಣನು ಸೌರಾಷ್ಟ್ರದ ಓಹಿಲದೇವನ ಜೊತೆ ಉಳಿದ ಹಲವು (ಕರ್ನಾಟಕದ) ಶರಣರನ್ನು ಸ್ಮರಿಸುವಾಗ ರೇವಣ ಸಿದ್ಧರನ್ನು ಸ್ಮರಿಸಿದ್ದಾನೆ.[12]

ಗುರುವಾಗಿ ಬಂದರಯ್ಯಾ ರೇವಣ ಸಿದ್ಧೇಶ್ವರ ದೇವರು
ಲಿಂಗದಲ್ಲಿ ನಿಬ್ಬೆಱಗಾದರಯ್ಯಾ ಅನಿಮಿಷ ದೇವರು
ಜಂಗಮವಾಗಿ ಸುಳಿದರಯ್ಯಾ ಪ್ರಭುದೇವರು
ಪ್ರಸಾದವ ಕೊಂಡು ಪಥವ ತೋಱಿದರಯ್ಯಾ ಬಿಬ್ಬಿ ಬಾಚಯ್ಯಗಳು
ಲಿಂಗದಲ್ಲಿ ನಿರ್ವಯಲಾದರಯ್ಯಾ ನೀಲಲೋಚನೆಯಮ್ಮನವರು
ಸೌರಾಷ್ಟ್ರ ಮಂಡಲದಲ್ಲಿ ಮೆಱೆದರಯ್ಯ ಓಹಿಲದೇವರು
ಇಂತಿವರ ಒಕ್ಕು ಮಿಕ್ಕ ಬಯಲ ಪ್ರಸಾದವ ಕೊಂಡು
ಬದುಕಿದೆನಯ್ಯ ವೀರಶೂರ ರಾಮೇಶ್ವರಾ ॥

---

11. ಅದೇ ಪು. 122
12. ಅದೇ ಪು. 128

ರೇವಣಸಿದ್ಧರನ್ನು ಗುರುವೆಂದು ಕರೆದಿರುವುದು, ಅಲ್ಲಮನನ್ನು ಜಂಗಮ ಎಂದು ಕರೆದಿರುವುದು ಗಮನಾರ್ಹ. ರೇವಣ (ರೇಣುಕ) ರಿಂದ ಆರಂಭವಾಗುವ "ಪಂಚಾಚಾರ್ಯ" ಮಠಗಳು ಗುರುಪೀಠಗಳೆಂದೂ, ಅಲ್ಲಮನಿಂದ ಆರಂಭವಾಗುವ ವಿರಕ್ತಪರಂಪರೆಯ ಪೀಠಗಳು ವಿರಕ್ತ ಪೀಠ ಅಥವಾ ಜಂಗಮ ಪೀಠಗಳೆಂದೂ ಕರೆಯಿಸಿಕೊಳ್ಳುತ್ತಿರುವುದು ಇಲ್ಲಿ ಸಹಜವಾಗಿಯೇ ನೆನಪಿಗೆ ಬರುತ್ತದೆ.

ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿದ್ದನೆಂದು ನಂಬಲಾದ ಆದಯ್ಯ ತನ್ನ ಒಂದು ವಚನದಲ್ಲಿ[13] "ರೇವಣಸಿದ್ಧಯ್ಯ ದೇವರ ನಿಷ್ಠೆ, ಮರುಳಸಿದ್ಧಯ್ಯ ದೇವರ ದೃಷ್ಟ ಪ್ರಸಾದ ನಿಷ್ಠೆ, ಏಕೋರಾಮಯ್ಯಗಳ ಆಚಾರನಿಷ್ಠೆ, ಪಂಡಿತಾರಾಧ್ಯರ ಸ್ವಯಂಪಾಕ"ಗಳನ್ನು ಕೊಂಡಾಡಿದ್ದಾನೆ. ಅವನ ಇನ್ನೊಂದು ರಚನೆ ಹೀಗಿದೆ.

ಬಸವಣ್ಣನೆನ್ನ ಅಂಗ, ಮಡಿವಾಳನೆನ್ನ ಮನ,
ಪ್ರಭುವೆನ್ನ ಪ್ರಾಣ, ಚೆನ್ನಬಸವಣ್ಣನೆನ್ನ ಕರಸ್ಥಲದ ಲಿಂಗ,
....
ರೇವಣಸಿದ್ಧಯ್ಯ ದೇವರೆನ್ನ ನೇತ್ರ,
ಸಿದ್ಧರಾಮತಂದೆಗಳೆನ್ನ ನೇತ್ರದ ದೃಕ್ಕು,
ಮರುಳ ಸಿದ್ಧಯ್ಯ ದೇವರೆನ್ನ ಶ್ರೋತ್ರ,
ಪಂಡಿತಾರಾಧ್ಯರೆನ್ನ ಜಿಹ್ವೆ,
ಏಕೋರಾಮಯ್ಯಗಳೆನ್ನ ನಾಸಿಕ,
....
ಸೌರಾಷ್ಟ್ರ ಸೋಮೇಶ್ವರಾ, ಆ ನಿಮ್ಮ ಶರಣರ ಪಿಡಿದೊತ್ತಯ್ಯಾ.

ಈ ಮೇಲ್ಕಂಡ ಎಲ್ಲ ಉಲ್ಲೇಖಗಳ ಅರ್ಥ ಸ್ಪಷ್ಟವಾಗಿದೆ. ಚತುರಾಚಾರ್ಯರಾದ ರೇವಣಾರಾಧ್ಯ, ಮರುಳಾರಾಧ್ಯ, ಪಂಡಿತಾರಾಧ್ಯ, ಏಕೋರಾಮಾರಾಧ್ಯ ಇವರು ಬಸವ, ಅಲ್ಲಮ, ಚನ್ನಬಸವ, ಮಹಾದೇವಿಯಕ್ಕ, ಮಡಿವಾಳ ಮಾಚಯ್ಯನವರ ಸಮಕಾಲೀನರು, ಎಲ್ಲರಂತೆಯೇ ಅವರೂ ಭಕ್ತರು, ಶರಣರು, ಇತರರಂತೆಯೇ ಹುಟ್ಟಿ, ಸಾಧನೆಮಾಡಿ ಷಟ್ಸ್ಥಲಮಾರ್ಗದಲ್ಲಿ ನಡೆದು ಮುಕ್ತರಾದವರು.

ಐದನೆಯ ಆಚಾರ್ಯರಾದ ವಿಶ್ವಾರಾಧ್ಯರ ಉಲ್ಲೇಖ ವಚನಗಳಲ್ಲಿ ಬಂದಿಲ್ಲ. ತೋಂಟದ ಸಿದ್ಧಲಿಂಗರೂ (ಕ್ರಿ.ಶ. 1560) ಮೊದಲ ನಾಲ್ವರನ್ನೇ ಹೆಸರಿಸಿರುವುದು (ದಾರುಕ, ರೇಣುಕ, ಗೋಕರ್ಣ, ಶಂಕುಕರ್ಣ–ಈ ನಾಲ್ಕು ಹೆಸರುಗಳು ಆಚಾರ್ಯರ ಕೈಲಾಸದಹೆಸರುಗಳು.) ಕ್ರಿ ಶ. 1550ರ ಚೆನ್ನವೀರ ಮಾಹೇಶ್ವರನ ಸಟೀಕ ಪುರುಷ ಸೂಕ್ತದಲ್ಲಿ ಮೊದಲ ನಾಲ್ವರು ಆಚಾರ್ಯರ ಹೆಸರು ಮಾತ್ರ ಇದೆ.[14]

---

13. ಅದೇ ಪು. 135.
14 ಸಾ.ಶಿ. ಮರುಳಯ್ಯ : ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ. ಬೆಂಗಳೂರು. 1980. ಪು. 151.

ಸಂಪಾದನೆಯ ಪರ್ವತೇಶನ (ಕ್ರಿ. ಶ. 1698) "ಚತುರಾಚಾರ್ಯ ಚಾರಿತ್ರ್ಯ"ದಲ್ಲಿ ಐವರು ಆಚಾರ್ಯರ ಹೆಸರಿದ್ದರೂ ಅವನು ಮೊದಲ ನಾಲ್ವರ ಪುರಾಣವನ್ನು ಮಾತ್ರ ಬರೆದಿದ್ದಾನೆ. ಹಿರಿಯ ಬಸವಪ್ಪ ನಾಯಕನ (ಕ್ರಿ.ಶ. 1710) ಶಿವತತ್ವ ರತ್ನಾಕರ ದಲ್ಲಿ ನಾಲ್ವರು ಆಚಾರ್ಯರ ಸ್ತೋತ್ರವಿದೆ[15] ವೀರಾಗಮದ "ವೀರಮಾಹೇಶ್ವರ ತಂತ್ರ" ಎಂಬ ಉತ್ತರ ಭಾಗಕ್ಕೆ ಟೀಕೆ ಬರೆದಿರುವ ಮೇಲೆ ಹೇಳಿರುವ ಚೆನ್ನವೀರ ಮಾಹೇಶ್ವರನು ತನ್ನ ವ್ಯಾಖ್ಯಾನದಲ್ಲಿಯೂ ಅದೇ ನಾಲ್ವರ ಹೆಸರನ್ನು ಹೇಳುತ್ತಾನೆ.[16] ಅವನ ಪ್ರಕಾರ, "ಆದ್ಯಾಃ" (ಆದ್ಯರು) ಎಂದರೆ ರೇಣುಕ, ದಾರುಕ, ಘಂಟಾಕರ್ಣ, ಗಜಕರ್ಣರು; "ಪುರಾತನಾಃ" (ಪುರಾತನರು) ಎಂದರೆ ರೇವಣಸಿದ್ಧ, ಮರುಳಸಿದ್ಧ, ಏಕೋರಾಮ ಮತ್ತು ಪಂಡಿತಾರಾಧ್ಯರು. ಈ ಪುರಾತನರನ್ನು "ಭೂರುದ್ರಾಃ" (ಭೂರುದ್ರರು) ಎಂದು ಅವನು ಕರೆದಿರುವುದೂ ಉಚಿತವಾಗಿದೆ. "ಭೂರುದ್ರರು" ಎಂದರೆ ಜಂಗಮರು; "ಭೂಸುರ"ರಿಗಿಂತ ಶ್ರೇಷ್ಠರು ("ಭೂಸುರ" ಪದದ ಸಾಮ್ಯದ ಮೇಲೆ, ಸ್ಪರ್ಧೆಯ ಮೇಲೆ "ಭೂರುದ್ರ" ಪದವು ಸೃಷ್ಟಿಯಾಗಿದೆಯೆಂಬುದೂ ಸ್ಪಷ್ಟ.)

ವೇದಗಳು ಮೊದಲು ವಾಸ್ತವವಾಗಿ ಮೂರು ಎಂದು ("ತ್ರಯೀ") ಪರಿಗಣಿತವಾಗಿ, ಕ್ರಮೇಣ ನಾಲ್ಕನೆಯ ಅಥರ್ವಣವು ಸೇರಿ ಚತುರ್ವೇದಗಳಾದಂತೆ, ಮೊದಲು ನಾಲ್ವರು ಆಚಾರ್ಯರೆಂದು ಪರಿಗಣಿತವಾಗಿ, ಐದನೆಯ ವಿಶ್ವಾರಾಧ್ಯರ ಹೆಸರು ಹದಿನೈದು ಹದಿನಾರನೆಯ ಶತಮಾನದಿಂದೀಚೆಗೆ ಸೇರಿ ಪಂಚಾಚಾರ್ಯರಾಗಿರು ವಂತೆ ತೋರುತ್ತದೆ. ಈ ಬಗ್ಗೆ ವಿವರವಾದ ಕೆಲಸ ಆಗಬೇಕಾಗಿದೆ.

ಕ್ರಿ.ಶ. 1187ರ ಶಿರಿವಾಳ ಶಾಸನವು ಶಾಂತಿಮಯ್ಯನ "ಪುತ್ರ" ರೇಣುಕಾ ಚಾರ್ಯರ ಹೆಸರು ಹೇಳಿ, ಬಳಿಕ ಆತನನ್ನೇ "ಶಿವಸಿದ್ಧ ಚಕ್ರಿ ರೇಣುಕ ದೇವ"ಎಂದು ಹೊಗಳಿ, ಬಳಿಕ ಆತನನ್ನೇ ಮುಂದಿನ ಪದ್ಯಗಳಲ್ಲಿ "ರೇವಣ ದೇವ" ಎಂದು, "ಸಿದ್ಧರೇವಣದೇವ", "ಸಿದ್ಧರೇವಣಯ್ಯ" ಎಂದು ಮುಂತಾಗಿ ಕರೆದಿದೆ.[17] ಕ್ರಿ.ಶ. 1193ರ (?) ಶಾಸನವೊಂದರಲ್ಲಿ ರೇವಣಸಿದ್ಧನ "ಮಗ" ಮರುಳಸಿದ್ಧ

---

15 ಅದೇ. ಪು. 127. ಶಿವನ ತತ್ಪುರುಷ ಮುಖದಿಂದ ಹುಟ್ಟಿದ ರೇವಣಸಿದ್ಧ. ಅಘೋರ ಮುಖದಿಂದ ಮರುಳಸಿದ್ಧ. ವಾಮದೇವ ಮುಖದಿಂದ ಪಂಡಿತಾರಾಧ್ಯ. ಸದ್ಯೋಜಾತ ಮುಖದಿಂದ ಏಕೋರಾಮಾರಾಧ್ಯ ಇವರೇ ನಾಲ್ವರು ಆಚಾರ್ಯರು.

16 ಜ.ಚ.ನಿ. : ಜಗದ್ಗುರು ಆದಿ ರೇಣುಕರು, 1983. ಪು. 74. (ಈ ಕೃತಿಯ ಬಗ್ಗೆ ಮುಂದೆ ನೋಡಿ). ವೀರಮಾಹೇಶ್ವರ = ವೀರಶೈವ, ಶಿವ→ಶೈವ : ಮಹೇಶ್ವರ→ ಮಾಹೇಶ್ವರ.

17 ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು. ಧಾರವಾಡ. 1970. ಪು. 46

ಎಂದಿದೆ,[18] ಈ ಮಾತು ಗಮನಾರ್ಹ-ಮಗ ಎಂದರೆ ಪುತ್ರ ಅಥವಾ ಶಿಷ್ಯ ಆಗಬಹುದು. ರೇವಣಸಿದ್ಧ ಮತ್ತು ಮರುಳಸಿದ್ಧರು ಸಮಕಾಲೀನರು ಎಂಬ ಮಾತಿಗೆ ರೇವಣಸಿದ್ಧನ ಕಾಲಕ್ಕೆ ತೀರ ಸಮೀಪವಾಗಿರುವ ಶಾಸನೋಕ್ತಿ ಒಳ್ಳೆಯ ಆಧಾರ. ಲಕ್ಷೇಶ್ವರದ ಶಾಸನದಲ್ಲಿಯೂ (ಕ್ರಿ.ಶ. 1513) ರೇಣುಕ, ರೇವಣರ ಅಭಿನ್ನತ್ವ ವನ್ನೇ ಹೇಳಿದೆ. ಕ್ರಿ. ಶ. 1280 ರ ಮರಡೀಪುರ ಶಾಸನದಲ್ಲಿ[19] ರೇಣುಕನನ್ನು ಕೈಲಾಸದ ಗಣಗಳ ಪಟ್ಟಿಯಲ್ಲಿ ಹೆಸರಿಸಿ, ಮರ್ತ್ಯಲೋಕದ ಗಣಗಳ ಪಟ್ಟಿಯಲ್ಲಿ ಬಸವ, ಸಿದ್ಧರಾಮ ಇವರೇ ಮೊದಲಾದವರನ್ನು ಹೆಸರಿಸಿದೆ. ಸಂಸ್ಕೃತ "ಸಿದ್ಧಾಂತ ಶಿಖಾಮಣಿ"ಯೂ ಕೂಡ (ಪರಿಚ್ಛೇದ 4 : ಶ್ಲೋಕ 38) ರೇಣುಕರನ್ನು ರೇವಣ ರೆಂದೇ ಕರೆದಿದೆ (ರೇವಣಸ್ಸಿದ್ಧ ಶೇಖರಃ").

ಯಾವುದೇ ಅನುಮಾನವೂ ಇಲ್ಲದೆ, ಹೀಗೆ ಹೇಳಬಹುದು: ರೇಣುಕರು ಬೇರೆ ಅಲ್ಲ, ರೇವಣರು ಬೇರೆ ಅಲ್ಲ. ಭೂಲೋಕದ ರೇವಣರ ಕೈಲಾಸದ ಪ್ರತಿರೂಪವೇ ರೇಣುಕರು. ಇದನ್ನು ಒತ್ತಿ ಹೇಳಲು ಕಾರಣವೆಂದರೆ, ರೇವಣರ ತೇದಿಯ ಆಧಾರದ ಮೇಲೆ ರೇಣುಕರ ತೇದಿಯೂ (ಆ ಎರಡೂ ತೇದಿಗಳೂ ಒಂದೇ), ಉಳಿದ ಮೂವರು ಆಚಾರ್ಯರ ತೇದಿಯೂ ನಿರ್ಣೀತವಾಗುತ್ತದೆ.

ಮೇಲಿನ, ಒಂದು ರೀತಿಯಲ್ಲಿ ಘಟ್ಟಿ ಎಂದು ಹೇಳಬಹುದಾದ ಎಲ್ಲ ಆಧಾರ ಗಳೂ ಪಂಚಾಚಾರ್ಯ ಸಮಸ್ಯೆಗೆ ಶಾಶ್ವತವಾದ ತೆರೆಯನ್ನೆಳೆಯಬೇಕು. ಅವರ ಕಾಲ ವಿಚಾರವೊಂದು ಸಮಸ್ಯೆಯಾಗಿ ಉಳಿಯಬಾರದು. ಪಂಚಾಚಾರ್ಯರಲ್ಲಿ ಮೊದಲ ನಾಲ್ವರ ಕಾಲ ಹನ್ನೆರಡನೆಯ ಶತಮಾನ ; ಐದನೆಯ ವಿಶ್ವಾರಾಧ್ಯರು ಆ ಮೇಲೆ, ಎಂದರೆ ಹದಿನೈದು ಹದಿನಾರನೇ ಶತಮಾನದ ಬಳಿಕ ಸೇರ್ಪಡೆಯಾದರು. (ವಿಶ್ವಾರಾಧ್ಯರ ಹೆಸರು ವಚನಗಳಲ್ಲಿ ಬಂದಿಲ್ಲ)

ಒಂದು ಮಾತನ್ನು ಇಲ್ಲಿ ಸ್ಪಷ್ಟಪಡಿಸಲೇ ಬೇಕಾಗುತ್ತದೆ. ಮೇಲಿನ ಚರ್ಚೆ ಪಂಚಾಚಾರ್ಯರ ಬಗ್ಗೆ ತಿಳಿಯಬೇಕಾದ್ದನ್ನೆಲ್ಲ ತಿಳಿಸಿಲ್ಲ. ಅಥವಾ ಇನ್ನೂ ಉಳಿಯುವ ಸಮಸ್ಯೆಗಳಿಗೆ ಉತ್ತರ ಕೊಟ್ಟಿಲ್ಲ. ಪಂಚಾಚಾರ್ಯರಲ್ಲಿ ಮೊದಲನೆಯವರಾದ

---

18 ಅದೇ ಪು. 47, ವಚನಕಾರ ಮರಳಸಿದ್ಧನು ಇವನೇ ಇರಬಹುದು. ವಚನಕಾರನ ಅಂಕಿತ "ರೇವಣಾ (ಸಿದ್ಧ)" ಎಂದಿರುವುದು ಗಮನಾರ್ಹ. ವಚನ ಹೀಗಿದೆ–"ಆಲಿ ಆಲಯದಲ್ಲಿ ಕರಿಗೊಳ್ಳಲು. ಆಲಿಸುವ ಶ್ರವಣ ಮೇಲಹ ಆಕಾಶವನ್ನಪ್ಪಲು. ಉಲುವು ನಿರ್ಭೂತ ಚಿತ್ತಸಮಾಧಾನವನೆಯ್ದಲು, ಕಾಲಕರ್ಮ ಭವಾರಣ್ಯವ ಗೆಲುವುದೇನು ಸೋಜಿಗವಯ್ಯಾ ರೇವಣಾ" (ಸಂ : ವೀರಣ್ಣ ರಾಜೂರ : ವಚನ ಸಾರ, ಗದಗ. 1989. ಪು.104. ಮರುಳಾರಾಧ್ಯರ ರೇವಣಾರಾಧ್ಯರ ಶಿಷ್ಯರೂ ಸ್ವತಃ ವಚನಕಾರರೂ ಆಗಿದ್ದಿರುವ ಸಾಧ್ಯತೆ ಹೆಚ್ಚಾಗಿದೆ.

19 ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು ಧಾರವಾಡ. 1970. ಪು.46.

ರೇಣುಕರ ಬಗ್ಗೆ ಅಲ್ಪಸ್ವಲ್ಪವಾದರೂ ತಿಳಿದಿದೆ. ಉಳಿದ ನಾಲ್ವರ ಬಗ್ಗೆ ನಮ್ಮ ಜ್ಞಾನ ತೀರ ಕಡಮೆ. ಐವರೂ ಆಚಾರ್ಯರ ಬದುಕಿನ ವಿವರಗಳು ಲಭ್ಯವಾಗುವುದರ ಜೊತೆ ಅವರನ್ನು ಆಚಾರ್ಯರೆಂದು ಕರೆದು ಐದು ಪೀಠಗಳಿಗೆ ಗುರುಗಳಾಗಿ ಮಾಡಿದ್ದು ಯಾವಾಗ ? ಚತುರಾಚಾರ್ಯರಲ್ಲಿ ರೇವಣಸಿದ್ಧರನ್ನು ಹೊರತುಪಡಿಸಿ ಉಳಿದ ಮೂವರನ್ನು ಈಗ ದೊರಕಿರುವ ಹನ್ನೆರಡನೆಯ ಶತಮಾನದ ಶಿವಭಕ್ತರ ಹೆಸರ ಜೊತೆ ಸಮೀಕರಿಸಬಹುದೇ ? ದೂರದ ಹಿಮಾಲಯ ಪರ್ವತ ಪಂಕ್ತಿಯ ಕೇದಾರ ದಲ್ಲಿ ಏಕೋರಾಮಾರಾಧ್ಯ ಪೀಠ, ವಾರಣಾಸಿಯಲ್ಲಿ ವಿಶ್ವಾರಾಧ್ಯ ಪೀಠ ಸ್ಥಾಪಿತ ವಾದುದು ಹೇಗೆ ? ಪಂಚಾಚಾರ್ಯರ ಪೀಠಗಳಿಗೆ ಮತ್ತು ಶಾಖಾಮಠಗಳಿಗೆ 'ಗುರುಪೀಠ'ಗಳೆಂದು ನಾಮಕರಣವಾಗಲು ಕಾರಣವೇನು ? ಅಂತೆಯೇ, ವಿರಕ್ತ ಪೀಠಗಳು ವಚನಕಾರರ ಬಗ್ಗೆ ಹೆಚ್ಚು ಒಲವು ತೋರಲು ಕಾರಣವೇನು ? ಇವೆಲ್ಲಕ್ಕೂ ಸರಿಯಾದ ಕಾರಣಗಳನ್ನು ಕಂಡುಕೊಳ್ಳಬೇಕಾಗಿದೆ. ಹೀಗಾಗಿ ಪ್ರಸ್ತುತ ಸಂಪ್ರಬಂಧವು ಪಂಚಾಚಾರ್ಯರಲ್ಲಿ ಮೊದಲ ನಾಲ್ವರು ಆಚಾರ್ಯರ ಕಾಲದ ಸಮಸ್ಯೆಯನ್ನು ಬಿಡಿಸಿದೆ ಯೆಂದು ಮಾತ್ರ ಭಾವಿಸಬೇಕಾಗಿದೆ.

''ಮುಕ್ತಿ ಕಂಠಾಭರಣ''ವೆಂಬ ವಚನ ಸಂಕಲನದಲ್ಲಿ ರೇವಣಸಿದ್ಧರೂ ಒಬ್ಬ ವಚನಕಾರರಾಗಿ (ಅಂಕಿತ : 'ತ್ರಿಪುರಾಂತಕ ಸೋಮಲಿಂಗ') ಕಾಣಿಸಿಕೊಳ್ಳುತ್ತಾರೆ. ಅಲ್ಲದೆ ಅವರ ಮುನ್ನೂರು ಪತ್ನಿಯರಲ್ಲಿ ಕೆಲವರಾದ ಶಾಂಭವಿ, ವೇದಕುಂಚಿಕೆ, ಸೌಂದರಿದೇವಿ, ಆಗಮಮೋಹಿನಿ ಇವರೂ ವಚನಗಳನ್ನು ನುಡಿದಂತೆ ಕಲ್ಪಿತವಾಗಿದೆ. ಇದೆಲ್ಲವೂ ಈಚಿನವರು ಸೃಷ್ಟಿಸಿದ್ದು ಎಂದು ಭಾವಿಸಿದರೂ ಕೊನೆಯ ಪಕ್ಷ ರೇವಣ ಸಿದ್ಧರು ವಚನಕಾರರ ಸಮಕಾಲೀನರೆಂದು ಹಿಂದಿನ ವಿದ್ವಾಂಸರು ಭಾವಿಸಿದ್ದರೆಂಬು ದಕ್ಕೆ ಇದೂ ಒಂದು ದುರ್ಬಲ ಆಧಾರವಾಗಬಹುದು. (''ಮುಕ್ತಿ ಕಂಠಾಭರಣ'' ಒಂದು ವಚನ ಸಂಕಲನವಾಗಿ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆಯೆಂಬುದನ್ನು ಇಲ್ಲಿ ಸ್ಮರಿಸುವುದು ಅಗತ್ಯ).

II

ಈ ಅಗತ್ಯ ಹಿನ್ನೆಲೆಯಲ್ಲಿ ಈಗ ನೇರವಾಗಿ ''ಸಿದ್ಧಾಂತ ಶಿಖಾಮಣಿ''ಯ ಕೃತಿಗೆ ಬರೋಣ. ಅದರ ಕರ್ತೃವಾದ ಶಿವಯೋಗಿಯು ಒಂಬತ್ತು ಶ್ಲೋಕಗಳಲ್ಲಿ (1 : 13-21) ತನ್ನ ವಂಶವನ್ನು ಹೇಳಿಕೊಂಡಿದ್ದಾನೆ.[20] ವಂಶವೃಕ್ಷ ಹೀಗಿದೆ:

---

20. ಸಿದ್ಧಾಂತ ಶಿಖಾಮಣಿ (ಸಂ.ಎಸ್. ಕರಿಬಸವಶಾಸ್ತ್ರೀ, ಮೈಸೂರು, 1921)

(ಮೊದಲನೆಯ) ಶಿವಯೋಗಿ
(ಇವನ ವಂಶದಲ್ಲಿ ಹುಟ್ಟಿದಾತ)
|
ಮುದ್ದದೇವ
|
ಸಿದ್ಧನಾಥ
|
(ಎರಡನೆಯ) ಶಿವಯೋಗಿ

ಇದು ಪುತ್ರ ಸಂತಾನವೇ ಶಿಷ್ಯ ಸಂತಾನವೇ ತಿಳಿಯದು. ವಂಶದ ಮೂಲಪುರುಷ ಶಿವಯೋಗಿ I. ಅವನ ವಂಶದಲ್ಲಿ ಹುಟ್ಟಿದಾತ ("ತಸ್ಯ ವಂಶೇ ಸಮುತ್ಪನ್ನೋ") ಮುದ್ದದೇವ. (ಎಂದರೆ ಶಿವಯೋಗಿಯ ಮುಂದಿನ ತಲೆಮಾರಿನವನೇ ಮುದ್ದದೇವ ಆಗಿರಲಾರ). ಮುದ್ದದೇವನ 'ನಂದನ'ನೇ ಸಿದ್ಧನಾಥ. ಸಿದ್ಧನಾಥನ ನಂದನನೇ ಶಿವಯೋಗಿ II —ಇವನೇ "ಸಿದ್ಧಾಂತ ಶಿಖಾಮಣಿ"ಯ ಕರ್ತೃ. ಶಿವಯೋಗಿ IIಯು ಸೊನ್ನಲಿಗೆಯ ಸಿದ್ಧರಾಮನ ಸಂಪ್ರದಾಯಕ್ಕೆ ಸೇರಿದವನೆಂದು 'ಸಿದ್ಧಾಂತ ಶಿಖಾಮಣಿ'ಯ ವ್ಯಾಖ್ಯಾನಕಾರರು ಅಭಿಪ್ರಾಯಪಡುತ್ತಾರೆ.

> ಕಶ್ಚಿದಾಚಾರ ಸಿದ್ಧಾನಾಮಗ್ರಣೀಶ್ಶಿವಯೋಗಿನಾಂ
> ಶಿವಯೋಗೀತಿ ವಿಖ್ಯಾತಶ್ಶಿವಜ್ಞಾನಮಹೋದಧಿಃ ॥

ಎಂಬ ಶ್ಲೋಕಕ್ಕೆ ಒಬ್ಬ ಕನ್ನಡ ವ್ಯಾಖ್ಯಾನಕಾರನು ಅರ್ಥೈಸಿರುವ ರೀತಿ ಹೀಗಿದೆ-[21] (ಹಸ್ತಪ್ರತಿಯಲ್ಲಿರುವಂತೆ)

"ಶಿವಯೋಗಿನಾಂ=ಶಿವಯೋಗಿಗಳ ಮಧ್ಯದಲ್ಲಿ, ಅಗ್ರಣೀಃ=ಶ್ರೇಷ್ಠನಾದ, ಶಿವಜ್ಞಾನ ಮಹೋದಧಿಃ=ಶಿವಜ್ಞಾನಕೆ ಸಮುದ್ರನಾದ, ಕಶ್ಚಿತ್=ರೇವಣ ಸಿದ್ಧೇಶ್ವರನ ದೃಷ್ಟಿಗರ್ಭಸಂಭೂತನಾದ ಸಿದ್ಧರಾಮೇಶ್ವರನೆಂಬೊರ್ವನು, ಆಸಿದ್ಧಾಚಾರ ಸಿದ್ಧಾನಾಂ=ಸದಾಚಾರ ಸಂಪನ್ನರಾದವರ, ವಂಶ–ವಂಶದಲ್ಲಿ, ಶಿವಯೋಗೀತಿ=ಶಿವಯೋಗಿಯೆಂದು, ವಿಖ್ಯಾತಃ=ಪ್ರಸಿದ್ಧನಾದಾತನು, ಆಸೀತ್ =ಆದನೆಂಬುದರ್ಥಂ"

ಈ ವ್ಯಾಖ್ಯಾನಕಾರನ ಪ್ರಕಾರ, ಮೊದಲನೆಯ ಶಿವಯೋಗಿಯು ಬೇರೆ ಯಾರೂ ಅಲ್ಲ, ಸೊನ್ನಲಿಗೆಯ ಸಿದ್ಧರಾಮನೇ. ಅವನು ಮುಂದಿನ ಎರಡು ಶ್ಲೋಕಗಳಿಗೆ ಬರೆದಿರುವ ವ್ಯಾಖ್ಯಾನವಲ್ಲೂ ಅದನ್ನೇ ಪುಷ್ಟೀಕರಿಸುತ್ತಾನೆ ("ಶಿವಯೋಗಿಯೆಂದು ಪ್ರಸಿದ್ಧನಾದ ಯಾವನಾನೊಬ್ಬ ಸಿದ್ಧರಾಮೇಶ್ವರನ" :

---

21. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಸಂಖ್ಯೆ : ಕೆ. 1150. ವ್ಯಾಖ್ಯಾನ ಭಾಗವನ್ನು ಬರೆದು ಕಳಿಸಿದ ಶ್ರೀ ಜಿ. ಜಿ. ಮಂಜುನಾಥನ್‌ಗೆ ನಾನು ಕೃತಜ್ಞ.

"ಆ ಸಿದ್ಧರಾಮೇಶ್ವರನ ವಂಶದಲ್ಲಿ"). "ಸಿದ್ಧಾಂತ ಶಿಖಾಮಣಿ"ಗೆ ಸಂಸ್ಕೃತದಲ್ಲಿ ವ್ಯಾಖ್ಯಾನವನ್ನು ಬರೆದಿರುವ ಮರಿ ತೋಂಟದಾರ್ಯರು (17ನೇ ಶ.) ಮೇಲಿನ ಶ್ಲೋಕಕ್ಕೆ ವಿವರಣೆ ಕೊಡುತ್ತ,[22] 'ಕಶ್ಚಿತ್' ಪದಕ್ಕೆ "ರೇವಣಸಿದ್ಧೇಶ್ವರನ ದೃಷ್ಟಿಗರ್ಭಸಂಭೂತ ಸಿದ್ಧರಾಮೇಶ್ವರಃ" ಎಂದೇ ಹೇಳುತ್ತಾರೆ. ಅವರ ಪ್ರಕಾರ ಮೊದಲನೆಯ ಶಿವಯೋಗಿ ಬೇರೆ ಯಾರೂ ಅಲ್ಲ, ಸೊನ್ನಲಿಗೆಯ ಸಿದ್ಧರಾಮನೇ. ಆ ಶಿವಯೋಗಿಯನ್ನು ಮತ್ತೆ ಸಿದ್ಧರಾಮನೆಂದೇ ಕರೆದಿದ್ದಾರೆ ("ಯಸ್ಯ ಶಿವಯೋಗೀತಿ ಪ್ರಸಿದ್ಧಸ್ಯ-ಸಿದ್ಧರಾಮೇಶ್ವರಸ್ಯ" ; "ತಸ್ಯ ವಂಶೇ-ಸಿದ್ಧರಾಮೇಶ್ವರಸ್ಯ ವಂಶೇ"). ಅದೇ ವ್ಯಾಖ್ಯಾನಕಾರನು ಮುದ್ದದೇವನ 'ನಂದನ'ನಾದ ಸಿದ್ಧನಾಥನನ್ನು ಸಿದ್ಧರಾಮೇಶ್ವರನೆಂದೇ ಕರೆದಿದ್ದರೂ (ಸಿದ್ಧನಾಥಾಭಿಧಃ-ಸಿದ್ಧರಾಮೇಶ್ವರಾಭಿಧಾನಯುಕ್ತ ಸಿದ್ಧನಾಥಾಚಾರ್ಯಾಖ್ಯಃ"), ಮೊದಲನೆಯ ಶಿವಯೋಗಿಯೇ ಸೊನ್ನಲಿಗೆಯ (ವಚನಕಾರ) ಸಿದ್ಧರಾಮನೆಂಬುದು ಆತನ ಸ್ಪಷ್ಟ ಅಭಿಪ್ರಾಯವಾಗಿದೆ. "ಸಿದ್ಧಾಂತ ಶಿಖಾಮಣಿ"ಗೆ ಕನ್ನಡ ವ್ಯಾಖ್ಯಾನವನ್ನು ಬರೆದಿರುವ ಸೋಸಲೆ ರೇವಣಾರಾಧ್ಯನ ಪ್ರಕಾರ, ಮುದ್ದದೇವನ ಮಗನೂ "ಸಿದ್ಧಾಂತ ಶಿಖಾಮಣಿ"ಯ ಕರ್ತೃವೂ ಆದ ಎರಡನೆಯ ಶಿವಯೋಗಿಯು ಸೊನ್ನಲಿಗೆಯ ಸಿದ್ಧರಾಮನ ಪರಂಪರೆಯವನು, ನೋಡಿ—

"ಅಥ ಕಲಿಕಾಲ ಪ್ರವೇಶಾನಂತರದಲ್ಲಿ ರೇಣುಕ ಸಿದ್ಧೇಶ್ವರನೆಂದು ಪ್ರಸಿದ್ಧವಾದ ರೇವಣಸಿದ್ಧೇಶ್ವರನು ಕುಂಭಸಂಭವನಿಗೆ ಬೋಧಿಸಿದ ಈ ವೀರಶೈವ ಶಾಸ್ತ್ರದ ಬೋಧಾನಂತರದಲ್ಲಿ ಆ ರೇವಣಸಿದ್ಧೇಶ್ವರನ ದೃಷ್ಟಿಗರ್ಭಸಂಭವನಾದ ಸಿದ್ಧರಾಮೇಶ್ವರನ ಸಂಪ್ರದಾಯ ಪ್ರಸಿದ್ಧನಾದ ಸಕಲನಿಗಮಾಗಮಪಾರಂಗತನಾದ ಶಿವಯೋಗೀಶ್ವರನೆಂಬಾಚಾರ್ಯನು ಆ ರೇಣುಕಾಗಸ್ತ್ಯ ಸಂವಾದವನು ತನ್ನ ಶಿಷ್ಯರುಗಳಿಗೆ ಬೋಧಿಸಲೋಸುಗವಾಗಿ ಸಪ್ತ ಶ್ಲೋಕಂಗಳಿಂದೆ ಸಮಸ್ತ ಸಮಯ ಶಾಸ್ತ್ರಂಗಳಿಗುತ್ತರವಾದ ನಿಗಮಾಗಮವಾಕ್ಯವನು ಗರ್ಭೀಕರಿಸಿ ಇಷ್ಟ ದೇವತಾ ನಮಸ್ಕಾರಮಂ ಮಾಡುತಿರ್ದಪಂ".[23]

ಎಂದರೆ, ಎಲ್ಲ ವ್ಯಾಖ್ಯಾನಕಾರರ ಪ್ರಕಾರ ಎರಡನೆಯ ಶಿವಯೋಗಿಯು ಸೊನ್ನಲಿಗೆಯ ಸಿದ್ಧರಾಮನ ಮರಿಮಗ ; ಅಥವಾ ಸಿದ್ಧರಾಮನ ಸಂಪ್ರದಾಯದವನು, "ಸಿದ್ಧಾಂತಶಿಖಾಮಣಿ"ಯು ಸಿದ್ಧರಾಮನಿಗಿಂತ (ಕ್ರಿ.ಶ. 1160) ಈಚಿನದು ಎಂಬಲ್ಲಿ ಎಲ್ಲ ವ್ಯಾಖ್ಯಾನಕಾರರಿಗೂ ಏಕಾಭಿಪ್ರಾಯವಿದೆ ; ಮತ್ತು ಅದನ್ನು ಉಪೇಕ್ಷೆ ಮಾಡುವಂತಿಲ್ಲ.

---

22. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ. ಸಂಖ್ಯೆ. ತಾಪ್ರ. 152. ಈ ಭಾಗವನ್ನು ಬರೆದು ಕಳಿಸಿದ ಡಾ. ವೀರಣ್ಣ ರಾಜೂರ ಅವರಿಗೆ ನಾನು ಕೃತಜ್ಞ.
23. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ. ಸಂಖ್ಯೆ. ಕೆ. 189/1.

ಎರಡನೆಯ ಶಿವಯೋಗಿಯೂ ಸಿದ್ಧರಾಮನ ವಂಶದಲ್ಲಿ ಹುಟ್ಟಿದವನೆಂಬ ಮಾತಿಗೆ ಸ್ಪಷ್ಟೀಕರಣವು ಅಗತ್ಯ. ನಮಗೆ ತಿಳಿದ ಮಟ್ಟಿಗೆ ಸಿದ್ಧರಾಮ ಕೊನೆಯ ವರೆಗೂ ಅವಿವಾಹಿತನಾಗಿಯೇ ಉಳಿದ. ಅವನೊಬ್ಬ ನೈಷ್ಠಿಕ ಬ್ರಹ್ಮಚಾರಿ. ಆದ್ದರಿಂದ ಅವನ ವಂಶವೆಂದರೆ ಅವನ ಮಕ್ಕಳ ವಂಶವೆಂದಾಗಬೇಕಾಗಿಲ್ಲ. ಅವನ ಸಮೀಪ ಬಂಧುಗಳ ವಂಶವಾಗಬಹುದು, ಅಥವಾ 'ವಂಶ'ವೆಂಬುದು ಅವನ ಶಿಷ್ಯ ಪರಂಪರೆಯೂ ಆಗಬಹುದು. ವ್ಯಾಖ್ಯಾನಕಾರರೆಲ್ಲ ಹದಿನೈದು ಹದಿನಾರನೇ ಶತಮಾನಗಳಷ್ಟು ಈಚಿನವರಾದ್ದರಿಂದ ಅವರ ಮಾತುಗಳನ್ನು ಅಕ್ಷರಶಃ ತೆಗೆದುಕೊಳ್ಳಬೇಕಿಲ್ಲವಾದರೂ ಅವರಿಗೆ "ಸಿದ್ಧಾಂತ ಶಿಖಾಮಣಿ"ಯು ಸಿದ್ಧರಾಮೋತ್ತರ ಕಾಲಕ್ಕೆ ಸೇರಿದುದೆಂಬ ಅರಿವಿರುವುದು ಗಮನಾರ್ಹ.

'ಆದಿರೇಣುಕ'ರೇ ಬೇರೆ, ಮಾನುಷ ವ್ಯಕ್ತಿ ರೇವಣಸಿದ್ಧರೇ ಬೇರೆ ಎಂದು ವಾದಿಸುವವರು ಹೇಳುವುದೇನೆಂದರೆ–ಕನ್ನಡ ಕವಿಗಳೆಲ್ಲರೂ ಅವರಿಬ್ಬರೂ ಒಂದೇ ಎಂದು ಭಾವಿಸಿ ಗೊಂದಲ ಮಾಡಿಕೊಂಡಿದ್ದಾರೆ.ಆದರೆ ಕನ್ನಡ ಕವಿಗಳಲ್ಲಿ ಯಾವಗೊಂದಲವೂ ಇಲ್ಲ–ಕನ್ನಡಕವಿಗಳು ಅವರಿಬ್ಬರನ್ನೂ ಒಂದೇ ಎಂದು ಭಾವಿಸಿರುವುದರಲ್ಲಿ ಭ್ರಮೆ ಇಲ್ಲ, ವಾಸ್ತವದ ಗ್ರಹಿಕೆ ಇದೆ. ದನುಗೂರಿನ ಪಟ್ಟಾಧ್ಯಕ್ಷನಾಗಿದ್ದ ಕವಿ ಷಡಕ್ಷರಿ (ಕ್ರಿ. ಶ. 1655) ತನ್ನ ಗುರುಪರಂಪರೆಯನ್ನು ರೇವಣಸಿದ್ಧ, ಅವನ ಮಗ ರುದ್ರಮುನಿಯಿಂದ ಆರಂಭಿಸುತ್ತಾನೆ. ತನ್ನ ''ರಾಜಶೇಖರ ವಿಳಾಸ''ದಲ್ಲಿ ಬಸವ, ಚೆನ್ನಬಸವ, ಅಲ್ಲಮಪ್ರಭು, ಸಿದ್ಧಲಿಂಗಶಿವಯೋಗಿ, ನಿಜಗುಣಯೋಗಿಗಳ ಜೊತೆ ರೇಣುಕ, ಏಕೋರಾಮ, ಪಂಡಿತಾರಾಧ್ಯ, ಮರುಳಾರ್ಯರೆಂಬ ಚತುರಾಚಾರ್ಯರನ್ನು ಹೊಗಳಿದ್ದಾನೆ. ರೇಣುಕ, ರೇವಣರು ಗುರುಪೀಠಾಧ್ಯಕ್ಷರಾಗಿದ್ದ ಷಡಕ್ಷರಿಯ ದೃಷ್ಟಿಯಲ್ಲಿ ಅಭಿನ್ನರು. ರೇಣುಕ (ರೇವಣ)ರಷ್ಟೇ ಬಸವ, ಅಲ್ಲಮ, ನಿಜಗುಣ, ಸಿದ್ಧಲಿಂಗರು ಪೂಜ್ಯರು. ಕನ್ನಡ ಕವಿಗಳಷ್ಟೇ ಅಲ್ಲ-ಸಂಸ್ಕೃತ "ಸಿದ್ಧಾಂತಶಿಖಾಮಣಿ"ಯ ಕರ್ತೃವಿನಲ್ಲೂ ರೇಣುಕ-ರೇವಣರ ಬಗ್ಗೆ ಗೊಂದಲಗಳಿಲ್ಲ. ಶಿವಯೋಗಿಯು ತನ್ನ ಕೃತಿಯಲ್ಲಿ ರೇಣುಕರನ್ನು ರೇವಣಸಿದ್ಧರೆಂದು ಎರಡು ಬಾರಿ ಉಲ್ಲೇಖಿಸಿದ್ದಾನೆ- "ರೇವಣಸಿದ್ಧ ಶೇಖರಃ"[24] ಇದು ಸರಿಯಾದ ಪಾಠವಲ್ಲವೆಂದೂ ಅದು ರೇಣುಕಸ್ಸಿದ್ಧಶೇಖರಃ" ಎಂದು ಯಾರಾದರೂ ವಾದಿಸಿದರೆ ಹಾಗೆ ವಾದಿಸಲು ಪಾಠದ ಬೆಂಬಲವಿಲ್ಲವೆಂದು ಹೇಳಬೇಕಾಗುತ್ತದೆ. ರೇಣುಕರೂ ರೇವಣಸಿದ್ಧರೂ ಅಭಿನ್ನರೆಂಬುದೇ ಖಚಿತ ಸಂಗತಿ. ''ಸಿದ್ಧಾಂತ ಶಿಖಾಮಣಿ"ಯೇ ಈ ವಿಷಯದಲ್ಲಿ ಸ್ಪಷ್ಟವಾಗಿರುವಾಗ ಇದರ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಇಲ್ಲ. "ಶ್ರೀಕರ ಭಾಷ್ಯ"ವೂ ಕೂಡ "ರೇವಣಾಸಿದ್ಧಗುರು", ರೇವಣಕಲ್ಪವೃಕ್ಷ", ರೇವಣದೇಶಿ

---

24. ಸಿದ್ಧಾಂತ ಶಿಖಾಮಣಿ (ಕರಿಬಸವ ಶಾಸ್ತ್ರಿಗಳ ಆವೃತ್ತಿ-ಪರಿಚ್ಛೇದ 4. ಶ್ಲೋಕ 38. ಕಾಶಿ ಆವೃತ್ತಿ-ಪರಿಚ್ಛೇದ 4, ಶ್ಲೋಕ 36)

ಕೇಂದ್ರ" ಎಂದು ಬಗೆ ಬಗೆಯಾಗಿ ಬಣ್ಣಿಸಿರುವುದನ್ನು ಗಮನಿಸಬೇಕು.[25] ಹಯವದನರಾಯರ ಆವೃತ್ತಿಯಲ್ಲೂ "ರೇವಣ" ಎಂದೇ ಇದೆ. ಹಾಗೆ ನೋಡಿದರೆ, "ಶ್ರೀಕರ ಭಾಷ್ಯ"ದಲ್ಲಿ "ರೇಣುಕ" ಪದಪ್ರಯೋಗವಿರುವುದೇ ನನ್ನ ಗಮನಕ್ಕೆ ಬಂದಿಲ್ಲ. ಇವೆಲ್ಲವೂ ರೇಣುಕ-ರೇವಣ ಅಭಿನ್ನತ್ವಕ್ಕೆ ಪ್ರಬಲ ಸಾಕ್ಷಿ.

ಎಂದರೆ, "ಸಿದ್ಧಾಂತ ಶಿಖಾಮಣಿ"ಯು ರೇವಣಸಿದ್ಧರಿಗಿಂತ (ಕ್ರಿ. ಶ. 1120). ಸಿದ್ಧರಾಮನಿಗಿಂತ (ಕ್ರಿ. ಶ. 1160) ಈಚಿನ ಕೃತಿಯೆಂಬಲ್ಲಿ ಅನುಮಾನವೇ ಇಲ್ಲ. ಅದು ವಚನಕಾರರಿಗಿಂತ ಈಚಿನದು ಎಂಬುದರ ಬಗ್ಗೆ ಒಂದು ಆಂತರಿಕ ಸಾಕ್ಷ್ಯಾಧಾರವಿದೆ. ವಚನಕಾರರು ಅನೇಕ ಕನ್ನಡ ಪದಗಳಿಗೆ ಸಂಸ್ಕೃತದ ಪಾರಿಭಾಷಿಕ ಅರ್ಥಗಳನ್ನು ತುಂಬಿ, ಆ ಅರ್ಥಗಳಲ್ಲಿ ಬಳಸಿ ಕನ್ನಡವನ್ನು ಬೆಳೆಸಿದರು. ಹಾಗೆ ಬಳಸಿದ ಪದಗಳಲ್ಲಿ 'ಮಾಟ' ಎಂಬುದೂ ಒಂದು. "ಮಾಡು" ಪದದ ಭಾವನಾಮವಾದ "ಮಾಟ" ಪದಕ್ಕೆ ವಚನಗಳಲ್ಲಿ ಕ್ರಿಯೆ, ದಾನ ಎಂಬರ್ಥಗಳುಂಟು.[26] ಶಿವಯೋಗಿ ಶಿವಾಚಾರ್ಯನು "ಉಪಾಧಿಮಾಟಸ್ಥಲ", "ನಿರುಪಾಧಿಮಾಟಸ್ಥಲ" "ಸಹಜಮಾಟಸ್ಥಲ ಎಂಬಲ್ಲಿ ತನ್ನ ಸಂಸ್ಕೃತ ಕೃತಿಯ ಮಧ್ಯೆ "ಮಾಟ" ಕನ್ನಡ ಶಬ್ದವನ್ನು ಬಳಸಲು ಕಾರಣ ಅವನು ವಚನಕಾರರ ಪ್ರಭಾವಕ್ಕೆ ಒಳಗಾಗಿದ್ದುದೇ ಆಗಿದೆ. ನೋಡಿ-"ಅಥ ಉಪಾಧಿಮಾಟಸ್ಥಲಂ" ಇತಿ ಉಪಾಧಿ ಮಾಟಸ್ಥಲಂ"(9:80-2); ಅಥ ನಿರುಪಾಧಿ ಮಾಟಸ್ಥಲಂ" "ಇತಿ ನಿರುಪಾದಿ ಮಾಟಸ್ಥಲಂ" (9:83); "ಅಥ ಸಹಜಮಾಟಸ್ಥಲಂ" "ಇತಿ ಸಹಜ ಮಾಟಸ್ಥಲಂ" (9:84). ಕರಿಬಸವ ಶಾಸ್ತ್ರಿಗಳ ಆವೃತ್ತಿಯಲ್ಲಿನ ಮೇಲಿನ ಪಾಠಗಳು ಕಾಶೀ ಆವೃತ್ತಿಯಲ್ಲಿ "ಸೋಪಾಧಿದಾನಸ್ಥಲಂ", "ನಿರುಪಾಧಿದಾನಸ್ಥಲಂ". "ಸಹಜದಾನಸ್ಥಲಂ" ಎಂದಾಗಿದೆ. ಶ್ರೀ ಕಾಶೀನಾಥ ಶಾಸ್ತ್ರಿಗಳು "ಮಾಟ" ಪದದ ಬದಲು "ದಾನ" ಪದವನ್ನು ಪ್ರಕ್ಷೇಪಿಸಿರುವುದು ಸ್ಪಷ್ಟವಾಗಿದೆ; ಕಾರಣವೂ ಸ್ಪಷ್ಟವಾಗಿದೆ.

ಕನ್ನಡ ವಚನ ಸಾಹಿತ್ಯದಲ್ಲಿ ನೂರೊಂದು ಸ್ಥಲಗಳನ್ನು ಹೇಳುವಾಗ ಉಪಾಧಿಮಾಟಸ್ಥಲ, ನಿರುಪಾಧಿಮಾಟಸ್ಥಲ, ಸಹಜಮಾಟಸ್ಥಲ ಎಂದೇ ಹೇಳಲಾಗುತ್ತದೆ.[27] ಶಿವಯೋಗಿ ಶಿವಾಚಾರ್ಯನು ಕನ್ನಡ ವಚನ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿರುವುದು ಸ್ವಯಂ ವೇದ್ಯವಾಗಿದೆ. ಅವನು ಇಲ್ಲವೇ ವಚನಯುಗದವನು

---

25. (ಸಂ) ಟಿ.ಜಿ. ಸಿದ್ಧಪ್ಪಾರಾಧ್ಯ (ಮೈಸೂರು 1962) ಅಧ್ಯಾಯ-1. ಪ್ರಥಮ ಪಾದ, ಶ್ಲೋಕ 6 ನೋಡಿ (ಪು. 2-3).
26. ಮಾಡು = ದಾನಮಾಡು. ಮಾಟ - ದಾನ (ಹೋಲಿಸಿ : ನೋಡು-ನೋಟ, ಕಾಡು—ಕಾಟ, ಆಡು—ಆಟ)
27. ಜಿ. ಎ. ಶಿವಲಿಂಗಯ್ಯ : 'ಏಕೋತ್ತರ ಶತಸ್ಥಲ ಸಾಹಿತ್ಯ'. ಗೌರವ, (ಸಂ : ಜಿ. ಎ. ಶಿರೂರ) ಪು. 303. ಈ ಹೆಸರುಗಳನ್ನು ಚನ್ನಬಸವಣ್ಣನವರೇ ಬಳಸಿದ್ದಾರೆ.

ಅಥವಾ ವಚನೋತ್ತರ ಯುಗದವನು ; ನಿಶ್ಚಿತವಾಗಿಯೂ ವಚನಪೂರ್ವ ಯುಗದವನಲ್ಲ.

III

"ಸಿದ್ಧಾಂತ ಶಿಖಾಮಣಿ"ಯ ಉಲ್ಲೇಖವು ಶ್ರೀಪತಿ ಪಂಡಿತನು ಬರೆದನೆಂದು ಹೇಳಲಾದ "ಶ್ರೀಕರ ಭಾಷ್ಯ"ದಲ್ಲಿ ಕಾಣಿಸಿಕೊಂಡಿದೆ. "ಶ್ರೀಕರ ಭಾಷ್ಯ"ದ ಕಾಲ ನಿರ್ಣಯವು ಅಷ್ಟು ಸುಲಭವಾಗಿಲ್ಲ. "ಶ್ರೀಕರ ಭಾಷ್ಯ"ದಲ್ಲಿ 'ಮಧ್ವ' ಪದವು ಪ್ರಯೋಗವಾಗಿರುವುದರಿಂದ ಅದು ಹದಿಮೂರನೇ ಶತಮಾನಕ್ಕಿಂತ ಈಚಿನದೆಂದು ಶ್ರೀ ಸಿ. ಹಯವದನರಾಯರು ವಾದಿಸಿದ್ದಾರೆ.[28] ಆ ಪಾಠ ಇರುವುದು 1923 ರಲ್ಲಿ ಲಿಖಿತವಾದ ಹಸ್ತಪ್ರತಿಯಲ್ಲಿ ಮಾತ್ರ. ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಆವೃತ್ತಿಯಲ್ಲಿ ಅದನ್ನು ಮೂಲಪಾಠದಿಂದ ತೆಗೆದು ಹಾಕಿ ಪಾಠಾಂತರವಾಗಿ ಕೊಡಲಾಗಿದೆ.[29] ('ಮಧ್ವ' ಪದವನ್ನು ಶ್ರೀ ಹಯವದನರಾವ್ ಬೇಕೆಂದೇ ಪ್ರಕ್ಷೇಪಿಸಿದ್ದಾರೆ ಎಂಬ ಕೆಲವರ ಆರೋಪ ಸಾಧುವಾದುದಲ್ಲ. ಆ ಮಾತು ಹಾಗಿರಲಿ). 'ಮಧ್ವ' ಪದವು "ಶ್ರೀಕರ ಭಾಷ್ಯ"ದ ಮೂಲಪಾಠದಲ್ಲಿ ಇರಲಿಲ್ಲವೆಂದು ಭಾವಿಸಿದರೂ, ಆ ಕೃತಿಯ ಕಾಲ ಹನ್ನೆರಡನೆಯ ಶತಮಾನಕ್ಕಿಂತ ಹಿಂದೆ ಹೋಗುವುದಿಲ್ಲ. ಅದನ್ನು ಬರೆದ ಶ್ರೀಪತಿ ಪಂಡಿತನು ರೇಷ್ಮೆ ವಸ್ತ್ರದಲ್ಲಿ ಬೆಂಕಿಯನ್ನು ಕಟ್ಟಿಡುವ ಪವಾಡವನ್ನು ಬೆಜವಾಡದಲ್ಲಿ ಮೆರೆದ ಶ್ರೀಪತಿ ಪಂಡಿತನೇ ಎಂದು ಹೇಳುವವರಿದ್ದಾರೆ.[30] ಅದು ನಿಜವಾದರೆ ಅವರ ಕಾಲ ಕ್ರಿ.ಶ. 1180ಕ್ಕಿಂತ ಹಿಂದೆ ಎಂದು ಭಾವಿಸಬೇಕಾಗುತ್ತದೆ "ಶ್ರೀಕರ ಭಾಷ್ಯ"ದಲ್ಲಿ ರೇವಣಸಿದ್ಧರ ಹೆಸರು ಬಂದಿರುವುದರಿಂದ ಅದು ಕ್ರಿ.ಶ. 1120ಕ್ಕಿಂತ ಈಚಿನದೆಂಬಲ್ಲಿ ಯಾವುದೇ ಅನುಮಾನವೂ ಇಲ್ಲ. ಶ್ರೀಪತಿ ಪಂಡಿತಾರಾಧ್ಯರು ಬೆಜವಾಡದಲ್ಲಿ ರೇಷ್ಮೆ ವಸ್ತ್ರದ ಪವಾಡವನ್ನು ಮೆರೆದ ಸಂಗತಿಯನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯರು ತಮ್ಮ ತೆಲುಗು "ಶಿವತತ್ವ ಸಾರಮು" ಗ್ರಂಥದಲ್ಲಿ ಹೇಳಿದ್ದಾರೆ. ಮಲ್ಲಿಕಾರ್ಜುನ ಪಂಡಿತರು ಬಸವಣ್ಣನ ಸಮಕಾಲೀನರೆಂದೂ, ಅವರು ಕ್ರಿ.ಶ. 1185ರಲ್ಲಿ ನಿಧನರಾದರೆಂದೂ ಈಗ ಬಹುತೇಕ ಒಪ್ಪಿತವಾದ ಸಂಗತಿ.[31] "ಶ್ರೀ ಪಂಡಿತಾರಾಧ್ಯ"ರ (ಇವರೇ ಶ್ರೀಪತಿ

---

28. C. Hayavadana Rao : The Srikarabhasya-I. Introd.
29. ಶ್ರೀಕರ ಭಾಷ್ಯ, ದ್ವಿತೀಯ ಸಂಪುಟಮ್. (ಮೈಸೂರು 1978), ಪು. 53, 59, 109, 128 ನೋಡಿ.
30. ಎಂ. ಶಿವಕುಮಾರ ಸ್ವಾಮಿ : 'ಸಿದ್ಧಾಂತ ಶಿಖಾಮಣಿ–ಒಂದು ಅಧ್ಯಯನ', ವೀರಶೈವ ಸಮನ್ವಯ, 1 : 1, 1987. ಪು. 6-7.
31. ನೋಡಿ - ಜಿ. ಎಸ್. ದೀಕ್ಷಿತ್ : 'ಬಸವಣ್ಣನವರ ಜೀವಮಾನದ ಕಾಲ', ಅಧ್ಯಯನ, (ಸಂ : ಎಂ. ಚಿದಾನಂದ ಮೂರ್ತಿ, 1980). ಪು. 629.

ಪಂಡಿತರು) ಬೆಂಕಿ ಪವಾಡವನ್ನು ಹನ್ನೆರಡನೆಯ ಶತಮಾನದ ಉತ್ತರಾರ್ಧದ ಬೆಜವಾಡದ ಪಲ್ಲಕೇತನ ದೊರೆಯಂ ಶಾಸನವೂ ಹೇಳುತ್ತದೆ. ಬೆಂಕಿ ಪವಾಡವನ್ನು ಮೆರೆದನೆಂದು ಹೇಳಲಾದ ಶ್ರೀಪತಿ ಪಂಡಿತನು ಕ್ರಿ. ಶ. 1180ಕ್ಕೆ ಹಿಂದಿನವನಾಗುತ್ತಾನೆ.

ಇಲ್ಲಿ ಏಳುವ ಪ್ರಶ್ನೆಯೆಂದರೆ, ಬೆಂಕಿಪವಾಡದ ಶ್ರೀಪತಿಪಂಡಿತನೂ "ಶ್ರೀಕರ ಭಾಷ್ಯ"ದ ಶ್ರೀಪತಿಪಂಡಿತನೂ ಹೆಸರಿನ ಸಾಮ್ಯವೊಂದನ್ನು ಬಿಟ್ಟರೆ ಇಬ್ಬರೂ ಒಂದೇ ಎಂದು ಹೇಳಲು ಯಾವುದೇ ಸಾಕ್ಷ್ಯಾಧಾರವೂ ಇಲ್ಲ. ಇಬ್ಬರೂ ಒಂದೇ ಆಗಿದ್ದರೆ, ಆಗ "ಶ್ರೀಕರ ಭಾಷ್ಯ"ದ ಕಾಲ ಕ್ರಿ.ಶ. 1180ಕ್ಕಿಂತ ಹಿಂದೆ ಹೋಗುತ್ತದೆ. "ಸಿದ್ಧಾಂತ ಶಿಖಾಮಣಿ"ಯು ಕ್ರಿ.ಶ. 1120-1180 ಈ ಅವಧಿಯಲ್ಲಿ ರಚಿತವಾದುದಾಗುತ್ತದೆ. ಆಗ ಕಾಲಾನುಕ್ರಮಣಿಕೆ ಸ್ಥೂಲವಾಗಿ ಹೀಗಿರುತ್ತದೆ : ರೇವಣಸಿದ್ಧ ; ಸು. ಕ್ರಿ. ಶ. 1140 ಶಿವಯೋಗಿ II ; ಸು. ಕ್ರಿ. ಶ. 1160 ("ಸಿದ್ಧಾಂತ ಶಿಖಾಮಣಿ") ಶ್ರೀಪತಿ ಪಂಡಿತ , ಸು. ಕ್ರಿ. ಶ. 1170 ("ಶ್ರೀಕರ ಭಾಷ್ಯ") ಮೇಲೆ ಸಂದೇಹಿಸಿದಂತೆ ಇಬ್ಬರೂ ಅಭಿನ್ನರೆಂಬುದಕ್ಕೆ ಹೆಸರಿನ ಸಾಮ್ಯವೊಂದನ್ನು ಬಿಟ್ಟರೆ ಬೇರೆ ಆಧಾರಗಳೇ ಇಲ್ಲ. "ಶ್ರೀಕರಭಾಷ್ಯ"ದ ಕರ್ತೃ ಇನ್ನೂ ಈಚಿನವನೆಂಬುದಕ್ಕೆ ಆಧಾರಗಳಿವೆ. ಅವನು ತನ್ನ ಕೃತಿಯ ಆರಂಭದಲ್ಲಿ ಪಂಚಾಚಾರ್ಯರನ್ನು ಸ್ಮರಿಸಿದ್ದಾರೆ. ಹಿಂದೆ ನಾವು ನೋಡಿದಂತೆ, ಮೊದಲು ಇದ್ದುದು ನಾಲ್ವರು ಆಚಾರ್ಯರು ಮಾತ್ರ; ಐದನೆಯವರು ಸೇರ್ಪಡೆಯಾದುದು ಹದಿನೈದು ಹದಿನಾರನೇ ಶತಮಾನಗಳಿಂದೀಚೆಗೆ. ಇದು ಆ ಕೃತಿ ಈಚಿನದೆಂಬುದಕ್ಕೆ ಒಂದು ಪ್ರಬಲಾಧಾರ. ಅವನು ಹೇಳುವ "ಮಧ್ವ" ಪದದ ಉಲ್ಲೇಖವು ಒಂದು ಪ್ರತಿಯಲ್ಲಿ ಮಾತ್ರ ಕಂಡುಬರುತ್ತದೆಯೆಂಬ ಕಾರಣಕ್ಕಾಗಿ ಅದನ್ನು ಪ್ರಕ್ಷೇಪವೆಂದು ಭಾವಿಸಿ ಆ ಮಾತನ್ನು ಪಾಠಾಂತರವಾಗಿ ಮೈಸೂರಿನ ಪ್ರಾಚ್ಯವಿದ್ಯಾಸಂಶೋಧನ ಮಾಲಿಕೆಯ 1978ರ "ಶ್ರೀಕರಭಾಷ್ಯ"ದ ಆವೃತ್ತಿಯಲ್ಲಿ ಕೊಡಲಾಗಿದೆ.[32] "ಶ್ರೀಕರಭಾಷ್ಯ"ದಲ್ಲಿ ಶ್ರೀರಾಮಾನುಜರ ಹೆಸರು ಬರುವುದರಿಂದ ರಾಮಾನುಜರಿಗಿಂತ (ಕ್ರಿ.ಶ. 1100) ಅದು ಈಚಿನದು. ಆ ಕೃತಿಯಲ್ಲಿ ತಿರುಪತಿಯ ವೆಂಕಟೇಶ್ವರನ ಮೂಲ ವಿಗ್ರಹದ ಪ್ರಸ್ತಾಪ ಬರುತ್ತದೆ. ಅದು ವಿಷ್ಣು ವಿಗ್ರಹವಲ್ಲವೆಂದೂ ವಾಸ್ತವವಾಗಿ ಅದು ವೀರಭದ್ರನ ವಿಗ್ರಹವೆಂದೂ ಅದರಲ್ಲಿ ಹೇಳಲಾಗಿದೆ. ಆ ಭಾಗದ ಕನ್ನಡಾನುವಾದವು ಹೀಗಿದೆ.

"ವೆಂಕಟರಮಣನ ಮೂಲವಿಗ್ರಹದಲ್ಲಿ ನಾಗಭೂಷಣ ಮೊದಲಾದ ಶಿವ ಧರ್ಮಗಳೇ ಇವೆ. ಶಂಖ ಚಕ್ರ ಮೊದಲಾದ ಗುರುತುಗಳಿಲ್ಲದ್ದರಿಂದ ಆ ವಿಗ್ರಹವು

32. ಶ್ರೀಕರಭಾಷ್ಯ, ದ್ವಿತೀಯ ಸಂಪುಟಮ್. (ಸಂ; ಎಂ. ಜಿ. ನಂಜುಂಡಾರಾಧ್ಯ). ಪು. 53, 59, 109, 128,

ಆಭಾಸವಿಷ್ಣುವೆನಿಸಿದೆ. ಹಗ್ಗ ಕಗ್ಗತ್ತಲೆಯಲ್ಲಿ ಸರ್ಪವಾಗಿ ತೋರುವಂತೆ ವೀರೇಶ್ವರನನ್ನು ರಾಮಾನುಜರು ವೆಂಕಟೇಶ್ವರನೆಂದು ಕಲ್ಪಿಸಿದ್ದಾರೆ. ವಿಠಲನ ಶಿರಸ್ಸಿನಲ್ಲಿ ಶಿವಲಿಂಗವನ್ನು ಕಾಣಬಹುದು.[33] ವೆಂಕಟೇಶ್ವರನನ್ನು ವಿಗ್ರಹವೆಂದು ಸ್ಥಾಪಿಸಲು ಯತ್ನಿಸಿರುವುದು ಕೃತಿಯು ಅರ್ವಾಚೀನತೆಗೆ ಸಾಕ್ಷಿ. ಪಂಡರಾಪುರದ ವಿಠ್ಠಲ ಸಂಪ್ರದಾಯ ಬೆಳೆದುದು ಹದಿಮೂರನೆಯ ಶತಮಾನದ ಬಳಿಕವೇ. "ಶ್ರೀಕರ ಭಾಷ್ಯ"ದ ಕಾಲ ಹದಿಮೂರು ಹದಿನಾಲ್ಕನೇ ಶತಮಾನಗಳ ಬಳಿಕವೇ ಹೊರತು ಅದಕ್ಕಿಂತ ಹಿಂದೆ ಹೋಗಲಾರದು. "ಶ್ರೀಕರಭಾಷ್ಯ"ದಲ್ಲಿ "ಮಧ್ವ" ಪದವು ಆಮೇಲೆ ಸೇರಿಕೊಂಡಿದೆಯೆಂದು ಭಾವಿಸಿದರೂ ಅದರಲ್ಲಿ ಬರುವ "ದ್ವೈತ"ವು ಮೂಲಪಾಠದಲ್ಲೇ ಇತ್ತೆಂದು ಮೈಸೂರು ಆವೃತ್ತಿಯ ಸಂಪಾದಕರು ಉಳಿಸಿಕೊಂಡಿರುವುದು ಗಮನಾರ್ಹ. ನೋಡಿ– "ದ್ವೈತ ಕ್ಷಪಣಕ ತಾರ್ಕಿಕಾದಿಭಿಃ" (ದ್ವಿತೀಯ ಸಂಪುಟಮ್, ಪು. 109. ಇದಕ್ಕೆ ಪಾಠಾಂತರ–"ಮಧ್ವ ದ್ವೈತ ಕ್ಷಣಿಕತಾರ್ಕಿಕಾದಿಭಿಃ"). "ದ್ವೈತ"ವು ಹಳೆಯ ಪರಿಕಲ್ಪನೆಯಾದರೂ ಒಂದು ದರ್ಶನವಾಗಿ ರೂಪುಗೊಂಡುದು ಮಧ್ವಾಚಾರ್ಯರ (13ನೇ ಶ.) ಕಾಲದಿಂದ ಈಚೆಗೆಯೇ. "ಶ್ರೀಕರಭಾಷ್ಯ"ದ ಕಾಲವನ್ನು ಹಠ ಹಿಡಿದು, ವಸ್ತುಸ್ಥಿತಿಯನ್ನು ತಿರುಚಿ, ತೇದಿಯಿಲ್ಲದ ಆಕರಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಹಿಂದಕ್ಕೆ ಒಯ್ಯಬೇಕೇ ಹೊರತು ವಸ್ತುನಿಷ್ಠ ಪ್ರಮಾಣಗಳಿಂದಲ್ಲ.

"ಸಿದ್ಧಾಂತ ಶಿಖಾಮಣಿ"ಗೆ ಉಜ್ಜನೀಶ (ಸು. ಕ್ರಿ.ಶ. 1400), ಸೋಸಲೆ ರೇವಣಾರಾಧ್ಯ (ಕ್ರಿ.ಶ.1623) ಮತ್ತು ಒಬ್ಬ ಅಜ್ಞಾತ ವಿದ್ವಾಂಸ ಹೀಗೆ ಮೂವರ ಕನ್ನಡ ಟೀಕೆಗಳಲ್ಲದೆ ಹದಿನೇಳನೇ ಶತಮಾನದ ಮರಿ ತೋಂಟದಾರ್ಯರು ಸಂಸ್ಕೃತದಲ್ಲಿ ಒಂದು ಟೀಕೆಯನ್ನು ಬರೆದಿದ್ದಾರೆ. ಹೀಗೆ ನಾಲ್ಕು ಟೀಕೆಗಳನ್ನು ಪಡೆದಿರುವ ಗೌರವಕ್ಕೆ "ಸಿದ್ಧಾಂತ ಶಿಖಾಮಣಿ"ಯು ಪಾತ್ರವಾಗಿರುವುದಲ್ಲದೆ ಅದು ಕನ್ನಡ ಮತ್ತು ಸಂಸ್ಕೃತ ಕೃತಿಕಾರರಿಂದ ಸಾಕಷ್ಟು ಕಡೆ ಉದ್ಧೃತವಾಗಿದೆ. ಅವು ಹೀಗಿವೆ:

(1) ಸು. ಕ್ರಿ.ಶ. 1600ರ ಮಲ್ಲಿಕಾರ್ಜುನನ ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯದಲ್ಲಿ[34] "ಕವಿಕರ್ಣರಸಾಯನ" ಅದರ ನಿಜವಾದ ಹೆಸರು ಅನೇಕ ವೀರಶೈವ ಕೃತಿಗಳ ಹೆಸರಿವೆ. ಅವು ಹೀಗಿವೆ- ಕರಣಹಸಿಗೆ, ಮಿಶ್ರಾರ್ಪಣ, ಮಂತ್ರ ಗೋಪ್ಯಾರ್ಥ, ಪಂಚೀಕರಣ ಸೃಷ್ಟಿಯಭೇದ, ಏಕೋತ್ತರ ಶತಸ್ಥಲ, ಬ್ರಹ್ಮಾದ್ವೈತಾರ್ಥ, ಮಂತ್ರ ಗೋಪ್ಯ ವೃತ್ತ, ಅವಧೂತ ಗೀತೆ, ವಿವೇಕಚಿಂತಾಮಣಿ,

33. ಶ್ರೀಕರಭಾಷ್ಯ ಸಂಪುಟ I. (ಅನು : ಟಿ.ಜಿ. ಸಿದ್ಧಪ್ಪಾರಾಧ್ಯ. ಮೈಸೂರು, 1962), ಪು. 813.

34. (ಸಂ) ಎಂ. ಎಂ. ಕಲಬುರ್ಗಿ ಮತ್ತು ಬಿ. ಆರ್. ಹಿರೇಮಠ, 1977, 11 : 9-18.

ಶಿವತತ್ವ ಚಿಂತಾಮಣಿ, ಸಾನಂದ ಚರಿತ, ಸಾರತ್ರಯ, ಶತಕತ್ರಯ, ಶತರತ್ನ, ವೀರಮಾಹೇಶ್ವರಾಚಾರ ಸಾರಸಂಗ್ರಹ, ಶೈವರತ್ನಾಕರ, ವೀರಶೈವಾಮೃತ ಮಹಾ ಪುರಾಣ, ಲಿಂಗಲೀಲಾವಿಲಾಸ ಚಾರಿತ್ರ, ಪ್ರಭುಲಿಂಗಲೀಲೆ, ಸಿಂಗಿರಾಜಪುರಾಣ, ಸಿದ್ಧಾಂತ ಶಿಖಾಮಣಿ, ದೀಕ್ಷಾಬೋಧೆ ಸೋಮನಾಥಾಹ್ವಯ ಭಾಷ್ಯ, ತಾತ್ಪರ್ಯ ಸಂಗ್ರಹ, ಮಹಿಮಾಹಾಲಾಸ್ತವ, ಪಂಚಸ್ತವ, ವೇದಪಾದಸ್ತವ, ಶಿವಾಗಮಗಳು, ಅನ್ಯವಾದಿ ಕೋಳಾಹಳ, ಗಣಭಾಷ್ಯ ರತ್ನಮಾಲೆ, ಇವೇ ಮೊದಲಾದುವುಗಳಲ್ಲಿ "ಸಿದ್ಧಾಂತ ಶಿಖಾಮಣಿ"ಯ ಹೆಸರಿದೆ.

(2) ಕ್ರಿ.ಶ. 1698ರ ಸಂಪಾದನೆಯ ಪರ್ವತೇಶನ "ಚತುರಾಚಾರ್ಯ ಚಾರಿತ್ರ"ದಲ್ಲಿ[35] "ಸಿದ್ಧಾಂತ ಶಿಖಾಮಣಿ"ಯ ಹೆಸರಿದೆ.

> ಹರನ ಕೊಂಡಾಡುವಲ್ಲೀ ಸ್ಕಂದ ಸಾರಂಗ
> ಉರು ತರಗಳಾಗಿರ್ಪವವರಲ್ಲಿ ಪಟ್ಸ್ಥಲ
> ಜ್ಞಾನದೀಪಿಕೆಯಲ್ಲಿ ಷಟ್ಕಾವ್ಯದಿ ಗುರುಬಸವೇಶ್ವರು ನಿರೂಪಿಸಿದ ಸಿದ್ಧಾಂತ
> ವರ ಶಿಖಾಮಣಿಯಲ್ಲಿ ನಿರೂಪಿಸಿದ ನಿಜಗುಣರು
> ವಿರಚಿಸಿದ ದಯಮೆರೆದಾ ವಿವೇಕ ಚಿಂತಾಮಣಿಯ
> ಪರತರಾನಿರಾಭಾರಿ ಶೈವಸಂಗತಿಯಲ್ಲಿ ಸಿರವಂ ತೆಗೆವಂಗೈನಂ ॥

ಮೂರನೆಯ ಪಾದದಲ್ಲಿನ ಪಾಠದ ಪ್ರಕಾರ "ಸಿದ್ಧಾಂತ ಶಿಖಾಮಣಿ"ಯ ಕರ್ತೃ ಗುರುಬಸವನಾಗುತ್ತಾನೆ; ಆದರೆ ಗುರುಬಸವನು "ಷಟ್ಕಾವ್ಯ"ಗಳ ಕರ್ತೃ. ಪಾದದಲ್ಲಿ ಅಧಿಕ ಮಾತ್ರೆಗಳಿವೆ, ಮತ್ತು ಪದಗಳ ಸ್ಥಾನ ಅದಲು ಬದಲಾಗಿದೆ. ಎರಡನೆಯ ಪಾದದಲ್ಲಿ ಒಂದು ಮಾತ್ರೆ ಕಡಮೆಯಿದೆ. ಮೂರನೆಯ ಪಾದದಲ್ಲಿ ದ್ವಿತೀಯ ಪ್ರಾಸ ದೋಷವಿದೆ. ಆ ಪದ್ಯದ ಪೂರ್ವಾರ್ಧವನ್ನು ಈ ರೀತಿಯ ಊಹಾ ಪರಿಷ್ಕರಣದಿಂದ ತಿದ್ದಬಹುದು :

> 'ಹರನ ಕೊಂಡಾಡುವಲ್ಲೀ ಸ್ಕಂದ ಸಾರಂಗ
> ಉರುತರಗಳಾಗಿರ್ಪವವರಲ್ಲಿ ಪಟ್ಸ್ಥಲಾ
> ವ (ಭ?) ರಣದೀಪಿಕೆಯಲ್ಲಿ ಗುರುಬಸವ ದೇವರು ನಿರೂಪಿಸಿದ ಷಟ್ಕಾವ್ಯದಿಸಿದ್ಧಾಂತ
> ವರ ಶಿಖಾಮಣಿ ಯಲಿ...............

3) ಕ್ರಿ.ಶ. 1720ರ ಇಮ್ಮಡಿ ಗುರುಸಿದ್ಧನ "ಹಾಲಾಸ್ಯಪುರಾಣ"ದಲ್ಲಿ[36] ಅಗಸ್ತ್ಯ ಮುನಿಯನ್ನು "ಸಿದ್ಧಾಂತ ಶಿಖಾಮಣಿ ಶ್ರವಣ ಶೀಲ ವಿಲೋಲ, ರೇಣುಕ ಬೋಧ್ಯ" ಎಂದು ಸ್ತೋತ್ರ ಮಾಡಲಾಗಿದೆ.

---

35. (ಸಂ) ಎಸ್. ಬಸವಾರಾಧ್ಯ. ಮೈಸೂರು, 1986 6 : 8 : 41, ಪು. 818. ಈ ಪದ್ಯದಲ್ಲಿ ಪ್ರಾಸ, ಛಂದಸ್ಸು ಕೆಟ್ಟಿರುವುದನ್ನು ಸಂಪಾದಕರೇ ಗಮನಿಸಿದ್ದಾರೆ.
36. (ಸಂ.) ಜಿ. ಜಿ. ಮಂಜುನಾಥನ್, ಮೈಸೂರು 1975. 1 : 52.

4) ಹದಿನೇಳನೇ ಶತಮಾನದ ಶಾಂತದೇವರು ಸಂಗ್ರಹಿಸಿದ "ಷಟ್ಪ್ರಕಾರ ಸಂಗ್ರಹ" ಎಂಬ ಸಂಕಲನದಲ್ಲಿ[37] ಪ್ರತಿ ಅಧ್ಯಾಯದ ಆರಂಭದಲ್ಲಿ ಬೇರೆ ಬೇರೆ ಸಂಸ್ಕೃತ ಗ್ರಂಥಗಳಿಂದ ಶ್ಲೋಕಗಳನ್ನು ಉದಾಹರಿಸಿ, ಅದೇ ವಿಷಯವಿರುವ ವಚನಗಳನ್ನು ಆ ಮುಂದೆ ಸಂಕಲಿಸಲಾಗಿದೆ. ಅದರಲ್ಲಿ ಒಟ್ಟು ಹದಿಮೂರು ಶ್ಲೋಕಗಳನ್ನು "ಸಿದ್ಧಾಂತ ಶಿಖಾಮಣಿ"ಯಿಂದ ಉಲ್ಲೇಖಿಸಲಾಗಿದೆ.[38]

5) ಹದಿನಾರು-ಹದಿನೇಳನೇ ಶತಮಾನದ ಜಾಳಿಗೆ ಕಂತೆ ಸಿದ್ಧಲಿಂಗ ಶಿವಯೋಗಿಯು "ಶಿವಯೋಗ ಚಿಂತಾಮಣಿ"[39]ಯಲ್ಲಿಯೂ ಹಿಂದಿನ ಸಂಕಲನದಂತೆ ಪ್ರತಿ ಅಧ್ಯಾಯದ ಆರಂಭದಲ್ಲಿ ಸಂಸ್ಕೃತ ಕೃತಿಗಳಿಂದ ಶ್ಲೋಕಗಳೂ (ಇವುಗಳನ್ನು ''ಗ್ರಂಥ'' ಎಂದು ಕರೆದಿದೆ), ಬಳಿಕ ಅದೇ ಅಭಿಪ್ರಾಯದ ವಚನಗಳೂ (ಇವುಗಳನ್ನು "ವಾಕ್ಯ" ಎಂದಿದೆ) ಬಂದಿದೆ. "ಸಿದ್ಧಾಂತ ಶಿಖಾಮಣಿ"ಯಿಂದ ಒಟ್ಟು ಇಪ್ಪತ್ತೇಳು ಶ್ಲೋಕಗಳು[40] ಉದಾಹೃತವಾಗಿವೆ.

ಹೀಗೆ ''ಸಿದ್ಧಾಂತ ಶಿಖಾಮಣಿ"ಯು ನಾಲ್ಕು ಜನರು ವ್ಯಾಖ್ಯಾನಗಳನ್ನು ಬರೆಯುವಷ್ಟು, ಕೊನೆಯಪಕ್ಷ ಮೂರು ಕಾವ್ಯಗಳಲ್ಲಿ ಉಲ್ಲೇಖ ಮಾಡುವಷ್ಟು, ಹಾಗೇ ಎರಡು ವಚನ ಸಂಕಲನ ಸಂಕಲನಗಳಲ್ಲಿ ಅಲ್ಲಿಂದ ಶ್ಲೋಕಗಳನ್ನು ಉದಾಹರಿಸುವಷ್ಟು ಪ್ರಾಮುಖ್ಯವನ್ನು ಪಡೆದಿದೆ. ಆ ಕೃತಿಯ ಉಲ್ಲೇಖ ಸುಕ್ರಿ.ಶ. 1400 ರಿಂದ ಕ್ರಿ.ಶ. 1720 ರವರೆಗೆ ವ್ಯಾಪಿಸಿದೆ. ಆದರೆ, ''ಶ್ರೀಕರ ಭಾಷ್ಯ"ವು ಒಂದು ಪ್ರಾಚೀನ ಕೃತಿಯಾಗಿದ್ದಿದ್ದರೆ, ಅದರ ಕರ್ತೃ ಬೇಕಿ ಪವಾಡವನ್ನು ಮೆರೆದ ಶ್ರೀಪತಿ ಪಂಡಿತರೇ ಆಗಿದ್ದರೆ, ಆ ಕೃತಿಯ ಹೆಸರು ಪ್ರಾಚೀನ ಕೃತಿಗಳಲ್ಲಿ ಉಲ್ಲೇಖವಾಗುತ್ತಿತ್ತು, ಮತ್ತು ಅಲ್ಲಿಂದ ಮಾತುಗಳು ಉದಾಹೃತವಾಗುತ್ತಿದ್ದುವು. ಈ ಬಗ್ಗೆ ಬಲ್ಲವರು ಹೆಚ್ಚಿನ ಬೆಳಕು ಬೀರುವ ಅಗತ್ಯವಿದೆ.

''ಶ್ರೀಕರ ಭಾಷ್ಯ"ವನ್ನು ಬರೆದವನು ಎಷ್ಟು ಈಚಿನವನು ? ನಿಶ್ಚಿತವಾಗಿಯೂ ಅವನು ಹದಿನೈದನೆಯ ಅಥವಾ ಹದಿನಾರನೆಯ ಶತಮಾನಕ್ಕಿಂತ ಹಿಂದಿನವನಲ್ಲ. ಆದರ ಕರ್ತೃ ಶ್ರೀಪತಿ ಪಂಡಿತನು ಅಗ್ನಿಪವಾಡದ ಶ್ರೀಪತಿ ಪಂಡಿತ

---

37. (ಸಂ.) ಜಿ. ಎ. ಶಿವಲಿಂಗಯ್ಯ. ಗದಗ್, 1987
38. ಪು. 94; 95; 101; 112 (ಎರಡು ಶ್ಲೋಕಗಳು) ; 118; 122: 126: 133: 147; 152: 203; 233. ಉದ್ಧೃತವಾಗಿರುವ ಕೃತಿಗಳಲ್ಲಿ ವೀರಾಗಮ, ವಸಿಷ್ಠ ಪುರಾಣ, ಮಹಾಭಾರತವಲ್ಲದೆ "ಪಿರಿಪುರಾಣ" ವೆಂಬ ಸಂಸ್ಕೃತ ಕೃತಿಯಿಂದಲೂ ಶ್ಲೋಕಗಳು ಉದ್ಧೃತವಾಗಿವೆ. "ಪೆರಿಯಪುರಾಣ" ವಾಸ್ತವವಾಗಿ ಒಂದು ತಮಿಳು ಕೃತಿ. "ಪಿರಿಪುರಾಣ" ಯಾವುದು ?
39. (ಸಂ.) ಉಮಾದೇವಿ, ಗದಗ. 1887.
40. ಪು. 13: 19; 20; 14; 25; 27; 32; 57; 65; 81; 82; 98; 99: 102: 196: 197; 276; 289; 295; 302; 309; 310: 315: 321: 322; 344, 358.

ಅಲ್ಲ. ಇಲ್ಲವೇ ಅದೇ ಹೆಸರಿನ ಬೇರೊಬ್ಬ ವ್ಯಕ್ತಿ. ಅಥವಾ ಯಾರೋ ಈಚಿನವರು ಅಗ್ನಿ ಪವಾಡದ ಶ್ರೀಪತಿ ಪಂಡಿತರ ಹೆಸರಲ್ಲಿ ಅದನ್ನು ರಚಿಸಿರಬೇಕು.

IV

ಈ ಸಂಪ್ರಬಂಧದ ಒಟ್ಟು ತೀರ್ಮಾನಗಳನ್ನು ಈ ಕೆಳಕಂಡಂತೆ ಸಂಗ್ರಹಿಸಬಹುದು.

1. ಪೌರಾಣಿಕ ರೇಣುಕರೂ ಐತಿಹಾಸಿಕ ರೇವಣಸಿದ್ಧನೂ ಬೇರೆ ಬೇರೆ ಅಲ್ಲ-ಇದು ಖಚಿತ ಸಂಗತಿ.[41] ಕಾಲ ಸುಮಾರು ಕ್ರಿ.ಶ. 1080-1180.

2. ರೇವಣಾರಾಧ್ಯ (ರೇವಣ ಸಿದ್ಧ) ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರೆಂಬ ಪಂಚಾಚಾರ್ಯರಲ್ಲಿ ಮೊದಲ ನಾಲ್ವರು ಬಸವ, ಅಲ್ಲಮ, ಸಿದ್ಧರಾಮರ ಸಮಕಾಲೀನರು. ಇದೂ ಖಚಿತ ಸಂಗತಿ. ಪಂಚಾಚಾರ್ಯರಲ್ಲಿ ಐದನೆಯವರಾದ ವಿಶ್ವಾರಾಧ್ಯರು ಆ ಮಾಲಿಕೆಗೆ ಹನ್ನೆರಡನೆಯ ಶತಮಾನದ ಬಳಿಕ (ಹದಿನಾಲ್ಕು, ಹದಿನೈದನೆಯ ಶತಮಾನದ ಬಳಿಕ ಎಂದರೂ ತಪ್ಪಾಗಲಾರದು) ಸೇರ್ಪಡೆಯಾದರು.

3. "ಸಿದ್ಧಾಂತ ಶಿಖಾಮಣಿ"ಯ ಕಾಲ ಕ್ರಿ.ಶ. 1160-80ಕ್ಕಿಂತ ನಿಶ್ಚಿತವಾಗಿಯೂ ಹಿಂದೆ ಅಲ್ಲ. ಬಹುಶಃ ಹದಿಮೂರು ಹದಿನಾಲ್ಕನೇ ಶತಮಾನದ ಕೃತಿ.

4. "ಶ್ರೀಕರ ಭಾಷ್ಯ"ದ ಕಾಲ ಹದಿನಾಲ್ಕನೇ ಶತಮಾನಕ್ಕಿಂತ ನಿಶ್ಚಿತವಾಗಿಯೂ ಹಿಂದೆ ಅಲ್ಲ. ಅದಕ್ಕಿಂತ ಸಾಕಷ್ಟು ಈಚಿನ ಕೃತಿ.

5. ನಾನು ಜಂಗಮ ಜಾತಿಯಲ್ಲಿ "ಅನುಶ್ರೇಣಿ" ಎಂಬ ಸಂಪ್ರಬಂಧದಲ್ಲಿ ತೋರಿಸಿರುವಂತೆ[42] ವಿರಕ್ತ ಪೀಠಗಳಿಗೆ ಮತ್ತು ಗುರುಪೀಠಗಳಿಗೆ ಕರ್ತವ್ಯ ವಿಂಗಡಣೆಯಲ್ಲಿ ಭೇದವಿದೆಯೇ ಹೊರತು ಉದ್ದೇಶ ಭೇದವಿಲ್ಲ. ಎರಡೂ ಸಮಾನ ಗೌರವಕ್ಕೆ ಪಾತ್ರ; ಎರಡೂ ಸಮಾಜದ ಎರಡು ಕಣ್ಣುಗಳು. ಪ್ರಾಚೀನತೆಯ ದೃಷ್ಟಿಯಿಂದಲೂ ಎರಡೂ ಬಗೆಯ ಮಠಗಳು ಹೇಳಿಕೊಳ್ಳುವ ಮೂಲಪುರುಷರು ಒಂದೇ ಕಾಲದವರಾಗುತ್ತಾರೆ. ಹೀಗೆ, ಕರ್ತವ್ಯ ಮತ್ತು ಪ್ರಾಚೀನತೆ ಎರಡರಲ್ಲೂ ಯಾವುದೇ ಒಂದು ಪರಂಪರೆಯ ಮಠಗಳು ಇನ್ನೊಂದು ಪರಂಪರೆಯ ಮಠಗಳ

---

41. ಶ್ರೀ ಚನ್ನಮಲ್ಲಿಕಾರ್ಜುನರು "ಶ್ರೀ ರೇವಣಸಿದ್ಧರು" ಎಂಬ ಕೃತಿಯಲ್ಲಿ (ಬ್ಯಾಡಗಿ. 1958) ರೇಣುಕ-ರೇವಣ ಅಭಿನ್ನತ್ವದ ಬಗ್ಗೆ ಸ್ಪಷ್ಟ ಅಭಿಪ್ರಾಯಗಳನ್ನು ಹೊಂದಿರುವುದನ್ನು ಇಲ್ಲಿ ಸ್ಮರಿಸುತ್ತ ಆ ಅಭೂತಪೂರ್ವ ಸಂಶೋಧನಾತ್ಮಕ ಕೃತಿಯ ಮೌಲ್ಯದತ್ತ ಓದುಗರ ಗಮನವನ್ನು ಸೆಳೆಯಬಯಸುತ್ತೇನೆ.

42 ಎಂ. ಚಿದಾನಂದಮೂರ್ತಿ : ಲಿಂಗಾಯತ ಅಧ್ಯಯನಗಳು (ಮೈಸೂರು,1896) ಪು. 466-524 ; 556-8.

ಗಿಂತ ಶ್ರೇಷ್ಠತೆಯನ್ನು ಸಾಧಿಸಲು ಅವಕಾಶವಿಲ್ಲ. ಒಂದು ವೇಳೆ ರೇವಣಸಿದ್ಧರು ಬಸವನಿಗಿಂತ ಸ್ವಲ್ಪ ಹಿಂದಿನವರು ಎಂದಾದರೆ, ವಚನಗಳು "ಸಿದ್ಧಾಂತ ಶಿಖಾಮಣಿ"ಗಿಂತ ಸ್ವಲ್ಪ ಪ್ರಾಚೀನವಾದ್ದರಿಂದ ಎರಡೂ ಒಂದು ಬಗೆಯ ಸಮತೋಲನವನ್ನು ಪಡೆಯುತ್ತವೆ. ಈ ಮಾತನ್ನು ಹೇಳಲು ಕಾರಣವೂ ಸ್ಪಷ್ಟವಾಗಿದೆ–ಸ್ವಲ್ಪ ಅವಕಾಶಸಿಕ್ಕರೂ ಕೆಲವು ಅತಿಜಾಣರು ತಮ್ಮದನ್ನು ಶ್ರೇಷ್ಠವೆಂದು ಸಾಧಿಸಲು ಯತ್ನಿಸುತ್ತಾರೆ. ಎರಡು ಪರಂಪರೆಯ ಮತಗಳೂ ಎಲ್ಲ ದೃಷ್ಟಿಯಿಂದಲೂ ಸಮಾನಶ್ರೇಷ್ಠ. ಹಿಂದಿನ ವೀರಶೈವರಿಗೆ ಈ ವಿಷಯದಲ್ಲಿ ಯಾವುದೇ ಗೊಂದಲಗಳೂ ಇರಲಿಲ್ಲ. ಹರಿಹರನಂತಹ ಕವಿಗಳು ರೇಣುಕ, ಬಸವರ ಮೇಲೆ ಏಕರೀತಿಯ ಶ್ರದ್ಧೆಯಿಂದ ಕಾವ್ಯಗಳನ್ನು ರಚಿಸಿದ್ದಾರೆ. ಕಾವ್ಯಾರಂಭದಲ್ಲಿ ವಚನಕಾರರನ್ನೂ ಆಚಾರ್ಯರನ್ನೂ ಭಕ್ತಿಯಿಂದ ಸ್ಮರಿಸಿದ್ದಾರೆ. "ಸಿದ್ಧಾಂತ ಶಿಖಾಮಣಿ"ಯ ಕರ್ತೃ ಸಿದ್ಧರಾಮನ ವಂಶದವನೆಂದು ವ್ಯಾಖ್ಯಾನಕಾರರು ಹೇಳುವುದಲ್ಲದೆ, ವಚನಸಂಕಲನಗಳಲ್ಲಿ ಆ ಕೃತಿಯ ಶ್ಲೋಕಗಳನ್ನು ಉದಾಹರಿಸಿದ್ದಾರೆ. ವಿರಕ್ತರಾಗಿದ್ದ ತೋಂಟದ ಸಿದ್ಧಲಿಂಗರು ರೇಣುಕರನ್ನು ಸ್ಮರಿಸಿದ್ದರೆ, ಗುರುಪರಂಪರೆಯ ಮಠಾಧೀಶ ಷಡಕ್ಷರಿಯು ಬಸವನ ಬಗ್ಗೆ ಕಾವ್ಯವನ್ನೇ ರಚಿಸಿದ್ದಾನೆ. ನೂರಿನ್ನೂರು ವರ್ಷಗಳ ಹಿಂದಿನ ಮುಗ್ಧ ವೀರಶೈವರಿಗೆ ಇದ್ದ ವಿವೇಕ, ಶ್ರದ್ಧೆ, ಭಕ್ತಿಗಳು ಆಧುನಿಕರಿಗೂ ಮಾದರಿಯಾಗಿವೆ.

6. ವೀರಶೈವ ಮತಸ್ಥಾಪಕರು ಪಂಚಾಚಾರ್ಯರೇ, ಬಸವಣ್ಣನವರೇ ಎಂಬುದು ಮತ್ತೊಂದು ಗೊಂದಲ ಹುಟ್ಟಿಸಿರುವ, ಒಮ್ಮೊಮ್ಮೆ ಜಗಳಕ್ಕೂ ಕಾರಣವಾಗಿರುವ ಸಂಗತಿ. ಬಸವಣ್ಣ ವೀರಶೈವ ಮತಸ್ಥಾಪಕ ಅಲ್ಲ; ಏಕೆಂದರೆ ಅವನಿಗಿಂತಲೂ ಹಿಂದೆ ಇದ್ದ ಕೊಂಡಗುಳಿ ಕೇಶಿರಾಜನ (ಕ್ರಿ.ಶ. 1120) ಕೃತಿಗಳಲ್ಲಿ ವೀರಶೈವ ಪರಿಭಾಷೆ ಇದೆ.[43] ರೇಣುಕ (ರೇವಣ)ರೂ ಅಲ್ಲ–ಕೊಂಡಗುಳಿ ಕೇಶಿರಾಜ ಅವರ ಸಮಕಾಲೀನ ಮತ್ತು ಅವರು ಮತಸ್ಥಾಪಕರೆಂಬ ಮಾತು ಪ್ರಾಚೀನ ಗ್ರಂಥಗಳಲ್ಲೆಲ್ಲೂ ಇಲ್ಲ. ಖಚಿತವಾಗಿ ವೀರಶೈವನೆಂದು ಐತಿಹಾಸಿಕವಾಗಿ ಗುರುತಿಸಬಹುದಾದ ವ್ಯಕ್ತಿ ದೇವರ ದಾಸಿಮಯ್ಯನ ಕಾಲ ಕ್ರಿ.ಶ 1040[44]. ಹೀಗಿರುವಾಗ, ಮತಸ್ಥಾಪಕರು ಯಾರು ಎಂಬ ಬಗ್ಗೆ ನಮಗೆ ಏನೂ ತಿಳಿಯದು ಎಂಬುದೇ ಗಟ್ಟಿ ಸಂಗತಿ. (ಆಗಮಗಳಲ್ಲಿ ಬರುವ ವೀರಶೈವ ಧರ್ಮದ ಪ್ರಸ್ತಾಪಕ್ಕೆ ಅನುಬಂಧ

---

43 ಎಂ. ಚಿದಾನಂದಮೂರ್ತಿ : 'ಕೊಂಡಗುಳಿ ಕೇಶಿರಾಜ'. ಲಿಂಗಾಯತ ಅಧ್ಯಯನಗಳು. (ಮೈಸೂರು, 1986) ಪು. 26.

44 ದೇವರ ದಾಸಿಮಯ್ಯ ಬೇರೆ ; ವಚನಕಾರ ಜೇಡರ ದಾಸಿಮಯ್ಯ (ಕ್ರಿ.ಶ.1140)ಬೇರೆ. ದೇವರ ದಾಸಿಮಯ್ಯ ಶಿವಭಕ್ತ ಮತ್ತು ವೀರಶೈವ. ಆದರೆ ಆತ ಒಬ್ಬ ಕೃತಿಕಾರನಾಗಿದ್ದನೆಂದು ಹೇಳಲು ಸದ್ಯಕ್ಕೆ ಯಾವುದೇ ಪುರಾವೆಗಳೂ ಇಲ್ಲ.

ವನ್ನು ನೋಡಿ). ಬಸವಣ್ಣನಂತೆ ರೇವಣಸಿದ್ಧರೂ ದೀನದಲಿತರ ಬದುಕಿಗೆ ಸ್ಪಂದಿಸಿದ ಚಿತ್ರವು ಹರಿಹರನ ಕೃತಿಯಲ್ಲಿದೆ—ರೇವಣಸಿದ್ಧರ ಪವಾಡಗಳನ್ನು ಹೇಳುವ ಭರದಲ್ಲಿ ಅವರ ಸಾಮಾಜಿಕ ಕಳಕಳಿಯ ಅಂಶವು ಹಿನ್ನೆಲೆಗೆ ಸರಿದಿರುವುದು ದುರ ದೃಷ್ಟದ ಸಂಗತಿ.

ಅನುಬಂಧ : ವೀರಾಗಮದ ಉತ್ತರ ಭಾಗ–'ವೀರಮಾಹೇಶ್ವರ ತಂತ್ರ'

ಡಾ॥ ಶ್ರೀ. ಜ. ಚ. ನಿ. ಅವರು "ಶ್ರೀ ಜಗದ್ಗುರು ಆದಿರೇಣುಕರು" (ಗದಗ. 1983) ಎಂಬ ಕೃತಿಯನ್ನು ಬರೆದು ಅದನ್ನು 'ವೀರಾಗಮ ಸಂಶೋಧಿತ ಚರಿತ' ವೆಂದು ಕರೆದಿದ್ದಾರೆ. ಅದರಲ್ಲಿ ರೇಣುಕರ ಬಗ್ಗೆ ಬರೆದಿರುವುದೆಲ್ಲ ವಾಸ್ತವ ಇತಿಹಾಸವೆಂಬ ಧ್ವನಿ ದಟ್ಟವಾಗಿರುವುದರಿಂದ ಅದನ್ನು ಯಥಾವತ್ತಾಗಿ ನಂಬುವ ಜನರೂ ಇದ್ದಾರೆ ಎಂಬುದು ನನ್ನ ಅನುಭವಕ್ಕೆ ಬಂದಿದೆ. ಜೊತೆಗೆ, ಪ್ರಖ್ಯಾತ ಸಂಸ್ಕೃತ ವಿದ್ವಾಂಸರಾದ ಡಾ. ಕೆ. ಕೃಷ್ಣಮೂರ್ತಿಯವರು ಮುನ್ನುಡಿ ಬರೆದು ವೀರಶೈವಧರ್ಮಕ್ಕೆ ಸಂಬಂಧಿಸಿದ ಹಲವಾರು ಸಮಸ್ಯೆಗಳಿಗೆ "ಸಾಧಾರವಾಗಿ, ಸಪ್ರಮಾಣವಾಗಿ, ಸರ್ವಸಮರ್ಪಕವಾಗಿ ಒಂದು ಪರಿಹಾರವನ್ನು ಸೂಚಿಸುವ ವಿಶ್ವಾಸನೀಯ ಹಾಗೂ ಪ್ರಶಂಸನೀಯವಾದ ಪ್ರಯತ್ನವೇ ಈ ಗ್ರಂಥವು" ಎಂದು ಹೇಳಿ, "ಇದೊಂದು ನಮ್ಮ ಧಾರ್ಮಿಕ ಸಾಹಿತ್ಯ ಕ್ಷೇತ್ರದ ಸಂಶೋಧನೆಗಳಲ್ಲಿ ಮೈಲಿಗಲ್ಲೆನ್ನಬಹುದು" ಎಂದು ಈ ಗ್ರಂಥದ ಹಲವಾರು ಅಭಿಪ್ರಾಯಗಳಿಗೆ ಒಟ್ಟಾರೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಈ ಕೃತಿ ಒಂದು ಸಂಶೋಧನ ಕೃತಿಯೆಂದಮೇಲೆ ಅದು ವಿಚಾರಕ್ಕೆ ಒಳಪಡಲೇಬೇಕಾಗುತ್ತದೆ. (ಶ್ರದ್ಧೆಯೇ ಮೂಲವಾದ ಕತೆಯಾದರೆ ಆ ಪ್ರಶ್ನೆ ಬೇರೆ).

ಆಗಮ ಗ್ರಂಥಗಳ ಮೂಲ ಪಾಠದಲ್ಲಿ ವೀರಶೈವಧರ್ಮದ ಪ್ರಮೇಯಗಳ ಪ್ರಸ್ತಾಪವಿಲ್ಲದೆ ಅವುಗಳ ಉತ್ತರಭಾಗದಲ್ಲಿ ಮಾತ್ರ ಆ ಪ್ರಮೇಯಗಳು ಕಂಡುಬರು ತ್ತಿರುವುದು ಹಲವು ಸಂಶಯಗಳಿಗೆ ಎಡೆ ಮಾಡಿಕೊಟ್ಟಿದೆ.[45] "ಶ್ರೀ ಜಗದ್ಗುರು ಆದಿ ರೇಣುಕರು" ಕೃತಿಯು ಆಧರಿಸಿರುವ ಮೂಲಕೃತಿಯ ನಿಜವಾದ ಹೆಸರು "ವೀರಮಾಹೇಶ್ವರ ತಂತ್ರ"-ಇದು "ವೀರಾಗಮ"ದ ಉತ್ತರಭಾಗವಾಗಿದೆ. ವೀರಶೈವ ಧರ್ಮ ಪ್ರತಿಪಾದನೆಯ ದೃಷ್ಟಿಯಿಂದ ರಚಿತವಾಗಿರುವ 'ವೀರಮಾಹೇಶ್ವರ ತಂತ್ರ'ವು ವೀರಾಗಮಕ್ಕೆ ಆಮೇಲೆ ಈಚಿನವರು ಬರೆದು ಸೇರಿಸಿದ್ದು ಎಂಬುದು ಅಲ್ಲೇ ಸೂಚಿತವಾಗಿದೆ. 'ವೀರಾಗಮ'ಕ್ಕೆ ಸೇರಿಸಲು ಕಾರಣ, ಬರೆದು ಸೇರಿಸಿದ ಭಾಗಕ್ಕೆ ಬೆಲೆ ಬರಲಿ ಎಂಬುದೇ ಆಗಿದೆ. ಇದರ ಕಾಲ ವ್ಯಾಖ್ಯಾನಕಾರರಾದ ಕಾಶಿಕಾಂಡದ

45 ಶಿವಾಗಮಗಳನ್ನು ಪ್ರಕಟಿಸುತ್ತಿರುವ ಪಾಂಡಿಚೆರಿಯ ಇಂಡಲಾಜಿಕಲ್ ಸಂಶೋಧನ ಸಂಸ್ಥೆಯ ವಿದ್ವಾಂಸರೊಡನೆ ನಾನು ಮಾತನಾಡಿದ್ದೇನೆ. ಅದು ಪ್ರಕಟಿಸಿರುವ ಅಥವಾ ಪ್ರಕಟವಾಗದೇ ಉಳಿದಿರುವ ಯಾವುವೇ ಶಿವಾಗಮದಲ್ಲೂ ವೀರಶೈವ ಧರ್ಮದ ಪ್ರಮೇಯಗಳ ಪ್ರಸ್ತಾಪವಿಲ್ಲ.

ಚನ್ನವೀರದೇವ, ಲಿಂಗಣಾರಾಧ್ಯರಿಗಿಂತ (16ನೇ ಶ.) ಹಿಂದಿನದೆಂದು ಮಾತ್ರ ಹೇಳಬಹುದು. ಎಷ್ಟು ಹಿಂದಿನದು, ತಿಳಿಯದು. ಡಾ॥ ಜ.ಚ.ನಿ. ಯವರ ಪ್ರಕಾರ ವೀರಾಗಮದ ಭಾಗವೇ ವೀರಮಾಹೇಶ್ವರ ತಂತ್ರ; ಅಥವಾ ಅದೂ ವೀರಾಗಮವೇ. ಈ ವೀರಾಗಮ, ಅವರ ಪ್ರಕಾರ, ಮೂರು ಸಾವಿರ ವರ್ಷಗಳಷ್ಟು ಹಳೆಯದು; ಅದು ವರ್ಣಿಸುವ ಆದಿರೇಣುಕರು ನಾಲ್ಕು ಸಾವಿರ ವರ್ಷಗಳಷ್ಟು ಹಿಂದಿನವರು. ಎಲ್ಲವೂ ಶುದ್ಧ ಕಲ್ಪನೆ.

ಡಾ॥ ಜ.ಚ.ನಿ. ಅವರಿಗೆ ಪುರಾಣ, ಚರಿತ್ರೆಗಳ ಮಧ್ಯೆ ವ್ಯತ್ಯಾಸವೇ ಇಲ್ಲ ಅವರ ಪ್ರಕಾರ, ರುದ್ರನು ಅನಾದಿಪಶುಪತಿ ಮತಸ್ಥಾಪಕ, ಆತನ ಮಗ ವೀರ ಭದ್ರನು ಆದಿವೀರಶೈವ ಮತಸ್ಥಾಪಕ, ಅಂತಹ ವೀರಭದ್ರನ ಪೀಠಕ್ಕೆ ಆದಿರೇಣುಕರು ಬಂದರು. ಲಂಕೆಯ ದೊರೆ ರಾವಣೇಶ್ವರನು "ಕೈಗಾರಿಕೆಯ ವಿಜ್ಞಾನ ಗ್ರಂಥ ವೊಂದನ್ನು ಬರೆದಿರುವಂತೆ ಬೆಳಕಿಗೆ ಬಂದಿದೆ"ಯೆಂದು ಹೇಳಿದ್ದಾರೆ– ಆ ಗ್ರಂಥವು ಪ್ರಕಟವಾದಾಗಲೇ ಅದು ಎಂತಹ ಕೃತಿ, ಯಾವ ರಾವಣ ಬರೆದುದು ಇತ್ಯಾದಿಗಳು ಖಚಿತವಾಗುವುದು. "ವೀರಾಗಮ"ದಲ್ಲಿ ರೇಣುಕರ ಕಾಲದವರ ಹೆಸರುಗಳೆಂದು ಬರುವ ಎಲ್ಲವೂ ಕಾಲ್ಪನಿಕ. ನೋಡಿ–ವ್ಯಾಸ, ಗೌತಮ, ಶೌನಕ, ಬೋಧಾಯನ, ವಿಶ್ವಾಮಿತ್ರ, ಯಾಜ್ಞವಲ್ಕ್ಯ ಇವರೇ ಮೊದಲಾದವರು "ಭೂಸುರರು"; ದಧೀಚಿ, ಗೌತಮ, ದೂರ್ವಾಸ, ಮೃಕಂಡು, ಗುಹೇಶ, ಶಿಂಶುಮಾರ, ಡಿಂಡಿಮಾರ ಇವರೇ ಮೊದಲಾದವರು "ಭೂರುದ್ರರು".[46] ಎಂದರೆ ವೀರಶೈವರು, ಜಂಗಮರು. ಇವರನ್ನು ಐತಿಹಾಸಿಕ ವ್ಯಕ್ತಿಗಳೆಂದು ಗುರುತಿಸಿ ಅವರ ಕಾಲವನ್ನು ಕಂಡುಹಿಡಿಯ ಯತ್ನಿಸುವುದು ಸದ್ಯಕ್ಕಂತೂ ಆಗದ ಮಾತು. ಶಿಂಶುಮಾರ, ಡಿಂಡಿಮಾರ, ಶತಾನಂದ (ಈತನು ಗೌತಮ–ಅಹಲ್ಯೆಯರ ಮಗನಾಗಿದ್ದು, ರೇಣುಕರ ಸಮಕಾಲೀನನೆಂದು ಡಾ॥ ಜ.ಚ.ನಿ. ಅವರ ಊಹೆ), ಮಾತಂಗ (ಡಾ॥ ಜ.ಚ.ನಿ. ಪ್ರಕಾರ ಈತ ಒಬ್ಬ ಹರಿಜನ. ಆದರೆ 'ವೀರಾಗಮ'ದ ಪ್ರಕಾರ ಅವನು ಮತಂಗ ಮುನಿಯ ಮಗ), ಸತ್ಯೇಂದ್ರ, ಓಹಿಲ, ಮಣಿಭದ್ರ–ಇವು ಯಾವುವೂ ಐತಿಹಾಸಿಕ ಹೆಸರುಗಳಂತಿಲ್ಲ. "ವೀರಾಗಮ"ದ ಉತ್ತರಭಾಗವನ್ನು ಬರೆದ ವ್ಯಕ್ತಿ ರೇಣುಕರ "ಚರಿತ್ರೆ" ಅಥವಾ ಇತಿಹಾಸವನ್ನು ಬರೆಯುವ ಉದ್ದೇಶದವನಲ್ಲ. ಆದರೆ ಅದನ್ನು ಇತಿಹಾಸವೆಂದು

---

46 "ಭೂರುದ್ರ ವೀರಶೈವ–ಜಂಗಮ ಎಂಬರ್ಥದಲ್ಲಿ ಬಳಕೆಯಾಗಿರುವುದು ತೀರ ವಿರಳ. ಸು.ಕ್ರಿ. ಶ. 1600ರ ಚನ್ನಪ್ಪ ಕವಿಯ "ಶರಣಲೀಲಾಮೃತ"ದಲ್ಲಿ (ಸಂ : ಶ್ರೀ ಶಿವ ಬಸವಸ್ವಾಮಿಗಳು, ಮೈಸೂರು, 1955) "ಭೂರುದ್ರ" ಶಬ್ದವು ಬರುವ ಶ್ಲೋಕ ವೊಂದು (ಪು.53) ಉದಾಹೃತವಾಗಿದೆ. ಅದು ಹೀಗಿದೆ:

"ಭೂಸುರೋ ಬ್ರಾಹ್ಮಣಶ್ಚೈವ । ಭೂರುದ್ರೋ ಜಂಗಮಸ್ತಥಾ ।
ಭೂಚಕ್ಷು ಶ್ಚಂದ್ರ ಸೂರ್ಯಶ್ಚ । ಸರ್ವಕರ್ತಾ ಚ ಭಾರ್ಗವಃ ॥

ಇದು "ಮಹಿಮ್ನ ಸ್ತೋತ್ರ"ದ ಶ್ಲೋಕವೆಂಬ ಸೂಚನೆ ಅಲ್ಲಿದ್ದರೂ, ಈಗ ದೊರೆ ಯುವ "ಶಿವಮಹಿಮ್ನ ಸ್ತೋತ್ರ"ದಲ್ಲಿ ಆ ಶ್ಲೋಕವಿಲ್ಲ (ಚನ್ನಪ್ಪಕವಿಯ ಉಲ್ಲೇಖದ ಕಡೆ ನನ್ನ ಗಮನವನ್ನು ಸೆಳೆದವರು ಶ್ರೀ ಎಸ್. ಶಿವಪ್ರಕಾಶ್).

ಭಾವಿಸುವುದು ಅದು ಇತಿಹಾಸವೇ ಎಂದು ಸಾಧಿಸುವುದು ಎಷ್ಟು ಉಚಿತವೆಂಬುದೀಗ ಪ್ರಶ್ನೆ.

ಹನ್ನೆರಡನೆಯ ಶತಮಾನದ ವಚನಕಾರರು ಏನೇನು ಸಾಮಾಜಿಕ ಆಂದೋಲನದ ಕಾರ್ಯಗಳನ್ನು ಮಾಡಿದರೋ ಆ ಎಲ್ಲ ಕಾರ್ಯಗಳನ್ನೂ ಮೂರು ಸಾವಿರ ವರ್ಷಗಳ ಹಿಂದೆಯೇ ಆದಿರೇಣುಕರು ಮಾಡಿದರು ಎಂದು ಡಾ॥ ಜ.ಚ.ನಿ. ಸಾಧಿಸ ಹೊರಟಿದ್ದಾರೆ. ಹಾಗೆ ಸಾಧಿಸಲು ಅವರಿಗೆ ಮಾಹಿತಿಯ ಬೆಂಬಲವಿಲ್ಲದಿರುವುದು ಎದ್ದು ಕಾಣುತ್ತದೆ.

ಹೀಗಾಗಿ, ಇಡೀ ಕೃತಿ ಗಂಭೀರ ಪರಿಗಣನೆಗೆ ಅರ್ಹವಾಗಿಲ್ಲವೆಂದು ಹೇಳಬೇಕಾಗಿದೆ.

ಶಿವಾಗಮಗಳ ಮೂಲಪಾಠದಲ್ಲಿ ವೀರಶೈವ ಧರ್ಮದ ಪ್ರಸ್ತಾಪವಿಲ್ಲ. ವೀರಶೈವ ಧರ್ಮದ ಪ್ರಸ್ತಾಪವಿರುವ ಶಿವಾಗಮಗಳ ಉತ್ತರ ಭಾಗಗಳ ಹಸ್ತಪ್ರತಿಗಳು ಕರ್ನಾಟಕದ ಪರಿಸರದಲ್ಲಿ ಮಾತ್ರ ದೊರಕುತ್ತಿವೆಯಾದ ಕಾರಣ, ಆ ಭಾಗಗಳನ್ನು ವೀರಶೈವ ವಿದ್ವಾಂಸರು ಈಚೆಗೆ ಬರೆದು ಸೇರಿಸಿದರು ಎಂಬ ಅನುಮಾನಗಳು ಹುಟ್ಟುತ್ತವೆ. ತೇದಿ ಖಚಿತವಾಗಿ ಗೊತ್ತಿರುವ ವಚನಕಾರರ ವಚನಗಳಲ್ಲಿ ಶಿವಾಗಮಗಳ ಹೆಸರಿವೆ; ಕೆಲವೊಮ್ಮೆ ಅಲ್ಲಿಂದ ಶ್ಲೋಕಗಳೂ ಉದಾಹೃತವಾಗಿವೆ. ಆ ಶ್ಲೋಕಗಳು ಆಗಮಗಳ ಉತ್ತರ ಭಾಗಗಳಲ್ಲಿವೆಯೇ ಎಂಬುದನ್ನು ಖಚಿತಪಡಿಸಿಕೊಂಡರೆ, ಆಗ ಆ ಉತ್ತರ ಭಾಗಗಳು ವಚನಪೂರ್ವ ಕಾಲದವು ಎಂದು ಹೇಳಲು ಸಾಧ್ಯವಾಗುತ್ತದೆ. ವಾಸ್ತವ ದೃಷ್ಟಿ, ಆಕರಗಳ ಪ್ರಾಮಾಣ್ಯವನ್ನು ಖಚಿತಪಡಿಸಿಕೊಳ್ಳುವುದು, ಕಾಲಾನುಕ್ರಮಣಿಕೆ, ಊಹೆ ತೀರ್ಮಾನಗಳು ಪುರಾಣ ಇತಿಹಾಸಗಳು ಇವುಗಳ ಮಧ್ಯೆ ಇರುವ ತಾರತಮ್ಯದ ಅರಿವು, ಸಾಕ್ಷ್ಯಾಧಾರಗಳಿಂದ ಮಾರ್ಗದರ್ಶನ ಪಡೆಯಲು ಸಿದ್ಧವಾಗಿರುವ ಮನಸ್ಥಿತಿ, ಸತ್ಯದ ಮುಂದೆ ನಮ್ಮ ಪೂರ್ವ ಗ್ರಹಿಕೆಗಳನ್ನು ಕೈಬಿಡಲು ಬೇಕಾದ ಧೈರ್ಯ ಮತ್ತು ತನಗೆ ಸತ್ಯವಾಗಿ ಕಂಡದ್ದು ಉಳಿದವರಿಗೂ ಸತ್ಯವಾಗಿ ಕಂಡಾಗ ಮಾತ್ರ ಅದಕ್ಕೆ ಬೆಲೆಯೆಂಬ ಜ್ಞಾನ ಇವೇ ಮೊದಲಾದವು ಆಧುನಿಕ ಸಂಶೋಧನೆ ತಿಳಿಸಿಕೊಡುವ ಕೆಲವು ಸೂತ್ರಗಳು. ಶಿವಾಗಮಗಳ ಬಗ್ಗೆ ಕೆಲಸ ಮಾಡುವವರು ಈ ದೃಷ್ಟಿಯನ್ನು ಅಳವಡಿಸಿಕೊಳ್ಳುವುದು ಅತ್ಯವಶ್ಯ. ಡಾ. ಜ.ಚ.ನಿ. ಅವರು ಎಷ್ಟೇ ತಿಳಿದವರಾಗಿದ್ದರೂ ಅವರು ಆ ದೃಷ್ಟಿಯನ್ನು ಬೆಳಸಿಕೊಂಡಿಲ್ಲವೆಂಬುದು ಅವರ ಅನೇಕ ಬರಹಗಳಲ್ಲಿ ಎದ್ದು ಕಾಣುತ್ತದೆ.

ಓದುಗಾರಿಕಾಸಾಮರ್ಥ್ಯ ಪರಿಕಲ್ಪನೆ: ಮತ್ತು ಪರಿಚಯ

ಬಿ. ಆರ್. ನರಸಿಂಹಮೂರ್ತಿ

"ಓದುಗಾರಿಕಾಸಾಮರ್ಥ್ಯ" ಎಂಬ ಪರಿಕಲ್ಪನೆಯು ಕನ್ನಡ ಭಾಷೆಯಲ್ಲಿ ಬೆಳೆದು ಬಂದಿಲ್ಲ. ಹೀಗಾಗಿ ಈ ಕ್ಷೇತ್ರದಲ್ಲಿ ಸಂಶೋಧನೆಗಳಾಗಲೀ ಅಥವಾ ಅಧ್ಯಯನಗಳಾಗಲೀ, ಪುಸ್ತಕಗಳಾಗಲೀ ಪ್ರಕಟವಾಗಿರುವುದು ಕಾಣಬರುವುದಿಲ್ಲ. ಆದರೆ ಕನ್ನಡ ಮಾತೃಭಾಷಾ ಬೋಧನೆಯ ಬಗ್ಗೆ ಬಂದಿರುವ ಕೆಲವೊಂದು ಪುಸ್ತಕಗಳಲ್ಲಿ "ಓದುಗಾರಿಕೆ"ಯ ಬಗ್ಗೆ ವಿವರಣೆಗಳಿವೆ. ಪ್ರಸ್ತುತ ಪ್ರಬಂಧವು English ಭಾಷೆಯಲ್ಲಿ ಈಗಾಗಲೇ ಪ್ರಚಲಿತವಿರುವ "Readability" ಎಂಬ ಪರಿಕಲ್ಪನೆಯನ್ನು "ಓದುಗಾರಿಕಾಸಾಮರ್ಥ್ಯ"ಎಂಬ ಪರಿಭಾಷೆಯಲ್ಲಿ ಪರಿಚಯಿಸುವ ಒಂದು ಪ್ರಯತ್ನವೆನ್ನಲಾಗಿದೆ. ಹೀಗಾಗಿ English ಭಾಷೆಯ ಮೂಲ ಪರಿಕಲ್ಪನೆಯನ್ನು ದೃಷ್ಟಿಯಲ್ಲಿರಿಸಿಕೊಂಡು ವಿಷಯ ಮಂಡನೆ ಜರುಗಿದೆ.

"ಓದುಗಾರಿಕಾ ಸಾಮರ್ಥ್ಯ" ಎನ್ನುವುದು ಪ್ರಾಥಮಿಕ ಅಂತೆಯೇ ಮೂಲಭೂತವಾದ ಮತ್ತು ಸಾಮಾನ್ಯವಾಗಿ ಪರಿಚಿತವಾಗಿರುವ ಸಮಸ್ಯೆಯಾಗಿದೆ. ಯಾವುದೇ ಒಂದು ಪುಸ್ತಕವನ್ನು ತರಲು ಸ್ವಂತಕ್ಕಾಗಿ ಮತ್ತು ಬೇರೊಬ್ಬರು ಓದಲೆಂದು ಪುಸ್ತಕಗಳನ್ನು ಆಯ್ಕೆ ಮಾಡುವಲ್ಲಿ ಎದುರಾಗುವ ಈ ಸಮಸ್ಯೆಯು ಒಂದು ರೀತಿಯಲ್ಲಿ "ಸಮಸ್ಯೆಗಳ ಹೊಂದಾಣಿಕೆ" ("ಪ್ರಾಬ್ಲಮ್ಸ್ ಆಫ್ ಮ್ಯಾಚಿಂಗ್")ರೀತಿಯಲ್ಲಿದೆ. ಇದರ ಮತ್ತೊಂದು ಅರ್ಥವೆಂದರೆ, ಇದು ಓದುಗರ ಆಸಕ್ತಿಯ ಒಂದು ಸಮೂಹ ಮತ್ತು ಓದುವ ಕೌಶಲ್ಯ ಎಂದಾಗುತ್ತದೆ. ಇದರ ಬಗ್ಗೆ ಮತ್ತೊಂದು ರೀತಿಯಲ್ಲಿ ಯೋಚಿಸುವುದಾದರೆ ಪುಸ್ತಕಗಳಲ್ಲಿ ಅನೇಕ ವಿಧಗಳಿವೆ. ಪುಸ್ತಕಗಳು ವಿವಿಧ ವಿಷಯಗಳಿಗೆ ಸಂಬಂಧಪಟ್ಟಿರುತ್ತವೆ. ಹೀಗಾಗಿ ಅವುಗಳನ್ನು ಓದುವ ರೀತಿಯಲ್ಲೂ ವ್ಯತ್ಯಾಸವಿರುತ್ತದೆ ಎಂದು ಹೇಳಬಹುದು. ಅಂತೆಯೇ ಪುಸ್ತಕಗಳ ಗುಣಮಟ್ಟವು ಸಹ ಒಂದಕ್ಕಿಂತ ಒಂದು ಭಿನ್ನವಾಗಿರುತ್ತದೆ. ಉದಾಹರಣೆ: ಒಬ್ಬ ಅತ್ಯುತ್ತಮ ಓದುಗನಿಗೆ ದೊರೆಯುವ ಪುಸ್ತಕಗಳು ಸೀಮಿತವಾಗಿದ್ದರೆ ಅವನ ಓದು ಕುಂಠಿತವಾಗುತ್ತದೆ. ಅದೇ ರೀತಿ ಒಬ್ಬ ಸಾಮಾನ್ಯ ಓದುಗನಿಗೆ ಕಷ್ಟಕರವಾದ ಪುಸ್ತಕಗಳು ದೊರೆತಲ್ಲಿ ಆತ ಓದುಗರ ಬಗ್ಗೆ ಅನಾಸಕ್ತಿಯನ್ನು ಬೆಳೆಸಿಕೊಳ್ಳಬಹುದು. ಆದ್ದರಿಂದ ಪುಸ್ತಕದ ವಿಷಯ ಮತ್ತು ಓದುಗನ ಮಟ್ಟ —ಈ ಎರಡೂ ಅಂಶಗಳು ಪರಸ್ಪರ ಒಂದನ್ನೊಂದು ಹೊಂದಿಕೊಳ್ಳುವಂತಿರಬೇಕು.

ಓದುಗ, ಒಂದು ನಿರ್ದಿಷ್ಟ ಪುಸ್ತಕವನ್ನು ಆರಿಸಿಕೊಳ್ಳಬೇಕಾದರೆ ಆತನ ಆರಿಸಿಕೊಳ್ಳುವಿಕೆ ಎರಡು ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. 1) ಓದುಗನ ಆಸಕ್ತಿ 2) ಪುಸ್ತಕಗಳ ರೀತಿ ಅಥವಾ ಶೈಲಿ.

ಉದಾ :–ಪುಸ್ತಕದಲ್ಲಿ ಬಳಸಿರುವ ಶಬ್ದಗಳು ಕ್ಲಿಷ್ಟಕರವಾಗಿದ್ದಲ್ಲಿ ಅಥವಾ ಪುಸ್ತಕದಲ್ಲಿ ಬಳಸಿರುವ ಶಬ್ದಗಳು ಕಷ್ಟಕರವಾಗಿದ್ದಲ್ಲಿ (ಅರ್ಥೈಸಿಕೊಳ್ಳುವಲ್ಲಿ) ಅಂತಹ ಪುಸ್ತಕಗಳನ್ನು ಓದುಗ ಪಠನ ಮಾಡುವ ಅಥವಾ ಅಭ್ಯಾಸ ಮಾಡುವ ಪ್ರವೃತ್ತಿಯನ್ನೇ ಬಿಟ್ಟುಬಿಡಬಹುದು. ಆದರೆ ಆ ಪುಸ್ತಕವನ್ನು ಬಹು ಹತ್ತಿರದಿಂದ ಅವಲೋಕಿಸಿದರೆ, ವಿಷಯದ ನೆಲೆಯಿಂದ ವಿಮರ್ಶಿಸಿದರೆ ಆ ಪುಸ್ತಕವು ಓದುಗನಿಗೆ ಹತ್ತಿರವಾಗಬಹುದು.

ಈ ರೀತಿ "ಓದುಗನನ್ನು ಮತ್ತು ಪುಸ್ತಕವನ್ನು ಸರಪಳಿಯಂತೆ ಹೋದಿರುವ ಗುಣವನ್ನು ಓದುಗಾರಿಕಾ ಸಾಮರ್ಥ್ಯ ಎಂದು ಕರೆಯಬಹುದೆಂದು ಜಾನ್‌ಸನ್ ಬ್ರ್ಯಾಂಡ್ ಹೇಳುತ್ತಾನೆ".[1]

ಓದುಗಾರಿಕಾ ಸಾಮರ್ಥ್ಯ ಎಂಬುದು ವೈಶಿಷ್ಟ್ಯಪೂರ್ಣವಾದ ಒಂದು ಗುಣ. ಅಂತೆಯೇ ಓದುಗಾರಿಕಾ ಸಾಮಗ್ರಿಯು ವೈಶಿಷ್ಟ್ಯತೆಯನ್ನು ಇದು ತಿಳಿಸುತ್ತದೆ. ಇದು ಆಸಕ್ತಿ ಮತ್ತು ಅರ್ಥೈಸಿಕೊಳ್ಳುವಿಕೆ ಬಳಗಕ್ಕೆ ಸಂಬಂಧಪಟ್ಟಿದೆ. ಇದು ಓದುಗರಿಗೂ ಮತ್ತು ಪುಸ್ತಕಗಳಿಗೂ ಇರುವ ಸಂಬಂಧದ ಸರಪಳಿ, ನಂಟು ಎಂದು ಹೇಳಬಹುದು.

'ಒಂದು ನಿರ್ದಿಷ್ಟ ಗುಂಪಿನ ವ್ಯಕ್ತಿಗಳು ಅಗತ್ಯವಾದ ವಿಷಯಗಳನ್ನು ಎಷ್ಟರ ಮಟ್ಟಿಗೆ ಗ್ರಹಿಸಿಕೊಂಡಿದ್ದಾರೆ? ಎಂಬುದನ್ನು ತಿಳಿಸುವುದೇ ಓದುಗಾರಿಕಾ ಸಾಮರ್ಥ್ಯ'. ವಿಭಿನ್ನವಾಗಿ ಗ್ರಹಿಕೆಯ ಮಾಪನವು ಅದೇ ರೀತಿ ವಿಷಯದ ಕಾಠಿಣ್ಯತೆಯ ಮಹತ್ವವನ್ನು ಒಳಗೊಂಡಿರುತ್ತದೆ. ಕೆಲವು ಹಂತಗಳಲ್ಲಿ ವಿಷಯದ ಕಠಿಣತೆಯ ಗಾತ್ರವನ್ನು ತಿಳಿಯಬೇಕಾಗುತ್ತದೆ. ಯಾವುದೇ ಓದುಗಾರಿಕಾ ವಿಷಯಗಳನ್ನು ಇದು ಕಠಿಣ ಅಥವಾ ಇದು ಸುಲಭ ಎಂದು ಗುರುತಿಸಲು, ಹೇಳಬರುವುದಿಲ್ಲ ಆದರೆ ಕೆಲವೊಂದು ಅಸ್ಥಾಯಿಕ ಆಧಾರಗಳಿಂದ ಗುರುತಿಸಬಹುದು. ಅಥವಾ ಮುದ್ರಣಯುಕ್ತವಾದಂತಹ ವಿಷಯಗಳನ್ನು ಅಳತೆಯ ಮಾಪನಕ್ಕೆ ಒಳಪಡಿಸಬಹುದಾಗಿದೆ.

---

1. Gilliland, John : Readability, University of London Press, London, 1972.

ವೆಬ್‌ಸ್ಟರ್ ಡಿಕ್ಷನರಿ ಪ್ರಕಾರ :

"ಪಠನ ಯೋಗ್ಯವಾದ — ಎಂದರೆ ವಾಚನೀಯ, ಮನೋರಂಜಕವಾದ ......ಸಂತೋಷಕರವಾದ ಪುಸ್ತಕ ಓದುಗನಿಗೆ ಓದಲು ಕ್ಲಿಷ್ಟವಿರುವಂತಹ ಅಥವಾ ನಿರ್ದಿಷ್ಟ ಓದು ಬಳಗಕ್ಕೆ ಓದಲು ಸಂಲಭ ಸಾಧ್ಯವಿರುವಂತಹ ಪುಸ್ತಕದ ಗುಣವೇ "ಓದುಗಾರಿಕಾ ಸಾಮರ್ಥ್ಯ" ವೆಂದೆನ್ನಿಸುತ್ತದೆ."

ಕೆಲವೊಂದು ಮುಖ್ಯ ವ್ಯಾಖ್ಯೆಗಳು :

ಗುಡ್‌ರವರ ಓದುಗಾರಿಕಾ ಸಾಮರ್ಥ್ಯ ವ್ಯಾಖ್ಯೆ :

"ಯಾವುದೇ ಒಂದು ಓದುವ ಅಂಶ, ವಿಷಯ ಅಥವಾ ವಸ್ತುವು ಯಾವ ಗುಣವನ್ನು ಹೊಂದಿರಬೇಕೆಂದರೆ, ನಿರ್ದಿಷ್ಟ ವಸ್ತು ಓದುಗನಲ್ಲಿ ಆಸಕ್ತಿಯನ್ನು ಕೆರಳಿಸುವಂತಿರಬೇಕು. ಅರ್ಥಗ್ರಹಿತವಾಗುವಂತಿರಬೇಕು. ಯಾರಿಗಾಗಿ ಆ ಪುಸ್ತಕ ಬರೆಯಲ್ಪಟ್ಟಿದೆಯೋ ಅವರಿಗೆ ಅದು ತಲುಪುವಂತಿರಬೇಕು. ಈ ಅಂಶವನ್ನು ತಿಳಿಸುವುದೇ ಓದುಗಾರಿಕಾ ಸಾಮರ್ಥ್ಯ ಎಂದು ಹೇಳಬಹುದು".[2]

ಜಾನ್ ಗಿಲ್‌ಲ್ಯಾಂಡ್ :

"ಓದುಗ ಮತ್ತು ಪುಸ್ತಕಗಳ ನಡುವಿನ ಸಂಬಂಧದ ಸಮಸ್ಯೆಗಳನ್ನು ಅಧ್ಯಯನ ಮಾಡುವುದೇ ಓದುಗಾರಿಕಾ ಸಾಮರ್ಥ್ಯ."

"The Study of this problem of Matching readers and Text has to be called readability".[3]

ಚಾಲ್‌ನ ಪ್ರಕಾರ :

ಒಬ್ಬ ವಿಮರ್ಶಕ, ಒಂದು ಪುಸ್ತಕವು ಓದುವಂತಿದೆ ಎಂದು ವಿಮರ್ಶಿಸಿದರೆ, ವಿಮರ್ಶಕ ಆ ಪುಸ್ತಕವನ್ನು ಒಟ್ಟಾರೆ ದೃಷ್ಟಿಯಲ್ಲಿರಿಸಿಕೊಂಡು ಹೇಳುತ್ತಿದ್ದಾನೆ ಎಂದಲ್ಲ. ಆತ ಪುಸ್ತಕದ ಯಾವುದೋ ಒಂದು ಗುಣವನ್ನು ಕುರಿತು ಹೇಳಿರಬಹುದು. ಹೀಗಾಗಿ ಪುಸ್ತಕದಲ್ಲಿನ ವಿಷಯ, ಬರವಣಿಗೆ ಶೈಲಿ, ಓದಿಸಿಕೊಂಡು ಹೋಗುವ ಸುಲಲಿತ ಮತ್ತು ಆಸಕ್ತಿಯನ್ನು ಕೆರಳಿಸುವ ಗುಣ–ಇವುಗಳಲ್ಲಿ ಯಾವುದಾದರೊಂದು ಅಂಶ ವಿಮರ್ಶಕನನ್ನು ಆಕರ್ಷಿಸಿರಬಹುದು. ಹೀಗಾಗಿ ಓದುಗಾರಿಕಾ ಸಾಮರ್ಥ್ಯ ಪುಸ್ತಕದಲ್ಲಿನ ವಿವಿಧ ಅಂಶಗಳನ್ನು ಒಳಗೊಂಡಿದೆ.

---

2. Good, Cartor (ed.) : Dictionary of Education, 22nd Ed.. MeGraw Hill Book Co, New York, 1959.
3. Gilliland John, Readability, University of London Press, London, 1972, P. 12.

ಎಡ್ಗರ್ ಡೇಲ್ :

ಓದುಗಾರಿಕಾ ಸಾಮರ್ಥ್ಯವೆಂದರೆ "ಅದು ಒಂದು ಪುಸ್ತಕದ ಒಟ್ಟಾರೆ ಎಲ್ಲಾ ಭಾಗಗಳ, ಎಲ್ಲಾ ಅಂಗಗಳ ಹೊಂದಾಣಿಕೆ. ಇದು ಓದುಗರ ಹೊಂದಾಣಿಕೆಯು ಬೆಳವಣಿಗೆಗೆ ಸಹಕಾರಿಯಾಗಿದೆ",[4] ಬೆಳವಣಿಗೆ ಎಂದರೆ, ಓದುಗರು ವಿಷಯಗಳನ್ನು, ಅಂಶಗಳನ್ನು ಗ್ರಹಿಸುವ ಬಗೆ. ಕಡಿಮೆ ಸಮಯದಲ್ಲಿ ಹೆಚ್ಚಿನ ಓದು ಮತ್ತು ಆ ಕೃತಿಯಲ್ಲಿ ಹೇಳಿರುವ ವಸ್ತುವಿನ ಮೇಲೆ ಹೆಚ್ಚಿನ ಒತ್ತು ನೀಡುವುದು.

ಮೇಲಿನ ಹೇಳಿಕೆಯಲ್ಲಿ ಮೂರು ಅಂಶಗಳ ಮೇಲೆ ಒತ್ತು ಕೊಡಲಾಗಿದೆ :

1. ಗ್ರಹಿಕೆ
2. ನಿರರ್ಗಳತೆ
3. ಆಸಕ್ತಿ

ಈ ಮೂರು ಅಂಶಗಳಲ್ಲಿ ಗ್ರಹಿಕೆಗೆ ಅತ್ಯಂತ ಹೆಚ್ಚಿನ ಮಹತ್ವ ನೀಡಲಾಗಿದೆ. ಇಲ್ಲಿ ಗ್ರಹಿಕೆ ಎಂದರೆ, ಅರ್ಥೈಸಿಕೊಳ್ಳುವ ರೀತಿ, ಪದಗಳ ಬಗ್ಗೆ ತಿಳುವಳಿಕೆ ಮತ್ತು ಓದಿದ ವಿಷಯವನ್ನು ತಮ್ಮ ಅನುಭವಕ್ಕೆ ಜೋಡಿಸಿಕೊಳ್ಳುವುದು

"ನಿರರ್ಗಳತೆ" ಎಂದರೆ, ಪುಸ್ತಕದಲ್ಲಿನ ಅಥವಾ ಕೃತಿಯೊಂದರಲ್ಲಿ ಅಡಗಿರುವ ವಿಷಯವನ್ನು ಓದುಗ ಕಡಿಮೆ ಸಮಯದಲ್ಲಿ ಹೆಚ್ಚು ವೇಗದಿಂದ ಓದಿ, ಅರ್ಥ ಗ್ರಹಿಸಿಕೊಂಡು (ಪದ–ಅರ್ಥ) ಸುಲಭವಾಗಿ ವಿಷಯಗಳನ್ನು ಅರಿಯುವುದು.

"ಆಸಕ್ತಿಯು" ಓದುಗನಲ್ಲಿ ಅಡಗಿರುವ ಒಂದು ಚೇತೋಹಾರಿ ಅಂಶ. ಈ ಚೇತನಕಾರಿ ಅಂಶವು ಓದುಗಾರಿಕಾ ಸಾಮರ್ಥ್ಯವನ್ನು ಕಂಡುಹಿಡಿಯುವುದರಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ.

ಡೇಲ್ ಮತ್ತು ಚಾಲ್‌ರು ಹೇಳುವ ಪ್ರಕಾರ, ಗ್ರಹಿಕೆ, ನಿರರ್ಗಳತೆ ಮತ್ತು ಆಸಕ್ತಿ–ಈ ಮೂರು ಅಂಶಗಳು ಬೇರೆ ಬೇರೆಯಲ್ಲ (ಓದುಗಾರಿಕೆ ಸಾಮರ್ಥ್ಯದ ಸಂದರ್ಭದಲ್ಲಿ) ಇವು ಒಂದಕ್ಕೊಂದು ಹೊಂದಿಕೊಂಡು ಕಾರ್ಯ ನಿರ್ವಹಿಸುತ್ತವೆ. ಅನೇಕ ವೇಳೆ ಓದುಗಾರಿಕಾ ಸಾಮರ್ಥ್ಯದಲ್ಲಿ ಈ ಮೂರೂ ಅಂಶಗಳನ್ನು ಮಾತ್ರ ಗಣನೆಗೆ ತಂದುಕೊಳ್ಳುತ್ತೇವೆ. ಮಿಕ್ಕ ಅಂಶಗಳನ್ನು ಕಡೆಗಣಿಸುತ್ತೇವೆ. ಹೀಗಾಗಿ ಬೇರೆಬೇರೆ "ಓದುಗಾರಿಕಾ ಸಾಮರ್ಥ್ಯದ ಮಾಪನ"ಗಳನ್ನು ತೆಗೆದುಕೊಂಡಾಗ ಅವುಗಳನ್ನು ಹೋಲಿಸಲು ಸಾಧ್ಯವಾಗುವುದಿಲ್ಲ.

---

4. Edgar Dale and Chall, "The Concept of Readability", Elementary English, 1949, Vol. 26, P. 231.

ಇಂಗ್ಲೀಷ್ ಮತ್ತು ಇಂಗ್ಲೀಷರ ಪ್ರಕಾರ

"ಒಬ್ಬ ಓದುಗನಿಗೆ ಓದಲು ಸುಲಭವಾಗಿಸುವ ಮತ್ತು ಓದುಗನನ್ನು ಓದಿನಲ್ಲಿ ತಲ್ಲೀನನಾಗುವಂತೆ, ಅದರಲ್ಲಿಯೇ ಮಗ್ನನಾಗುವಂತೆ ಮಾಡುವ ಪುಸ್ತಕದ ಗುಣವೇ ಓದುಗಾರಿಕಾ ಸಾಮರ್ಥ್ಯ"[5]

ಇಂಗ್ಲೀಷ್ ಮತ್ತು ಇಂಗ್ಲೀಷರ ವ್ಯಾಖ್ಯೆಯು ಓದುಗಾರಿಕಾ ಸಾಮರ್ಥ್ಯದ ಎರಡು ಮುಖ್ಯ ಅಂಶಗಳನ್ನು ಒಳಗೊಂಡಿದೆ.

ಕೃತಿಯಲ್ಲಿನ ವಸ್ತುವಿನ ಪ್ರತಿಯೊಂದು ಅಂಶಗಳ ವಿವರಣೆ ಮತ್ತು ಅದರ ಗುಣಗಳು ಓದುಗನಿಗಿಂತ ಮುಖ್ಯ. ಇದನ್ನು ಗಮನಕ್ಕೆ ತಂದುಕೊಂಡಾಗ, 'ಓದುಗ' ಮತ್ತು 'ವಿಷಯ' ಎರಡೂ ಅಂಶಗಳನ್ನು ಭಿನ್ನವಾಗಿ ಮತ್ತು ಒಟ್ಟಾರೆ ಯಾಗಿ ನೋಡಬೇಕಾಗುತ್ತದೆ ಎಂದೆನ್ನಿಸುತ್ತದೆ.

ಓದುಗಾರಿಕಾ ಸಾಮರ್ಥ್ಯವನ್ನು (ರೀಡಬಿಲಿಟಿ) ಪರಿಚಯಿಸುವಲ್ಲಿ ಎದುರಾಗುವ ಒಂದು ಬಹುಮುಖ್ಯ ಸಮಸ್ಯೆ ಎಂದರೆ, ಓದುಗಾರಿಕಾ ಸಾಮರ್ಥ್ಯ ಎಂಬ ಪರಿಕಲ್ಪನೆ ಯೊಂದಿಗೆ (ಸೇರಿಕೊಂಡಿರುವ) ಹೊಂದಿಕೊಂಡಿರುವ "ಓದುಗನ ಸಾಮರ್ಥ್ಯ" (Reading Ability) ಹೀಗಾಗಿ ಓದುಗಾರಿಕಾ ಸಾಮರ್ಥ್ಯ ಮತ್ತು ಓದುಗ (ರ) ಸಾಮರ್ಥ್ಯ ಎಂಬ ಎರಡು ಪಾರಿಭಾಷಿಕ ಪದಗಳು ಹೊಂದಾಣಿಕೆಯ ಸಾಮರಸ್ಯ ವನ್ನು ಹೊಂದಿವೆ.

ಇಂಗ್ಲೀಷಿನ "ರೀಡಿಂಗ್ ಎಬಿಲಿಟಿ" ಎಂಬುದಕ್ಕೆ "ಓದುಗ ಸಾಮರ್ಥ್ಯ" ಎಂದು ಕರೆಯುವುದು ಔಚಿತ್ಯಪೂರ್ಣವೆನಿಸುತ್ತದೆ. ಹಾಗೆಯೇ "ರೀಡಬಿಲಿಟಿ" ಎಂಬ ಪಾರಿಭಾಷಿಕ ಪದವನ್ನು "ಓದುಗಾರಿಕಾ ಸಾಮರ್ಥ್ಯ" ಎಂಬ ವಿಶೇಷಾರ್ಥ ರೂಪದಿಂದ ನಿರ್ದೇಶಿಸಬಹುದೆಂದು ತೋರುತ್ತದೆ.

ಓದುಗಸಾಮರ್ಥ್ಯ ಮತ್ತು ಓದುಗಾರಿಕಾ ಸಾಮರ್ಥ್ಯ–ಈ ಎರಡರ ಸಂಬಂಧದಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಏನೆಂದರೆ, ಈ ಎರಡರಲ್ಲಿ ಯಾವು ದಕ್ಕೆ ಹೆಚ್ಚಿನ ಮಹತ್ವ ನೀಡಬೇಕು ? ಮತ್ತು ಯಾವುದಕ್ಕೆ ಹೆಚ್ಚಿನ ಮಹತ್ವವಿದೆ ? ಎಂಬುದು. ಈ ಎರಡು ಅಂಶಗಳ ವ್ಯಾಪ್ತಿ, ವಾಸ್ತವಾಂಶಗಳ ಸ್ವರೂಪವನ್ನು ಮನಗಂಡು – ಈ ಎರಡಕ್ಕೂ ಮಹತ್ವವಿದೆ ಎಂಬುದೇ ಮೇಲಿನ ಪ್ರಶ್ನೆಗೆ ಉತ್ತರ ವೆನ್ನಬಹುದು. ಓದುಗಾರಿಕಾ ಸಾಮರ್ಥ್ಯದಿಂದ (ರೀಡಬಿಲಿಟಿ) ಓದುಗನ ಸಾಮರ್ಥ್ಯ

5. English, H. B. and English, A.C. A. Comprehension Dictionary of Psychological and Phycho analytic terms, Logmans London, 1958.

ನಿರ್ಧಾರವಾಗುತ್ತದೆ ಎಂದೆನ್ನಿಸುತ್ತದೆ. ಅಂತೆಯೇ ಓದುಗನ ಸಾಮರ್ಥ್ಯದಿಂದ ಒಂದು ಪುಸ್ತಕದ ಅಥವಾ ಪಠ್ಯದ ಓದುಗಾರಿಕಾ ಸಾಮರ್ಥ್ಯ ನಿರ್ಧರಿಸಲ್ಪಡುತ್ತದೆ, ಮತ್ತು ಉತ್ತಮ ಕೃತಿಗಳು ರೂಪುಗೊಳ್ಳಲು ಅನುಕೂಲವಾಗುತ್ತದೆ. ಹೀಗಾಗಿ ಈ ಎರಡೂ ಅಂಶಗಳು ಒಂದೇ ಎಂದು ಹೇಳಲಾಗದಿದ್ದರೂ ಎರಡಕ್ಕೂ ಸಂಬಂಧವಿದೆ. ಒಂದು ಇನ್ನೊಂದರ ಮೇಲೆ ಅವಲಂಬಿತದೊಂದಿಗೆ ಪ್ರಭಾವಯುಂತವೂ ಆಗಿವೆ.

ಸಾಮಾನ್ಯ ಪುಸ್ತಕದ 'ಓದುಗಾರಿಕಾ ಸಾಮರ್ಥ್ಯ'ದಿಂದ ಓದುಗ ಸಾಮರ್ಥ್ಯ ವೃದ್ಧಿಗೊಳ್ಳುವುದಿಲ್ಲ. ಆದರೂ 'ಓದುಗಾರಿಕಾ ಸಾಮರ್ಥ್ಯ ಸೂಚಿ' (ಪುಸ್ತಕದ) ನಿರ್ಧರಿಸಲ್ಪಡುತ್ತದೆ.

ಒಂದು ಪುಸ್ತಕದ ಬಗ್ಗೆ, ವಿದ್ಯಾರ್ಥಿ ನನಗೆ ಆ ಪುಸ್ತಕ ಓದಲು ಕಠಿಣವಾಗಿದೆ ಎಂದು (ಓದುಗ) ಅಭಿಪ್ರಾಯ ವ್ಯಕ್ತಪಡಿಸಿದಾಗ, ಆ ಪುಸ್ತಕದ ಓದುಗಾರಿಕಾ ಸಾಮರ್ಥ್ಯವು, ಓದುಗನ ಸಾಮರ್ಥ್ಯಕ್ಕಿಂತ ಅಧಿಕ ಮಟ್ಟದಲ್ಲಿದೆ ಎಂಬ ಸಂಗತಿ ಗೋಚರಿಸುತ್ತದೆ. ಹಾಗೆಯೇ ಉನ್ನತ ಮಟ್ಟದ ಓದುಗ ಸಾಮರ್ಥ್ಯವನ್ನು ಹೊಂದಿದ ಓದುಗನಿಗೆ ಅದೇ ಪುಸ್ತಕ ಲೀಲಾಜಾಲವಾಗಿ ಓದುವಂತಹ, ಸುಲಭ ಪುಸ್ತಕವೆಂದು ತೋರಬಹುದು. ಹೀಗೆ ಪುಸ್ತಕದ ಅಥವಾ ಪಠ್ಯದ ಓದುಗಾರಿಕಾ ಸಾಮರ್ಥ್ಯ ಎನ್ನುವುದು ಓದುಗರಿಂದ ನಿರ್ಧಾರಿತವಾಗುವ ಪ್ರಕ್ರಿಯೆ ಎಂದು ಸಾಮಾನ್ಯೀಕರಣ (ಜನರಲೈಜೇಷನ್) ಗೊಳಿಸಬಹುದು.

ಓದುಗಾರಿಕಾ ಸಾಮರ್ಥ್ಯ ಸ್ಥಿರವಾದದ್ದು, ಓದುಗ ಬಳಗದ ವೈವಿಧ್ಯತೆಯಿಂದಾಗಲೀ ಅಥವಾ ಇನ್ನಾವುದೇ ಕಾರಣಗಳಿಂದ ಬದಲಾವಣೆಗೆ ಒಳಗಾಗುವುದಿಲ್ಲ. ಆ ನಿರ್ದಿಷ್ಟ (ಪುಸ್ತಕದ) ಓದುಗಾರಿಕಾ ಸಾಮರ್ಥ್ಯ ಯಾವುದೇ ಉದ್ದಿಷ್ಟಕ್ಕೂ ವೈಪರೀತ್ಯವನ್ನು ಹೊಂದುವುದಿಲ್ಲ. ಅದು ಸ್ಥಿರವಾದ ಸೂಚ್ಯಾಂಕವನ್ನು ಒಳಗೊಂಡಿರುತ್ತದೆ. ತತ್ಪರಿಣಾಮವಾಗಿ ಓದುಗ ಸಾಮರ್ಥ್ಯ ಎನ್ನುವುದು ಸ್ಥಿರವಲ್ಲ. ಅದು ವ್ಯಕ್ತಿಗತ ಬದಲಾವಣೆಯನ್ನು ಮಾರ್ಪಾಡಿನೊಂದಿಗೆ ಚಾಲನೆಯನ್ನು ವ್ಯತ್ಯಾಸವನ್ನು ಹೊಂದುತ್ತಲೇ ಇರುತ್ತದೆ. ಒಬ್ಬ ಮಂದ ಓದುಗನಿಗೆ ಕೆಳದರ್ಜೆಯ ಓದುಗಾರಿಕಾ ಸಾಮರ್ಥ್ಯವಿರುವ ಪುಸ್ತಕವು ಬಹು ಶ್ರಮವನ್ನು ಉಂಟುಮಾಡಬಹುದು. ಅಂತೆಯೇ ಆ ಪುಸ್ತಕ, ಉತ್ಕೃಷ್ಟ ಓದುಗನ ದೃಷ್ಟಿಯಲ್ಲಿ ನೀರಸವಾದ ಆಸ್ವಾದನೆಗೆ ಸ್ವೀಕೃತವಲ್ಲದ ಪುಸ್ತಕವೆನಿಸಬಹುದು.

ಹೀಗೆ ಓದುಗ ಸಾಮರ್ಥ್ಯ ಹಾಗೂ ಓದುಗಾರಿಕಾ ಸಾಮರ್ಥ್ಯ ಭಿನ್ನವೆನಿಸಿದರೂ ಸಹ ಹಿಂದೆಯೇ ಹೇಳಿದಂತೆ ಎರಡರ ಅವಲಂಬನಾ ದೃಷ್ಟಿಗಳು ಒಂದೇ. ಆದ್ದರಿಂದ ಈ ಎರಡೂ ಅಂಶಗಳೂ ಸಹ ಅವ್ಯವಚ್ಛಿನ್ನವಾದ ಅವಲಂಬನಾ

ಘಟಕಗಳು. ಓದುಗಸಾಮರ್ಥ್ಯವು, ಉತ್ತಮ ದರ್ಜೆಯ, ಉನ್ನತ ಮಟ್ಟದ ಓದುಗಾರಿಕಾ ಸಾಮರ್ಥ್ಯವನ್ನು ಹೊಂದಿದ ಕೃತಿಗಳಿಂದ ನಿರ್ಧಾರವಾಗುತ್ತದೆ ಎಂಬುದು ಸರ್ವಥಾ ವೇದ್ಯವಾಗಿರುವ ಸಂಗತಿ. ಓದುಗಾರಿಕಾ ಸಾಮರ್ಥ್ಯ ಎನ್ನುವುದು ಓದುಗ ಮತ್ತು ಪುಸ್ತಕಗಳ, ಕೃತಿ ಸಮೂಹವನ್ನು ಒಳಗೊಳ್ಳುವುದರಿಂದ, ಎರಡೂ ಸಹ ಭಾಷಾ ಕೌಶಲ್ಯಕ್ಕೆ ಅನ್ವಯವಾಗುವುದರಿಂದ ಇದನ್ನು ಒಂದು ರೀತಿಯಲ್ಲಿ ‘‘ಕೌಶಲ್ಯಪೂರ್ಣ ಪ್ರಕ್ರಿಯೆ’’ ಎಂದೂ ಕರೆಯಬಹುದಾಗಿದೆ.

ಓದುಗಾರಿಕಾಸಾಮರ್ಥ್ಯ ಎನ್ನುವುದು ಪಠ್ಯಗಳ ಅಥವಾ ಕೃತಿಗಳಿಗೆ ಮಾತ್ರ ಅನ್ವಯಿಸಿ, ಅವುಗಳ ಸೂಚ್ಯಾಂಕಗಳನ್ನು ತಿಳಿಸುತ್ತದೆ ಎಂದು ಸೀಮಿತ, ಸಂಕುಚಿತಾರ್ಥದಲ್ಲಿ ವಿಶ್ಲೇಷಿಸಿದರೆ ಅಸಮಂಜಸವಾದೀತು. ಆದ್ದರಿಂದ ಇದರ ವ್ಯಾಪ್ತಿ ವಿಶಾಲವಾಗಿದೆ. ಓದುಗಾರಿಕಾಸಾಮರ್ಥ್ಯ ಸೂಚಿಯನ್ನು ನಿರ್ಧರಿಸುವುದರೊಂದಿಗೆ, ಓದುಗ ಸಾಮರ್ಥ್ಯವನ್ನು ಸಹ ಅರಿವಿಗೆ ಒಳಪಡಿಸುತ್ತದೆ. ಇದರಿಂದಾಗಿ ಎರಡು ಸಾಮರ್ಥ್ಯಗಳನ್ನು ವಿಶದಪಡಿಸುವ ಸರಪಳಿ ರೂಪದ ಕಾಯಕಲ್ಪವಾಗಿದೆ. ಒಟ್ಟಿನಲ್ಲಿ ಓದುಗಾರಿಕಾ ಸಾಮರ್ಥ್ಯ ಮೀಮಾಂಸ ಯೋಗ್ಯವಾದ ಘಟಕವಾಗಿ ದ್ವಂದ್ವ ಕ್ರಿಯೆಗಳನ್ನು ಒಳಗೊಂಡ, ‘‘ಸಹಗಾಮಿಯುಕ್ತ ಗಾಮಿಯುತ ಸಂಕೀರ್ಣ ಪಕ್ರಿಯೆ’’ಯಾಗಿದೆ ಎಂದು ಹೇಳುವಲ್ಲಿ ಶ್ಲಾಘ್ಯತೆ ಅಡಗಿದೆ ಎಂದು ಹೇಳಬಹುದು.

'ನಿಡುಗಲ್ಲು ಚನ್ನಪ್ಪನ ಬಗ್ಗೆ ಹೊಸ ವಿಷಯಗಳು'

ಡಿ. ವಿ. ಪರಮಶಿವಮೂರ್ತಿ

ವೀರಶೈವ ಕವಿಯಾದ ನಿಡುಗಲ್ಲು ಚನ್ನಪ್ಪನ ಮೂರು ಕೃತಿಗಳು ಇದು ವರೆಗೂ ಬೆಳಕು ಕಂಡಿವೆ. 'ಶರಣಲೀಲಾಮೃತ', 'ಕಾಲಜ್ಞಾನ' ಮತ್ತು 'ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆಯ-ತಾರಾವಳಿ'–ಎಂಬುವೇ ಆ ಕೃತಿಗಳು. ಶ್ರೀ ಆರ್. ನರಸಿಂಹಾಚಾರ್ಯರು ಈ ಕವಿಯ ಕಾಲವನ್ನು ಸುಮಾರು ಕ್ರಿ. ಶ. 1750 ಆಗಬಹುದು ಎಂದು "ಕರ್ಣಾಟಕ ಕವಿ ಚರಿತೆ"ಯಲ್ಲಿ ಹೇಳಿದ್ದರು.[1] ಇತ್ತೀಚೆಗೆ ಡಾ|| ಬಿ. ಆರ್. ಹಿರೇಮಠ ಅವರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದ ತಾಳೇಪ್ರತಿಯ ಆಧಾರದಿಂದ[2] ಚನ್ನಪ್ಪ ಕವಿಯ ಕಾಲವನ್ನು "1750" ಅಲ್ಲ. ಕ್ರಿ ಶ. ಸುಮಾರು 1740 ಅಥವಾ ಇದಕ್ಕೂ ಸ್ವಲ್ಪ ಹಿಂದೆ" ಎಂದು ತೋರಿಸಿಕೊಟ್ಟಿದ್ದಾರೆ.[3] ಆದರೆ 'ಶರಣಲೀಲಾಮೃತ'ದ ಒಂದು ತಾಳೇಪ್ರತಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರದಲ್ಲಿದ್ದು[4] ಇದರ ಕಾಲ ಕ್ರಿ.ಶ. 1724ಕ್ಕೆ ಸೇರುತ್ತದೆ. ಆದ್ದರಿಂದ ಚನ್ನಪ್ಪ ಕವಿಯ ಕಾಲವನ್ನು ಇನ್ನೂ ಹಿಂದಕ್ಕೆ ಅಂದರೆ, ಕ್ರಿ.ಶ. ಸುಮಾರು 1700 ಎಂದು ಹೇಳಬಹುದಾಗಿದೆ.[5]

ಈ ಕವಿಯ ಸ್ಥಳ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ನಿಡುಗಲ್ಲು. ಈ ನಿಡುಗಲ್ಲು ಒಂದು ಕಾಲದಲ್ಲಿ ಪ್ರಮುಖವಾದ ಸ್ಥಳವಾಗಿದ್ದು, ಹಲವಾರು ನಾಯಕರು, ಪಾಳೇಗಾರರು ಇದನ್ನು ಆಳಿಹೋಗಿದ್ದಾರೆ[6] ಇಲ್ಲಿದ್ದ ದುರ್ಗದಲ್ಲಿ ನಡೆಯುತ್ತಿದ್ದ ಬಸವನ ಜಾತ್ರೆಯನ್ನು ನೋಡಿ ಈ ಕವಿಯು 'ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆಯ ತಾರಾವಳಿಯನ್ನು ರಚಿಸಿದ್ದಾನೆ. ಈಗ ಆ ಬಸವನ ಗುಡಿ ಶಿಥಿಲವಾಗಿದೆ. ಅದನ್ನು ಕ್ರಿ. ಶ. 1653ರಲ್ಲಿ 'ಹೋಟಿಣ್ಣ ನಾಯಕ' ಎಂಬು

---

1. 'ಕರ್ಣಾಟಕ ಕವಿ ಚರಿತೆ' ಸಂಪುಟ-3 ಪುಟ-85
2. 'ಶರಣಲೀಲಾಮೃತ'– ಸಂಖ್ಯೆ-101.
3. 'ಬಸವ ಪಥ' 6-12 ಮಾರ್ಚ್-1985 ಪುಟ-16
4. K-260 (ಶರಣ ಲೀಲಾಮೃತ)
5. ಈ ಅಂಶವನ್ನು ನನ್ನ ಗಮನಕ್ಕೆ ತಂದವರು ಶ್ರೀ ಎಸ್. ಶಿವಣ್ಣನವರು
6. M.A.R. 1938 ಪುಟ-4

ವನು ಕಟ್ಟಿಸಿದ್ದು, ಇದರ ಜೀರ್ಣೋದ್ಧಾರವನ್ನು ಇವನ ಮಗ 'ತಿಮ್ಮಣ್ಣ ನಾಯಕನು' ಕ್ರಿ. ಶ. 1670ರಲ್ಲಿ ಮಾಡಿಸಿರುವುದಕ್ಕೆ ಶಾಸನದ ಆಧಾರವಿದೆ.[7]

ಈ ಕವಿಯು ಬಗೆಗಿನ ಮತ್ತೊಂದು ಮಹತ್ವದ ಸಂಗತಿಯೇನೆಂದರೆ. ಇವನ ಸಮಾಧಿಯು ಬೆಂಗಳೂರು ಜಿಲ್ಲೆಯ ಹೊಸಕೋಟೆಯಲ್ಲಿ ಇರುವುದು. ಒಂದು ಶಾಸನದ ಪರಿವೀಕ್ಷಣೆಯ ಕಾರ್ಯಕ್ಕೆ ಅಲ್ಲಿಗೆ ಹೋಗಿದ್ದಾಗ ಈ ಸಂಗತಿ ಗಮನಕ್ಕೆ ಬಂದಿತು. ಅಲ್ಲಿನ 'ವೀರಮ್ಮ ಮಠ' ದಲ್ಲಿ ಈ ಸಮಾಧಿಯಿದೆ. ಈ ಸಮಾಧಿ ಯನ್ನು ಅಲ್ಲಿನ ಜನರು 'ಚನ್ನಪ್ಪನ ಗದ್ದುಗೆ', 'ಶರಣಲೀಲಾಮೃತ ಗದ್ದುಗೆ' ಎಂಬುದಾಗಿ ಕರೆಯುತ್ತಿರುವುದರಿಂದ, ಆ ಸಮಾಧಿ ನಿಡುಗಲ್ಲು ಚನ್ನಪ್ಪನದೇ ಎಂಬ ಅಂಶವು ಖಚಿತವಾಗುತ್ತದೆ. ಈಗಲೂ ಆ ಸಮಾಧಿಗೆ ಪೂಜೆ, ವಿಧಿ-ವಿಧಾನ ಗಳು ನಡೆದುಕೊಂಡು ಬರುತ್ತಿದೆ. ಒಬ್ಬ ಪ್ರಸಿದ್ಧ ಕವಿಯ ಸಮಾಧಿಯನ್ನು ಈಗಲೂ ಬಹಳ ಶ್ರದ್ಧೆಯಿಂದ ಕಾಯ್ದುಕೊಂಡು ಬಂದಿರುವ ವೀರಮ್ಮ ಮಠ ದವರಿಗೆ ನಾವು ಎಷ್ಟು ಕೃತಜ್ಞತೆಗಳನ್ನು ಅರ್ಪಿಸಿದರೂ ಸಾಲದು.

---

7. E.C. XII P.G. 46.
ಹೊಸಕೋಟೆಗೆ ಜೊತೆಯಲ್ಲಿ ಬಂದು ಸಹಕರಿಸಿದ ಗುರುಗಳಾದ ಶ್ರೀ ಎಸ್. ಶಿವಣ್ಣ ನವರಿಗೆ ನನ್ನ ಅತ್ಯಂತ ಹೃತ್ಪೂರ್ವಕ ವಂದನೆಗಳು.

ಇಮ್ಮಡಿ ಗುರುಸಿದ್ಧಸ್ವಾಮಿಗಳ 'ಅಮ್ಮವ್ವೆ ಚರಿತೆ'ಯೊಳಗಣ "ಶಿವಸ್ತೋತ್ರ" ಮತ್ತು "ಜೋಗುಳ ಪದ"

(ಸಂ.) ಎಸ್. ಶಿವಣ್ಣ

ಚಿತ್ರದುರ್ಗದ ಬೃಹನ್ಮಠ ಪರಂಪರೆಯ ಮುರಿಗೆ ಶಾಂತವೀರ ಸ್ವಾಮಿಗಳ (ಕ್ರಿ.ಶ. ?–1703) ಶಿಷ್ಯರಾದ ಇಮ್ಮಡಿ ಗುರುಸಿದ್ಧಸ್ವಾಮಿಗಳ ಅಪ್ರಕಟಿತ ಕೃತಿಗಳಲ್ಲೊಂದು 'ಅಮ್ಮವ್ವೆ ಚರಿತೆ' ಕೃತಿ ಯಕ್ಷಗಾನ ರೂಪದಲ್ಲಿದೆ. ಈ ಕೃತಿಯ ಆದಿಯ ಭಾಗವಾಗಿರಬಹುದಾದ ಶಿವಸ್ತೋತ್ರ ಮತ್ತು ಅಮ್ಮವ್ವೆ ಶಿಶು ರೂಪಧಾರಣೆ ಮಾಡಿದ ಶಿಶುವಿಗೆ ಹಾಡಿದ ಜೋಗುಳದ ಭಾಗಗಳನ್ನು ಈ ಮುಂದೆ ಪ್ರಕಟಿಸಲಾಗಿದೆ. ಈ ಭಾಗಗಳನ್ನು ಹುಬ್ಬಳ್ಳಿ 3000 ಮಠದ ಹಸ್ತಪ್ರತಿ ಸಂಗ್ರಹದಲ್ಲಿನ ಕ್ರಮಾಂಕ 65ನೆಯ ಓಲೆ ಪ್ರತಿಯನ್ನು [(ಗರಿ 104 (ಹಿಂ) ; ಗರಿ 20 (ಮುಂ) + (ಹಿಂ)] ಆಧರಿಸಿ ಸಂಪಾದಿಸಲಾಗಿದೆ. ಈ ಪ್ರತಿಯನ್ನು ಬಳಸಿಕೊಳ್ಳಲು ಅನುಮತಿಸಿದ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರಿಗೆ ನನ್ನ ವಂದನೆಗಳು.

'ಅಮ್ಮವ್ವೆ ಚರಿತೆ'ಯೊಳಗಣ ಶಿವಸ್ತೋತ್ರ

॥ ಕಂದ ॥ ಶ್ರೀಮದುಮಾ । ನ[ಯ]ನೋತ್ಪಲ
ಸೋಮ । ಶಿವಾವದನ । ಕಮಲ ದಿನಕರ । ಗೌರೀ
ಕೋಮಲ । ದೋಃಶ್ಚಂಪಕ । ನವ
ದಾಮಾಂಚಿತ । ಕಂಠ । ಪಾಹಿ । ಭವ । ಶಿವಲಿಂಗಾ । ೧ ।

॥ ದ್ವಿಪದಿ ॥ ಗಿರಿಜಾಮುಖಾಂಬುಜ । ಸೂರ್ಯ । ಸುರತತಿ । ವರ್ಯ
ಶರಣು । ಶಿವಲಿಂಗೇಶ । ಸುಗುಣಮಣಿಗಣಕೋಶ । ೨ ।

ಅಂಬಿಕೆ । ಮಹಾದೇವನರ್ಧಾಂಗಿ । ಜಯತು । ಹೇ-
ರಂಬ । ಷಣ್ಮುಖಮಾತೆ । ಕೊಡು । ಎನಗೆ । ಮತಿಯ । ೩ ।

ಗಜಮುಖನೆ । ಓಂಕಾರರೂಪನೆ । ಮತಿಯನೀಯ್ಯ
ವಿಜಯಶೀಲನೆ । ವಿಬುಧ ಸಂದೋಹ ಪೂಜಿತನೆ । ೪ ।

ದೇವಸೇನಾಪತಿಯೆ । ತಾರಕಾಹಿತಮಹಿಯೆ
ಶೈವಜನ । ಸಮ್ಮತಿಯೆ । ಕೊಡು । ಎನಗೆ ಮತಿಯ । ೫ ।

ಶಿವಧರ್ಮರೂಪ । ಬಸವಾಭಿಧಾನ । ಕಲಾಪ
ಭುವನತತಿಗಾಧಾರ । ಮತಿಯು । ಕೊಡು । ಧೀರ ।೬।

ಭೃಂಗಿ । ವೀರೇಶಾದಿ । ಸಕಲ । ಪ್ರಮಥವರರು
ಸಾಂಗದಿಂದೀಗೆಮಗೆ । ಯುಕುತಿ । ಚಮತ್ಕೃತಿಯು ।೭।

ಇದು । ಸಜ್ಜನರ । ಮೆಚ್ಚು । ದುಷ್ಟ ಜನರೆದೆಗಿಚ್ಚು
ವಿಧಿತ । ತತ್ವದ । ಕೆಚ್ಚು । ಭಕ್ತಿರತಿಯುಚ್ಚು ।೮।

ಹೆದರೆ । ನಾಂ । ಕುಚ್ಚಿತ । ಕವಿಗೆ । ಕುಬೋಧಕರಿಗಾಂ
ಹೆದರುವೆಂ । ಶಿವ ಕವಿಗೆ । ಶಿಷ್ಟ । ಸದುಭಕ್ತರಿಗೆ ।೯।

ವರ್ಣಕ । ಪ್ರೌಢಿಯಿದರೊಳ್ । ತಪ್ಪು ದೋರಿದೊಡೆ
ನಿರ್ಣಯದ । ಶಿವಕವೀಶ್ವರರಿರದೆ । ತಿರ್ದುವುದು ।೧೦।

॥ ತ್ರಿನಡೆ ॥ ಶ್ರೀಮದಚರಾಧೀಶಜಾಸುಖವಾರ್ಧಿಚಂದ್ರ । ಪಾಲಯ
ಕ್ಷೇಮ ನಿಚಯವನಿತ್ತೆನಗೆ । ಶಿವಲಿಂಗ । ತುಂಗ ।೧೧।

॥ ಏಕ ತಾಳ ॥ ಸಕಲ । ಸುರಾಸುರ । ವಂದಿತ । ಪಾದ
ಸುಕವಿ । ಸನ್ನುತ । ಶಿವಲಿಂಗೇಶ । ಜಯತು ।೧೨।

ಶ್ರೀಮದಮಲಗುಣಧಾಮ । ನಿಸ್ಸೀಮ
ಸೋಮಶೇಖರ । ಶಿವಲಿಂಗೇಶ । ಜಯತು ।೧೩।

ಶ್ರೀ ಗಿರಿಜಾನನ ಕಮಲ । ದಿವಾಕರ
ಭೋಗಮೋಕ್ಷದ । ಶಿವಲಿಂಗೇಶ । ಜಯತು ।೧೪।

॥ ದ್ವಿಪದಿ ॥ ಕರೆಗೊರಲ । ಶರಣಾಗತಾಶ್ರಯ । ಪರಂಜ್ಯೋತಿ
ಪರಮ । ಶಿವಲಿಂಗೇಶ । ದೇವ । ಜಯ । ಜಯತು ।೧೫।

॥ ಏಕತಾಳ ॥ ಹರಿ । ಹರಿಸೇತ್ರ । ಹರಿಯಲಂಕೃತ । ಹರಿ
ಹರಿಸುತ । ಕರಿ ಹರಿ । ಜಯ । ಶಿವಲಿಂಗ ।೧೬।

ಚಿತ್ರಕಾಯಾಜಿನ ಚೇಲ । ಚಿರಂತನ
ಗೋತ್ರಜೆಯಧಿಪತಿ । ಜಯ । ಶಿವಲಿಂಗ ।೧೭।

॥ ತ್ರಿಪದಿ ॥ ಅಂಬಿಕಾಮುಖಪದ್ಮ ಮಧುಕರನಮರಮುಖರಜ ಶಾಶ್ವತ
ಕಂಬಲಾಶ್ವತಗಾನರತಿಯುವನೆಸೆದನೀಶಂ ।೧೮।

ಚಂದ್ರಚೂಡಾಮಣಿ । ಗಣಾಗ್ರಣಿ । ನಿಗಮವಾಣಿ । ಕೀರ್ತಿತ
ರುಂದ್ರ ಮುನಿತತಿ । ರುದ್ರ ಸಂಗತಿಯೊಪ್ಪುತಿರಲು ।೧೯।

ರಾಜಹರಿ । ದಿನರಾಜಲೋಚನ । ರಾಜರಾಜರಾಜಿತ
ರಾಜರಾಜ । ನತಾನತಾಮರ ಭೂಜ । ರಾಜ ।೨೦।

ಭಕ್ತವತ್ಸಲ । ಭಕ್ತರಿಚ್ಛೆಕ । ಭಕ್ತಬಂಧು । ಬುಧವರ
ಯುಕ್ತ । ಸನ್ನುತಿ । ರಕ್ಷಿ । ಭಾಸುರನೆಸೆದನಭವಂ ।೨೧।

ಸಗುಣ । ನಿರ್ಗುಣ ರೂಪ । ನಿರ್ಮಳಕೀರ್ತಿವರ್ತಿ । ನಿರುಪಮ
ನಗಣಿತಾನಂದೈಕನಿಧಿ । ನಿರವಧಿಕನೆಸೆದಂ । ೨೨ ।

ಅರ್ಥವನು । ಪೇಳದೊಡೆ । ಪರಶಿವಲಿಂಗನವಗೆ । ಮುಕ್ತಿಯ
ಸಾರ್ಥವಾಗಿಯೆ । ಕೊಡುವನಿದು । ಸಿದ್ಧಾಂತ । ನಂಬಿ । ೨೩ ।

ಇದನು । ಪೇಳಿದ । ಗುರು ಸಿದ್ಧೇಶ ಸ್ವಾಮಿಗಳು
ಇದ । ಬಸವಲಿಂಗ । ಬರವನು । ಕೇಳು । ಶುಭವಾಗ್ಲು । ೨೪ ।

ಈ । ಸ್ತೋತ್ರವು । ಸಂಪೂರ್ಣ । ಮಂಗಳ ಮಹಾ । ಶ್ರೀ

'ಅಮ್ಮವ್ವೆ ಚರಿತೆ'ಯೊಳಗಣ ಜೋಗುಳ ಪದ

॥ ವಚನ ॥ ಇಂತೆಸೆವ । ಬಾಲನಂ । ಮೃಗಾಕ್ಷಿ । ನಸೆ ನೋಡಿ । ಸಂತಸದಿಂ ।
ಸರ್ವಾಂಗವಮಂ । ಗಂಧತೈಲದಿಂ । ರಚಿಸಿನ್ನೈದು । ಮಜ್ಜನಗೈದಿಂ ।
ಜಳಕವಮಂ । ಮಾಡಿ [illegible] । ಸ್ವಚ್ಛ ಸೀರೆಯಿಂ । ಮೈಯನ್ನೊರಸಿ ।
ತನ್ನಂಗುಷ್ಟದ । ಮಣ್ಣಿಂ । ತೆಗೆದು । ನೊಸಲ್ಗೆ ಪೂಸಿ । ಕಣ್ಗೆ ಮಿಗೆ ಸೂದಿ ।
ಮಡಿಯ ಪೊದೆಯಿಸಿ । ತನಿಸೊಲೆವಾಲಿಂ । ಪೊರೆದು । ಚಿನ್ನದನ್ನದ ।
ತೊಟ್ಟಿಲ ಮೆತ್ತೆಯೊಳಗಿರಿಸಿ । ಮಧುರತರ ಗಾನದಿಂ । ಜೋಗುಳವಮಂ ।
ಪಾಡುತಿರ್ದಳದೆಂತೆನೆ ॥ ೧ ॥

॥ ತ್ರಿವಡೆ ತಾಳಂ ॥ ಬಾಲಚಂದ್ರ ಶಿರಿಂ । ಮುನಿಕುಲ ಪಾಲಕಾ । ಜೋ । ಜೋ । ಬ್ರಹ್ಮಕ
ಪಾಲ ಪಾಣಿ । ಪರಾಪರಾಂಚಿತ । ಶೀಲ । ಜೋ । ಜೋ । ॥ ೧ ॥

ಚಿತ್ರ ನರ್ತನದಿಂದೆ । ರಾಜಿಪ ಧನ್ಯ । ಜೋ । ಜೋ । ಮುಕ್ತಿನ
ಛತ್ರ । ಭಾಸುರ ಗಾತ್ರ । ಪನ್ನಗ ಸೂತ್ರ । ಜೋ । ಜೋ । ॥ ೨ ॥

ಅಂಗಜಾಂಗ । ವಿಭಂಗ । ಭಸ್ಮ । ಸಿತಾಂಗ । ಜೋ । ಜೋ । ಎನ್ನಂತೆ
ರಂಗ । ಪದ್ಮಪತಂಗ । ಗಣ ಕುಲ । ಸಂಗ । ಜೋ । ಜೋ । ॥ ೩ ॥

ಲೋಕವಮಂ । ಕುಕ್ಷಿಯೊಳು । ತಾಳ್ದ । ಪಿನಾಕಿ । ಜೋ । ಜೋ । ದೈವತಾ
ನೀಕ । ವಂದಿತ ಪಾದ । ನಿರ್ಜಿತ । ಶೋಕ । ಜೋ । ಜೋ । ॥ ೪ ॥

ಉಣ್ಣಲೊಲ್ಲವನೆಂದು । ಬಾಳ್ದ । ಮುಕ್ಕಣ್ಣ । ಜೋ । ಜೋ । ಮುದ್ದಿನ
ಚಿಣ್ಣ । ಚಿರಸುಖದಿಂದಾಗಿ ನಿಂದೆನ್ನಣ್ಣ । ಜೋ । ಜೋ । ॥ ೫ ॥

ಸಾರ । ಸದ್ಗುಣ ಹಾರ । ವಿಮಲಾಕಾರ । ಜೋ । ಜೋ । ಎನ್ನ । ಕು
ಮಾರ । ಮಾರವಿದೂರ । ಸನ್ನುತ । ಧೀರ । ಜೋ । ಜೋ । ॥ ೬ ॥

ಮಂಗಳಾಕರ । ಚಾರು । ವೇದ ತುರಂಗ । ಜೋ । ಜೋ । ಸಿಂಧು ನಿ
ಷಂಗ । ಶಾಶ್ವತ । ಕೀರ್ತಿ । ಕಾಂತಿ । ತರಂಗ । ಜೋ । ಜೋ । ॥ ೭ ॥

[೧೫೯]

80ರ ರಂಗಭೂಮಿಯ ಒಲವುಗಳು

ಕ. ವೆಂ. ರಾಜಗೋಪಾಲ

ಇಂದಿನ ಕನ್ನಡ ರಂಗಭೂಮಿಯ ಕ್ರಿಯಾವಂತಿಕೆಗೆ ಸ್ವತಂತ್ರ ನಾಟಕಗಳು ಸಾಲವಾಗಿವೆ ಎಂಬ ಮಾತೊಂದು ಕೇಳಿಬರುತ್ತಿದೆ. ಇಲ್ಲಿಯ ನಿರಾಶೆಯು ತರುಣ ನಿರ್ದೇಶಕರದೆಂಬುದಂತೂ ಸ್ಪಷ್ಟ. ಕಳೆದ 30-40ವರ್ಷಗಳಲ್ಲಿ ಇಂಥ ಸಂದರ್ಭವಿರಲಿಲ್ಲ ಮತ್ತು ಟಿ. ವಿ. ಯ ಕ್ರಿಯಾಹೀನ ಪ್ರದರ್ಶನಗಳಿಂದ ಕೂಡ ಇಂಥ ಸ್ಥಿತಿ ಒದಗಿಬಂದಂತಾಗಿದೆ 1980 ರ ಈಚಿನ ದಿನಗಳಲ್ಲಿ ನಮ್ಮ ಕಲೆಗಳಿಗೆ ಏನಾಗಿದೆ ಮತ್ತು ಏನಾಗುತ್ತಿದೆ-ಎಂಬುದನ್ನು ಒಮ್ಮೆ ಪರಿಶೀಲಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಟಿ.ವಿ.ಯು ನಮ್ಮ ಸಿನೆಮಾಗಳಿಗೂ ಆತಂಕಕಾರಿಯಾಗಿರುವುದಲ್ಲದೆ ರಂಗನಿರತ ಕಲಾವಿದರನ್ನು ಸುಲಭವಾಗಿ ಸೆಳೆದುಕೊಳ್ಳುವುದರ ಮೂಲಕ ರಂಗಭೂಮಿಗಂತೂ ಮಾರಕವಾದಂತಿದೆ. ಮುಖ್ಯವಾಗಿ ರಂಗಭೂಮಿಗೆ ಹೋಗಿ ಪ್ರದರ್ಶನಗಳನ್ನು ನೋಡುತ್ತಿದ್ದ ಪ್ರೇಕ್ಷಕರು ಅದನ್ನು ಕಡೆಗಣಿಸುವಂತಾಗಿದೆಯಷ್ಟೆ. ಅಲ್ಲದೆ ನಮ್ಮ ಮಕ್ಕಳು ಮರಿಗಳ ಹಸುಳೆತನದ ಮೇಲೆ ಬೂಟುಕಾಲಿನ 'ಡ್ರಿಲ್' ನಡೆಸುವ ಈ ಟಿ.ವಿ. ಯನ್ನು ಭಾವುಕರಾಗಿ ಪ್ರತಿಯೊಬ್ಬರೂ ನಂಬಿಕೊಳ್ಳುತ್ತಿರುವುದಂತೂ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಆದರೂ ಹಾಗಿ-ಬೇಗೆಗಳಲ್ಲಿ ರಂಗಚಟುವಟಿಕೆಗೆ ಕಲಾವಿದರು, ಆರ್ಥಿಕವಾಗಿ ಹಾಗೂ ಕಲಾವಂತಿಕೆಗೂ ಆತಂಕವನ್ನು ಅನುಭವಿಸುವಂತಾಗಿದ್ದರೂ, ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವಂತೆ ತೋರುತ್ತಿದೆ.

—ಎಪ್ಪತ್ತರ (1970) ರಂಗ ಪ್ರಯೋಗಗಳಿಂದ ಪ್ರೇರಿತರಾಗಿ ತಮ್ಮ ಸ್ವಂತ ತನವನ್ನು ಕಂಡುಕೊಂಡ ಕೆಲವು ತರುಣರಲ್ಲಿ ಹೊಸ ಹೊಸ ಆಸೆಗಳನ್ನೂ ಮೂಡಿಸಿದ್ದುವು. ಒಂದು ರೀತಿಯಲ್ಲಿ ಈ ಕೆಲವೇ ತರುಣರಾದರೂ 80ರ ದಶಕದ ರಂಗಭೂಮಿಯ ಹೊಣೆಗಾರರಾದಂತೆ ತೋರಿದ್ದಿತು. ಇನ್ನು ಬಿ. ವಿ. ಕಾರಂತರೂ ಬೇಕಾಗುವುದಿಲ್ಲ!-- ಎಂದುದೂ ಉಂಟು. ಏಕೆಂದರೆ ಅಂದಿನ ಕೆಲವು ಪ್ರಯೋಗಗಳು ಶ್ರೀರಂಗರ 'ಅಗ್ನಿಸಾಕ್ಷಿ', ಸೀತಾರಾಂರ 'ಆಸ್ಫೋಟ', ಶ್ರೀನಿವಾಸರಾಜು ಅವರ 'ಉದ್ಭವ' ಮತ್ತು 'ಸಂದರ್ಭ'ಗಳಲ್ಲಿ ಹೊಸ ಆಸೆ ಒಡಮೂಡಿದ್ದೂ ಉಂಟು. ಸಮುದಾಯ ಸಂಸ್ಥೆಯು ಮತ್ತು ಎ. ಎಸ್. ಮೂರ್ತಿಯವರ ಬೀದಿನಾಟಕಗಳೂ ಸೇರಿ ರಂಗಭೂಮಿಗೆ ಹೊಸಪ್ರೇಕ್ಷಕರು ಬರುವ ನಿರೀಕ್ಷೆಯುಂಟಾಗಿದ್ದಿತು. ಕನ್ನಡ ಹವ್ಯಾಸಿರಂಗಭೂಮಿಯು ಹಿರಿಯ ನಾಟಕಕಾರರಾಗಿದ್ದ ಶ್ರೀರಂಗರ ರಕ್ಷೆಯೂ ಇದ್ದಂತಿದ್ದಿತು.

ಆದರೆ ರಂಗಭೂಮಿಯ ನಾಟಕಕಾರರು ಈ ಸಮಯದಲ್ಲಿ ಹೆಚ್ಚು ಕೃತಿಗಳನ್ನು ರಚಿಸಲಿಲ್ಲ ಎಂಬುದನ್ನು ಗಮನಿಸಿದಾಗ ಇಂಥ ಪರಿಸ್ಥಿತಿಯು ಯಾವಾಗಲೂ ಇರಲಾರದು–ಎಂಬುದನ್ನು ಮರೆಯುವಂತಿಲ್ಲ. ಹೊಸ ನಾಟಕಕಾರರು ತಾವಾಗಿಯೇ ಹುಟ್ಟಬೇಕಾಗುತ್ತದೆ. ಅಲ್ಲದೆ ಹೊಸರಂಗನಿರತರಿಗೆ ಹೊಸ ಸಂವೇದನೆಯ ರುಚಿ ಹತ್ತಿರುವ ಅವರಿಗೆ ಛಾಲೇಂಜ್ ಆಗುವಂಥ ಕೃತಿಗಳೇ ಬೇಕಾಗುತ್ತವೆ. ಅಂಥ ತರುಣ ನಿರ್ದೇಶಕರಲ್ಲಿ ಪ್ರಸನ್ನ 'ತದ್ರೂಪಿ'ಯಂಥ ನಾಗರಿಕ ನಾಟಕ ರಚನೆಯನ್ನೂ ಮಾಡಿ ಪ್ರಯೋಗ ಮಾಡಿದುದುಂಟು. ಹೀಗೆಯೇ ಮುಂಬಯಿಯಿಂದ ಬಂದ 'ನಾಗ್' ಸೋದರರು ಕಾರ್ನಾಡರ 'ಅಂಜುಮಲ್ಲಿಗೆ'ಯಿಂದ ಹಿಡಿದು ಹೊಸ ಅಲೆಯೊಂದನ್ನು ಮೂಡಿಸುವಂತೆ ಕಂಡರು. ಅವರ 'ನೋಡಿ ಸ್ವಾಮಿ ನಾವಿರೋದೇ ಹೀಗೆ' ಮತ್ತು ಬ್ಯಾರಿಸ್ಟರ್ ಮುಖ್ಯವಾದ ಪ್ರಯೋಗಗಳೂ ಆದುವು. ಆದರೆ ಅವರು ಬಹುಬೇಗನೆ ಸಿನೆಮಾ ಜಗತ್ತಿಗೆ ಸೇರಿ ಹೋದರಷ್ಟೇ ಅಲ್ಲದೆ ತರುಣ ನಿರ್ದೇಶಕ ನರಸಿಂಹನ್‌ರನ್ನೂ ಒಯ್ದರು. ಆದುದರಿಂದ ಅವರಿಗೆ ರಂಗಭೂಮಿಯೊಂದು ಮುಖ್ಯವಾದ ಮಾಧ್ಯಮವಾಗದೇ ಹೋಯಿತು. ನಾಟಕಕಾರರಲ್ಲಿ ರಾಮಚಂದ್ರದೇವ, ವೈಕುಂಠರಾಜು, ಚಂದ್ರಶೇಖರ ಕಂಬಾರ, ಗೋಪಾಲ ವಾಜಪೇಯಿ, ಮೋಹಮಿತ್ರ—ಮೊದಲಾದವರು ತಮ್ಮ ತಮ್ಮ ತಾತ್ವಿಕ ನೆಲೆಯಿಂದ ಕೃತಿರಚನೆಯಲ್ಲಿ ತೊಡಗಿದ್ದ ಕಾರಣ ಅವರ ಕೃತಿಗಳು ಪ್ರಕಟಣೆಗೂ ಮುಂಚೆ ರಂಗ ಪ್ರಯೋಗಗಳನ್ನು ಕಂಡವು. ಹೀಗೆ ರಂಥಮುಸಲ, ಸನ್ನಿವೇಶ, ಹರಕೆಯ ಕುರಿ, ದೊಡ್ಡಪ್ಪ, ಎಚ್ಚೆತ್ತ ಏಕಲವ್ಯ, ಗಾಂಧಾರಿ—ಪ್ರಸನ್ನರ ಕೃತಿಗಳೂ ಸೇರಿಕೊಂಡಂತೆ ಹೊಸ ಹೊಸ ಆಶಯಗಳನ್ನು ನಿರ್ಮಿಸಿದ್ದುವು. ಹಿರಿಯ ನಿರ್ದೇಶಕರಲ್ಲಿ ಬಿ. ಸಿ. ಯವರ ಸಂಚಯ, ಪರಹಿತ ಪಾಷಾಣ, ಅಯ್ಯರ್‌ರ ಇಲ್ಲದಿದ್ದವರು, 'ರಾಣಿ'ಯವರ ಮೆಫಿಸ್ಟಾಫಲಿಸ್—ಇಂತಹ ಪ್ರಯೋಗಗಳು ಗಂಭೀರ ವಾತಾವರಣವನ್ನು ನಿರ್ಮಿಸಿದ್ದುವು. ಇವುಗಳಿಂದ ರಂಗಕ್ರಿಯೆಯ ಹೊಸ ಅಲೆಯೊಂದಕ್ಕೆ ಸಹಜವಾಗಿ ಅವಕಾಶ ವುಂಟಾಗಿದ್ದಿತು.

ಇಷ್ಟರಲ್ಲಿ ಶ್ರೀರಂಗರು ಕಣ್ಣುಮುಚ್ಚಿದಾಗ (1984) ಅವರ ಕೊಡುಗೆಯ ಅಳತೆಯು ಭಾರತೀಯ ಸಂದರ್ಭದಲ್ಲಿ ನಡೆದಂತೆ ತೋರಿತು. ಅರ್ಧ ಶತಮಾನಕ್ಕೂ ಮೀರಿದ ಅವರ ದುಡಿಮೆಯಲ್ಲಿ ಕನ್ನಡ ರಂಗಭೂಮಿಯು ಐತಿಹಾಸಿಕ ಬದಲಾವಣೆಗಳನ್ನು ತಾಳಿ ಆಧುನಿಕವಾಗಿತ್ತು. ಅವರ ಹರಿಜನ್ವಾರ, ಶೋಕಚಕ್ರ, ಕತ್ತಲುಬೆಳಕು, ಸ್ವರ್ಗಕ್ಕೆ ಮೂರೇ ಬಾಗಿಲು ಮತ್ತು ಅಗ್ನಿಸಾಕ್ಷಿ—ಕೃತಿಗಳ ಸಾರ್ಥಕತೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೂ ಅಲ್ಲಿಂದೀಚೆಗೆ ಅವರ ಕೃತಿಗಳು ಬೇಕಾದಂತಿಲ್ಲ. (ನಮ್ಮ ತರುಣರು ಬೇರೆಯವನ್ನೇ ಕೇಳುತ್ತಿದ್ದಾರೆ) ಅವರ ಅರ್ಧ ಶತಮಾನಗಳ ಹೆಜ್ಜೆಗಳಂತೆ ಆ ಕೃತಿಗಳು ಕಂಡರೂ (ಅವರ ಕೇಳು ಜನಮೇಜಯದಿಂದ ಹಿಂದಿಯಲ್ಲಿ ಒಂದು ಹೊಸ ಯುಗವು ಹುಟ್ಟಿದ್ದರೂ) ಅವರ ಒಟ್ಟು ಕಾಣಿಕೆಯನ್ನು ಅಳೆಯುವುದು ಸುಲಭವಾಗಿಲ್ಲ. ಅದಕ್ಕೂ ಮಿಗಿಲಾಗಿ ಶ್ರೀರಂಗರ ನೇರವಾದ ಕಾಳಜಿಯು ರಂಗ

ಭೂಮಿಯೇ ಆಗಿದ್ದು ಸಿನಿಮಾ ಅಥವಾ ಟಿ.ವಿ.ಗಳಿಗೆ ಅವರು ಒಲಿದವರೂ ಆಗಿರಲಿಲ್ಲ. ಅವರಿಂದ ಸಮಕಾಲಿಕವಾದ 'ಪ್ರಚೋದಕ'ವಾದಂದುಂಟು. ಅಂಥ ಲಾಭದಲ್ಲಿ ಕನ್ನಡ ಹವ್ಯಾಸಿ ನಾಟಕಕ್ಕೆ ಪ್ರೇಕ್ಷಕ ವರ್ಗವೊಂದು ಹುಟ್ಟಿಕೊಂಡಿತ್ತು. ಅದರಿಂದಾಗಿ ಎಲ್ಲಾ ರಂಗಕ್ರಿಯಾವಂತರೂ ಅವರನ್ನು ಗೌರವದಿಂದ ಕಂಡಿದ್ದರು. ಅವರ ಕಣ್ಣೆದುರಿಗೆ ನಮ್ಮ ನವ್ಯ ನಾಟಕಗಳು, ಜಾನಪದ ನಾಟಕಗಳು, ಬೀದಿನಾಟಕಗಳೂ ಕೂಡ ಮೆರೆದುವು. ಇಂತಹವರ ಕೃತಿಗಳನ್ನು ನಮ್ಮ ತರುಣ ನಿರ್ದೇಶಕರು ಬಿಟ್ಟುಕೊಟ್ಟಿರುವುದನ್ನೂ ಮರೆಯುವಂತಿಲ್ಲ. ಅವರಂತೆ ಸಾಮಾನ್ಯ ಪ್ರೇಕ್ಷಕರಿಗಾಗಿ ಹವ್ಯಾಸಿ ಪ್ರಯೋಗಗಳನ್ನು ಮಾಡುವುದನ್ನು ನಮ್ಮ ತರುಣರು ಬಿಟ್ಟುಕೊಟ್ಟಂತೆ ತೋರುತ್ತಿದೆ.

ಕಾರ್ನಾಡ್, ಲಂಕೇಶ್, ಕಂಬಾರ ಮೊದಲಾಗಿ ಮುಂದಿನ ನಾಟಕಕಾರರೆಲ್ಲರೂ ರಚನೆಯ ಕಡೆಗೇ ಹೆಚ್ಚು ಗಮನವಿಟ್ಟವರಾದರು. ಒಳ್ಳೆಯ ಕೃತಿಯಿದ್ದರೆ ಪ್ರೇಕ್ಷಕರು ತಾವಾಗಿಯೇ ಮೆಚ್ಚಿಕೊಳ್ಳುತ್ತಾರೆಂಬ ಧೋರಣೆಯೂ ಧೈರ್ಯವು ಅವರದಾಗಿದ್ದಂತೆ ತೋರುತ್ತಿದೆ. ಪ್ರೇಕ್ಷಕನ ಅರಿವಿದ್ದರೂ ಈ ನಾಟಕಕಾರರು ಪಾಠ ಕಲಿತಂತೆ ಕಾಣುವುದಿಲ್ಲ. ಆದುದರಿಂದ ನಾಟಕಕಾರ ರಂಗಪ್ರಯೋಗದ ಹೊಣೆಗಾರನೂ ಆದಲ್ಲಿ ಮಾತ್ರ ಪೂರ್ಣ ಲಾಭವಾಗುವುದೆಂಬುದಕ್ಕೆ ಶ್ರೀರಂಗರೊಬ್ಬರೇ ಉದಾ.ಯಾಗುತ್ತಾರೆ. ಈ ಅಸಂಗತ ನಾಟಕಕಾರರಲ್ಲಿ ಕಂಬಾರರೊಬ್ಬರೇ ಇಂದಿಗೂ ನಾಟಕ ರಚನೆಯಲ್ಲಿ ತೊಡಗಿದ್ದಾರೆಯಾದರೂ 'ಪ್ರೇಕ್ಷಕ'ರ ಕಾಳಜಿಯನ್ನು ಹಚ್ಚಿಕೊಂಡಂತವರಾಗಿಲ್ಲ— ಇವರೂ ರಂಗಪ್ರಯೋಗದ ಹೊಣೆಗಾರಿಕೆಯನ್ನು ನಿರ್ದೇಶಕನ ಪಾಲಿಗೇ ಬಿಟ್ಟುಕೊಟ್ಟವರಾಗಿದ್ದಾರೆ. ಈ ವಿಮುಖತೆಯಿಂದಾಗಿ ನಮ್ಮ ಮುಂದಿನ ತಲೆಮಾರಿನ ತರುಣ ನಿರ್ದೇಶಕರು ತಮ್ಮ ತಮ್ಮ ಪ್ರೇಕ್ಷಕರಿಗಾಗಿ ಹೊಸ ಹಾದಿಯನ್ನು ಕಂಡುಕೊಳ್ಳಬೇಕಾಗಿದೆ. ಇಲ್ಲಿ ಟಿ.ವಿ.ಯ ರುಚಿ (ಕೆಟ್ಟುದಾದರೂ ಅಪಾಯಕಾರಿ) ಯನ್ನು ಮುರಿದು ಯಶಸ್ವಿಗಳಾಗಬೇಕಾಗಿದೆ. ಇಂತಹ ಪ್ರಯತ್ನದಲ್ಲಿ ನಾವು ಈ ತರುಣ ನಿರ್ದೇಶಕರು ಹಳೆಯ ಅಥವಾ ಈವರೆಗಿನ ಕೃತಿಗಳನ್ನು ಬಿಟ್ಟುಕೊಟ್ಟು ತಮ್ಮ ತಮ್ಮ ಆಶೋತ್ತರಗಳಿಗೆ ತಕ್ಕ 'ಸ್ಕ್ರಿಪ್ಟ್'ಗಳನ್ನು ನಂಬಿಕೊಂಡಂತೆ ಕಾಣುತ್ತಿದೆ. ಇದರಿಂದಾಗಿ ಕನ್ನಡ ಸಣ್ಣಕತೆಗಳು ಕಾದಂಬರಿಗಳು (ಪ್ರಸಿದ್ಧವಾದುವು) ರಂಗಪ್ರಯೋಗಕ್ಕೆ ಬಂದಿವೆಯೆನ್ನಬಹುದು.

ಶ್ರೀರಂಗರ ಕಾಲಕ್ಕೆ ಅವರದೇ ಹಾದಿ ಸರಿಯಾಗಿತ್ತು. ಅದರಿಂದ ಕನ್ನಡ ರಂಗಭೂಮಿಗೆ ಅಸ್ತಿತ್ವವುಂಟಾಗಿ ಬೆಳೆಯಲು ಸಾಧ್ಯವಾಯಿತು. ಸ್ವಾತಂತ್ರ್ಯ ನಂತರದಲ್ಲಿ ನವ್ಯಕಾವ್ಯವು ರೂಪತಾಳಿದಂತೆ ನವ್ಯ ನಾಟಕವೂ ರೂಪ ತಾಳಿತು. ಇದರಲ್ಲಿ ಸಾಹಿತ್ಯ ರಚನೆಗೆ, ಅದೂ ಅಭಿನಯಕ್ಕೆ ಸಾಧ್ಯವಾಗುವಂತೆ, ಒತ್ತುಬಿದ್ದಿತು. ಒಳ್ಳೆಯ ಸಾಹಿತ್ಯವೆಂದರೆ ಪಾಶ್ಚಿಮಾತ್ಯರಂತೆ ಬದುಕಿನ ಸಂಕೀರ್ಣತೆಗೆ ಆದ್ಯತೆಯಿರಬೇಕು. ಏಕೆಂದರೆ ಮಾನವನ ನಡವಳಿಕೆಗೆ ಆಧಾರವಾದ ಮನಸ್ಸು ತೀರಾ ಸಂಕೀರ್ಣವಾದುದು ಮತ್ತು ಭಾಷೆಯಲ್ಲಿ ಅದನ್ನು ಹಿಡಿಯುವಲ್ಲಿ ದೃಶ್ಯಗಳೂ ರೂಪತಾಳ

ಬೇಕು–ಇಂತಹ ಅನಿಸಿಕೆಗಳು ಕೆಲಸ ಮಾಡತೊಡಗಿದ್ದುವು. ಇದರಿಂದ ಅಸಂಗತ ನಾಟಕಗಳು ರಂಗದ ಮೇಲೆ ಮೆರೆದುವು. ಕೆಲವು ಪ್ರಸಿದ್ಧ ಪಾಶ್ಚಾತ್ಯರ Absurd ನಾಟಕಗಳ ಅನುವಾದಗಳು ಪ್ರಯೋಗವಾದುವು. ಆದರೆ ಈ ತರುಣರಿಗೆ ಸಾಹಿತ್ಯದ ಉಳಿದ ಪ್ರಕಾರಗಳೂ ಬೇಕಾದುವು. (ಈ ವೇಳೆಗೆ ಪಾಶ್ಚಾತ್ಯರಲ್ಲಿ ಗದ್ಯ ಕೃತಿಗಳಿಗೆ ಹೆಚ್ಚು ಮನ್ನಣೆ ದೊರಕಿದ್ದುದೂ ಇದಕ್ಕೆ ಕಾರಣವಿರಬಹುದು) ಆದುದರಿಂದ ರಂಗನಿಷ್ಠೆ–ಎನ್ನುವುದು ನಿರ್ದೇಶಕರ ಪಾಲಿಗೇ ಉಳಿದಂತೆ ತೋರುತ್ತದೆ. ಈ ಸ್ಥಿತಿಯಲ್ಲಿ ರಂಗಕರ್ಮಿಗಳ ತರಪೇತಿಗೆ ಹೆಚ್ಚು ಒತ್ತುಬಿದ್ದ ಕಾರಣ ಅನೇಕ ತರಪೇತಿ ಬಿರಗಳು ನಾಡಿನಲ್ಲೆಲ್ಲಾ ಜರುಗಿ ನಟರ ಸಂಖ್ಯೆ ಬೆಳೆಯಿತೆನ್ನಬಹುದು. ಈವರೆಗೂ ಕಾಣುತ್ತಿದ್ದ ನಟಿಯರ ಕೊರತೆಯೂ ಸುಧಾರಿಸಿತೆನ್ನಬಹುದು.

ಇದೇ ವೇಳೆಗೆ ಎನ್. ಎಸ್. ಡಿ. ಮತ್ತು ಹೆಗ್ಗೋಡಿನ ರಂಗ ತರಪೇತಿ ಕೇಂದ್ರಗಳಿಂದ ತಯಾರಾದವರು (ನಾಡಿನ ರಂಗತರಪೇತಿ ಶಿಬಿರಗಳನ್ನು ಶ್ರೀರಂಗರೇ ಪ್ರಾರಂಭಿಸಿದ್ದರು ಮತ್ತು ಅಕಾಡೆಮಿಗಳಿಂದ ಒಳ್ಳೆಯ ನಾಟಕಗಳಿಗೆ ನೆರವು ಕೂಡ ದೊರಕುವಂತಾಗಿತ್ತು). ಇಂಥ ಪ್ರಯತ್ನದಲ್ಲಿ ನಾಟಕಕಾರರನ್ನೇನೂ ಸೃಷ್ಟಿಸಲು ಸಾಧ್ಯವಿಲ್ಲ. ಅದು ಕವಿಗಳಂತೆಯೇ ಆದಕ್ಕೂ ಅಪರೂಪವಾಗಿ ಸಾಧ್ಯವಾಗುವಂಥದು. ಆದರೂ ನಾಟಕ ರಚನೆಯ ಶಿಬಿರಗಳು ಜರುಗಿದುವು. ಇದರಿಂದ ಹೊಸ ಬಗೆಯ 'ನಾಟಕಕ್ಕೆ' ಶೋಧ ಮಾಡಿದಂತಾಯಿತು.

ಶ್ರೀರಂಗರ ವೃದ್ಧಾಪ್ಯ ಕಾಲದ ಸಮಕಾಲಿಕ ನಾಟಕಕಾರರಾದ ಕಾರ್ನಾಡ್, ಲಂಕೇಶ್, ಕಂಬಾರ, ರತ್ನ, ಚಂಪಾ ಮೊದಲಾದವರು ಇಂಥ 'ಅಸಂಗತ' ಕೃತಿಗಳನ್ನು ರಚಿಸತೊಡಗಿದ್ದರು.—'ತುಘಲಕ್' ನಾಟಕದಲ್ಲಿ ರಜಪೂತ ಮತ್ತು ಮುಗಲ್ ಸಂಬಂಧಗಳು ಘನೀಭೂತವಾದಂತೆ, 'ಹಯವದನ'ದಲ್ಲಿ ಇಂದಿಗೂ ಭಾರತೀಯ ಮಹಿಳೆಯಲ್ಲಿ ಒಡಮೂಡುವ 'ಒಳತೋಟಿ'ಯನ್ನು ದಾಖಲಿಸಿದಂತಾಗಿದೆ. ಲಂಕೇಶರ 'ತೆರೆಗಳು', 'ಕ್ರಾಂತಿ ಬಂತು ಕ್ರಾಂತಿ' ಮತ್ತು ಸಂಕ್ರಾಂತಿ-ಕೃತಿಗಳಲ್ಲಿ ವರ್ತಮಾನ ಕಾಲದ ಸೆಳಕುಗಳು ಹೊಳೆಯುತ್ತವೆ. ಕಂಬಾರರ ಜೋಕುಮಾರ ಸ್ವಾಮಿ ಮತ್ತು ಸಿರಿಸಂಪದಗಳಲ್ಲಿ ಧ್ವನಿಸುವ ಜಾನಪದ ಅಂಶಗಳು ಹೊಸ ಬಗೆಯ ಗುರುತುಗಳಾಗಿವೆ. ಇಂತಹ ಹಿನ್ನೆಲೆಯಲ್ಲಿದ್ದೂ ನಮ್ಮ ಇಂದಿನ ನಿರ್ದೇಶಕರು ನಮ್ಮ ನಾಟಕ ಪರಂಪರೆಯಿಂದ ಆಯ್ದುಕೊಳ್ಳುತ್ತಿಲ್ಲ. ಅವರ ಅಂಗೈಲಿರುವ (?) ತಾಂತ್ರಿಕ ಗುಟ್ಟು ಮುಖ್ಯವಾಗಿದ್ದು ಇತ್ತೀಚಿನ ಬದುಕಿನ ನೆಲೆಗಳನ್ನು ಗುರುತಿಸುವ ಕಥೆ-ಕಾದಂಬರಿಗಳನ್ನು ಮಾರ್ಪಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಉಂಟಾಗಿರುವ ಗೊಂದಲದಲ್ಲಿ ಆಧುನಿಕ ನಾಟಕದ ಪರಂಪರೆಗಾಗಲಿ ಹೊಸ ನಾಟಕಕಾರರ ಬಗೆಗಳಿಗಾಗಲಿ ಉತ್ತೇಜನ ದೊರಕಿರುವುದಿಲ್ಲ.

ಕಳೆದ ನಾಲ್ಕೈದು ವರ್ಷಗಳಲ್ಲಿ ರಚಿತವಾದ ಹೊಸ ಬಗೆಯ ನಾಟಕಗಳನ್ನು ಇಲ್ಲಿ ಗಮನಿಸಬಹುದು. ಈ ಬಗೆಗೆ ಹೆಗ್ಗೋಡಿನ ನೀನಾಸಂ ಒಂದು ಕಾರಣವಾದರೆ ಬೆಂಗಳೂರಿನ ರಂಗಸಿದ್ಧತೆ ಮತ್ತು ಇತರ ಅನುಕೂಲಗಳಿಂದ ಹುಟ್ಟಿಕೊಂಡ ಒಂದು 'ಎಳೆಯರ ಮನೋಧರ್ಮ'ವೂ ಸೇರಿರುವಂತಿದೆ. ಹೆಗ್ಗೋಡಿನ 'ತಿರುಗಾಟ' ಕಾರ್ಯಕ್ರಮವು ಕನ್ನಡ ರಂಗಭೂಮಿಯ ಒಂದು 'ಹವ್ಯಾಸಿ-ವೃತ್ತಿ'ಯನ್ನು ಸಾಧಿಸಿದರೆ ಬೆಂಗಳೂರಿನ ರಂಗಸಂಪದವು ತೆರೆದ ಅವಕಾಶಗಳೂ–ಮತ್ತೊಂದು ಮಹತ್ವದ ಸಾಧನೆಯಾಗಿರುತ್ತದೆ. ಇವೆರಡೂ ಬಗೆಗಳಲ್ಲಿ ನಮಗೆ 'ಹೊಸ ನಾಟಕ' ವೊಂದು ಬೇಕೆನ್ನಿಸುವಂತೆ ಪ್ರಯತ್ನಗಳಾಗಿವೆ.

ಈ ದಶಕದ ಮತ್ತೊಂದು ಅತಿಯನ್ನು ಇಲ್ಲಿ ನೆನೆಯಬಹುದು. ದೆಹಲಿಯ ಅತುಲತಿವಾರಿಯವರು ಬೆಂಗಳೂರಿನಲ್ಲಿ 'ಸಂಸ್ಕಾರ'ವನ್ನು (ಯು. ಆರ್. ಅನಂತ ಮೂರ್ತಿ) ಒಂದು ಹೊಸ ಅನುಭವವಾಗುವಂತೆ ಕಥನವನ್ನು ಅನುಸರಿಸಿದ ಪ್ರಯೋಗಮಾಡಿ ತೋರಿಸಿದರು. ಮುಂದೆ ಇದು ನಾಗೇಶರ ಪ್ರಯತ್ನದಲ್ಲಿ ಮತ್ತೆರಡು ಕಾದಂಬರಿಗಳ ಪ್ರಯೋಗಕ್ಕೂ ಎಡೆಮಾಡಿ ಕೊಟ್ಟಿತು. ಇದನ್ನೇ 'ಕಥನ ಕ್ರಿಯಾರಂಗಭೂಮಿ' (Narrative Theatre) ಎನ್ನುವ ರೂಢಿ ಯಾಯಿತು.

ಇಂತಹ ಹಿನ್ನೆಲೆಯಲ್ಲಿ ನೀನಾಸಂ ತುಂಬ ಸಮರ್ಥನೀಯವಾದ ಸಾಧನೆಯನ್ನು ಬಹಿರಂಗಪಡಿಸಿದೆ. ಕಳೆದ ನಾಲ್ಕು 'ತಿರುಗಾಟ' ಗಳಿಂದ ಇಡೀ ಕರ್ನಾಟಕದಲ್ಲಿನ 120ಕ್ಕೂ ಹೆಚ್ಚು ಸ್ಥಳಗಳಲ್ಲಿ ಪ್ರದರ್ಶನಗಳನ್ನು ನೀಡುತ್ತಾ ಬಂದುದರಿಂದ ಈಗ ಯಾವುದೇ ಹವ್ಯಾಸ ತಂಡವಾಗಲಿ ಧೈರ್ಯವಾಗಿ ನಾಟಕಗಳನ್ನು ನಾಡಿನಲ್ಲೆಲ್ಲಾ 'ಆಡಿ' ಬರಲು ಸಂಚರಿಸಬಹುದು. ಆದರೆ ಅಂಥ ಸಶಕ್ತ ಸಂಘಗಳು 'ನೀನಾಸಂ' ಬಿಟ್ಟರೆ ಕೇವಲ ಒಂದೋಎರಡೋ ಇರಬಹುದಷ್ಟೆ. ಒಟ್ಟಿನಲ್ಲಿ ನೀನಾಸಂ ಪ್ರಭಾ ವವು ಗಟ್ಟಿಯಾದುದು-ಅದನ್ನು ಒಂದು ಹದವಾದ ರಂಗಕ್ರಿಯೆ-ಎಂದು ಗುರುತು ಮಾಡಿದರೂ ತಪ್ಪಾಗುವುದಿಲ್ಲ. ಅದರಲ್ಲಿ ನಮ್ಮ ಸಂಗೀತದ (ದಕ್ಷಿಣ, ಉತ್ತರ ಹಾಗೂ ಪಾಶ್ಚಿಮಾತ್ಯ) ಬಳಕೆಯನ್ನು ಇಂದಿನ ಆಧುನಿಕ ಪ್ರದರ್ಶನಗಳ ರಂಗ ತಂತ್ರಕ್ಕೆ ಜೋಡಿಸಿರುವ ಕಲಾತ್ಮಕತೆಯಲ್ಲಿ, ಮಕ್ಕಳ ನಾಟಕಕ್ಕೆ ಅದನ್ನು ಯಶಸ್ವಿ ಯಾಗಿ ಬಳಸಿರುವುದಕ್ಕೆ ನೀನಾಸಂ ಮೊದಲು ಬಂದೀತು. ಅವರ ಈವರೆಗಿನ ಪ್ರಯೋಗಗಳಲ್ಲಿ ಲೋಕ ಶಾಕುಂತಲಾ, ತದ್ರೂಪಿ, ಮೂರು ಕಾಸಿನ ಸಂಗೀತ ನಾಟಕ, ಮಿಸ್ ಸದಾರಮೆ, ಚಾಣಕ್ಯ ಪ್ರಪಂಚ, ಲಿಯರ್ ಮಹಾರಾಜ ಮತ್ತು ಚಿದಂಬರ ರಹಸ್ಯ ಇವು ಪ್ರೇಕ್ಷಕರ ನೆನಪಿನಲ್ಲಿ ಉಳಿಯುವಂಥವಾಗಿವೆ. ಮಕ್ಕಳ ನಾಟಕಗಳಾದ ನೀಲಿಕುದುರೆ ಆಲಿಬಾಬಾ, ಮತ್ತು ಬೆಪ್ಪುತಕ್ಕಡಿ ಭೋಳೇಶಂಕರ ಇವುಗಳ ಸಫಲತೆಯನ್ನು ಗುರುತಿಸಬೇಕಾಗುತ್ತದೆ. ಆದುದರಿಂದ ಇಂತಹ

ಸಾಧನೆಯು ನಮ್ಮ ರಂಗಭೂಮಿಯ ಇತಿಹಾಸಕ್ಕೆ ಸೇರಿಸಬಹುದಾಗಿದೆ. ಮುಖ್ಯವಾಗಿ ರಂಗಭೂಮಿಯ ಮಿತಿಗಳೇ ಕಾಡುತ್ತಿರುವ ನಮ್ಮ ಸಂದರ್ಭದಲ್ಲಿ ನೀನಾಸಂ ತಿರುಗಾಟಕ್ಕೆ ಬೆಲೆ ಹೆಚ್ಚುತ್ತದೆ. ಇದರ ಪ್ರಭಾವ ಕೂಡ ನಾಡಿನಲ್ಲಿ ಒಡಮೂಡುವುದಲ್ಲದೆ ಕನ್ನಡ ಪ್ರೇಕ್ಷಕರನ್ನು ಕಾಪಾಡಿಕೊಟ್ಟಂತೆ ಆಗಿರುತ್ತದೆ.

ಬೆಂಗಳೂರಿನ ರಂಗಭೂಮಿಯನ್ನು ಮೊದಲಿನಿಂದಲೂ ಮುಖ್ಯವೆಂದು ಗುರುತಿಸಲು ಅದಕ್ಕಿರುವ ಅನುಕೂಲಗಳೇ ಆಗಿವೆ. ಸಂಗೀತ ನಾಟಕವಾಗಲಿ ಹವ್ಯಾಸಿಯಾಗಲಿ-ಅದರ ಮುಖ್ಯ ನಾಟಕಕಾರರೂ ನಂಬಿದ ಸ್ಥಳ ಬೆಂಗಳೂರು 1960ರ ನಂತರವಂತೂ ಹೇಳಬೇಕಾದುದಿಲ್ಲ-ಇಲ್ಲಿಯಂತೂ ರವೀಂದ್ರ ಕಲಾಕ್ಷೇತ್ರದ (ಒಳ ಹೊರಗೆ ಕೂಡ) ಪ್ರಯೋಗಗಳಿಗೆ ಎಲ್ಲ ಅನುಕೂಲಗಳು ಇವೆ. ಇದರಲ್ಲೇ ಒಂದು ಬಯಲು ರಂಗಮಂದಿರವಿದೆ. ನಾಟಕ ತಯಾರಿಗೆ ಪ್ರತ್ಯೇಕ ಶೆಡ್ಡುಗಳಿವೆ. ನಗರದ, ಕೇಂದ್ರವೂ ಆಗಿದೆ. (ಈಚೆಗೆ ಚೌಡಯ್ಯ ಮೆಮೋರಿಯಲ್ ಹಾಲ್ ಮತ್ತು ಗುರುನಾನಕ್ ಭವನ್ ಸಿದ್ಧವಾಗಿವೆ.) ಆದ್ದರಿಂದ ನಗರದ ಒಂದು ತರುಣ ತಂಡವು ಚೂಟಿಯಾಗಿ ದುಡಿಯುತ್ತಿದೆ. ಇವರಿಗೆ ರವೀಂದ್ರ ಕಲಾಕ್ಷೇತ್ರ (Proper stage) ದೊಡ್ಡದು ಮತ್ತು 'ತುಟ್ಟಿ' ಯಾದುದು. ಆದುದರಿಂದ ಮತ್ತೊಂದು ಮಧ್ಯಂತರದ ಪ್ರಾಯೋಗಿಕ ರಂಗಭೂಮಿಯ ಅವಶ್ಯಕತೆಯುಂಟಾಗಿದೆ. ಇದೂ ಈ ಪರಿಸರದಲ್ಲಿಯೇ (ಕಲಾಕ್ಷೇತ್ರಕ್ಕೆ ಹತ್ತಿರದಂತೆ) ಇರುವುದರಿಂದ ಕನ್ನಡ ರಂಗಭೂಮಿಗೆ ಒಳ್ಳೆಯದಾಗುತ್ತದೆ.

ಬೆಂಗಳೂರಿನ ರಂಗಭೂಮಿಯು ಜೀವಂತತನವನ್ನು ಕಾಪಾಡಿಕೊಂಡು ಬಂದಿರುವವರಲ್ಲಿ ಸಿ. ಜಿ. ಕೆ. ಪ್ರಮುಖರು. ಶ್ರೀರಂಗರಿದ್ದಾಗಲೇ ಈತ ತನ್ನ ಚಟುವಟಿಕೆಯಲ್ಲಿ ತೊಡಗಿದ್ದ. ಈತನ ಪ್ರಯೋಗಗಳು ಅತ್ಯಾಧುನಿಕ ರೀತಿಯಾಗಿವೆ. ನಾಟಕಕಾರರಾಗಿ ಶಿವಪ್ರಕಾಶ್ ಮತ್ತು ಕಿ.ರಂ. ನಾಗರಾಜ್ ಈಗಾಗಲೇ ಪ್ರಸಿದ್ಧರಾಗಿದ್ದಾರೆ–ಅಲ್ಲದೆ 'ರಂಗ ನಿರಂತರ'ದ ಆಶ್ರಯದಲ್ಲಿ ಉಮಾಶಂಕರ್, ದಾಮೋದರ ಶೆಟ್ಟಿ, ನಾಗರಾಜ ಮೂರ್ತಿ, ಶಿವರುದ್ರಯ್ಯ, ಅಮರ್ ಮತ್ತು ಸುರೇಶ್ ಮುಂತಾದ ತರುಣರು ಮುಂದಿನ ಸಮರ್ಥ ನಿರ್ದೇಶಕರಾಗುವ ಸಾಧನೆಗಳಲ್ಲಿ ಬೆಳೆಯುತ್ತಿದ್ದಾರೆ. ಇವರಲ್ಲಿರುವ 'ರಂಗಪ್ರಜ್ಞೆ'ಯಂತೂ ವಿಶೇಷವಾದುದಾಗಿದೆ.

ಸಿ. ಜಿ. ಕೆ. ಪ್ರಯೋಗಗಳಲ್ಲಿ ಮಹಾ ಚೈತ್ರ, ಟಿಪ್ಪುಸುಲ್ತಾನ್, ಸಿಗಿಕೊಂಡ ಸಂಸ, ಮತ್ತು ಕಾಲಜ್ಞಾನಿ ಕನಕ-ಇವುಗಳಲ್ಲಿನ ಪ್ರಾಯೋಗಿಕ ವೈವಿಧ್ಯದಿಂದ ಮೇಲೆ ಹೇಳಿದ ತರುಣ ಪೀಳಿಗೆಯು ಸ್ಫೂರ್ತಿಯನ್ನಲ್ಲದೆ ಮಾರ್ಗದರ್ಶನವನ್ನು ಪಡೆಯುತ್ತಿದೆ ಎನ್ನಬಹುದು. ಈ ನಾಲ್ಕು ನಾಟಕಗಳ ಪ್ರಾಯೋಗಿಕ

ಸಂಯೋಜನೆಯೇ ವಿಶೇಷವಾದುದು. ಜೊತೆಗೆ ದುಡಿಯುವ ತರುಣರನ್ನು ಹೊಸ ಹೊಸ ಪ್ರಯೋಗಗಳಿಗೆ ಹಚ್ಚುವುದಲ್ಲದೆ ನೇರವಾಗಿ ಉತ್ತೇಜಿಸುವುದರಲ್ಲಿ ಸಿ. ಜಿ. ಕೆ. ಹಿರಿಮೆಯೂ ಇರುವಂತಿದೆ. ಈ ತರುಣರ ಹೊಸ ಪ್ರಯೋಗಗಳು ಮತ್ತು ಪ್ರಯತ್ನಗಳಿಂದ ಸಂಸ ಬಯಲು ರಂಗಭೂಮಿ-ಸಿದ್ಧವಾಯಿತು. 'ರಂಗನಿರಂತರ'ದ 150 ದಿನಗಳಿಗೂ ಮೀರಿದ ಸಣ್ಣ ನಾಟಕಗಳ ಪ್ರಯೋಗಗಳಲ್ಲಿ ಜಗನ್ನಾಥನ ರಥ ಚಕ್ರಗಳು, ಗಿನಿಪಿಗ್ ಮತ್ತು 'ಅಹಲ್ಯೆ ನನ್ನ ತಾಯಿ'-(ಅಮರ್, ಅಶೋಕ್ ಮತ್ತು ಸುರೇಶ) ಪ್ರಯೋಗಗಳನ್ನು ನೋಡಿದ್ದೇನೆ. ಇವುಗಳ ಅಚ್ಚುಕಟ್ಟು ಮತ್ತು ದೃಶ್ಯಗಳಲ್ಲಿ ಹೊಳೆಯುವ ಜೀವಂತತನದ 'ಹರಿತ' (Sharpness) ದಿಂದಾಗಿ ಈ ತರುಣ ನಿರ್ದೇಶಕರು ಮುಂದುವರಿದಿರುವುದನ್ನು ಮರೆಯುವಂತಿಲ್ಲ. ಕಳೆದ ವರ್ಷದ ಮಾಗಿ ಬೇಸಗೆಗಳಲ್ಲಿ ಈ ತರುಣರ ಮತ್ತೊಂದು ಪ್ರಯತ್ನವೂ ಜರುಗಿತು. ಇದರಲ್ಲಿ ಮತ್ತಷ್ಟು ಮಂದಿ ತರುಣರು ಸೇರಿದಂತೆ ಉಮಾಶಂಕರ್, ಶಿವರುದ್ರಯ್ಯ ಮತ್ತು ನಾಗರಾಜ ಮೂರ್ತಿ ದಾಮೋದರ ಶೆಟ್ಟಿ (ದ.ಕ.), ತಮ್ಮ ಹೊಸ ಪ್ರಯೋಗಗಳನ್ನು ಸಾಧಿಸಿದರು, ಈ ಬಾರಿ ಅವರು ಆರಿಸಿದ ಸಣ್ಣ ಕತೆಗಳು 'ಹೊಸ ನಾಟಕ'ದ ಅವಶ್ಯಕತೆಯನ್ನು ಒತ್ತಿ ಹೇಳಿದಂತಾಗಿದೆ.

ಈ ತರುಣರು ತಮ್ಮ ತಮ್ಮ ಪ್ರಯೋಗಗಳಿಗೆ ಸುಪ್ರಸಿದ್ಧ ಕತೆಗಳು ಕಾದಂಬರಿಗಳನ್ನು (ಇದಕ್ಕೂ ಸಿ.ಜಿ.ಕೆ.ಯ ನೆರವಿದೆ) ಆಯ್ದುಕೊಳ್ಳುವುದಲ್ಲದೆ ತಾವೇ ರಂಗರೂಪಕಗಳನ್ನು ರಚಿಸಿಕೊಳ್ಳಬಲ್ಲವರಾಗಿದ್ದಾರೆ. ಇಲ್ಲಿ ನಾಟಕಕಾರರನ್ನು ಬಿಟ್ಟಂತೆ ಆಗಿದ್ದರೂ ಇವರ ಪ್ರಯೋಗಗಳಲ್ಲಿ ಕಂಡುಬರುವ ಹೊಸ ಅಂಶಗಳು (framos) ಮುಖ್ಯವಾದವು. ಈ ಬಗೆಯ ರಂಗರೂಪಕಗಳನ್ನು ಸಿದ್ಧಮಾಡ ಬಲ್ಲ ಒಂದು ತರುಣ ಪೀಳಿಗೆಗೆ ಇಲ್ಲಿ ಅಹ್ವಾನವಂತೂ ಕಂಡುಬರುತ್ತಿದೆ.

ಈ ತರುಣರ ಹಿಂದಿನ ತಲೆಮಾರಿನವರಾಗಿ ಅಸಂಗತ ನಾಟಕಗಳ ಪ್ರಯೋಗಗಳಿಗೆ ಕಾರಣರಾಗಿದ್ದ ನಾಗೇಶ್, ಪ್ರಸನ್ನ, ಜಯಶ್ರೀ, ಸುಬ್ಬಣ್ಣ, ಪ್ರಭು, ನರಸಿಂಹನ್, ಮಾಲತಿ, ಸೂರಿ,-ಮುಂತಾದವರ ಪ್ರಯೋಗಗಳು ವಿರಳವಾಗುತ್ತಿವೆಯಷ್ಟೇ-ಆದರೆ ಆಧುನಿಕ ರಂಗಪ್ರಯೋಗಗಳಲ್ಲಿ ಇವರು ಹೆಸರು ಗಳಿಸಿದವರೂ ಆಗಿದ್ದಾರೆ. ಇವರ ಪ್ರಯೋಗಗಳು 'ದೊಡ್ಡವು'. ಆರ್ಥಿಕ ರೂಪದಲ್ಲಿ ಕಠಿಣವಾದಂಥವು. ಬಹುಶಃ ಈ ಪ್ರಯೋಗಗಳ ರುಚಿಯನ್ನು ಕಡೆಗಣಿಸುವಂತಿಲ್ಲವಾದರೂ ಈಚಿನ ತರುಣರಿಗೆ 'ಹೊಸಬಗೆ'ಯ ಮೇಲೆ ಕಣ್ಣಿರುವುದನ್ನು ಗಮನಿಸಬೇಕಾಗುತ್ತದೆ. ಆದರೂ ಈ 'ತರುಣ'ರು ತಮ್ಮ ಹಿಂದಿನ ನಿರ್ದೇಶಕರ ಪ್ರಯೋಗಗಳಲ್ಲಿ ಪಾಲುಗೊಂಡವರಲ್ಲದೆ ಪಾಠಕಲಿತವರೂ ಆಗಿದ್ದಾರೆ. ಆದರೂ ಇವರು ಕಲಿತ ಪಾಠ ಮಾತ್ರ ನಮ್ಮ ನಿರೀಕ್ಷೆಗಳನ್ನೂ ಮೀರಿರುವಂತಿದೆ.

ಈ ದಶಕದ ಶ್ರೇಷ್ಠ ಪ್ರಯೋಗಗಳನ್ನು ಗುರುತಿಸುವಲ್ಲಿ ನಾಗೇಶ ನಿರ್ದೇಶನದ 'ಹರಕೆಯ ಕುರಿ' ಮತ್ತು 'ಭುಜಂಗಯ್ಯನ ದಶಾವತಾರಗಳು', ಜಯಶ್ರೀ ನಿರ್ದೇಶನದ 'ಲಕ್ಷಾಪತಿರಾಜನ ಕಥೆ', ಪ್ರಸನ್ನರ 'ತದ್ರೂಪಿ', 'ಜಂಬೆ'ಯವರ 'ಕಪ್ಪು ಜನ–ಕೆಂಪುನೆರಳು' ಮತ್ತು 'ಚಾಣಕ್ಯ ಪ್ರಪಂಚ', ರಘುನಂದನರ 'ಲಿಯರ್ ಮಹಾರಾಜ', ನರಸಿಂಹನ್‌ರ 'ಟಿಪಿಕಲ್‌ಕೈಲಾಸಂ', ಸುಬ್ಬಣ್ಣ ನಿರ್ದೇಶಿಸಿದ 'ಅಗ್ನಿಸಾಕ್ಷಿ', ನಾಗೇಶರ (ಸೀತಾರಾಂ ರಚನೆ) 'ನಮ್ಮೊಳಗೊಬ್ಬ ನಾಜೂಕಯ್ಯ', ಬಾದರದಿನ್ನಿಯವರು (ಸುರೇಶ್‌ಸಂಗಡ) ಪ್ರಯೋಗಿಸಿದ 'ಕೋತಿಯ ಕತೆ', ಸಿ.ಜಿ.ಕೆ. ಯವರ 'ತಬರನ ಕತೆ', ಕೃಷ್ಣಪ್ಪನ 'ಸೂರ್ಯಶಿಕಾರಿ' (ಎಂ. ಪಿ. ಪ್ರಕಾಶರ ಅನುವಾದ) ಮಾಲತಿಯವರ 'ಮೀಡಿಯಾ', ಜನಾರ್ಧನರ 'ಕುಸುಮಬಾಲೆ' (ಕಾದಂಬರಿ–ದೇವನೂರ ಮಹಾದೇವ), ಗೋಪಾಲಕೃಷ್ಣ ನಾಯರಿಯ ''ಭಗವದಜ್ಜುಕೀಯ', ಸಿ.ಜಿ.ಕೆ. ನಿರ್ದೇಶನದ 1. 'ಒಳಲಾಳ' (ದೇವನೂರು ಮಹಾದೇವರ ಕಥೆ) 2. ಶಿವಪ್ರಕಾಶರ 'ಮಹಾಚೈತ್ರ', 3. ಕಿ. ರಂ.ರ 'ಸಿಗಿಕೊಂಡ ಹಂಸ' ಮತ್ತು 4. ಕಾಲಜ್ಞಾನಿ ಕನಕ–ಈ ಪ್ರಯೋಗಗಳು ರವೀಂದ್ರಕಲಾಕ್ಷೇತ್ರದ ಪ್ರಯೋಗಗಳೆಂಬುದನ್ನು ಮರೆಯುವಂತಿಲ್ಲ.

ಹೊರಗಿನವರಾಗಿರುವಂತೆ ಮಂಡ್ಯ, ಧಾರವಾಡ, ಮಂಗಳೂರು, ಬಿಜಾಪುರ– ಮುಂತಾದೆಡೆಯೂ ಹೊಸ ಪ್ರಯೋಗಗಳು ಜರುಗುತ್ತಿವೆ. ಇವರಲ್ಲಿ ಬಾದರದಿನ್ನಿ, ಬಸವಲಿಂಗಯ್ಯ, ಮುಖ್ಯ ನಿರ್ದೇಶಕರಾಗಿರುವಂತೆ, 'ಹುಡುಕಾಟದ' ಧೋಂಡಿರಾಜ್ (ದ.ಕ.) ಮತ್ತು ಹೂಲಿಶೇಖರ್‌ರ 'ಹಾವು ಹರಿದಾಡತಾವ' ಶ್ರೀನಿವಾಸ ರಾಜು ಅವರ 'ಹಳಿಯ ಮೇಲಿನ ಸದ್ದು', ಸಿ. ದೇವರು ಅವರ 'ಹೈದರಾಲಿ'- ಇತ್ಯಾದಿ ಸವಾಲಿನ ಪ್ರಯೋಗಗಳನ್ನೂ ನಾಟಕಕಾರರನ್ನೂ ಗಮನಿಸಬಹುದು– ಸಾಗರದ ಇಕ್ಬಾಲ್ ಒಂದು ಮಕ್ಕಳ ರಂಗಭೂಮಿಯ ಸಂಸ್ಥೆಯನ್ನು ನಡೆಸಲು ಕೈಲಾಸಂರ 'ಪೋಲಿಕಿಟ್ಟಿ'ಯ ಆಧುನಿಕ ಪ್ರಯೋಗವನ್ನು ಕೊಡಗಿನ ಕಾರ್ಯಪ್ಪ- 'ಚಾರೀರ ಅಪ್ಪಣ್ಣಂಡ ಸುತ್ತ' ಎಂಬುದನ್ನೂ 'ತಿರುಗಾಟದಂತೆ' ಸಂಚಾರಕ್ಕೆ ಒಯ್ದು ತಂದವರೂ ಇದ್ದಾರೆ. ಇಕ್ಬಾಲರಂತೆ ಮಕ್ಕಳ ನಾಟಕಗಳ ಗೀಳು ಹಚ್ಚಿಕೊಂಡ ತುಮಕೂರು ಶಿವಕುಮಾರ್–ಅವರು ತಾವೇ ನಾಟಕ ಬರೆದು ಮಕ್ಕಳಿಂದ ಆಡಿಸುತ್ತಿದ್ದಾರೆ. ಬೆಂಗಳೂರಿನ ಹಿನ್ನೆಲೆಯಲ್ಲಿ ವಿಚಾರ ಮಾಡುವಾಗ 1980 ರಲ್ಲಿ ಮಣಿಪುರದ ಕನ್ಹಯ್ಯಾಲಾಲ್ ತಮ್ಮ ಪ್ರಯೋಗಗಳನ್ನು ತೋರಿಸಿದ್ದರು–ಅದರಲ್ಲಿ 'ಪೆಬೆತೇತೆ'–ಎಂಬುವ ತಾಯಿಹಕ್ಕಿಯೊಂದು ತನ್ನ ಮರಿಗಳಿಗೆ ಬದುಕನ್ನು ಕಲಿಸುವ ಪ್ರಸಂಗ ತುಂಬಾ ಪರಿಣಾಮಕಾರಿಯಾದುದಾಗಿತ್ತು.- ಮುಂದೆ ಬಾದರದಿನ್ನಿ (ಮಂಡ್ಯದ ತರಬೇತಿ ಶಿಬಿರ ಇರಬಹುದು) ಜೆ. ರಾಮಣ್ಣನವರ 'ಕೋತಿಯ ಕತೆ'ಯನ್ನು ತುಂಬ ಅಚ್ಚುಕಟ್ಟಾಗಿ ಪ್ರದರ್ಶನ ಮಾಡಿದರು.

ಅದರಲ್ಲಿನ್ನೂ ನಮ್ಮ ದೇಶದ ಎಮರ್ಜೆನ್ಸಿಯ ವಾಸನೆಯಿದ್ದಂತಿತ್ತು. ಮುಂದೆ ರಂಗ ನಿರಂತರದಲ್ಲಿ 'ಜಗನ್ನಾಥನ ರಥ ಚಕ್ರಗಳು'–ಖಚಿತವಾಗಿ ಪೋಲಿಸ್ ಶಿಕ್ಷೆಯನ್ನು ಬೆಳಕಿಗೊಡ್ಡುವ ಪ್ರಯೋಗವಾಗಿದ್ದು ಅಮರ್ ತೋರಿದ ಜಾಣ್ಮೆಯಿಂದ ಉಳಿದ ತರುಣರಿಗಿಂತ ಮುಂದಾದ ನಿರ್ದೇಶಕರೆನ್ನಿಸಿದರು. ಪ್ರಸನ್ನರ 'ತದ್ರೂಪಿ'ಯಂತೂ ಡಿಕ್ಟೇಟರ್‌ಶಿಪ್‌ನ ಗೇಲಿ ಮಾಡುವಿಕೆಯೇ ಆಯಿತಷ್ಟೆ– ಸಿ.ಜಿ.ಕೆ.ಯವರ 'ಒಡಲಾಳ' ಅವರ ಮುಂದಿನ ಪ್ರಯೋಗಗಳ ನಾಂದಿಯಾದುದಲ್ಲದೆ ಕನ್ನಡ ರಂಗಭೂಮಿಯ ಪೋಲೀಸ್ ಎಪಿಸೋಡ್‌ಗಳಲ್ಲಿಯೇ ಅತ್ಯಂತ ಎತ್ತರದ ಬಗೆ ಎನ್ನುವಂತೆ ಆದುದಲ್ಲದೆ ಸಾಕವ್ವನ ಪಾತ್ರದಲ್ಲಿ ಉಮಾಶ್ರೀ– ಹೆಸರು ಪಡೆದರು.

ಮುಂದೆ ರಂಗನಿರಂತರದಲ್ಲಿ 'ರಂಗಪಂಚಮಿ'-ಪ್ರಯೋಗವು ಸಣ್ಣಕತೆಗಳನ್ನೇ ಆಯ್ದುಂತೆ ಪ್ರದರ್ಶನಗಳಾದವು-ಇದರಲ್ಲಿ ರಂಗನಿರಂತರದ ಎರಡನೆಯ ಹಂತವನ್ನು ಕಂಡರೆ ಮೂರನೆಯದಾಗಿ ರಂಗನಿರಂತರದ 10 ನಾಟಕಗಳ ಉತ್ಸವವು ಒಂದು ಹೊಸ ಬಗೆಯ ಚಳುವಳಿಯಾಗಿ ಪರಿಣಮಿಸಿತು–ಇದರ ಕೊನೆಯ ನಾಟಕವು ಶಿವರುದ್ರಯ್ಯ–ಎಂಬ ನಿರ್ದೇಶಕ ತರುಣರ ಗಂಭೀರ ಪ್ರಯೋಗವಾಗಿತ್ತು–ಇದರ ಕರ್ತೃ ಕುಂ. ವೀರಭದ್ರಪ್ಪ-ದೇವರ ಹೆಣದ ಪ್ರದರ್ಶನವನ್ನು ಸಿ.ಜಿ.ಕೆ.ಯವರ ರಂಗಪ್ರೇಮಕ್ಕೆ ಒಂದು ಗುರುತೆಂದೂ ಹೇಳಬಹುದು.

ಹೀಗೆ ಹೊಸ ಬಗೆಯ 'ನಾಟಕದ ದಾಹ' ವೊಂದು ಒಂದು ತರುಣ ಪೀಳಿಗೆಯ ಆಶಯವಾಗಿ ಪರಿಣಮಿಸಿದಂತೆ ಗುರುತಿಸುವಲ್ಲಿ ಇಂದಿನ ಕನ್ನಡ ರಂಗಭೂಮಿಯ ಭವಿಷ್ಯವೂ ಧ್ವನಿಸುತ್ತಿದೆ. ಅಮರ್ ಈ ಮೊದಲೇ ತಮ್ಮ ರೊಟ್ಟಿ (ಲಂಕೇಶ್‌ಕೃತಿ) ಮತ್ತು ಅಬಚೂರಿನ ಪೋಸ್ಟಾಫೀಸ್ (ಪೂಚಂತೇ ಕೃತಿ) ಮತ್ತೆ ಈಗ ಕುಂ. ವೀರಭದ್ರಪ್ಪನವರ ಪ್ರಸಿದ್ಧ ಕಥೆಯನ್ನು ರಂಗ ಪ್ರಯೋಗಕ್ಕೆ ಸಿದ್ಧಪಡಿಸುತ್ತಿದ್ದಾರೆ. ಹೀಗೆ ಮೂರು ನಾಲ್ಕು ಮಂದಿ ತರುಣ ಸಮರ್ಥ ನಿರ್ದೇಶಕರು ಸಿ.ಜಿ.ಕೆ. ರಂಗ ಚಳುವಳಿಯ ಮುಂಚೂಣಿಯಲ್ಲಿದ್ದಾರೆಂದರೂ ಸರಿಯಾಗುತ್ತದೆ.

ಅಕ್ಕನ ವ್ಯಕ್ತಿತ್ವ : ಹರಿಹರನ ಗ್ರಹಿಕೆ

ಎಸ್. ಎಸ್. ರೇಣುಕಾರಾಧ್ಯ

1

ಹನ್ನೆರಡನೆಯ ಶತಮಾನದ ಅಲ್ಲಮ, ಬಸವ, ಅಕ್ಕಮಹಾದೇವಿ ಮೊದಲಾದ ವಚನಕಾರರು ತಮ್ಮ ನಂತರದ ಕಾಲಾವಧಿಯಲ್ಲಿನ ಕಾವ್ಯ ಕೃತಿಗಳಿಗೆ ವಸ್ತುವಾದದ್ದೊಂದು ವಿಶೇಷದ ಸಂಗತಿ. ಅಂಥ ಕ್ರಮಪ್ರಯೋಗಕ್ಕೆ ಹರಿಹರನೇ ಮೊದಲಿಗನೆಂಬುದು ಸ್ಪಷ್ಟ. "ಕನ್ನಡ ನಾಡಿನ ಶಿವಶರಣರು ಬಾಳಿ ಬದುಕಿದ್ದ ಕಾಲಕ್ಕೆ ತೀರ ಹತ್ತಿರದವನಾಗಿದ್ದವನು, ಹರಿಹರದೇವ. ಅವನು ಅವರನ್ನು ಐತಿಹಾಸಿಕ ದೃಷ್ಟಿಯಿಂದ ನೋಡಿದವನು...ಅವರ ಜೀವನ ಚರಿತ್ರೆಗಳ ರಚನೆಯಲ್ಲಿ ವಾಸ್ತವಿಕ ಅಂಶಗಳಿಗೆ, ನಡೆದು ಹೋದ ಘಟನೆಗಳಿಗೆ ಬಹಳ ಮಹತ್ವವನ್ನಿತ್ತ ಹಾಗೆ ತೋರುತ್ತದೆ" ಎಂದು ಹೇಳಲಾಗಿದೆ [ಹಿರೇಮಲ್ಲೂರು ಈಶ್ವರನ್ : 1971, 476]. ಹರಿಹರನ ನಂತರದ ಹಲವರು ಈ ಕ್ರಮವನ್ನು ಅನುಸರಿಸಿದ್ದಾರೆ. ವಚನಕಾರರ ವ್ಯಕ್ತಿ ಚಿತ್ರಗಳನ್ನು ಪುನರ್ ರೂಪಿಸುವ ಅಧ್ಯಯನಕಾರರು ಈ ಕಾವ್ಯ ಕೃತಿಗಳನ್ನೂ ವಚನಗಳನ್ನೂ ಬಳಸಿದ್ದಾರೆ. ಹೀಗೆ ಬಳಸುವ ಕಾವ್ಯ ಕೃತಿಗಳೆಲ್ಲವೂ ಹಲವಂಶಗಳಲ್ಲಿ ಸಮಾನತೆಯನ್ನು ಹೊಂದಿಲ್ಲದಿರುವುದರ ಗೊಂದಲವನ್ನು ಇಲ್ಲಿ ಎದುರಿಸಲಾಗುತ್ತದೆ. ಯಾವರೂ ಒಟ್ಟಾರೆಯಾಗಿ ಒಂದು ಸಮರೂಪದ ವ್ಯಕ್ತಿತ್ವದ ಚಿತ್ರವನ್ನು ರೂಪಿಸಲು ವಚನಗಳಲ್ಲಿ ದೊರೆಯದ್ದನ್ನು ಕಾವ್ಯಗಳಲ್ಲಿ, ಕಾವ್ಯಗಳಲ್ಲಿ ದೊರೆಯದ್ದನ್ನು ವಚನಗಳಲ್ಲಿ ಅರಸಲಾಗಿದೆ. ಆದರೆ ವಚನಗಳು ರೂಪಿಸುವ ವಚನಕಾರನ ವ್ಯಕ್ತಿತ್ವಕ್ಕೂ ಕಾವ್ಯಗಳು ರೂಪಿಸುವ ಶರಣರ ವ್ಯಕ್ತಿತ್ವಕ್ಕೂ ಇರುವ ಗಮನಾರ್ಹವಾದ ಅಂತರವನ್ನಿಲ್ಲಿ ನಿರ್ಲಕ್ಷಿಸಲಾಗಿದೆ.

ಹೀಗೆ ನಿರ್ಲಕ್ಷಿಸಿದ್ದಕ್ಕೂ ಇತ್ತೀಚಿನವರೆಗಿನ ನಮ್ಮ ವಚನಗಳ ಅಧ್ಯಯನ ಕ್ರಮಕ್ಕೂ ನೇರವಾದ ಸಂಬಂಧವಿದೆಯೆನ್ನುವುದು ಗಮನಾರ್ಹ ಸಂಗತಿಯಾಗಿದೆ. ಇತ್ತೀಚಿನವರೆಗಿನ ನಮ್ಮ ವಚನಗಳ ಅಧ್ಯಯನ ಕ್ರಮವು ಪ್ರಧಾನವಾಗಿ ಎರಡು ನೆಲೆಗಳದ್ದೆನ್ನಬಹುದು. ಒಂದು ಧಾರ್ಮಿಕ ನೆಲೆಗಳನ್ನು ಹಿಡಿದು ವಿವರಿಸುವುದಾದರೆ, ಮತ್ತೊಂದು ವಚನಗಳ ಸಾಮಾಜಿಕ ಆಯಾಮವನ್ನು ಕುರಿತದ್ದು. ಇವೆರಡೂ ಹಲವೇಳೆ ಒಟ್ಟೊಟ್ಟಿಗೆ ಬೆರೆತ ಹಾಗೆ ಕಾಣುತ್ತವೆಯಾದರೂ ಬಹುಮಟ್ಟಿಗೆ ಬೇರೆಯಾಗಿವೆ. ವಚನಗಳ ಸಾಮಾಜಿಕ ಆಯಾಮವನ್ನು ಕುರಿತ ಅಧ್ಯಯನಗಳು

ವಚನಗಳಲ್ಲಿ ಕಾಣುವ ಕ್ರಾಂತಿಕಾರಕ ಮನೋಭಾವವನ್ನು, ಮೂಢ ನಂಬಿಕೆ, ಕಂದಾಚಾರಗಳ ವಿರೋಧವನ್ನು, ಸುಧಾರಕ ಪ್ರವೃತ್ತಿಯನ್ನು ಎತ್ತಿ ಹಿಡಿಯುವ ವಚನಗಳನ್ನಷ್ಟೆ ಆಯ್ದು ತಮ್ಮ ಸಮರ್ಥನೆಗಳನ್ನು ರೂಪಿಸುತ್ತವೆ. ವಚನಗಳಂ ಹೇಗೂ ಆಯಾ ಕ್ಷಣದ ಅಭಿವ್ಯಕ್ತಿಗಳಾದ ಬಿಡಿ ರಚನೆಗಳಾಗಿರುವುದರಿಂದ ಇದು ಅಷ್ಟು ಮಟ್ಟಿಗೆ ಸುಲಭದ್ದು ಕೂಡ ಆಗಿದೆ. ಹೀಗಾಗುವುದರಿಂದಲೇ ಇಂಥ ಅಧ್ಯಯನಗಳ ಕಕ್ಷೆಗೆ ಬಸವಣ್ಣ, ಚೌಡಯ್ಯ ಮೊದಲಾದವರ ಹಾಗೆ ಅಲ್ಲಮ, ಅಕ್ಕಮಹಾದೇವಿಯಂಥ ವಚನಕಾರರು ಬರುವುದಿಲ್ಲವೆಂಬುದನ್ನು ಗಮನಿಸಬೇಕು. ಅಕ್ಕಮಹಾದೇವಿಯ ವಚನಗಳಲ್ಲಿ ಅಂತರ್ಮುಖಿಯಾದ ಭಾವಗಳೇ ಮೇಲುಗೈ ಪಡೆಯುತ್ತವೆಯೆಂದೂ, ಅವುಗಳಲ್ಲಿ ಸಾಮಾಜಿಕ ಆಯಾಮವನ್ನುಳ್ಳ ವಚನಗಳು ಕಡಿಮೆ ಅಥವಾ ಗೌಣವೆಂದೂ ಹೇಳಲಾಗಿದೆ. ಮೇಲು ನೋಟಕ್ಕೆ ಇಂಥ ಅಭಿಪ್ರಾಯಗಳು ಸರಿಯೆಂದೇ ಕಾಣುತ್ತವೆಯಾದರೂ ಗಂಭೀರವಾಗಿ ಪರಿಶೀಲಿಸಿದರೆ ಇಂಥ ವಿವರಣೆಗಳು ಸಾಮಾಜಿಕ ಆಯಾಮವೆಂಬುವನ್ನೇ ಸರಳೀಕರಿಸಿದ ಪರಿಯನ್ನು ಗಮನಿಸಬಹುದು. ಮೇಲಾಗಿ ಇಂಥ ಅಧ್ಯಯನಗಳು ಇನ್ನೊಂದು ಬಲವಾದ ನಂಬಿಕೆಯನ್ನೂ ಹೊಂದಿವೆ. ಅದೆಂದರೆ, ವಚನಗಳಲ್ಲಿ ತಾವೇನನ್ನು ಗುರುತಿಸುತ್ತವೆಯೋ ಅದೆಲ್ಲ ಆ ವಚನಕಾರನು ತನ್ನ ಬದುಕಿನಲ್ಲಿ ಅಂತಿಮವೆಂದು ನಂಬಿದ್ದು ಎನ್ನುವುದು. ಯಾವುದೇ ಶ್ರೇಷ್ಠ ಲೇಖಕ ತನ್ನ ಬದುಕಿನಲ್ಲಿ ಇದು ಇಷ್ಟೇ, ಹೀಗೇ ಸರಿ, ಇದು ಬದುಕಿನ ಅಂತಿಮವಾದ ಸತ್ಯವೆಂದು ನಿರ್ಣಾಯಕವಾಗಿ ಹೇಳಲು ತನ್ನ ಕೃತಿಯನ್ನು ರಚಿಸುತ್ತಾನೆಂಬುದೊಂದು ಹುಸಿನಂಬಿಕೆ. ಅದೇನಿದ್ದರೂ ಅದರತ್ತ ಹುಡುಕುವ, ಅನ್ವೇಷಿಸುವ, ಗ್ರಹಿಸುವ ಪ್ರಯತ್ನದ ಫಲವಷ್ಟೆ.

ಮೇಲಿನ ಮಿತಿಗಳನ್ನು ಗಮನಾರ್ಹವಾಗಿ ಮೀರುವ ಮತ್ತು ಅಂಥ ಅಧ್ಯಯನದ ನೆಲೆಗಳನ್ನು ಸಮರ್ಥವಾಗಿ ಪ್ರಶ್ನಿಸಿದ ಅಧ್ಯಯನವೊಂದು ಈಚೆಗೆ ಪಡೆದಿದೆ [ಬಸವರಾಜ ಕಲ್ಗುಡಿ : 1988]. ಇಲ್ಲಿ ಅನುಭಾವ ಸಾಹಿತ್ಯದ ಅಧ್ಯಯನ ಕ್ರಮಕ್ಕೆ ಹೊಸ ನೆಲೆಗಟ್ಟನ್ನು ರೂಪಿಸುತ್ತಲೇ ವಚನಗಳನ್ನು ವಿಭಿನ್ನ ನೆಲೆಯಿಂದ ವಿಶ್ಲೇಷಿಸಲಾಗಿದೆ. ಅಲ್ಲಮ, ಬಸವಣ್ಣ ಮತ್ತು ಅಕ್ಕಮಹಾದೇವಿಯ ವಚನಗಳ ವಿಶ್ಲೇಷಣೆಯ ಮೂಲಕ ಅಲ್ಲಿನ ಮನುಷ್ಯನ ಅಸ್ತಿತ್ವ, ಸಮಾಜದ ಸ್ವರೂಪ, ಕಾಲದ ಗ್ರಹಿಕೆಯ ಸ್ವರೂಪಗಳನ್ನು ವಿವರಿಸುವ ಬಗೆ ವಚನಗಳ ಇದುವರೆಗಿನ ಅಧ್ಯಯನ ಕ್ರಮಕ್ಕೆ ಅಪರಿಚಿತವಾದುದು.

2

ಮೇಲಿನ ತಮ್ಮ ಕೃತಿಯಲ್ಲಿ ಕಲ್ಗುಡಿಯವರು "ಅನುಭಾವಿಯು ತನಗೆ ದೊರಕಿದೆ ಎಂದು ಹೇಳಿಕೊಳ್ಳುವ ಸಿದ್ಧ ಕ್ಷಣಗಳು ಅಕ್ಕಮಹಾದೇವಿಯ ವಚನಗಳ ಪ್ರಧಾನ

ಧೋರಣೆಗಳಲ್ಲವೇ ಅಲ್ಲ. ಇವಳ ವಚನಗಳ ಉದ್ದಕ್ಕೂ ಆ ಆಶಯಕ್ಕಾಗಿ ಹಾತೊರೆಯುವ ಹೋರಾಟವೊಂದು ಸ್ಪಷ್ಟವಾಗಿ ಕಾಣುತ್ತದೆ. ಈ ಹೋರಾಟದ ಹಲವಾರು ನೆಲೆಗಳನ್ನು ವಚನಗಳ ಸ್ವರೂಪದಿಂದಲೇ ಗ್ರಹಿಸಬಹುದಾಗಿದೆ'' ಎನ್ನುತ್ತಾರೆ [ಪು. 116]. ಇಂಥ ನಂಬಿಕೆಯಿಂದ ಹೊರಡುವ ಅವರು ಅಕ್ಕನ ವಚನಗಳ ವಿಶ್ಲೇಷಣೆಯ ಮೂಲಕ ಕಂಡುಕೊಂಡ ಅಂಶಗಳಲ್ಲಿ ಕೆಲವನ್ನಿಲ್ಲಿ ಗಮನಿಸಬಹುದು :

''ಗಂಡನೆನ್ನುವ ತತ್ತ್ವವೇ ಇಲ್ಲಿ ಸಂಪೂರ್ಣವಾಗಿ ಭಿನ್ನವಾದ ಅರ್ಥವಲಯಗಳಲ್ಲಿ ಪ್ರಯೋಗಗೊಳ್ಳುತ್ತಿದೆ ಎನ್ನುವುದನ್ನು ಗಮನಿಸಬೇಕು. ಇಂಥ ಅಭಿವ್ಯಕ್ತಿಗಳಲ್ಲಿ ಸ್ವತಂತ್ರ ಮನಸ್ಸಿನ ಉಲ್ಲಾಸಮಯ ವ್ಯಕ್ತಿತ್ವವು ಒಳನಾಡಿಯಾಗಿ ಹರಿಯುವುದನ್ನು ಗಮನಿಸಬಹುದು. ಈ ಗಂಡಿನೊಡನೆ ತನ್ನ ವೈಮನಸ್ಸಿನ ಅಭಿವ್ಯಕ್ತಿಗಳನ್ನು ವ್ಯಕ್ತಪಡಿಸುವುದಕ್ಕೆ ಕಾರಣಗಳು ಲೌಕಿಕದ ಗಂಡಂದಿರ ಅಮಾನವೀಯ, ಕಠೋರ ನಡತೆಯೇ ಎನ್ನುವುದನ್ನು ವಚನವೊಂದು ವಿವರಿಸುತ್ತದೆ [''ಎರದ ಮುಳ್ಳಿನಂತೆ ಪರಗಂಡರೆನಗವ್ವಾ...]. ಒಂದು ರೀತಿಯ ಸಂದೇಹ, ಅಸ್ಪಷ್ಟತೆ, ಈ ಸಂಬಂಧದ ಲಕ್ಷಣವೆನ್ನುವುದನ್ನು ವಚನದ ಧಾಟಿಯು ಹೇಳುತ್ತದೆ'' (ಪು. 291).

"ಅಕ್ಕಮಹಾದೇವಿಯ ವಚನಗಳಲ್ಲಿ ಕಾಮದ ವಿಕಾರದ ನೆಲೆಗಳ ನಿರಾಕರಣೆಯು ಹೆಣ್ಣಿನ ಮೇಲೆ ಗಂಡಿನ ದೈಹಿಕ ಪ್ರಭುತ್ವದ ನಿರಾಕರಣೆಯನ್ನೇ ಸ್ಪಷ್ಟವಾಗಿ ಸೂಚಿಸುತ್ತದೆ. ವೈಯಕ್ತಿಕವಾಗಿ ಇವಳು ಗಂಡಿನ ಪ್ರಭುತ್ವವನ್ನು ಎರಡು ನೆಲೆಗಳಲ್ಲಿ ತಿರಸ್ಕರಿಸುತ್ತಾಳೆ. ಒಂದನೆಯ ನೆಲೆಯಲ್ಲಿ ಈ ಪ್ರಭುತ್ವದ ಆಕರ್ಷಣೆಗೆ ಕಾರಣವಾದ ದೇಹ ಅಥವಾ ಒಡಲನ್ನೇ ನಿರಾಕರಿಸುತ್ತಾಳೆ. ಎರಡನೆಯ ನೆಲೆಯಲ್ಲಿ ಕೂಡುವ ಬಯಕೆಯನ್ನು ಮಲ್ಲಿಕಾರ್ಜುನನಿಗೆ ಸಮರ್ಪಿತವೆನ್ನುವ ಆಶಯದಲ್ಲಿಯೂ ದೇಹವನ್ನು ಉಪಯೋಗಿಸುವ ಲೌಕಿಕದ ಲಾಭದಾಯಕ, ಕಾಮುಕ ಪ್ರವೃತ್ತಿಯನ್ನು ನಿರಾಕರಿಸುತ್ತಾಳೆ" [ಪು. 162]

''ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ದೇಹದ ಮಿತಿಗಳು ಹಾಗೂ ಅದರ ನಿರಾಕರಣೆಯು ಒಂದು ಮುಖ್ಯ ಅಂಶವಾದರೂ ಮಹಾದೇವಿಯಕ್ಕನಲ್ಲಿ ಅದು ಅನಿವಾರ್ಯವಾದ ನೆಲೆಗಳಿಂದ ಕೂಡಿ ಹೆಚ್ಚು ಅರ್ಥಪೂರ್ಣವಾಗಿರುವುದನ್ನು ಗಮನಿಸಬೇಕು. ಏಕೆಂದರೆ ಅಕ್ಕಮಹಾದೇವಿಯ ಸುತ್ತಣ ಲೌಕಿಕದ ನೆಲೆಗಳು ಅವಳನ್ನು ದೇಹ-ಮನಸ್ಸುಗಳ ಹೊಂದಾಣಿಕೆಯಲ್ಲಿ ಬದುಕುವಂತೆ ಮಾಡಲು ಸಾಧ್ಯವಾಗಿಲ್ಲ ಎನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ''. [ಪು. 163]

''ಅಕ್ಕನ ವಚನಗಳಲ್ಲಿ ಈ ಸಮಾಜವು ರೂಪಿಸಿದ ಕೌಟುಂಬಿಕ ರಚನೆ ಹಾಗೂ ಅದು ಹೇರುವ ನಿಯಮಗಳ ವಿರುದ್ಧ ವಿರೋಧವೊಂದು ಕಂಡುಬರುತ್ತದೆ.

ತಾಯಿ-ತಂದೆಯರೂ ಈ ಕೌಟುಂಬಿಕ ರಚನೆಯೂ ರೂಪಿಸಿದ ವ್ಯವಸ್ಥೆಯ ಅಂಗವಾಗಿರುವುದನ್ನು ಅಕ್ಕನ ವಚನಗಳು ಅಲ್ಲಲ್ಲಿ ಸೂಚಿಸುತ್ತವೆ'' [ಪು. 288-89]

ಇಂಥ ಇನ್ನಷ್ಟು ನಿದರ್ಶನಗಳನ್ನು ಅಲ್ಲಿಂದ ಎತ್ತಿ ತೋರಿಸಬಹುದು. ಇತ್ತಿಲ್ಲ ವಚನಗಳಲ್ಲಿನ ನಿರಂತರ ಹುಡುಕಾಟದ, ಶೋಧನೆಯ, ಆಗುವಿಕೆಯ ಪರಿಕ್ರಮದ ನೆಲೆಗಳನ್ನು ಅವರು ಗುರುತಿಸುತ್ತಾರೆ. ಲೋಕದ ಬದುಕಿನ ಕುರಿತಾಗಿ ಕಂಡುಕೊಂಡ ಅಂತಿಮವಾದ ಸತ್ಯಗಳನ್ನು ಉಪದೇಶಾತ್ಮಕವಾಗಿ, ನಿರ್ಣಾಯಕವಾಗಿ ಹೇಳುವುದು ಆಕೆಯ ವಚನಗಳ ಧಾಟಿಯಲ್ಲವೆನ್ನುವುದು ಇಲ್ಲಿನ ಸ್ಪಷ್ಟ ನಿಲುವಾಗಿದೆ. ದೇಹದ ನಿರಾಕರಣೆಯು, ಲೋಕದ ಗಂಡರನ್ನು ನಿರಾಕರಿಸುತ್ತ ಅಲೌಕಿಕದ ಚೆನ್ನಮಲ್ಲಿಕಾರ್ಜುನನೆಂಬ ಗಂಡನಿಗೆ ಒಲಿದುದರ ಅನಿವಾರ್ಯವಾದ ಪ್ರಕ್ರಿಯಾತ್ಮಕ ನೆಲೆಗಳು ಆಕೆಯನ್ನು ಸಿದ್ಧ ಭಕ್ತೆ, ಸಿದ್ಧ ವಿರಕ್ತೆ, ವಿರಾಗಿಣಿ ಎಂದು ನಂಬುವ ಅಸಂಗತ ನಿಲುವುಗಳಿಗೆ ಅಪ್ರಸ್ತುತವಾಗುತ್ತವೆ.

— 3 —

ಇಷ್ಟು ವಿವರಗಳನ್ನಿಲ್ಲಿ ಹಿನ್ನೆಲೆಯಾಗಿ ನೀಡಿದುದರ ಉದ್ದೇಶ ಅಕ್ಕನ ವಚನಗಳಲ್ಲಿ ಕಾಣುವ ನಿರಂತರ ಹುಡುಕಾಟದ, ತೀವ್ರ ತಲ್ಲಣಗಳ, ಆತಂಕ ಭರಿತ ಮನ ಮನಸ್ಥಿತಿಯ ಆಕೆಯ ವ್ಯಕ್ತಿತ್ವವನ್ನು ಹರಿಹರ ಕವಿ ಗ್ರಹಿಸಿದ ಸ್ವರೂಪ ಎಂಥದೆಂಬುವನ್ನು ತಿಳಿಯುವುದು ಮತ್ತು ಆಕೆಯ ವಚನಗಳನ್ನು ಸಿದ್ಧ ದಾರ್ಶನಿಕಳ ಅಭಿವ್ಯಕ್ತಿಗಳೆಂದು, ಉಪದೇಶಾತ್ಮಕವಾದ ಧಾಟಿಯವಾಗಿ ನೋಡಿದ–ಆಕೆಯ ವ್ಯಕ್ತಿತ್ವವನ್ನು, ವಚನಗಳನ್ನು ಅಭ್ಯಸಿಸಿದ ಅಧ್ಯಯನಗಳು (ಉದಾ : ವಿನೋದಾಬಾಯಿ ಎಸ್., 1969 ; ಲತೆ ಎಂ. ಎಸ್. 1975 ಇತ್ಯಾದಿ) ಇಂಥದೊಂದು ಪ್ರಶ್ನೆಯನ್ನು ಎದುರಿಸಲಿಲ್ಲ ಎಂಬುದೇ ಆಗಿದೆ. ಕಲ್ಬುರ್ಗಿಯವರು ಗುರುತಿಸುವ ಹಾಗೆ [ಅದೇ, ಪು. 166] ''ಅಕ್ಕನು ತನ್ನ ವ್ಯಕ್ತಿತ್ವವನ್ನು ಮಾರ್ಪಡಿಸಿಕೊಳ್ಳುವ ಹಂತದ ಬೆಳವಣಿಗೆಗಳಾಗಿ ವಚನಗಳಲ್ಲಿನ ಸ್ವರೂಪ ರಚನೆಯು ಕಂಡುಬಂದರೆ'' ಹರಿಹರನದು ಸಿದ್ಧ ವಿರಕ್ತೆಯ ಹಾಗೆ, ಅವಳದು ಅಸಾಮಾನ್ಯ ವ್ಯಕ್ತಿತ್ವವೆಂಬ ಹಾಗೆ ಚಿತ್ರಿಸುವ ಪರಿ. ವಚನಗಳಲ್ಲಿ ಕಾಣಬರುವ ಆಕೆಯ ದ್ವಂದ್ವಗಳ, ವಿರೋಧಗಳ, ಆಗುವಿಕೆಯ ಪರಿಕ್ರಮದ ಬಗೆಯನ್ನಿಲ್ಲಿ ಕಾಣಲಾಗದು.

ಹಾಗೆ ನೋಡಿದರೆ ಅಕ್ಕನೇ ಮೊದಲಾದ ಶರಣರನ್ನು ಕುರಿತ ಹರಿಹರನ ಕಲ್ಪನೆಯೇ ಭಿನ್ನವಾದುದು. ವಚನಕಾರರಿಗೆ ಅವನು ಎಷ್ಟೇ ಸಮೀಪ ಕಾಲದವನಾದರೂ ''ಅವನಿಗೆ ಶಿವಭಕ್ತರು ಮನುಷ್ಯರಲ್ಲ ಮತ್ತು ಅವರಿಗೆ ಸಾವಿಲ್ಲ'' [ಚಿದಾನಂದ ಮೂರ್ತಿ ಎಂ. 1975, 181]. ಇದು ''ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ'' ಕಾವ್ಯವನ್ನು ರಚಿಸದ ಅವನ ನಿಲುವಿಗೆ ಅನುಗುಣವಾಗಿಯೇ ಇದೆ. ಹೀಗಾಗುವುದರಿಂದಲೇ ಶರಣರನ್ನು ಕುರಿತ ಅವನ ರಗಳೆಗಳಲ್ಲಿ

ಚಿದಾನಂದಮೂರ್ತಿಯವರು ಸರಿಯಾಗಿ ಗುರುತಿಸಿದಂತೆ "ಭಕ್ತನೇ ಎದ್ದು ಕಾಣುತ್ತ ಸಾಮಾಜಿಕ ವ್ಯಕ್ತಿ ಹಿಂದೆ ಉಳಿಯುತ್ತಾನೆ[ಅದೇ, 180].

ಹರಿಹರ ಮಹಾದೇವಿಯಕ್ಕನ ಜನನದ ಕಾರಣವನ್ನು ಕಲ್ಪಿಸುವಲ್ಲಿಯೇ ಅವಳದು ಕಾರಣಿಕ ವ್ಯಕ್ತಿತ್ವವೆಂಬುದನ್ನು ಒಪ್ಪಿ ಸ್ವೀಕರಿಸಿದ್ದಾನೆ. ರುದ್ರಕನ್ನಿಕೆ ಎನಿಸಿದ ಮಹದೇವಿಯು ಆಕಸ್ಮಾತ್ ಆದ ಪ್ರಮಾದಕ್ಕೆ ಜ್ಞಾನನಿಧಿಯಾದ ಗುಪ್ತಗಣನಾಥನನ್ನು 'ಭವಿ' ಎಂದುದರ ಪರಿಣಾಮವಾಗಿ ಪಾರ್ವತಿಯ ಶಾಪಕ್ಕೆ ಗುರಿಯಾಗಿ ನರಜನ್ಮವನ್ನು ಪೊತ್ತವಳು. ಶಾಪವಾದರೂ ಎಂಥದು : "ಭಕ್ತರುದರಂ ಬೊಕ್ಕು... ಭವಿಗೆ ಹೆಂಡತಿಯಾಗಿ, ಭಕ್ತರ್ಗೆ ಶರಣೆಂದು, ಭವಾಬ್ಧಿಯಂ ದಾಂಟಿ. ಶ್ರೀಗಿರಿಗೆ ನಡೆತಂದು" ಮತ್ತೆ ಕೈಲಾಸಕ್ಕೆ ಹೋಗುವಂಥದು. ಇದಕ್ಕೆ ಪೂರಕವಾಗಿ ಪರಲೋಕದಲ್ಲಿ ಅವಳಿಗೆ ತಂದೆತಾಯಿಗಳಾಗಲಿರುವ ಶಿವಭಕ್ತ, ಶಿವಭಕ್ತೆಯರು ಬೇಡುವ ಮಗಳು ಎಂಥವಳೆಂದರೆ "ಅವನಿಗಾತಿರೂಪ ಸಂಪನ್ನೆಯಾದ, ಶಿವನ ಸದ್ಭಕ್ತಿಯೊಳಭಿನ್ನೆಯಾದ ಚೆನ್ನೆಯನ್ನು". ಹೀಗಾಗಿ ಅವಳ ಜನನದ ಕಾರಣಗಳು ಅಮರ್ತ್ಯದವು. ಮತ್ತು ಆಕೆ ಹುಟ್ಟುತ್ತಲೇ ಸಿದ್ಧಭಕ್ತೆ. ಕೈಲಾಸದಲ್ಲಿ ನಡೆಯುವ ಪ್ರಮಾದ ಮತ್ತು ಶಾಪಗಳ ಹಿನ್ನೆಲೆಯಲ್ಲಿ ಅನಾವರಣಗೊಳ್ಳುವ ಮಾನವ ಸ್ವಭಾವಗಳ ಪ್ರಶ್ನೆಯಾಗಲಿ, "ಕೈಲಾಸದಂಥ ಅಮರ್ತ್ಯ ಭೂಮಿಕೆಯಲ್ಲಿ ಮಾಡಿದ ತಪ್ಪನ್ನು ತಿದ್ದಿಕೊಳ್ಳುವ ಸಾಧನಾ ರಂಗ, ಸಂಸ್ಕಾರ ಕ್ಷೇತ್ರ ಮರ್ತ್ಯವೇ ಆದುದರಿಂದ ಹರಿಹರ ಮರ್ತ್ಯದ ಮಹತ್ತನ್ನು" ಎತ್ತಿ ಹಿಡಿಯುತ್ತಾನೆಂಬ ಮಾತಾಗಲಿ [ಶಿವರುದ್ರಪ್ಪ ಜಿ. ಎಸ್ : 1969, 8] ಬೇರೆ. ವ್ಯಕ್ತಿಯು ಮರ್ತ್ಯದ ಬದುಕನ್ನು, ಅವರ ಸ್ವರೂಪವನ್ನು ನಿರ್ಧರಿಸುವ ಪೂರ್ವನಿರ್ಧಾರಿತವಾದ ಚೌಕಟ್ಟೊಂದನ್ನು ಅಮರ್ತ್ಯದ ಕಾರಣಗಳ ನೆಲೆಯಲ್ಲಿ ಕವಿ ರೂಪಿಸಿದ್ದಾನೆಂಬುದು ಇಲ್ಲಿ ಮುಖ್ಯವಾದದ್ದು.

ಮೊದಲನೆಯ ಸ್ಥಲದಲ್ಲಿ ಇಂಥ ಚೌಕಟ್ಟೊಂದನ್ನು ರೂಪಿಸುವ ಕವಿ ಮುಂದಿನ ಸ್ಥಲದಲ್ಲಿ ಪುಣ್ಯಗರ್ಭೋದಯದ ಸೂಚನೆಗಳನ್ನು ಹಾಗೂ ಅಕ್ಕನ ಯೌವನೋ ದಯದ ವರ್ಣನೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಮಾಡುತ್ತಾನೆ. ಈ ವರ್ಣನೆಯಲ್ಲಿ ರೂಪ ಲಾವಣ್ಯಗಳ ವೈಭವಪೂರ್ಣ ಸಂಭ್ರಮಗಳಿದ್ದು, ಇದು ಲೋಕದ ಬಗೆಗಿನ ವಿಶಿಷ್ಟ ಬಗೆಯ ಆಕರ್ಷಣೆಯೊಂದನ್ನು ಸ್ಥಾಪಿಸಬಲ್ಲಷ್ಟು ಸಮರ್ಥವಾಗಿವೆ. ಆದರೆ, ಇಂಥ ಆಕರ್ಷಣೆಯನ್ನು ಸ್ಥಾಪಿಸಬಲ್ಲ ಸಂಭ್ರಮಯುತ ವೈಭವೀಕರಣದೊಳಗೇ ಅಕ್ಕನ ಲೌಕಿಕದ ಬಗೆಗಿನ ವಿಕರ್ಷಣೆಯನ್ನು ಮುಖಾಮುಖಿಯಾಗಿಸುತ್ತ ಬೆಳೆಸುವ ಆಸಕ್ತಿ ಕವಿಗಿಲ್ಲ. [ಆದಿಪುರಾಣದಲ್ಲಿ ಪಂಪ ಇಂಥದನ್ನು ಸಾಧಿಸುವ ಬಗೆಯನ್ನಿಲ್ಲಿ ನೆನೆಯಬಹುದು. ಸಿದ್ಧ ಸ್ಥಿತಿಗಿಂತ ಭಿನ್ನವಾದ ಆಗುವಿಕೆಯ ಸ್ಥಿತಿಯೊಂದನ್ನು ನಿರ್ಮಿಸುವ ಬಗೆ ಇದು.] ಬದಲಾಗಿ ಅಕ್ಕ ಇದೆಲ್ಲದರ ಹೊರಗೆ ನಿರ್ಲಿಪ್ತಳಂ. ಕವಿಗೆ ಅವಳು ಮುಖ್ಯವಾಗಿ 'ಭಕ್ತಿ ಭರಿತೆ', 'ಶಿವಜ್ಞಾನ ಸಂಪನ್ನೆ'.

ವಿವಾಹದ ಸಂಭ್ರಮಪೂರ್ಣ ವೈಭವೀಕೃತ ವರ್ಣನೆಗಳ ಬಗ್ಗೆ ಕೂಡ ಇದೇ ಮಾತನ್ನು ಹೇಳಬಹುದು; ಈ ವರ್ಣನೆಯ ನಡುವೆ ಕವಿ ಅಕ್ಕನ ಮನಸ್ಥಿತಿಯನ್ನು ಕುರಿತು ನೀಡುವ ವಿವರಗಳು ಈ ಸಂಭ್ರಮದತ್ತಣ ಪರಿಹಾಸದ, ನಿರ್ವೇದದ ನೋಟ; 'ಶಿವನೆ ಭವನೆ ಶಂಕರಾ ಶಶಿಧರಾ ಭವಿಗೊಪ್ಪಿಸಿಕೊಟ್ಟೊಡೇನಪ್ಪೆನೆಂತಪ್ಪೆ ನಿನ್ನೆತ್ತ ಸಾರ್ವೆನ್' ಎಂಬ ಮೊರೆಗಳು.

ಹರಿಹರನ ರಗಳೆಯು ಗಮನಿಸಬಹುದಾದ ಮುಂದಿನ ಮುಖ್ಯವಾದ ಭಾಗ ಅಕ್ಕನು ತನ್ನ ಬದುಕಿನಲ್ಲಿ ಭವಿಗೆ ಹೆಂಡತಿಯಾಗಬೇಕಾದ ಪೂರ್ವನಿರ್ಧಾರಿತದ ಘಟ್ಟ. ಕೌಶಿಕನೊಡನೆ ಅಕ್ಕನ ಮದುವೆಯಾಯಿತೇ, ಇಲ್ಲವೇ ಎಂಬುದರ ಕುರಿತಾಗಿ ಬಹಳಷ್ಟು ಚರ್ಚೆ ನಡೆದಿದ್ದು ಅದು ಇಲ್ಲಿ ಅಪ್ರಸ್ತುತ. ಹರಿಹರನಂತೂ ತನ್ನ ರಗಳೆಯಲ್ಲಿ ಮದುವೆಯಾದುದು ಮಾತ್ರವಲ್ಲದೆ ಅವನೊಂದಿಗಿನ ವಿಷಮ ಸಂಯೋಗದ ವಿವರಗಳನ್ನು ಕೂಡ ನೀಡಿದ್ದಾನೆ. ಕೌಶಿಕನೊಡನೆಯ ಮದುವೆಯ ಮಾತು ಬಂದಾಗ ಆತ ಭವಿಯೆಂಬ ಕಾರಣಕ್ಕೆ ಅದನ್ನು ನಿರಾಕರಿಸುತ್ತಾಳೆ. ತಂದೆ ತಾಯಿಗಳು 'ಅರಸ ಕೌಶಿಕನೊಡನೆ ಸಮಸುಖದೊಳಿರು ಮಗಳೆ' ಎಂದಾಗ ಮಹಾದೇವಿಯ ಪ್ರತಿಕ್ರಿಯೆಯ ವಿವರಗಳು ಹೀಗಿವೆ :

"ಎನೆ ಧಗಿಲ್ ಭಗಿಲೆಂದು ಕೋಪಿಸಿದಳಾ ಭಕ್ತೆ
ಮನದೊಳ್ ಮಹೇಶಂಗೆ ಮೊಱೆಯಿಟ್ಟಳಾ ಭಕ್ತೆ
ನುಡಿದಳಾಂ ಭವಿಯೊಡನೆ ಬೆರಸಿರಲ್ಕಾರ್ಪೆನೇ
ಮೃಡ ಪೂಜೆಯಚಲ ಸುಖಮಂ ಪಿಂಗಲಾರ್ಪೆನೇ
ಆನೇಕೆ ಭವಿಯೇಕೆ ಭಕ್ತರೀ ಮಾತೇಕೆ
ಏನಾದೊಡಂ ಭವಿಯನೊಲ್ಲೆನೀ ಭ್ರಾಂತೇಕೆ
....
ನಾಗಭೂಷಣನ ಭಕ್ತರ್ಗೆ ಭವಿ ಸನಿಯಲ್ಲ
ಬೆಳಗಿಂಗೆ ಕತ್ತಲೆಯ ಕೂಟವುಂಟೇ ಮರುಳೆ
ತಿಳಿವಿಗಜ್ಞಾನದೊಳ್ ಸಂಗವುಂಟೇ ಮರುಳೆ"

ಬೆಳಗು–ಕತ್ತಲೆ; ತಿಳಿವು–ಅಜ್ಞಾನಗಳ ಸಂಗ[ಅಸಾಧ್ಯವಾದುದು]ದೊಂದಿಗೆ ಭಕ್ತ–ಭವಿಗಳ ಸಂಗವು ಹೋಲಿಕೆಗೆ ಒಳಗಾಗುತ್ತಿರುವುದನ್ನು ಇಲ್ಲಿ ಗಮನಿಸಬೇಕು. ಬೆಳಗು–ತಿಳಿವುಗಳ ಜೊತೆ ಸಮೀಕರಣಗೊಳ್ಳುವ ಭಕ್ತೆಯ ನೆಲೆ ಕತ್ತಲೆ–ಅಜ್ಞಾನ ಗಳೊಡನೆ ಸಮೀಕರಣಗೊಂಡಿರುವ ಭವಿಯ ನೆಲೆಗಿಂತ ಸಂಪೂರ್ಣ ಭಿನ್ನವಾದುದು. ಸದ್ಗುಣ–ದುರ್ಗುಣಗಳ; ಸಾತ್ವಿಕ–ತಾಮಸಿಕ ಗುಣಗಳ ಸಂಕೇತಗಳಾಗಿ ನಿಲ್ಲುವ 'ಭಕ್ತ' 'ಭವಿತನ'ದ ನೆಲೆಗಳು ಇಲ್ಲಿ ಮುಖಾಮುಖಿಯಾಗಿ ನಿಲ್ಲುವುದರ ಬದಲಂ ವಿಮುಖ ಸ್ಥಿತಿಯಲ್ಲಿ ನಿಲ್ಲುತ್ತವೆ. ಇದು ಕಾವ್ಯದ ಉದ್ದಗಲಕ್ಕೆ ವ್ಯಾಪಿಸಿದ್ದಾಗಿದೆ. ಪೂರ್ವ ಸಿದ್ಧವಾದ ಭಕ್ತ–ಭವಿತನದ ನೆಲೆಗಳು ಪಾವಿತ್ರ್ಯ (ಮಡಿ)–ಮೈಲಿಗೆ

ಗಳೊಂದಿಗೆ ಕೂಡ ಸಮೀಕೃತವಾದಂತಿದೆ. ಇದು ಬಹುಶಃ ಹರಿಹರನ ಕಾಲಕ್ಕಾಗಲೇ ಜಡಗೊಳ್ಳುತ್ತ ಹೋದ ಧಾರ್ಮಿಕವಾದ ಆಸಕ್ತಿಗಳ ಕಾರಣಕ್ಕಿರಬಹುದು. ಪೂಜೆಯ ಆಚರಣೆಯ ವಿವರಪೂರ್ಣ ವರ್ಣನೆಯ ನಡುವೆ [ಆರನೆಯ ಸ್ಥಲ] ಬರುವ–ಮಹಾದೇವಿ ಶಿವಾರ್ಚನೆಯಲ್ಲಿ ತೊಡಗಿರುವಾಗ ಕೌಶಿಕನು ಆಲಂಗಿಸಿದ ಸಂದರ್ಭದಲ್ಲಿ–"ಎಲೆಲೆ ಭವಿಯೆ ಶಿವಾರ್ಚನೆಯ ಸಮಯದೊಳ್ ಮುಟ್ಟುವರೆ ಛೀ ಪೊಲ್ಲದುದಗೆಯ್ದೆ ಶಿವಪೂಜಾ ಸುಖಮನಳಿಸಿಯುದ ಮಾನಸಗುಳಿಸಿಯೆ ಮಾಣ್ ಮಾಣ್...ಕಡುನೊಂದು ಮತ್ತೊಮ್ಮೆ ಪರಿಮಳೋದಕದಿಂ ಮಿಂದು ನವ್ಯ ದುಕೂಲಮನುಟ್ಟು ಭಸಿತದಿಂ ನಲಂಕರಿಸಿ..." ಎಂಬ ಮಾತುಗಳನ್ನು ಗಮನಿಸಬಹುದು. ಈ ಕಾರಣಗಳಿಗಾಗಿಯೇ ಕೆಲವು ಕರತ್ತುಗಳ ಮೇಲೆ ಅಕ್ಕನು ಒಪ್ಪಿದ ಪೂರ್ವ ನಿರ್ಧಾರಿತವಾದ ಭವಿ ಸಂಗವನ್ನು ಕವಿ 'ದುಸ್ಸಂಗ', 'ವಿಷಮ ಸಂಯೋಗ' ಎಂದು ಪದೇ ಪದೇ ವರ್ಣಿಸುತ್ತಾನೆ. ಅಕ್ಕನಿಗೆ ಈ ಸಂಬಂಧದ ವಿಮುಖತೆ ಪೂರ್ವ ನಿರ್ಧಾರಿತವಾಗಿಯೇ ಇರುವುದರ ಹಲವು ನಿದರ್ಶನಗಳನ್ನು ಗಮನಿಸಬಹುದು. ಇಂಥ ಒಂದು ನಿದರ್ಶನವನ್ನುದ್ಧರಿಸಿ ["ದೇವ ಭವನೆ ಭವಿಯ ಸಂಗವೆಂದು ಮಾಣ್ಬುದೆನ್ನ ತಂದೆ; ದೇವ ಬೆರಕೆಯಿಲ್ಲದಚ್ಚ ಬಕುತಿ ಸುಖವೆಂದು ತಂದೆ..." (ಸ್ಥಲ 5)] ಅದನ್ನು ವಿಶ್ಲೇಷಿಸುತ್ತಾ ಕಲ್ಬುರ್ಗಿಯವರು [ಪು. 165] "ತಾನು ಬದುಕುವ ನೆಲೆಯೇ ಬೇರೆ ಎಂದು ತಿಳಿದ ಇವಳಿಗೆ ಈ ಲೌಕಿಕವು ಕೇವಲ ಇಲ್ಲಿ ಅನಿವಾರ್ಯವಾಗುತ್ತಿದೆಯೆಂಬ ಆತಂಕವಿದೆ. ಆದರೆ ಇದರಲ್ಲಿ ತನ್ನ ಮನಸ್ಸನ್ನು ನೆಲೆಗೂಡದೆ ವಿಷಮ ಸಂಯೋಗದಲ್ಲಿ ಬದುಕುತ್ತ ಇವಳು ಒಂದು ದಿನ ಹೊರಬರುತ್ತಾಳೆ. ಇವಳ ಬದುಕಿನ ಈ ಘಟ್ಟ ಅತ್ಯಂತ ಮಹತ್ವದ್ದಾದರೂ, ಕಾವ್ಯದ ಚೌಕಟ್ಟಿಗೆ ರಕ್ತ ಮಾಂಸಗಳನ್ನು ಕೊಡುವ ಅಂಶವಾದರೂ ಸಹ ಇದು ಕಾವ್ಯದ ಧೋರಣೆಯಲ್ಲಿ ಗೌಣವಾದದ್ದು" ಎನ್ನುತ್ತಾರೆ

ತಾನು ಹಾಕಿದ ಕರತ್ತುಗಳ ಉಲ್ಲಂಘನೆಯು ಕೌಶಿಕನಿಂದ ಪೂರ್ಣವಾದ ಕ್ಷಣದಲ್ಲೇ ಮಹಾದೇವಿಯ ಪ್ರತಿಕ್ರಿಯೆ "ಅಹಾ ಮುಳಿಜಿಂ ತಪ್ಪ ನಿರ್ಮದೆನ್ನಿಚ್ಛೆ ಸಾರ್ಮದು ಭವಿಸಂಗದೊಳ್ ಸೋರ್ದುದು..... ಬದುಕಿದೆಂ ಬದುಕಿದೆನ್" ಎನ್ನುವುದು. ಈ ನಂತರದಲ್ಲಿ ವ್ಯಕ್ತವಾಗುವ ದೇಹ ನಿರಾಕರಣೆಯ ನೆಲೆಗಳಲ್ಲಿ ಅದು 'ಭವಿ ಸಂಗದ ತನು' ಎನ್ನುವ ಕಾರಣಕ್ಕಾಗಿಯೇ ಎಂಬುದು ಸ್ಪಷ್ಟವಾಗಿದೆ.

"ಭವಿಯ ಸಂಗದ ತನುವಿದನೊಲ್ಲೆನಿದನೊಲ್ಲೆ
ನವಯವಂ ಬೀಭತ್ಸುಯಿದನೊಲ್ಲೆ ನಾವೊಲ್ಲೆ
ನೆನಗೆ ನಿರ್ಮಳ ಕಾಯಮಂ ಕರುಣಿ ಕರುಣಿಪುದು
ಎನಗೆ ದಿವ್ಯಾವಯವಮಂ ದೇವ ಕರುಣಿಪುದು"

ಎನ್ನುವಂತಹ ಮಲ್ಲಿನಾಥನಿಗಿಡುವ ಮೊರೆಗಳಲ್ಲಿ ಮಾತ್ರವಲ್ಲದೆ, ತಂದೆತಾಯಿಗಳಿಗೆ ಪ್ರತಿಕ್ರಿಯಿಸುವ ನೆಲೆಯಲ್ಲಿ ಕೂಡ ಇದೇ ಅಂಶ ವ್ಯಕ್ತವಾಗಿದೆ.

"ಭವಿಯ ಸಂಗಂ ತಪ್ಪಿ ಭವನ ಸಂಗವನಪ್ಪಿ
ಶಿವಭಕ್ತಿ ರಸಭರಿತ ಶರನಿಧಿಯ ನಡುವೊರ್ಪ
ಇರ್ಪುದಂ ಕೆಡಿಸುವರ್ ಮಾತೆ ಪಿತರಲ್ಲ
ಸರ್ಪ ಭೂಷಣನ ಭಕ್ತಾಳಿಗಿದು ಸರಿಯಲ್ಲ"

ಇಲ್ಲೆಲ್ಲ 'ಭವಿತನ' ಮತ್ತು 'ಭವಿಯ ಸಂಗದ' ನೆಲೆಗಳು ತಿರಸ್ಕೃತವಾಗುವುದು ಅತ್ಯಂತ ಯಾಂತ್ರಿಕವಾಗಿರುವಂತೆಯೇ ಚೆನ್ನಮಲ್ಲಿಕಾರ್ಜುನನೊಂದಿಗೆ ಕೂಡುವ ಆಶಯಗಳು ಕೂಡ ಯಾಂತ್ರಿಕವಾಗಿವೆ. ಈ ನಿರಾಕರಣೆ ಮತ್ತು ಆಶಯಗಳು ವಚನಗಳಲ್ಲಿ ರೂಪಗೊಳ್ಳುವ ಕ್ರಮವೇ ಬೇರೆ. ಅಲ್ಲಿ ಅದು ಯಾಂತ್ರಿಕವಲ್ಲ, ಬದಲಾಗಿ ಪ್ರಕ್ರಿಯಾತ್ಮಕವಾದುದು. "ಸಾವಿಲ್ಲದ, ಕೇಡಿಲ್ಲದ ಚೆಲುವಂಗಾ ನೊಲಿದೆನವ್ವಾ...ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ" ; "ಅತ್ತೆ ಮಾಯೆ, ಮಾವ ಸಂಸಾರಿ ಮೂವರು ಮೈದುನರು ಹುಲಿಯಂಥವದಿರು... ಶ್ರೀ ಶೈಲ ಚೆನ್ನಮಲ್ಲಿಕಾರ್ಜುನನ ಸಜ್ಜನದ ಗಂಡನ ಮಾಡಿಕೊಂಬೆ"; "ಒಲ್ಲೆ ಗಂಡನ ಕೂಟ ಒಗತನವ..." "ಎಮ್ಮಗೊಂದು ಚಿಂತೆ; ಸಮ್ಮಗಾಜಗೊಂದು ಚಿಂತೆ..."; "ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ..." ಇಂಥ ಹಲವು ನಿದರ್ಶನಗಳನ್ನು ಇಲ್ಲಿ ಗಮನಿಸಬಹುದು.

ಹರಿಹರ ಕವಿಯ ಸಮರ್ಥನೆಗೆ ಹಲವು ನೆಲೆಗಳಿದ್ದಾವು. ಭಕ್ತ ಕವಿಯಾದ ಅವನ ನಿಷ್ಠೆ, ಆಶಯಗಳ ಪ್ರಶ್ನೆಯೇನೇ ಇರಲಿ ಕೈಲಾಸದಿಂದ ಧರೆಗಿಳಿದು ಬಂದು ಬೆಳಗಿದ ಚೇತನ ಮತ್ತೆ ಕೈಲಾಸಕ್ಕೆ ಮರಳುವ ಚೌಕಟ್ಟೊಂದನ್ನು ರೂಪಿಸಿರುವುದರ ಹಿನ್ನೆಲೆಯಲ್ಲಿ ಕಾವ್ಯ ಕೆಲವು ಪೂರ್ವ ನಿರ್ಧಾರಿತಗಳನ್ನು ಹೊಂದಿದೆಯೆಂಬುದನ್ನು ಒಪ್ಪಬೇಕು. ಇದರ ನೆಲೆಯಲ್ಲಿಯೇ ಇಲ್ಲಿ ವ್ಯಕ್ತಿತ್ವದ ಉನ್ನತೀಕರಣವಿದೆ; ಅಸಾಮಾನ್ಯತೆಯ ನೆಲೆಗೇರಿಸುವ ಪ್ರಯತ್ನವಿದೆ. ಹೀಗಾಗಿಯೇ ಹರಿಹರನ ಮಹಾದೇವಿಯಕ್ಕನ ರಗಳೆಯಲ್ಲಿ ನಾವು ಕಾಣುವ ಅಕ್ಕಮಹಾದೇವಿ, ವಚನಗಳಲ್ಲಿ ಕಾಣುವ ಅಕ್ಕನಲ್ಲ; ಅನುಭಾವಿಯೂ ಅಲ್ಲ. ಬದಲಾಗಿ ಕಾರಣಿಕಳಾದ, ಸಿದ್ಧ ವಿರಕ್ತೆಯಾದ ಪರಮ ಭಕ್ತೆಯಾದ ಮಹಾದೇವಿಯಕ್ಕ.

ಪರಾಮರ್ಶನ ಕೃತಿಗಳು

ಚಿದಾನಂದ ಮೂರ್ತಿ ಎಂ : 1975, ವಚನ ಸಾಹಿತ್ಯ, ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು.

ಬಸವರಾಜು ಎಲ್ (ಸಂ) : 1977, ಅಕ್ಕನ ವಚನಗಳು, ಗೀತಾ ಬುಕ್ ಹೌಸ್, ಮೈಸೂರು (ತೃತೀಯ ಮುದ್ರಣ).

ಬಸವರಾಜ ಕಲ್ಗುಡಿ : 1988, ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಲತ್ತೆ ಎಂ. ಎಸ್. : 1975, ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವಿನೋದಾಬಾಯಿ ಎಸ್. : 1969, ಆಂಡಾಳ್ ಮಹದೇವಿ ಮೀರ, ಉಷಾ ಸಾಹಿತ್ಯ ಮಾಲೆ, ಮೈಸೂರು.

ಶಿವರುದ್ರಪ್ಪ ಜಿ. ಎಸ್. : 1969, 'ಹರಿಹರನ ಬಸವರಾಜದೇವರ ರಗಳೆ,' ಕವಿ ಹೃದಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಹಿರೇಮಲ್ಲೂರು ಈಶ್ವರನ್: 1971, ಹರಿಹರನ ರಗಳೆಗಳು ಒಂದು ಸಂಖ್ಯಾ ನಿರ್ಣಯ, ಮೈಸೂರು ವಿಶ್ವವಿದ್ಯಾಲಯ

ಕೆ.ಎಸ್.ನ. ಅವರ 'ತೆರೆದ ಬಾಗಿಲು'—ಒಂದು ವಿಶ್ಲೇಷಣೆ

ಜಿ. ವಿ. ಶ್ರೀರಾಮರೆಡ್ಡಿ

ಕೆ. ಎಸ್. ನರಸಿಂಹಸ್ವಾಮಿಯವರು ನವೋದಯ ಕವಿಗಳಲ್ಲಿ ಪ್ರಸಿದ್ಧರು. ಗಂಡು ಹೆಣ್ಣಿನ ನಡುವಣ ಪ್ರೇಮದ ನವಿರಾದ ಭಾವನೆಗಳನ್ನು ಕಾವ್ಯವಲಯದಲ್ಲಿ ನವಿರಾಗಿ ಮತ್ತೆ ಅಷ್ಟೇ ಸಮರ್ಥವಾಗಿ ಹಿಡಿದಿಟ್ಟವರಲ್ಲಿ ಅಗ್ರಗಣ್ಯರು ಎನ್ನಬೇಕು. 'ಮೈಸೂರಮಲ್ಲಿಗೆ' ಎಂದಾಕ್ಷಣ ನೆನಪಿಗೆ ಬರುವ ಇವರು 'ತೆರೆದ ಬಾಗಿಲು' ಸಂಕಲನದಿಂದಲೂ ಸಾರಸ್ವತ ಪ್ರಪಂಚದಲ್ಲಿ ಅಷ್ಟೇ ಹೆಸರು ಪಡೆದಿದ್ದಾರೆ. ಕಾರಣ, ಅದಕ್ಕೆ ದೊರೆತಿರುವ 'ಕೇಂದ್ರ ಸಾಹಿತ್ಯ ಅಕಾಡೆಮಿ' ಪುರಸ್ಕಾರದಿಂದ ಮಾತ್ರವಲ್ಲ! ಅವರ ಕಾವ್ಯ ಜೀವನದಲ್ಲಿ ತೆರೆದುಕೊಂಡ ಮತ್ತೊಂದು ಘಟ್ಟದಿಂದಲೂ, ಅರ್ಥ ವೈಚಿತ್ರ್ಯ ಹಾಗೂ ಆಲೋಚನೆಯ ವಿಭಿನ್ನತೆಯಿಂದಲೂ ಎನ್ನಬೇಕು. ಯಾವಾಗಲೂ ಒಬ್ಬ ವಿಶಿಷ್ಟ ಕವಿಯ ವಿಚಿತ್ರವಾದ ಅನುಭವಗಳು ಹಾಗೂ ಆ ನಡುವಿನ ಬದುಕಿನ ಒಡಕು ಬಿರುಕುಗಳು ಎಲ್ಲರ ಪಾಲಿನವಾಗಿರುತ್ತವೆ. ಹಾಗಾಗಿ ಈ ಕವನ ಯಾವೊಬ್ಬ ಸಾಹಿತ್ಯಾಸಕ್ತರಿಗೂ ಪ್ರಿಯವಾಗುತ್ತದೆ.

ಸಂಕಲನದ ಶೀರ್ಷಿಕೆಯಾಗಿರುವ ಇದು ಇಡೀ ಕವನಗಳ ಅಂತರ್ವಾಣಿಯಾಗಿರುವುದು ಮಾತ್ರವಲ್ಲದೆ ಕವಿಯ ವೈಯಕ್ತಿಕ ಹಾಗೂ ಕಾವ್ಯ ಬದುಕಿನ ಒಂದು ಘಟ್ಟವನ್ನು ನಿರೂಪಿಸುವಂತಿದೆ. ಓದಿದಷ್ಟೂ ಅರ್ಥವೈಚಿತ್ರ್ಯಗಳಿಂದ ವಿಭಿನ್ನಾರ್ಥಗಳಿಗೆ ಎಡೆಮಾಡಿಕೊಡುತ್ತದೆ. 'ಮೈಸೂರ ಮಲ್ಲಿಗೆ' ಬರೆದ ಕವಿ ಈ ಕವನವನ್ನು ಬರೆದರೇ ಎಂದು ಆಶ್ಚರ್ಯಪಡಲೂ ಅವಕಾಶವಿದೆ. ನಾದ-ಲಯ-ಛಂದಸ್ಸುಗಳ ಸಂಯೋಗದಿಂದ ಸಂಗೀತಕ್ಕೊಗ್ಗಿಕೊಳ್ಳುವಂತೆ ಪದ್ಯ ಬರೆಯುತ್ತಿದ್ದ ಇವರು ಅದರಿಂದ ಸ್ವಲ್ಪ ಮಟ್ಟಿಗೆ ದೂರ ಸರಿದು ಪೂರಾ ಗದ್ಯಕ್ಕೂ ಅಂಟಿಕೊಳ್ಳದೆ ಒಂದು ರೀತಿಯಲ್ಲಿ ಗೋಕಾಕ್, ಜಿ. ಎಸ್. ಶಿವರುದ್ರಪ್ಪ ಮತ್ತು ನಿಸಾರರ ಕಾವ್ಯ ಧಾಟಿಯನ್ನು ಹೋಲುವಂತೆ ಕಾಣುಬರುತ್ತಾರೆ. ಭಾಷೆಯ ಆಲಂಕಾರಿಕ ರೂಪವನ್ನು ಹಠದಿಂದಲೆಂಬಂತೆ ನಿವಾರಿಸಿಕೊಂಡು ನವೋದಯ ಹಾಗೂ ನವ್ಯ ಪಂಥಗಳಿಗೆ ಸೇತುವೆಯಂತೆ ಕಂಡುಬರುತ್ತಾರೆ.

ವಿಶ್ವವ್ಯಾಪಿಯಾದ ಮಾನವ ಸಮುದಾಯಲ್ಲಿ ಕವಿ ಬದುಕುತ್ತಿರುವುದರಿಂದ ತನ್ನ ಅನುಭವದ ವಲಯಕ್ಕೆ ಬದುಕಿನ ವಿಭಿನ್ನ ಒತ್ತಡಗಳು ತಟ್ಟುತ್ತಿರುತ್ತವೆ. ಅವು ಯಾವಾಗಲೂ ಒಂದೇ ತೆರನಿರುವುದಿಲ್ಲ. ಅನುಭವದಲ್ಲಿ ಒಡಕು ಬಿರುಕುಗಳು ಉಂಟಾಗುವುದು ಸಹಜ. ಹಾಗಾಗದೆ ಅಚ್ಚಳಿಯದ, ಮಾಸಲಳಿಯದ ಕೃತಿ ನಿರ್ಮಾಣ

ವಾಗುವುದಿಲ್ಲ ಕೂಡ. ಬಿರುಕು ಒಡಕು ಮುಚ್ಚುವ ಕಾರ್ಯಕ್ಕೆ ಕೃತಿ ಪ್ರಯತ್ನ ಪಡಬೇಕಾಗುತ್ತದೆ. ಯಾವ ಬೆಸುಗೆಯನ್ನು ಕಾವಿನಲ್ಲಿಯೇ ಹಾಕಬೇಕಾದರೂ ಮೂಲಾನುಭವದ ಕಾವಿಗೂ ಬೆಸುಗೆಯ ಕಾವಿಗೂ ಶಾಖದ ವ್ಯತ್ಯಾಸವಿರುತ್ತದಾಗಿ ಬೆಸುಗೆ ಕಣ್ಣಿಗೆ ಹೊಡೆದು, ಮನಸ್ಸಿಗೆ ಹೊಳೆದು ವಿಕಾರ ಕಾಣುತ್ತದೆ. ಇದರಿಂದಾಗಿ ಅಭಿವ್ಯಕ್ತಿಯಲ್ಲಿ ಭಿನ್ನವಾಗಬೇಕಾಗುತ್ತದೆ. ಅಭಿವ್ಯಕ್ತಿಯನ್ನು ಬದಲಾಯಿಸಿಕೊಳ್ಳುವ ಕವಿಗೆ ಕೆಲವೊಮ್ಮೆ ಇಚ್ಛಾಸ್ವಾತಂತ್ರ್ಯ ಬೇಕಾಗುತ್ತದೆ. ಕಾಲಕ್ಕೆ ತಕ್ಕಂತೆ, ಅನುಭವಕ್ಕೆ ಅನುಗುಣವಾಗಿ, ವಸ್ತುವಿಗೆ ಒಗ್ಗುವಂತೆ ಅಭಿವ್ಯಕ್ತಿಯನ್ನು ಮೈಗೂಡಿಸಿಕೊಳ್ಳುವುದು ಉತ್ತಮ ಕವಿಯ ಮಾತ್ರವಲ್ಲ, ಬೆಳೆಯುತ್ತಿರುವ ಕವಿಯ ಲಕ್ಷಣವೂ ಆಗಿರುತ್ತದೆ. ಹಾಗಾಗಿ ಕಾವ್ಯದ ಧಾಟಿ ನವೋದಯ ಕಾವ್ಯ ಪಂಥದಿಂದ ಸ್ವಲ್ಪವೇ ದೂರ ಸರಿದು ನವ್ಯವನ್ನು ಪೂರಾ ಅನುಸರಿಸದೆ ಮಿಶ್ರಣದಂತೆ ಕಂಡು ಬರುತ್ತದೆ. ಇದರಲ್ಲಿ ಕವಿಯ ಅಭಿವ್ಯಕ್ತಿಯ [ಧೋರಣೆಯ] ತೀವ್ರ ಅಡಗಿದೆ. ಆ ಎಚ್ಚರಿಕೆಯ ತೀವ್ರಗಾರಿಕೆ ಕವನದ Intention ಆಗಿದೆ.

"ತೆರೆದ ಬಾಗಿಲು ನಾನು ಸರ್ವಋತುಬಂದರು" ಸಾಲು ಒಟ್ಟು ಕವನದ ಧ್ವನಿಯನ್ನು ಹೊತ್ತಿದೆ. ಮೇಲ್ನೋಟಕ್ಕೆ ಕಾವ್ಯನಾಯಕ (ಕವಿ) ಬದುಕಿನಲ್ಲಿ ದೂರೀಕರಿಸಿಕೊಂಡ ಯಾವುದೋ ನಿರೀಕ್ಷೆಯನ್ನು ಕಾವ್ಯದ ಭಾವ ವ್ಯಕ್ತಪಡಿಸುವಂತಿದೆ. ಹಾಗಾಗಿ ತೆರೆದುಕೊಳ್ಳಬೇಕಾಗಿರುವ ಮತ್ತ್ಯಾವುದೋ ಬಾಗಿಲಿನತ್ತ ತನ್ನ ನಿರೀಕ್ಷೆಯ ನೋಟವನ್ನೂ ಕವನ ಹೊಂದಿದೆ. ಅನಿರೀಕ್ಷಿತವಾಗಿ ಕಳೆದುಕೊಂಡಿದ್ದನ್ನು ತೆರೆದ ಮನಸ್ಸಿನಿಂದ ಕಾಯುತ್ತಿರುವುದು ಕಾವ್ಯನಾಯಕನ ಕ್ರಿಯೆಯಾಗಿದೆ. ತಾನು ಕಳೆದುಕೊಂಡದ್ದನ್ನು ಮೂಲ ರೂಪದಲ್ಲಿಯೇ ಪಡೆಯುವ ಇಚ್ಛೆಯಿದ್ದರೂ ಅದು ಸಾಧ್ಯವಾಗುತ್ತಿಲ್ಲ. ಆಳವಾದ ಕೋಮಲ ಭಾವನೆಗಳಿಂದ ಗಳಿಸಿಕೊಂಡು ಬದುಕಿನ ಸ್ಥಾಯಿಯಾಗಿಸಿಕೊಂಡಿದ್ದನ್ನು ಮತ್ತೆ ಪ್ರಯತ್ನಪೂರ್ವಕವಾಗಿ, ಬೌದ್ಧಿಕ ನೆಲೆಗಟ್ಟಿನಲ್ಲಿ ತುಂಬಿಸಿಕೊಳ್ಳಬೇಕಾಗಿದೆ. ಬುದ್ಧಿ ಭಾವಗಳ ತಾಕಲಾಟಕ್ಕೆ ಒಪ್ಪದ ಕವಿ ಅವೆರಡರ ಸಮನ್ವಯದ ಅಭಿವ್ಯಕ್ತಿಯ ಒಂದು ಕ್ಷಣಕ್ಕೆ (Power of the moment) ಕಾದು ಕುಳಿತು ಹಂಬಲಿಸುವಂತೆ ಕಂಡು ಬರುತ್ತಾರೆ.

ರಮ್ಯಪಂಥದ ಕವಿಗೆ, ಸರಸತಿಯನ್ನು ತನ್ನ ಬದುಕಿನಲ್ಲಿ ಹಾಗೂ ಅದರ ರಮ್ಯ ಚಿತ್ರಣವನ್ನು ಕಾವ್ಯದಲ್ಲಿ ಸ್ಥಾಯಿಯಾಗಿ ಉಳಿಸಿಕೊಳ್ಳಲು ಆಗಿಲ್ಲವೆಂದು ಕಾಣುತ್ತದೆ. ಕಳೆದುಕೊಂಡ ಭಾವಿಕ ಬದುಕು ಹಾಗೂ ಕಾವ್ಯದ ಅಭಿವ್ಯಕ್ತಿಯನ್ನು ಅತ್ಯಂತ ಬೌದ್ಧಿಕವಾಗಿ 'ಶಿಲಾಲತೆ' ಮತ್ತು 'ಮನೆಯಿಂದ ಮನೆಗೆ' ಸಂಕಲನಗಳಲ್ಲಿ ಕಂಡರೂ ಅದೇಕೋ ಮನಸ್ಸಿಗೆ ಒಗ್ಗಿಲ್ಲವೆಂಬಂತೆ ತೋರುತ್ತದೆ. ಈ ಮಧ್ಯೆ ಕಾವ್ಯದ ಅಭಿವ್ಯಕ್ತಿ ಹೊಸದಾದ ಬಾಗಿಲನ್ನು ತೆರೆಯಿಸಬೇಕಾಗಿದೆ. ಅದಕ್ಕಾಗಿಯೇನೋ ಈ ಕವನ ರೂಪದಲ್ಲಿ ಎರಡು ಅಭಿವ್ಯಕ್ತಿಗಳ ಮುಖಾಮುಖಿ ಘರ್ಷಣೆಯನ್ನು ತಂದಿದ್ದಾರೆ ಎನಿಸುತ್ತದೆ.

ಆಧುನಿಕ ಹೊತ್ತಿನಲ್ಲಿ' ಅಸ್ತಿತ್ವದಲ್ಲಿರುವ ನವೋದಯ ನವ್ಯ ಪಂಥಗಳೆರಡು ಸಮನ್ವಯವನ್ನು ಸಾಧಿಸಬೇಕಾಗಿವೆ. ಎರಡು ಬಾಗಿಲುಗಳ ಸಮನ್ವಯ ಗೃಹವನ್ನು ಅಲಂಕರಿಸುವಂತೆ ಆ ಎರಡು ಪಂಥಗಳ ಅಭಿವ್ಯಕ್ತಿ ಸಮನ್ವಯ ಕಾವ್ಯವನ್ನು ಅಲಂಕರಿಸಬೇಕಾಗಿವೆ. ಬದುಕಿನಲ್ಲಿಯ ಅತಿಯಾದ ಆದರ್ಶ ಹಾಗೂ ಸಂಕೀರ್ಣತೆಗಳೆಂಬ ನಿಚ್ಚಣಿಕೆಗಳು ತಮ್ಮ ನಿಲುವನ್ನು ಬದಲಿಸಿಕೊಳ್ಳಬೇಕಾಗಿವೆ. ಹಿಂದಿನ ಆದರ್ಶಗಳೇ ಮಾರ್ಗದರ್ಶಕಗಳಾಗಬೇಕಿಲ್ಲ ಅಥವಾ ಇಂದಿನ ಸಂಕೀರ್ಣತೆಯೇ ಸ್ಥಾಯಿಯಾಗಬೇಕೂ ಇಲ್ಲ. ಉಭಯ ಕುಶಲೋಪರಿಯಲ್ಲಿ ಬೆಸುಗೆಯಾಗಬೇಕಾಗಿರುವ ಕವಿಯ ಧೋರಣೆ ವೈಯಕ್ತಿಕವಾದದ್ದು ಮಾತ್ರವಲ್ಲ ಅದು ಸಾಮೂಹಿಕವಾಗಬೇಕಿದೆ.

ಕಾಲ ಮತ್ತು ಕವಿಯ ವೈಯಕ್ತಿಕ ಜಗತ್ತು ಒಟ್ಟೊಟ್ಟಿಗೆ ಸಾಗಿರುವಂತೆ ಈ ಕವನದಲ್ಲಿ ಕಂಡುಬರುತ್ತದೆ. ಕಾಲ ಮತ್ತು ಕಾವ್ಯದ ಸಮನ್ವಯದ ಪ್ರಯುಕ್ತ ಅಖಂಡ ಕವನಕ್ಕೆ ಒಂದು ಪ್ರತಿಮಾ ವಿಧಾನ ಲಭಿಸಿದೆ ಎನ್ನಬಹುದು ಮಾತ್ರವಲ್ಲ, ಇದು ಇಡೀ ಸಂಕಲನದ ಒಂದು ಭಾಗವಾಗಿದೆ ಕೂಡ. (ಮುಚ್ಚಿದ ಕಿಟಕಿ, ಭೂತಗನ್ನಡಿ, ಗಡಿಯಾರದಂಗಡಿಯ ಮುಂದೆ ಕವನಗಳ ಸಂದರ್ಭದಲ್ಲೂ ನೋಡಬಹುದು) ''ಸಂಜೆಯೂ ಆಯಿತು ನೀನೂ ಬಂದೆ'' ಎಂಬ ಪ್ರಾರಂಭದ ಸಾಲೇ ಮೇಲಿನ ಎರಡು ಅರ್ಥಗಳಿಗೆ ಒಂದೇ ನೆಲೆಯನ್ನು ಕಲ್ಪಿಸಿಕೊಟ್ಟಿದ್ದು ಮುಂದುವರಿದಂತೆ ಕವನದಲ್ಲಿ ಎರಡು ರಹದಾರಿಗಳನ್ನು ನಿರ್ಮಿಸುತ್ತದೆ. ಅಭಿದಾವೃತ್ತಿಯಲ್ಲಿ 'ಸಂಜೆ' ಕಾಲವನ್ನು (Time) ಸೂಚಿಸುವಂತಿದ್ದರೆ, ಸ್ವಲ್ಪ ಮುಂದೆ ಹೋಗಿ ಲಕ್ಷ್ಯಾರ್ಥವಾಗಿ ಕವಿಯ ಬದುಕಿನ (ಕಾವ್ಯಬದುಕು ಮತ್ತು ಕೌಟುಂಬಿಕ ಬದುಕು) ಇಳಿಮುಖವನ್ನು ಸೂಚಿಸುತ್ತದೆ. ಮುಂದಿನ ಸಾಲುಗಳಲ್ಲಿ ಪೂರಕವಾಗಿ ಸೇರ್ಪಡೆಯಾದ ಹೆಂಡತಿಯ ನಿರೀಕ್ಷೆಯನ್ನು ಅರ್ಥೈಸಿಕೊಂಡಾಗ ಬರುವ ಅರ್ಥ ಸಮರ್ಪಕವೆನಿಸುತ್ತದೆ. ತವರಿಗೆ ಹೋದ ಹೆಂಡತಿಯ ಬಗ್ಗೆ ಯೋಚಿಸುವ ಕವಿಯ ಒಂಟಿತನ ರೋಮಾಂಚಕವಾಗಿರದೆ, ವಿರಹವೇದನೆಯೂ ಆಗಿರದೆ ಬದುಕಿನ ಗಾಢ ಚಿಂತನೆಗೆ ತೊಡಗಿಸಿದೆ. ಹಾಗೆಯೇ ನವೋದಯದ ಇಳಿಹೊತ್ತಿನಲ್ಲಿ ಬಂದ ನವ್ಯಪಂಥವನ್ನು ಧ್ವನಿಸುವಂತಿದೆ.

ತಾರುಣ್ಯ ಬಹು ಕೋಣಗಳಿಂದ ಅನುಭವಿಸುದ ಬದುಕಿನ ಕ್ರಮವನ್ನು ಯೌವನ ಸಾಮಾನ್ಯವಾಗಿ ದ್ವಿಕೋಣವಾಗಿ ಅನುಭವಿಸುತ್ತದೆ. ಆದರೆ ಮುಪ್ಪು ಏಕಕೋಣವಾಗಿ ಎಲ್ಲವನ್ನು ಮಲುಕು ಹಾಕುತ್ತದೆ. ಬದುಕಿನ ಎಲ್ಲ ಸ್ತರಗಳನ್ನು ಕಾಣಬೇಕೆಂಬ ಮಹತ್ವಾಕಾಂಕ್ಷಿತನ ಯೌವ್ವನಕ್ಕೆ ಕಾಲಿರಿಸುವುದರಲ್ಲಿ ನಿರ್ದಿಷ್ಟ ಸ್ತರದಲ್ಲಿಯೇ ನಿರೀಕ್ಷೆಯ ಸುಖಗಳನ್ನು ಕಾಣದಾದಾಗ ವಿರಹವೇದನೆಗೆ ತೊಡಗುತ್ತದೆ. ಆ ವೇದನೆಯನ್ನು ಹಾಗೂ ಬದುಕಿನ ಮೂಲಾನುಭವಗಳನ್ನು ಅರಗಿಸಿಕೊಂಡ

ಕವಿಗೇಕೋ ಇದ್ದಕ್ಕಿದ್ದಂತೆ ಕೊನೆಯ ವಲಯದ ಅನುಭವ ಕಾಡಿದೆ. ಅವೆರಡರಿಂದ ಹೊರತಾದ ಮನಸ್ಸು ಈ ಕವನದಲ್ಲಿ ಒಂಟಿತನವನ್ನು ಅನುಭವಿಸುವುದಾಗಿದೆ. ಆ ಕ್ಷಣದಲ್ಲಿ ತನ್ನ ಅಸ್ತಿತ್ವವನ್ನೇ ಮರೆತು ತಾನಾರೆಂಬುದನ್ನು ಗುರುತಿಸಿಕೊಳ್ಳಲಾರದಾಗಿದೆ. ತವರಿಂದ ಬರಬೇಕಾದ ಹೆಂಡತಿಯ ನಿರೀಕ್ಷೆಯಲ್ಲಿರುವ ಕಾವ್ಯನಾಯಕ ಒಂಟಿತನದಿಂದ ಬೇಸತ್ತಿದ್ದಾನೆ. ಹಳ್ಳಿಯಿಂದ ಬಂದವನೊಂದಿಗೆ ತನ್ನ ಮನದಲ್ಲಿಯ ತುಡಿತವನ್ನು ತೋಡಿಕೊಳ್ಳುವುದನ್ನು ಬರೀ ಪ್ರಶ್ನೆಗಳೋಪಾದಿಯಲ್ಲಿರುವ ಪದ್ಯದ ಪ್ರಾರಂಭದ ಸಾಲುಗಳಲ್ಲಿ ಕಾಣಬಹುದಾಗಿದೆ.

"......ಬಸ್ಸು ಸಿಕ್ಕಿತೆ ನಿನಗೆ ಸಂತೆಯ ದಿನ ?
ಇಷ್ಟು ಕತ್ತಲೆ ಮಾಡಿಕೊಂಡು ಬರುವುದೆ ಹೇಳು ?
ನಿನ್ನ ಮಗುವಿಗೆ ಎಂದು ನಾಮಕರಣ ?
ಇವಳು ಹೇಗಿದ್ದಾಳೆ ? ಎಂದು ಬರುವಳು ? ಗೊತ್ತು ;
ಬಂದೆ ಬರುವಳು, ಆದರೆಂದು ?......"

ಬದುಕಿನೊಳಗೆ ಸದಾ ಕೈಚಾಚಿ ನಿಂತಿರುವ ಸಾವಿನ ಗಹನತೆಯನ್ನು ಅದರ ಅರಿವೇ ಇಲ್ಲದಂತೆ ಬದುಕಹೋಗುವ ಮಾನವರ ಸ್ವಭಾವವನ್ನು ಅನುಭವ ವೇದ್ಯ ಮಾಡಲು ಉಚಿತವಾದ ವೇದಿಕೆಯಾಗಿದೆ. ಈ ಮಾತುಗಳು ಹೆಂಡತಿಯನ್ನು ತೌರಿಗೆ ಕಳಿಸಿ ಒಂಟಿಯಾಗಿ ಮನೆಯಲ್ಲುಳಿದು ಆ ಕಡೆಯಿಂದ ಬಂದವನೊಂದಿಗೆ ನಡೆಸುತ್ತಿರುವ ಯೋಗಕ್ಷೇಮದ ಮಾತುಕತೆಗಳು ಮೇಲು ನೋಟಕ್ಕೆ ಸರಳ ಚಿತ್ರಣದಂತೆ ಕಂಡರೂ ಶಬ್ದಲಯಗಳಿಂದ ಭಾರವಾಗದೆ ಕವನವನ್ನು ಮುಂದೆ ಬೆಳೆಸಲು ಸಹಾಯ ಮಾಡಿವೆ.

ರಾಷ್ಟ್ರೀಯವಾದ, ಆದರ್ಶವಾದ, ಸೋದರವಾದಗಳಂಥ ಆದರ್ಶ ಭಾವನೆಗಳಿಂದ ಕಿಕ್ಕಿರಿದ ಸಂದಣಿಯಲ್ಲಿ ನುಸುಳಿಕೊಂಡು ಬಂದಂಥ ನವ್ಯಪಂಥವನ್ನು ಇಳಿಹೊತ್ತಿನಲ್ಲಿ ಬಂದೆಯಲ್ಲಾ ಎಂದು ಪ್ರಶ್ನಿಸುತ್ತಿರುವ ಕವಿ ಅದನ್ನು ವಿಡಂಬಿಸಿಯೂ ಇದ್ದಾರೆ. "ನಿನ್ನ ಮಗುವಿಗೆ ಎಂದು ನಾಮಕರಣ?" ಎಂಬಲ್ಲಿ ಅಸ್ತಿತ್ವವನ್ನೇ ರೂಪಿಸಿಕೊಳ್ಳದ ನವ್ಯ ಪಂಥವನ್ನು ಕುರಿತು ಮಗುವಿನ ನಾಮಕರಣವನ್ನು ಕುರಿತು ವಿಚಾರಿಸಿರುವುದು ಹಾಸ್ಯಾಸ್ಪದವಾಗಿದೆ. ತಕ್ಷಣವೇ "ಇವಳು ಹೇಗಿದ್ದಾಳೆ ?" ಎಂಬಲ್ಲಿ ತವರಿಗೆ ಹೋದ ತನ್ನ ನವೋದಯವನ್ನು ನೆನಸಿಕೊಳ್ಳುವುದರಲ್ಲಿ ಕವಿಯ ವೈಯಕ್ತಿಕ ಅಭಿಲಾಷೆಯಿದೆ, ಎಂಬುದನ್ನು ಸ್ಪಷ್ಟಪಡಿಸುತ್ತದೆ. ಕವಿಯ ದೃಷ್ಟಿಯಲ್ಲಿ ನವೋದಯ ವಸ್ತು ಶಿಶುವಲ್ಲ, ಅದಕ್ಕೆ ತವರಿದೆ. ಕೋಮಲತೆಯನ್ನು, ಭಾವುಕತೆಯನ್ನು ಮೈಗೂಡಿಸಿಕೊಂಡಿರುವ ನವೋದಯವನ್ನು ಹೆಣ್ಣಿಗೆ ಹೋಲಿಸಿರುವುದರಲ್ಲಿ ಔಚಿತ್ಯವಿದೆ. ತವರಿಗೆ ಹೋಗಿರುವ

ಪಕ್ಷಿಯನ್ನು ಜೀವದುಸಿರಾಗಿ ನಿರೀಕ್ಷಿಸುವುದನ್ನು "ಬತ್ತ ಬರದಿದ್ದರೂ ಬಾಳೆಯಾದರು ಬರಲಿ" ಎಂಬಲ್ಲಿ ಕಾಣುತ್ತೇವೆ. ಉಸಿರು ಆಹಾರಕ್ಕಿಂತಲೂ ಮುಖ್ಯವಲ್ಲವೆ ? ಇಲ್ಲಿ ಆಳವಾಗಿ ಕವಿಯ ವೈಯಕ್ತಿಕ ಬದುಕಿನ ಬಡತನದ ಛಾಯೆ ಮಿಂಚಿ ಮರೆಯಾಗುತ್ತದೆ. ಜೊತೆಗೆ ತನ್ನ ಅಭಿವ್ಯಕ್ತಿಯ ಮೋಹಕತೆಯನ್ನು ಇಲ್ಲಿ ಕಾಣುತ್ತೇವೆ. "ಹಿಡಿದ ಮಳೆ ಬಿಟ್ಟಿವೆ ಈಗ ಛಳಿ ಹಿಡಿದೆ" ಎಂಬ ಸಾಲಿನಲ್ಲಿ ಎರಡು ವಾಕ್ಯಗಳಿದ್ದು ಒಂದೇ ಮಾತ್ರಾಲಯದಲ್ಲಿವೆ. ಆದರೆ ಅರ್ಥ ಮಾತ್ರ ಬೇರೆ. ಬಾಹ್ಯವಾದ ಮಳೆ ಬಿಟ್ಟರೂ ಆಂತರ್ಯದ ಚಳಿಯನ್ನು ಹೆಚ್ಚಿಸಿದೆ. ನವೋದಯದ ಲಯ, ಛಂದಸ್ಸು ಬಾಹ್ಯವಾಗಿದ್ದು ಅಭ್ಯಾಸ ಯೋಗ್ಯದ್ದು. ನವ್ಯದ ಲಯ, ದಾಟಿ ಕವನವನ್ನು ಸಂಕೀರ್ಣಗೊಳಿಸುವಂಥಾದ್ದು. ಸುಲಭದಲ್ಲಿ ಅರಿಯಲೂ ಸಾಧ್ಯವಿಲ್ಲ. ಅದಕ್ಕೆ ಹೇರುವ ಪ್ರತಿಮೆ ಸಂಕೇತಗಳಿಂದ ಅದೊಂದು ಕೋಠಿಯೋ ಕರಡಿಯೋ ಆಗಿರುವುದು ಕವಿಯ ದೃಷ್ಟಿಯಲ್ಲಿ ಆಶ್ಚರ್ಯವಿಲ್ಲ. ಅದು ಕವನದಲ್ಲಿ ಈ ರೀತಿ ವ್ಯಕ್ತವಾಗಿದೆ.

"ಸಾಕೆ ಇಷ್ಟೊಂದಂಗಿ ? ಅದರ ಮೇಲೂ ಶಾಲೆ ?
ನೀನೇನು ಕೋಟಿಯೋ ಕರಡಿಯೋ ಮಹರಾಯ ?"

ಇವೆರಡರ ಒಟ್ಟು ಧೋರಣೆಯ ಮುಂದೆ ಕಥಾನಕವಾಗಿ ಬಿಚ್ಚಿಕೊಳ್ಳುವ ಕಾವ್ಯದ ಘಟ್ಟ ಕವಿಯ ತಂತ್ರವಾಗಿ ಮಾರ್ಪಟ್ಟಿದೆ. ''ಸಾವಿನಷ್ಟು ಆಪ್ತವಾಗಿ ಬದುಕಿನ ಬೆನ್ನು ಹತ್ತಿ ಸಾಗಿದ್ದು ಯಾವುದಿದೆ ? ಜೊತೆಯಲ್ಲಿಯೇ ಬರುತ್ತಿರುವ ಈ ಹಳೆ ಗೆಳೆಯನನ್ನು ಕಣ್ಣೆತ್ತಿಯೂ ನೋಡದೆ ಸಾಗಿರುವ ಬದುಕು ಹಠಾತ್ತನೆ ಅದನ್ನು ಕಂಡು ಭಯ ಚಕಿತನಾಗಿ ಧಿಗ್ಗನೆ ಹಿಂದೆ ಸರಿದ ಒಂದು ಅನುಭವ'' ಈ ಕಥಾನಕ ಪ್ರಸಂಗವಾದ ಕವನದ ಎರಡನೆ ಹಂತದಲ್ಲಿದೆ.

"ನನ್ನದೇ ಹೆಸರಿನವನೀ ಬೀದಿಯವನೊಬ್ಬ
ನಿನ್ನೆ ಲಾರಿಗೆ ಸಿಕ್ಕು ಸತ್ತನಂತೆ
ಸತ್ತವನು ನಾನಲ್ಲವೆಂದು ನನಗೂ ಗೊತ್ತು
ಪಾಪ ಯಾರೋ ಸತ್ತು ನನ್ನ ಹೆಸರಿಗೆ ಬಂದ"

ಒಂಟಿತನ ಸಾವಿನ ಆಪ್ತತೆ ಬಯಸುವಷ್ಟು ಆಳಕ್ಕೆ ಇಳಿದಿದೆ. ತಾನೇ ಸಾವಿಗೀಡಾದರೆ ಆಗಬಹುದಾದ ಪ್ರಮಾದವೇನು ಎಂಬುದನ್ನು ತನ್ನದೇ ಹೆಸರಿನವನೊಬ್ಬ ಸತ್ತು ಪೇಪರಿಗೆ ಬಂದ ಸುದ್ದಿ ನೋಡಿ ತಾನೇ ಕಲ್ಪಿಸಿಕೊಳ್ಳುತ್ತಾ ಹೋಗುವುದು Indirect Narration ರೀತಿಯಲ್ಲಿ ತಂತ್ರವಾಗಿದೆ. ಪ್ರತಿವಾಕ್ಯವು ಅನಿವಾರ್ಯವೆಂಬಂಥ ರಚನೆಗೆ ಹೊಂದಿದ್ದು ವಾಕ್ಯಗಳು ಮುಗಿದಾಗ ಮಾತ್ರ ಯತಿಯ ಅವಶ್ಯಕತೆ ಉಂಟಾಗುತ್ತದೆ. ಹುಟ್ಟು ಸಾವುಗಳ ಬಗ್ಗೆ ಪತ್ರಿಕೆಯವರು, ಅಂಚೆಯವರು ವಹಿಸುವ ನಿರ್ಲಿಪ್ತತೆ ಸಹಜವಾದರೂ ಅದು ಕವಿಯಲ್ಲಿ ಮುಜುಗರವನ್ನು

ಹುಟ್ಟಿಸಿದೆ. "ಸುದ್ದಿ ಸಂದಿಗ್ಧವಾಗಿದೆ ಸ್ವಾಮಿ" ಸಾಲಿನಲ್ಲಿ ತನಗೇ ಸಾವು ಸಂಭವಿಸಿದಂಥ ಅಭಿನಯ ವ್ಯಕ್ತವಾಗಿದೆ. "ಅಸ್ತಿತ್ವದ ಅಂಚಿನಲ್ಲಿಯೇ ನಿಂತು ಬದುಕಿನ ಬಾಗಿಲನ್ನಷ್ಟೇ ಓರೆ ಮಾಡಿ ಅದರಾಚೆಗಿನ ರಹಸ್ಯದ ಅನುಭವವಾಗುವಂತೆ ಕವಿ ಇಲ್ಲಿ ಮಾಡಿದ್ದಾರೆ." ಮೊದಲ ಭಾಗ ಕವನದ ಒಟ್ಟು ಸಂದರ್ಭಕ್ಕೆ ಒಂದು ಚೌಕಟ್ಟನ್ನು ಒದಗಿಸಿದ್ದರೆ ಎರಡನೆಯ ಭಾಗದಲ್ಲಿ ಅಸ್ತಿತ್ವದಿಂದ ದೂರ ಸರಿದರೂ ಸಾವಿನ ಪರಿಚಯ ಕವಿಯಿಂದ ದೂರ ಸರಿಯದಂತೆ ಬಾಳಿನ ಎಲ್ಲೆಯ ಬಾಗಿಲು ಸ್ವಲ್ಪವೇ ಓರೆಯಾದಂತೆ ಕಂಡುಬರುತ್ತದೆ.

ತನಗೊದಗಿದ ಸಾವಿನ ಅಪಶಕುನವನ್ನು ಪರಿಹರಿಸಿಕೊಳ್ಳಲು ಪಡುವ ಕವಿಯ ಪ್ರಯತ್ನಗಳೂ ಸಾಂಪ್ರದಾಯಿಕವಾಗಿಲ್ಲ.

"ಸತ್ತೆನೋ ಕೆಟ್ಟೆನೋ ನೆರೆಮನೆಗೆ ನುಗ್ಗಿದೆ;
ಟೆಲಿಫೋನಿನಲ್ಲಿ 'ಸಂಪಾದಕರ ಕೊಡಿ' ಎಂದೆ"

ಹುಟ್ಟು ಸಾವುಗಳ ಅಧಿಕೃತ ವಕ್ತೃ ಪತ್ರಿಕೆಯಲ್ಲ, ಅದರ ಸಂಪಾದಕ ಎಂಬುದು ಕವಿಗೆ ಗೊತ್ತು! ಅದಕ್ಕಾಗಿಯೇ ನೆರೆಮನೆಗೆ 'ಹೋಗದೆ','ನುಗ್ಗಿದ್ದು' ಮತ್ತೆ ವಿಶೇಷವಾದ ನಮಸ್ಕಾರವನ್ನು ಹೇಳಿದ್ದು. ಪೂರ್ವ ಪರಿಚಯದಿಂದ 'ಒಂದು ವಿದಿತವಾಗಿ ನಿಮಗೆ' ಎಂದರೆ 'ಇನ್ನೊಂದು ನನ್ನ ಹೆಸರಿಗೆ ಕಾಣಿಸಿದ ಲೋಕಕ್ಕೆ' ಎಂಬುದರಲ್ಲಿ ಪತ್ರಿಕೆಯವರು ಅವರನ್ನು ನಿರಾಕರಿಸಿದ್ದಕ್ಕೆ ವ್ಯಂಗ್ಯವಾಗಿ ನಮಸ್ಕಾರ ಹೇಳಿದ್ದಾರೆ. 'ಕಾಲ ಪರಿವರ್ತನೆಯ ಜೊತೆ ಕಾವ್ಯ ಪರಿವರ್ತನೆಯಾದದ್ದು' ಪತ್ರಿಕೆಯ ಮುಖಾಂತರವೇ ಎಂಬುದು ಇಲ್ಲಿ ಗಮನಾರ್ಹ. ನವೋದಯ ಕವನಗಳನ್ನು ಒಂದು ಕಾಲದಲ್ಲಿ ಪತ್ರಿಕೆಗಳು ನಿರಾಕರಿಸಿದ್ದು ಇಲ್ಲಿ ಕವಿಯ ಒಳನುಡಿಯಾಗಿದೆ. ಜೀವಂತವಾದ ನವೋದಯ ಕವನಗಳನ್ನು ನಿರಾಕರಿಸಿದ್ದು ಕವಿಯ ದೃಷ್ಟಿಯಲ್ಲಿ ಸಾಯಿಸಿದಂತೆಯೇ ಆಗಿದೆ.

"ನನ್ನದೇ ಹೆಸರಿನವನೀಬೀದಿಯವನೊಬ್ಬ
ನಿನ್ನೆ ಲಾರಿಗೆ ಸಿಕ್ಕಿ ಸತ್ತನಂತೆ"

ಎಂಬಲ್ಲಿ ಕವಿ ಒಬ್ಬ ವ್ಯಕ್ತಿಯಾಗಿರದೆ ಒಂದು ಪಂಥವಾಗಿರುವುದನ್ನು ಕಾಣುತ್ತೇವೆ. ಒಂದೇ ಬೀದಿಯವನು ಮಾತ್ರವಾಗಿರದೆ ಸತ್ತವನು ಒಂದೇ ಕೋವಿನವನಾಗಿರುವುದೂ ಇಲ್ಲಿ ವ್ಯಕ್ತವಾಗಿದೆ. ಅದಕ್ಕಾಗಿಯೇ ತಪ್ತವಾದ ಮನಸ್ಸು ಅಷ್ಟಕ್ಕೆ ಸುಮ್ಮನಾಗದೆ ಅಂತರ್ಯದಲ್ಲಿ ಹೀಗೆ ನಡೆದುಕೊಂಡಿರುವುದು.

"(ಸುದ್ದಿ ಪೂರಾಗದ್ಯವೆಂದು ಟೀಕಿಸಬೇಡ
ಗದ್ಯದಲ್ಲೂ ಮಂದಿ ಸಾಯಬಹುದು)"

ಸಾವಿನ ಆಪ್ತತೆ ಅಷ್ಟಕ್ಕೇ ದೂರವಾಗದೆ ಚುಕು ಚೂರಿಗಳ ಮಧ್ಯೆಯು ಕಂದನ ಸ್ಥಿತಿಯನ್ನು ಸೃಷ್ಟಿಸಿವೆ. ಕಪ್ಪು ಕಣ್ಣೀರಿಡುವ ಸಂತಾಪ ಪತ್ರಗಳ ನೆನಪಾಗಿ ಅಂಚೆಯು ಮನೆಯುಪರೆಗೂ ಓಡಿಸಿವೆ. ತನಗೊದಗಿದ ಆಪತ್ತನ್ನು ಅಸಹಾಯಕನಾಗಿ ಅಂಚೆಯುವನಲ್ಲಿ ಕೇಳಿಕೊಳ್ಳುವ ದೈನ್ಯತೆಯನ್ನು ಇಲ್ಲಿ ಕಾಣಬಹುದು.

"ನಾಳೆ ಸಂಜೆಯತನಕ ನನಗೆ ಏನೇ ಬರಲಿ
ಬಂದದ್ದು ಬಂದಂತೆ ಇಲ್ಲೆ ಬಿದ್ದಿರಲಿ ;
ಬಳಿಕ ಬಂದೊಯ್ಯುವೆನು, ಅಷ್ಟು ಉಪಕಾರ
ಮಾಡುವುದು ಸಾಧ್ಯವಾದರೆ, ನಾನು ನನ್ನಾಕೆ
ನಮ್ಮ ಮಕ್ಕಳು ಕೂಡ ನಿಮಗೆ ಋಣಿಗಳು' ಎಂದೆ."

ಅಲ್ಲಿ ಯಾವುದೇ ರೀತಿಯು ಪ್ರತಿಕ್ರಿಯೆ ಸಿಕ್ಕದೆ ಹಿಂತಿರುಗಿದಾಗ

"ಬರುವಾಗ ದಾರಿಯಲಿ ಮುಳ್ಳು ಚುಚ್ಚಿ
ರಕ್ತ ಸುರಿಯಿತು ; ಇವಳ ನೆನಪಾಯಿತು."

ಸ್ಥಾಯಿಯಾಗಿ ಮನದಲ್ಲುಳಿದ, ಬೇಸತ್ತು ತವರಿಗೆ ಹೋದ ಪತ್ನಿ ಮುಳ್ಳುಚುಚ್ಚಿದ ಸಂದರ್ಭದಲ್ಲಿ ನೆನಪಾಗಿರುವುದು ಎಂಥಾ ಆದರ್ಶ ಪ್ರೇಮವನ್ನು ವ್ಯಕ್ತಪಡಿಸುತ್ತದೆ. ಆದರೆ ಅಷ್ಟೇ ನಿರಾಶೆ ಕಾದಿದೆ.

"ಭತ್ಯವೂ ಬರಲಿಲ್ಲ ಅವಳೂ ಬರಲಿಲ್ಲ.
ತವರು ಮನೆಯಿರುವ ಹೆಂಡತಿಯ ಪಾಡೇ ಹೀಗೆ;"

ಅದನ್ನೆಲ್ಲಾ ಅರ್ಥಮಾಡಿಸಲೆಂದೇ ತನ್ನ ಪ್ರಯತ್ನವೆಲ್ಲವನ್ನೂ ಆತುರವಾಗಿ ಮಾಡಿದ ಕವಿ ಕಾದಿದ್ದಾರೆ.

"ಕಾಗೆ ಕರ್ರೆನ್ನುವ ಹೊತ್ತಿಗೆ ನಿಂತ ಮೆಟ್ಟನಲಿ
ಸುಬ್ಬುವನ್ನೋಡಿಸಿದ್ದು ಬಂದಾರವರು
ಸರಿ ಹೊತ್ತಿಗಾದರೂ.. "

ಎಂಥಾ ನಿರೀಕ್ಷೆ ಬಾಳಿನ ನಡುವೆಯೂ ಕೂಡ! 'ಕಾಗೆ ಕರ್ರೆನ್ನುವ ಹೊತ್ತು', 'ನಿಂತಹೆಜ್ಜೆ', 'ಓಡಿಸಿದ್ದು' ಎಂಬ ಶಬ್ದಗಳು ಎಂಥ ತೀವ್ರತೆಯನ್ನು, ಆವೇಗವನ್ನು, ಅವಸರವನ್ನು, ತೋರಿಸುತ್ತವೆ. ಆದರೂ ಕವಿ ಅಸಹಾಯಕ–ಎಲ್ಲವನ್ನು ದೈವದ ಮೇಲೆ ಹೇರಿ

"ತೆರೆದ ಬಾಗಿಲ ಮುಂದೆ ಕಾದು ಕುಳಿತಿದ್ದೇನೆ
'ಸಪ್ತಮುಂ ದೈವ ಚಿಂತನಂ' "

ಎನ್ನುತ್ತಾರೆ. ಕಾವ್ಯ ಕ್ರಾಂತಿಗಳಲ್ಲಿ ಪಾಲ್ಗೊಳ್ಳುತ್ತಾ, ಜೊತೆಗೆ ಅವುಗಳನ್ನು ಮೀರುತ್ತಾ, ಬದಲಾಗುತ್ತಾ, ಉದ್ದಕ್ಕೂ ಹೊಸದಾಗಿ ನಡೆಯುವ ಕ್ರಿಯೆ ನಮ್ಮ ಕೈಯಲ್ಲಿರುತ್ತದೆ. ಅದಕ್ಕಾಗಿಯೇ ಕವನದ ಮೊದಲ ಘಟ್ಟದಲ್ಲಿಯೇ–

"ಅಂಗಿಯನು ಬಿಚ್ಚುವುದು ನಮ್ಮ ಕೈಯೊಳಗಿಹುದು
ಕಳೆದುಕೋ ನಿನ್ನ ಹೊರೆಯನು ಬಿಡು ಪೊರೆಯನು"

ಎಂದಿರುವುದು. ಕಾವ್ಯದ ಹೊರೆಯನ್ನು ಇಳಿಸಿಕೊಂಡು ಪೊರೆಬಿಡುವುದರ ಮೂಲಕ ಹೊಸಘಟ್ಟ ಪಡೆಯಬಹುದಾದ ಒಂದು ರೀತಿಯನ್ನು ಸೂಚಿಸಿದಂತಿದೆ. ಕವನದ ಮೂರನೆಯ ಘಟ್ಟದಲ್ಲಿ ಅದನ್ನು ತಾನೇ ಪಡೆಯುವ ನಿರೀಕ್ಷೆಯಲ್ಲಿರುವಂತೆ ಕವಿ ತೋರುತ್ತಾರೆ. ತೆರೆದ ಬಾಗಿಲ ಮುಂದೆ ಕಾದು ಕುಳಿತಿರುವಾಗ ಬಂದವರು ಇವರು—

"ಮೂರು ಬೆಂಕಿಗಳಂತೆ ಮೂರು ಕಾಲಗಳಂತೆ
ಮೂರು ತಲೆಮಾರುಗಳ ಸುಕೃತ ಮೈವೆತ್ತಂತೆ
ಮಡಿಯುಟ್ಟ ಹಸಿದ ಮೂವರು .
ತೆರೆದ ಬಾಗಿಲ ನೋಡು ನೇರ ಬಂದರು ಒಳಗೆ"

ಮೂರು ಕಾಲಗಳ ಆವೇಶದ ವಿವಿಧ ಭಂಗಿಗಳನ್ನು ಇಲ್ಲಿ ಕಾಣಬಹುದು. ಮೂರು ಬೆಂಕಿಗಳು, ಮೂರು ಕಾಲಗಳು, ಮೂರು ತಲೆಮಾರು, ಹಸಿದ ಮೂವರು ನೇರವಾಗಿ ಒಳಬರಲು ತೊಡಗಿದರು. ಮನೆಯಲ್ಲಿರುವುದು ಒಂಟಿಯಾದ ಕವಿ ಮಾತ್ರ ಗೃಹಿಣಿಯೂ ಇಲ್ಲ, ಕೆಲಸದವಳೂ ಇಲ್ಲ—, ಬಂದವರ ತಣಿಸಲು. ಅದಕ್ಕಾಗಿಯೇ ಅವರ ಸ್ವಾಗತ ಕೋರಿರುವುದು ಊರಿನ ಬೀದಿಗಳು, ಚೌಕಗಳಲ್ಲಿಯ ಹೂಗಳು, ಬಚ್ಚಲು ಹಲ್ಲುಗಳು, ಇತ್ಯಾದಿ. ಇವೆಲ್ಲಾ ವರ್ತಮಾನದಲ್ಲಿ ಪ್ರಯೋಗಗೊಂಡ ಪದಗಳಾಗಿರುವುದು ಗಮನಾರ್ಹ. ಪ್ರಾಸದ ಹಾವಳಿಯಿಂದ ಬೌದ್ಧಿಕ ಅಲಂಕಾರವಾಗಿ ಕಾಣುವ ನವ್ಯದ ಧಾಟಿ ನವೋದಯಕ್ಕೆ ಸವಾಲೆಸೆದಿದ್ದರ ವಿಡಂಬನೆ ಇದೆಂಬಂತೆ ತೋರುತ್ತದೆ. ಆದರೆ ಅವರು ಬಂದಿರುವುದು ತಪ್ಪು ಬೀದಿಗೆ, ತಪ್ಪು ಮನೆಗೆ ಬಂದರೇನೋ ಎಂದು ಕವಿ ಅನುಮಾನಿಸಿದ್ದಾರೆ.

ಕೊನೆಗೆ 'ಇವು ನನ್ನ ಚಿಂತೆ', ಎಂದು ಕವಿ ಎಚ್ಚೆತ್ತು ಹೊರ ಜಗತ್ತನ್ನೊಮ್ಮೆ ವೀಕ್ಷಿಸಿದಂತಿದ್ದಾರೆ. 'ಬಂದುದೆಲ್ಲಿಗೆ ನಾವು ? ಮುಂದೆಲ್ಲಿಗೆ ?' ಎಂದು ಈವರೆಗಿನ ಕಾವ್ಯದ ಘಟ್ಟವನ್ನು ಕುರಿತು ಪ್ರಶ್ನಿಸಿದ್ದಾರೆ. ನವೋದಯವನ್ನು ಉರುಳಿಸಲು ಬಂದ ನವ್ಯದವರು ಚಾಪೆಯನು ಮಡಿದು ಗಡಿಯಾರವನು ನೋಡಿದ್ದು ಒಂದು ರೀತಿಯ ಹಸಿವಿನಿಂದ, ಆದರೆ ತಾನೂ (ನವೋದಯವೂ) ಹಸಿದಿರುವುದನ್ನು ಸೇರಿಸಿ ಒಟ್ಟಿಗೆ ಎರಡು ಪ್ರತಿಮೆಗಳಿಂದ ಸೂಚಿಸಿದ್ದಾರೆ. ಜಿಂಕೆಯನ್ನು ತಿನ್ನುವ ಹಂಬಲದಿಂದ ಹುಲಿ ಬಂದಿದ್ದರೆ, ಜಿಂಕೆಗೂ ಕೂಡ ನೈಸರ್ಗಿಕವಾದ ಹಸಿವು ಕಾಡಿದೆ. ಬದುಕಿನ ಅನುಭವಗಳನ್ನು ಕಿತ್ತು ತಿನ್ನುವ ಈ ಕಾವ್ಯ ಪಂಥಗಳೆರಡೂ ಕವಿಯ ದೃಷ್ಟಿಗೆ ದಂಗು ಬಡಿಸಿವೆ. ಅದಕ್ಕಾಗಿಯೇ ಹಸಿವಿನ ಕೆಂಗಣ್ಣಿನಿಂದ ಬಂದ ಎರಡನ್ನೂ ತಡೆದಿರುವುದು.

"......ನೋಡಿದರು
ತೆರೆವ ಬಾಗಿಲ ಕಡೆಗೆ, ತಡೆದೆ ನಾನು
ಉಭಯ ಕುಶಲೋಪರಿಯ ಕಾಲ ಹರಣದ ಬಳಿಕ
ಬಾವಿಯೊಳಗಿದ್ದದ್ದು ಬಂತು ಮೇಲೆ"

ಬದುಕಿನ ಪರ ವಹಿಸಿರುವ ಕವಿಗೆ ಬದುಕನ್ನು ಮಾರಾಟ ಮಾಡಲು ಸಿದ್ಧವಿಲ್ಲ. ನ್ಯಾಯಸಮ್ಮತವಾಗಿ ಹಂಚಿಕೆಯಾಗಬೇಕಿದೆ. ಆದಕ್ಕಾಗಿಯೇ ತಡೆದು ಉಭಯ ಕುಶಲೋಪರಿಯಾದ ಬಳಿಕ ಅವೆರಡಕ್ಕೊಂದು ನೆಲೆಯನ್ನು ತನ್ನಂತರಂಗದಲ್ಲೇ ಕಲ್ಪಿಸಿಕೊಟ್ಟಿದ್ದಾರೆ.

"ಆ ಮನೆಯ ಕಿಟಕಿಯನು ಇಲ್ಲಿಂದ ಕಾಣಿಸಿದೆ
ಕಿವಿಮುಟ್ಟಿ ಪ್ರವರ ಹೇಳಿದೆ, ಅಡ್ಡಬಿದ್ದೆ
ಶತಾಯುವಾಗೆಂದು......"

ಎಂಥಾ ಸಿಷ್ಟಾವಂತ ಬದುಕಿನ ಪ್ರತಿನಿಧಿಯಾಗಿದ್ದಾರೆ ಇಲ್ಲಿ ಕವಿ. ಯಾರು ಹೇರಿರ ಬಹುದು ಈ ಭಾರವನ್ನು! ಯಾರೂ ಹೇಳದ್ದನ್ನು ಹಾಗೆ ತನ್ನದೆಂದು ಭಾವಿಸು ವುದರಿಂದಲೇ ಕವಿಯಾಗುವುದು. ಆವೇಶದಿಂದ ಆತುರವಾಗಿ ಬಂದವರು ಕೊನೆಗೆ ಶಾಂತವಾಗಿ ಹೋದರು.

"ಹರಸಿ ಹೋದರು ನೋಡು, ಮೂರು ಬೆಂಕಿಗಳಂತೆ
ಮೂರು ಕಾಲಗಳಂತೆ ಒದಗಿದಭಾಗ್ಯತರು"

ಈಗ ಕವಿ ಮನಸ್ಸಿಗೆ ಎಲ್ಲಿಲ್ಲದ ನೆಮ್ಮದಿ. ಸಮವಯಸ್ಸಿನಲ್ಲಿ ಎಂಥಾ ತೃಪ್ತಿ ಸಿಕ್ಕಿದೆ.

"ಐವತ್ತು ಕಳೆದರೂ ಐವತ್ತು ಉಳಿದಿತ್ತು
ನನ್ನ ಸಂದರ್ಭಕ್ಕೆ ಅಷ್ಟು ಸಾಕೆಂದಿದ್ದೆ"

ಎಂದು ಕವಿಯೇ ತನ್ನ ತೃಪ್ತಿಯನ್ನು ಸೂಚಿಸಿರುವುದಲ್ಲದೆ ಅದು ಮುಂದಿನ ಸಾಲು ಗಳಲ್ಲಿ ಮಂತ್ರಾಕ್ಷತೆಗಳಿಂದ ಬದುಕನ್ನು ತೃಪ್ತಿಗೊಳಿಸಿದೆ. "ಈ ಮಂತ್ರಾಕ್ಷತೆಗಳು ಶ್ರಾದ್ಧದಲ್ಲಿ ಹಾಕುವವಲ್ಲ. ಶುಭ ಸಂದರ್ಭದಲ್ಲಿ ಹಾಕುವ ಅಕ್ಕಿಯ ಕಾಳುಗಳಾಗಿ ಮಾರ್ಪಟ್ಟಿವೆ" ಅದಕ್ಕಾಗಿಯೇ—

"ಶಾಂತವಾಯಿತು ಕಡಲು; ಶಾಂತವಾಯಿತು ಗಗನ
ಶಾಂತವಾಯಿತು ನಾನು ನಿಂತ ಭೂಮಿ"
ಏಕೆಂದರೆ
"ತೆರೆದ ಬಾಗಿಲಿನವರು ದಾಟಿ ಹೋದುದ ಕಂಡೆ"

ಇದಕ್ಕೆಲ್ಲಾ ಕಾರಣ ಕೊನೆಯ ಸಾಲಲ್ಲಿ ಅಡಗಿದೆ. ಅದಕ್ಕಾಗಿಯೇ ಕೊನೆಗೆ ಅವರ ಸ್ಮರಣೆಯಲ್ಲಿ ಕವನ ಅಂತ್ಯಗೊಂಡಿದೆ. ಜೊತೆಗೆ ಶುಭ ಕೋರಿದೆ. "ಶಾಂತಿಃ ಶಾಂತಿಃ ಶಾಂತಿಃ" ಎಂದು ಕವಿಯೊಬ್ಬ ಹಾಡಿರುವುದಲ್ಲ, ಆ ಹಿಂದೆ ಸಮಷ್ಟಿ ಪ್ರಜ್ಞೆಯೇ ಹಾಡಿಕೊಂಡಿದೆ.

ಕುತೂಹಲಕರವಾಗಿ, ಪ್ರಶ್ನಾರ್ಥಕವಾಗಿ ಪ್ರಾರಂಭವಾದ ಕವನ ಹಲವು ಮಗ್ಗಲುಗಳನ್ನು ಪಡೆದುಕೊಂಡು ಬೆಳೆದಿದ್ದರೂ ಕೊನೆಗೆ ಬಂದು ತಲುಪಿರುವುದು ಶಾಂತಿಯ ಕಡೆಗೆ. ಇದು ಬದುಕಿನ ಒಂದು ಚಿತ್ರಣವನ್ನು, ಕಾವ್ಯ ಜಗತ್ತಿನ (ಕವಿಯ) ಒಂದು ಹಂತವನ್ನು ಹೇಳುವಂತಿದೆ*

* ಸಹಾಯ : ತೆರೆದ ಬಾಗಿಲು ಸಂಕಲನದ ಮುನ್ನುಡಿ.

ತುಳುವಿನ ಎರಡು ಕಾದಂಬರಿಗಳು–ಒಂದು ಸಮೀಕ್ಷೆ

ಹರಿಕೃಷ್ಣ ಭರಣ್ಯ

ತುಳು ಕಾದಂಬರಿಗಳ ಚರಿತ್ರೆಯಲ್ಲಿ ಮಹತ್ವಪೂರ್ಣವಾದ ಘಟ್ಟವನ್ನು ಹೊಂದಿರುವ ಎರಡು ಕಾದಂಬರಿಗಳ ವಿಸ್ತೃತವಾದ ಅಧ್ಯಯನ ಪ್ರಕೃತ ಲೇಖನದ ಉದ್ದೇಶ. ತುಳುವಿನ ಮೊತ್ತ ಮೊದಲ ಕಾದಂಬರಿಯೆಂಬ ಪಟ್ಟವು ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯರ 'ಸತೀ ಕಮಲೆ' (1936–ಪ್ರ.)ಗೆ ಸಲ್ಲುತ್ತದೆ. ಈ ಕೃತಿಯ ರಚನೆ 1921ರಲ್ಲೇ ಆಗಿದೆ. ಕೆಲವಾರು ತೊಂದರೆಗಳಿಂದಾಗಿ 1936 ರಲ್ಲಷ್ಟೇ ಪ್ರಕಟವಾಯಿತು. ಭಾರತದ ಇತರ ಭಾಷೆಗಳಲ್ಲಿ ಕಾದಂಬರಿಯೆಂಬ ಹೊಸ ಸಾಹಿತ್ಯಪ್ರಕಾರವು ಪ್ರಕಟಗೊಳ್ಳುತ್ತಿದ್ದ ಸಂದರ್ಭದಲ್ಲೇ ತುಳುವಿನಲ್ಲಿ ಈ ಕಾದಂಬರಿಯೂ ಹುಟ್ಟಿಕೊಂಡಿದೆ. ಕಾದಂಬರಿಯ ವಸ್ತು-ವಿನ್ಯಾಸ ಅದರಲ್ಲಿ ಪ್ರತಿಪಾದಿತವಾಗಿರುವ ವಿಚಾರ ಇತ್ಯಾದಿಗಳು ಕನ್ನಡದ ಹಾಗೂ ಇತರ ಭಾಷೆಗಳ ಆರಂಭದ ಕೃತಿಗಳನ್ನೇ ಹೋಲುತ್ತವೆ. ಕನ್ನಡದ ಆರಂಭದ ಸ್ವತಂತ್ರ ಸಾಮಾಜಿಕ ಕಾದಂಬರಿಯೆಂದು ಜನಜನಿತವಾಗಿರುವ ಗುಲವಾಡಿ ವೆಂಕಟರಾಯರ 'ಇಂದಿರಾ ಬಾಯಿ' (1899), ಹಾಗೂ ಕೆರೂರು ವಾಸುದೇವಾಚಾರ್ಯರ 'ಇಂದಿರೆ' (1908) ಕೃತಿಗಳ ಪ್ರಭಾವಗಳನ್ನು ಈ ಕಾದಂಬರಿಯಲ್ಲಿ ಗುರುತಿಸಬಹುದು. ಇದು ತುಳುವಿನ ಉಪಭಾಷೆಯೊಂದರಲ್ಲಿ (ಶಿವಳ್ಳಿ ಬ್ರಾಹ್ಮಣರ ಆಡುಮಾತು) ರಚನೆಯಾಗಿದ್ದು ಅಧ್ಯಯನ ಯೋಗ್ಯವಾದ ಕೃತಿಯಾಗಿದೆ.

ಈ ಲೇಖನದ ಎರಡನೆಯ ಭಾಗವು, ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಹಲವಾರು ಕಾರಣಗಳಿಂದ ಮೇರುಕೃತಿಯೆನಿಸಿದ ಡಾ. ಶಿವರಾಮಕಾರಂತರ ಚೋಮನ ದುಡಿಯ ತುಳು ಅನುವಾದದ ಕುರಿತಾಗಿದೆ. 'ಚೋಮನ ದುಡಿ'ಯನ್ನು ಕನ್ನಡದಲ್ಲಿ ಓದಿ ಅನುಭವಿಸುವುದಕ್ಕೂ ಕೆದಂಬಾಡಿ ಜತ್ತಪ್ಪರೈಗಳು ತುಳುವಿಗೆ ಅನು ವಾದಿಸಿದ ಈ ಕೃತಿಯನ್ನು ಆಸ್ವಾದಿಸುವುದಕ್ಕೂ ಅನೇಕ ರೀತಿಯ ವ್ಯತ್ಯಾಸಗಳಿವೆ. ಚೋಮ ಮೂಲತಃ ತುಳುವ. ಕೆದಂಬಾಡಿಯವರು ತುಳು ಮಾತೃ ಭಾಷೆ ಯಾಗಿರುವ, ಆ ಭಾಷೆಯ ಹಿಡಿತ, ಸೊಗಸುಗಾರಿಕೆ, ತುಳು ಸಹಜವಾದ ಶೈಲಿ ಗಳನ್ನು ಮೈಗೂಡಿಸಿಕೊಂಡ, ಚೋಮನನ್ನು ಅತ್ಯಂತ ಹತ್ತಿರದಿಂದ ಕಂಡ ಬರಹ ಗಾರರು; ರಸಿಕರು. ಈ ಹಿನ್ನೆಲೆಯಿಂದ 'ತುಳು 'ಚೋಮನ ದುಡಿ'ಗೆವಿಶೇಷವಾದ ಸ್ಥಾನವಿದೆ, ವೈಶಿಷ್ಟ್ಯವಿದೆ. ಈ ಕೃತಿಯ ವಿಸ್ತೃತವಾದ ಅಧ್ಯಯನವನ್ನು

ಇಲ್ಲಿ ಮಾಡುವ ಪ್ರಯತ್ನ ಮಾಡಲಾಗಿದೆ. ಒಟ್ಟಿನಲ್ಲಿ ಮೇಲೆ ಹೇಳಿದ ಎರಡೂ ಕೃತಿಗಳಿಗೆ ತುಳು ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟವಾದ ಹಾಗೂ ವಿಶೇಷವಾದ ಸ್ಥಾನವಿದೆಯೆನ್ನುವುದು ಸ್ಪಷ್ಟ. ಪ್ರಕೃತ ಲಭ್ಯವಿರುವ ತುಳು ಕೃತಿಗಳಲ್ಲಿ 17ನೇ ಶತಮಾನದಲ್ಲಿ ರಚನೆಯಾದ ವಿಷ್ಣುತುಂಗ ಕವಿಯ 'ಶ್ರೀ ಭಾಗವತೊ' ಕಾವ್ಯಕೃತಿ ಯನ್ನು ಬಿಟ್ಟರೆ ತುಳು ಭಾಷೆಯಲ್ಲಿ ಸಾಹಿತ್ಯ ರಚನೆಗಳು ಕಾಣಸಿಗುವುದು 1916 ರಿಂದ ಈಚೆಗಷ್ಟೇ. ಎಂ. ಆರ್. ಸುಬ್ರಹ್ಮಣ್ಯ ಶಾಸ್ತ್ರಿಗಳು ರಚಿಸಿದ ಕಾವ್ಯ- 'ಕನ್ಯೋಪದೇಶ'ವೇ ತುಳುವಿನಲ್ಲಿ ಮೊದಲ ಪ್ರಕಟಿತ ಕಾವ್ಯಕೃತಿ. ಇದಕ್ಕೆ ಮೊದಲು ಯುರೋಪಿಯನ್ನರು ಸಂಪಾದಿಸಿ ಪ್ರಕಟಿಸಿದ ಕೆಲವೊಂದು ಕೃತಿಗಳಿವೆ. ಇವುಗಳಲ್ಲಿ ಬೈಬಲ್ ಅನುವಾದಗಳು, ಅರ್ಥಕೋಶಗಳು, ಗಾದೆಗಳ ಸಂಗ್ರಹ, ಜಾನಪದ ಪಾಡ್ದನಗಳ ಸಂಗ್ರಹ (1886) ಮೊದಲಾದವುಗಳೂ ಸೇರುತ್ತವೆ.

ಪ್ರಕೃತ ತುಳುವಿಗೆ ಲಿಪಿಯಿಲ್ಲದಿರುವುದರಿಂದ ಕನ್ನಡದ ಲಿಪಿಯನ್ನೆ ಬಳಸಿ ಕೊಂಡು ಆ ಭಾಷೆಯಲ್ಲಿ ಅನೇಕ ಕೃತಿಗಳ ರಚನೆಯಾಗುತ್ತಿವೆ. ಇತ್ತೀಚೆಗೆ ತುಳುವಿನಲ್ಲಿ ನಾಟಕ ಹಾಗೂ ಕವಿತೆಗಳು ಸಂಖ್ಯೆಯಲ್ಲಿ ಹೆಚ್ಚಿರುವುದು ಕಂಡುಬರುತ್ತದೆ. ಅಸಂಖ್ಯವಾದ ಜಾನಪದ ಪಾಡ್ದನಗಳು ತುಳುವಿನಲ್ಲಿವೆ. ಇವುಗಳಲ್ಲಿ ಕೆಲವು ಪಾಡ್ದನಗಳು ಮಹಾಕಾವ್ಯಗಳ ಗುಣಸಂಪತ್ತನ್ನು ಹೊಂದಿರುವುದನ್ನು ನೋಡ ಬಹುದು. ಉದಾಹರಣೆಗೆ ಸಿರಿಪಾಡ್ದನ, ಕೋಟಿಚೆನ್ನಯ, ನಾಗಸಿರಿ, ದೇವ ಪೂಂಜ, ತುಳುನಾಡಸಿರಿ, ಕಾಂತಾಬಾರೆ ಬೂದಬಾರೆ, ಇತ್ಯಾದಿ. ತುಳುಬಾಷೆಗೆ ಇತರ ದ್ರಾವಿಡಭಾಷೆಗಳಂತೆ ಅದರದ್ದೇ ಆದ ಭಾಷಾ ಸೌಂದರ್ಯ, ಶಬ್ದಸಂಪತ್ತು ಶೈಲಿ, ಜನಪದ ಸೊಗಡು-ಎಲ್ಲವೂ ಮೇಳೈಸಿ ಇದು ಸಾಹಿತ್ಯ ನಿರ್ಮಾಣದಲ್ಲಿ ಪರಿಪೂರ್ಣ ಹಾಗೂ ಸಮರ್ಥವಾಗಿದೆ ಎಂಬುದು ಈ ಎಲ್ಲ ಕೃತಿಗಳಲ್ಲಿ ಕಂಡುಬರು ತ್ತದೆ.

೧. ಸತೀ ಕಮಲೆ

ತುಳುನಾಡಿನಲ್ಲಿ ಜನಜನಿತವಿರುವ ಪಾಡ್ದನ ಕಥನ ಕಾವ್ಯವಾದ 'ಕೋಟಿ ಚೆನ್ನಯ'ವನ್ನಾಧರಿಸಿಕೊಂಡು ಕನ್ನಡದಲ್ಲಿ ಕಾದಂಬರಿಯ ರೂಪದಲ್ಲಿ ಪಂಜೆ ಮಂಗೇಶರಾಯರು (1919) ರಚಿಸಿದ್ದಾರೆ. ಇದು ಪ್ರಕಟವಾದ ವರ್ಷ(1921)ವೇ ತುಳುವಿನ ಮೊತ್ತ ಮೊದಲ ಕಾದಂಬರಿ 'ಸತೀ ಕಮಲೆ'ಯು ರಚನೆಯಾಗಿದೆ. ಭಾರತದ ಇತರೆ ಭಾಷೆಗಳಲ್ಲಿ ರಚನೆಯಾಗಿರುವ ಆರಂಭ ಕೃತಿಗಳೊಂದಿಗೆ ಹೋಲಿಸಿ ದರೆ ತುಳುವಿನ ಮೊತ್ತ ಮೊದಲ ಕಾದಂಬರಿಯು ತನ್ನದೇ ಆದ ವಿಶಿಷ್ಟತೆಯನ್ನು ಪಡೆದಿದೆ. ಬಂಗಾಳಿ ಮರಾಠಿಗಳಿಂದ ದೇಶಪ್ರೇಮ, ಭಾಷಾ ಪ್ರೇಮಗಳನ್ನು ಸಾರುವಂಥ ಅನೇಕ ಕಾದಂಬರಿಗಳು ಕನ್ನಡಕ್ಕೆ ಅನುವಾದವಾಗಿ ಬರುತ್ತಿದ್ದ ಆ ಕಾಲದಲ್ಲಿ

(ಸು. 1900-1920) ತುಳುವಿನಲ್ಲೂ ಅಂಥಾದ್ದೇ ಒಂದು ಕಾದಂಬರಿಯ ರಚನೆಯಾಗಿದೆ. ಪಣಿಯಾಡಿಯವರ 'ಸತೀಕಮಲೆ'ಯು ಅಂದಿನ ಕಾಲಘಟ್ಟಕ್ಕೆ ಒಯ್ಯುವಲ್ಲಿ ಹೆಚ್ಚಿನ ಪರಿಕರಗಳನ್ನು ನೀಡುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ.

ಭಾರತವಿನ್ನೂ ಸ್ವಾತಂತ್ರ್ಯವನ್ನು ಪಡೆಯದಿದ್ದ ಆ ಕಾಲದಲ್ಲಿ ದೇಶೀಯ ಹಿನ್ನೆಲೆಯಲ್ಲಿ ಯುವಕ ಯುವತಿಯರು ವಹಿಸಿದ ಪಾತ್ರ, ದೇಶಪ್ರೇಮದ ಅವಶ್ಯಕತೆ, ಪ್ರಾದೇಶಿಕವಾಗಿ ಜನರ ಸಂಘಟನೆ, ತಾಯ್ನಾಡು-ನುಡಿಗಳ ಬಗೆಗಿನ ಪ್ರೇಮ, ಅಭಿಮಾನ, ವಿದ್ಯಾಭ್ಯಾಸದ ಚಳುವಳಿ, ಸುಧಾರಣೆಗಳು, ಶಾಂತಿ ಮುಂತಾದುವುಗಳನ್ನು ಚಿತ್ರಿಸಿದ ಈ ಕಾದಂಬರಿಯು ತುಳುನಾಡು ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಹಿಸಿದ ಪಾತ್ರದತ್ತ ಬೆಳಕನ್ನು ಚೆಲ್ಲುತ್ತದೆ.

ಬಾಲ್ಯವಿವಾಹ ಪದ್ಧತಿಯಿಂದಾಗಿ ದುರಂತಕ್ಕೀಡಾಗಬೇಕಾಗುವ ಪರಿಸ್ಥಿತಿಯ ಚಿತ್ರಣವನ್ನು ಕೊಡುತ್ತಾ ಲೇಖಕರು ಅದರ ಸುತ್ತಮುತ್ತ ಕತೆಯನ್ನು ಹೆಣೆಯುತ್ತಾರೆ. ಕಮಲೆಯೆಂಬ ಹುಡುಗಿಯನ್ನು ಸೋದರಸಂಬಂಧದಲ್ಲಿ ಚಿಕ್ಕಂದಿನಲ್ಲೇ ಉಮೇಶನಿಗೆ ಮದುವೆ ಮಾಡಿರುತ್ತಾರೆ. ಉಮೇಶ ತರುಣ. ದೇಶಪ್ರೇಮದ ಪ್ರತಿರೂಪವೆಂಬಂತೆ ಕ್ರಾಂತಿಗೆ ಮುನ್ನುಗ್ಗುತ್ತಾನೆ. ಆಗ ಕಮಲೆಯಿಂದ ದೂರವಿರಬೇಕಾದ ಸಂದರ್ಭ ಬರುತ್ತದೆ. ಕತೆಯು ವೈದವ್ಯದ ಜೀವನದಿಂದ ಆರಂಭವಾಗಿದೆ. ಮದರಾಸಿನ ಕ್ವೀನ್ ಮೇರಿ ಕಾಲೇಜಿನಲ್ಲಿ ಓದುತ್ತಿರುವ ಕಮಲೆಯನ್ನು ಅವಳದೇ ಊರಿನವನಾದ ನಾರಾಯಣನೆಂಬುವನು ಪ್ರೇಮಿಸುತ್ತಾನೆ-ಎಂಬಲ್ಲಿಂದ ಕತೆಯು ಹೆಜ್ಜೆ ಹಾಕುತ್ತದೆ.

'ಮದರಾಸಿನ ಮೆರಿನಾ ಬೀಚಿಗೆ ಎಷ್ಟೋ ಮಂದಿ ಬಂದು ಹೋಗುತ್ತಾರೆ. ಒಬ್ಬೊಬ್ಬರು ಒಂದೊಂದು ಮನಸ್ಸಿನಿಂದ ಬರುತ್ತಾರೆ. ಈ ಗುಂಪಿನಲ್ಲಿ ನಾರಾಯಣನೂ ಒಬ್ಬನಾಗಿದ್ದಾನೆ'-ಎಂಬಂತೆ ಲೇಖಕರು ಈ ಪಾತ್ರವನ್ನು ಪರಿಚಯಿಸುತ್ತಾರೆ. ಪಣಿಯಾಡಿಯವರ ಶಿವಳ್ಳಿ ತುಳುವಿನಲ್ಲಿ ಬೀಚಿನ ವರ್ಣನೆಯು ಅರ್ಥವತ್ತಾಗಿ ಮೂಡಿ ಬಂದಿದೆ :

'ಮದ್ರಾಸ್ ಪಟ್ಟಣಂಟು ಬಯ್ಯಗ ಮಾಂತೆರ್ಲಾ ಸಮುದ್ರಂತ ಬದಿಕ್ ಎಡ್ಡೆ ಗಾಳಿನಿ ಗೆತೊಣ್ಣರೆಗ್ ಪೋಪುನೊ ಉಂಡು. ಕೈತೊಳಿತ್ತಾಕುಲು ಪೆಚ್ಚಾತ್ ನಡತೊಂದುತೆ ಬರ್ಪೆರ್. ಜಾಯಿಗ್ನ್ಯಗ 'ಏಕ ಕ್ರಿಯಾ ದ್ವ್ಯರ್ಥಕರೀ ಬಭೂವ' —ಂತ್ ಪಣ್ಪಿಣಕ್ಕ ನಡೆತ್ತೈತವರ ದೇಹಂಕು ಒಂಜಿ ತರಸಂತ ವ್ಯಾಯಾಮಲಾ ಆನ್; ಎಡ್ಡೆ ಗಾಳಿನಿ ಗೆತೊಣ್ಣಕ್ಕಲಾ ಆನ್...' (ಸ.ಕ.ಪು 1) ಇತ್ಯಾದಿ.

ಬೀಚಿನ ದಂಡೆಯಲ್ಲಿ ಕುಳಿತರೆ ಕಮಲೆಯ ಕಾಲೇಜು ಕಾಣಿಸುತ್ತದೆ. ನಾರಾಯಣ ತಾನು ಮಿತ್ರರೊಂದಿಗೆ ಬಂದರೂ ಮಿತ್ರರಿಂದ ದೂರವೇ ಕುಳಿತಿರುತ್ತಾನೆ. ಅವರೆಷ್ಟು ಗೇಲಿ ಮಾಡಿದರೂ ಆತ ಕೇಳದೆ ಹೇಗೋ ಕಮಲೆಯ ದೃಷ್ಟಿಗೆ

ಬೀಳುತ್ತಾನೆ. ಕಮಲೆ, ಅಗಲಿದ ತನ್ನ ಗಂಡನ ಕುರಿತು ಅತ್ಯಂತ ನಿಷ್ಠೆಯಿಂದ ಇರುತ್ತಾಳಾದರೂ ಆಕೆಯ ಮನಸ್ಸಿನಲ್ಲಿ ತಳಮಳವೇರ್ಪಡುತ್ತದೆ. ನಾರಾಯಣನಿಗೆ ಕಮಲೆಯು ವಿಧವೆಯೆಂಬುದು ಗೊತ್ತಿರುವುದರಿಂದ ತನ್ನ 'ಬ್ರಾಹ್ಮಣ ಪ್ರಜ್ಞೆ' ಆತನನ್ನು ಆಗಾಗ ಕಾಡುತ್ತಿರುತ್ತದೆ. ಇದನ್ನು ಸಾಂಕೇತಿಕವಾಗಿ ಆತನಿಗೆ ಬೀಳುವ ಕನಸಿನ ಮೂಲಕ ಲೇಖಕರು ತೋರಿಸುತ್ತಾರೆ (ಪು.9). ಸಂಪ್ರದಾಯವಾದಿಯಾದ ನಾರಾಯಣ ಇವರ ಪರಿಹಾರಕ್ಕಾಗಿ ಜ್ಯೋತಿಷಿಯನ್ನು ಭೇಟಿಯಾಗುತ್ತಾನೆ. ಚಾಣಾಕ್ಷನಾದ ಜೋತಿಷಿ ನಾರಾಯಣನ ಮಾತುಗಳಿಂದಲೇ ಆತನ ಜಾತಕವನ್ನು ಓದುತ್ತಾನೆ. ನಾರಾಯಣನು ಅಪಾತ್ರಳಾದ ಕನ್ಯೆಯೊಬ್ಬಳಲ್ಲಿ ಅನುರಕ್ತನಾಗಿರುವ ವಿಚಾರ ಜೋತಿಷಿಗೂ ತಿಳಿಯುತ್ತದೆ. ಇಲ್ಲಿ ನಾರಾಯಣನ ಚಿತ್ತಚಾಂಚಲ್ಯವು ಸಮರ್ಥವಾಗಿ ಚಿತ್ರಿತವಾಗಿದೆ. (11) ಇದೇ ಸಂದರ್ಭವಲ್ಲಿ ಕಮಲೆ ಹಾಗೂ ಆಕೆಯ ಗೆಳತಿಯರು ವಿಧವಾ ಪುನರ್ವಿವಾಹದ ಕುರಿತಾಗಿ ಗಾಢವಾದ ಚರ್ಚೆಯನ್ನು ನಡೆಸುತ್ತಿರುತ್ತಾರೆ. "...ತಲೆ ಬೋಳಿಸಿ ಎಲ್ಲಾದರೂ ಮಠದಲ್ಲಿ ಕೆಲಸಗೈಯುತ್ತ ಇರಬಹುದಿತ್ತಲ್ಲವೆ?...ಕಲಿಯುವುದಕ್ಕೆ ಯಾಕಾದರೂ ಬಂದೆ? ಯಾರೋ ಒಬ್ಬ 'ತೋಟದೂಮ' ತನ್ನ ಸ್ವಾರ್ಥಕ್ಕಾಗಿ ಪುನರ್ವಿವಾಹ ಕೂಡದು ಎಂಬುದಾಗಿ ಬರೆದಿದ್ದರೆ ಅದನ್ನು ನಂಬಬೇಕೆಂಬುದೇ ನಮ್ಮ ಹಣೆಬರಹವೇ? ..." ಎಂಬುದಾಗಿ ಕಮಲೆಯ ಗೆಳತಿ ನೇತ್ರಾವತಿಯ ಮಾತಿನಲ್ಲಿ ಸ್ತ್ರೀ ಸುಧಾರಣೆಯ ಮಾತುಗಳು ಚಿಮ್ಮುತ್ತವೆ.

ದೇಶದ ಬಗೆಗೆ ಹೇಗೆಯೋ ಹಾಗೆಯೇ ಭಾಷೆಯ ಬಗೆಗೂ ಲೇಖಕರು ಉಗ್ರವಾದ ಅಭಿಮಾನವನ್ನು ಅಲ್ಲಲ್ಲಿ ತೋರಿಸುತ್ತಾರೆ. ನಾರಾಯಣ, ತನ್ನ ತಾಯ್ನುಡಿಯಾದ ತುಳು ಭಾಷೆಯ ಬಗೆಗೆ ತಾತ್ಸಾರವನ್ನು ತಾಳಿರುವಂಥ ವ್ಯಕ್ತಿಯಾಗಿ ಚಿತ್ರಿಸುತ್ತಾರೆ. ನಾರಾಯಣನ ಮಿತ್ರ ಕೃಷ್ಣಶೆಟ್ಟಿಯೆಂಬವನ ಮಾತುಗಳಲ್ಲಿ ಲೇಖಕರ ಧೋರಣೆಯು ವ್ಯಕ್ತವಾಗುತ್ತದೆ. 'ತುಳು ಜನರ ಏಳಿಗೆಯಾಗಬೇಕಿದ್ದರೆ ತುಳುವಿನಲ್ಲೇ ಕಲಿಸಬೇಕು. ತುಳುವಿನಲ್ಲಿ ಕಲಿಸುವುದಕ್ಕಾಗದಿದ್ದರೆ ತಮಗೆ ಕನ್ನಡವಾದರೇನು ಇಂಗ್ಲಿಷಾದರೇನು'? ಎಂಬ ಸಾರ್ವಕಾಲಿಕ ಸತ್ಯವನ್ನು ಲೇಖಕರು ಇಲ್ಲಿ ಪ್ರತಿಪಾದಿಸುತ್ತಾರೆ.

ತುಳುವಿಗೆ ಲಿಪಿಯಿಲ್ಲ, ಅದಕ್ಕೆ ಅದರದ್ದೇ ಆದ ವ್ಯಾಕರಣ ಗ್ರಂಥಗಳಿಲ್ಲ. ತುಳುವೆಂಬುದು ಕಾಡು ಜನರ ಭಾಷೆ - ಇತ್ಯಾದಿ ಆರೋಪಗಳು ಆಗಲೂ ಕೇಳಿ ಬರುತ್ತಿದ್ದುವು. ಈ ಕೃತಿಯಲ್ಲಿ ಇದು ನಾರಾಯಣನ ಮಾತುಗಳಲ್ಲಿ ಬಂದಿವೆ. ಇದಕ್ಕೆ ಕೃಷ್ಣಶೆಟ್ಟಿಯ ಮಾತುಗಳಲ್ಲಿ ಲೇಖಕರು ಕೊಡುವ ಉತ್ತರವೂ ಇಲ್ಲೇ ಇದೆ. "ಎಲ್ಲಾ ಭಾಷೆಗಳಿಗೂ ಪುಸ್ತಕ ವ್ಯಾಕರಣವಿತ್ತೆ? ಮನುಷ್ಯರಲ್ಲವೇ ಪುಸ್ತಕ ಬರೆಯುವವರು? ಬರೆದರೆ ಪುಸ್ತಕವಾಗುತ್ತದೆ. ಕಾಡುಜನರ ಮಾತೆಂದು ಹೇಳಿದರೆ ನಾಳೆ ನೀವು ನಿಮ್ಮ ನಿಮ್ಮ ತಂದೆತಾಯಿಗಳಿಗೆ ಹುಟ್ಟಿದವರೇ ಅಲ್ಲವೆಂದೂ ಹೇಳಬಹುದು. ಯಾಕೆಂದರೆ ತಂದೆ ತಾಯಿಗಳಿಗೆ ಇಂಗ್ಲಿಷ್ ಗೊತ್ತಿಲ್ಲವಲ್ಲ ?..."

ಇಲ್ಲೆಲ್ಲ ಲೇಖಕರಿಗಿರುವ ಭಾಷಾಪ್ರೇಮ, ಶಿಕ್ಷಣದಲ್ಲಿ ಮಾತೃಭಾಷೆಯ ಸ್ಥಾನ-ಮುಂತಾದುವುಗಳು ವ್ಯಕ್ತವಾಗುವುದರೊಂದಿಗೆ, ಅನ್ಯಭಾಷೆಯ ಮೇಲೆ ವೃಥಾ ಮೋಹ ಸಲ್ಲದು ಎಂಬ ತಮ್ಮ ನಿಲುವನ್ನೂ ಸೂಚಿಸಿದ್ದಾರೆ. ಈ ವಿಚಾರವನ್ನು ಶಿಕ್ಷಣ ಪದ್ಧತಿಯಲ್ಲಿ ಅನೇಕ ಕಡೆ ಇಂದಿಗೂ ಜಾರಿಗೆ ತರುವುದಕ್ಕೆ ಶ್ರಮಿಸುತ್ತಿರುವುದು ನಮಗೆಲ್ಲಾ ತಿಳಿದಿದೆ.

ಆರ್ಯಜನಾಂಗದ ಬಗೆಗಿನ ಅಭಿಮಾನ, ಶಕ್ತಿ, ವೈಚಿತ್ರ್ಯಗಳ ವರ್ಣನೆಮಾಡುತ್ತ ಬುದ್ಧನ ಉದಾಹರಣೆಯನ್ನು ಕೊಟ್ಟು "ಎಲ್ಲರೂ ಉಳಿದವರಿಗೆ ಬುದ್ಧಿವಾದ ಹೇಳುವುದರಲ್ಲಿ ಗಟ್ಟಿಗರು ಹೊರತು ತಮ್ಮ ಸಮಯಕ್ಕಾಗುವಾಗ ಎಲ್ಲವೂ ಬೇಕು" ಎಂಬ ಕಿವಿಮಾತನ್ನು ಹೇಳುತ್ತಾರೆ. "ಎಷ್ಟೆಷ್ಟೋ ಮಂದಿ ಯೌವನದಲ್ಲಿ ನಾಸ್ತಿಕರಾಗಿದ್ದುಕೊಂಡು ಬೇಕಾದಷ್ಟು ಅನ್ಯಾಯಮಾಡಿ ಋಷಿಬಂದಂತೆ ಇರುತ್ತಾರೆ, ಆದರೆ ತಲೆ ಸ್ವಲ್ಪ ಹಣ್ಣಾಯಿತೆಂದರೆ ಆರ್ಯಮನಸ್ಸಿಗೆ ಹೆದರಿಕೆಯುಂಟಾಗುತ್ತೆ, ದೇವಸ್ಥಾನಗಳಿಗೆ ಹೋಗುವುದೇನು, ವೇದಾಂತ ಶ್ರವಣವೇನು, ಪುರಾಣ ಶ್ರವಣವೇನು! ಮಡಿಯೇನು!" ಎಂಬ ವ್ಯಂಗ್ಯಮಾತುಗಳಲ್ಲಿ ಹರಿತವಿದೆ.

ನಾರಾಯಣ ತನ್ನನ್ನು ಹಿಂಬಾಲಿಸುತ್ತಿದ್ದಾನೆಂಬುದನ್ನು ತಿಳಿದ ಕಮಲೆಗೆ ಮನಸ್ಸಿನಲ್ಲಿ ಇಬ್ಬಂದಿತನವೇರ್ಪಡುತ್ತದೆ. ಇಲ್ಲಿಯೂ ಲೇಖಕರು ಕನಸಿನ ಸಾಂಕೇತಿಕತೆಯನ್ನು ತರುತ್ತಾರೆ. ಕಮಲೆ ಸ್ವ-ವಿಶ್ಲೇಷಣೆಯಿಂದ ಕೊರಗುತ್ತಾಳೆ. ತನ್ನ ಪಾತಿವ್ರತ್ಯ, ಗಂಡನನ್ನು ವಂಚಿಸುತ್ತಿದ್ದೇನೆನ್ನುವ ಅಪರಾಧ ಪ್ರಜ್ಞೆಗಳ ತುಮುಲ ಏರ್ಪಡುತ್ತದೆ, ಇನ್ನು ಹೇಗಾದರೂ 15 ದಿನಗಳಲ್ಲಿ ಪರೀಕ್ಷೆಗಳೆಲ್ಲಾ ಮುಗಿದು ಊರಿಗೆ ತೆರಳಿ ನಾರಾಯಣನನ್ನು ಮರೆಯುವುದೇ ಲೇಸೆಂದು ತೀರ್ಮಾನಕ್ಕೆ ಬರುತ್ತಾಳೆ. ಆಕೆಯ ಮನಸ್ಸಿನ ದೋಲಾಯಮಾನ ಸ್ಥಿತಿಯ ಚಿತ್ರಣವನ್ನು ಪುಟ 17/18 ರಲ್ಲಿ ನೋಡಬಹುದು. ಈ ಮಧ್ಯೆ ಕಾದಂಬರಿಕಾರರ ಧೋರಣೆ: "ಇಡೀ ಹಿಂದುಸ್ಥಾನದಲ್ಲಿ ವಿಲಾಯತಿ ಬಟ್ಟೆಗೆ ಬಹಿಷ್ಕಾರ ಹಾಕಿ ದೇಶೀಯವಾದುದನ್ನೇ ಬಳಸಬೇಕೆನ್ನುವಾಗ ನಿನಗೆ ಮೆಂಚೆಸ್ಟರಿನ ಬಟ್ಟೆಯೇ ಆಗಬೇಕಲ್ಲವೆ? ದೇಶ ಭಾಷೆಯಲ್ಲೇ ಮಾತನಾಡಬೇಕೆನ್ನುವಾಗ ಅದರಲ್ಲೂ ತುಳುಭಾಷೆಯ ಚಳವಳಿ ನಡೆಯುತ್ತಿರುವಾಗ ತುಳುವನ್ನೂ ಕನ್ನಡವನ್ನೂ ಬಿಟ್ಟು ಇಂಗ್ಲಿಷ್‌ನಲ್ಲೇ ಮಾತನಾಡುತ್ತೀಯಲ್ಲವೇ? ನೀನು ಹೀಗಾಗುತ್ತಿ ಎಂದು ಕನಸಿನಲ್ಲೂ ಎಣಿಸಿದ್ದಿರಲಿಲ್ಲ..." ಈ ಮಾತುಗಳಲ್ಲಿ ಸ್ಪಷ್ಟವಾಗಿದೆ.

ಅನಾಥೆ ಹುಡುಗಿ ಕಮಲೆ, ಸುಂದರರಾಯರ ಸೊಸೆ ತನ್ನ ಮಗ ಉಮೇಶ ಕಲ್ಕತ್ತದಲ್ಲಿ ವಿದ್ಯಾಭ್ಯಾಸ ನಡೆಸುತ್ತಿರುವವ. ಕಮಲೆ–ಉಮೇಶರು ಬಾಲ್ಯದಿಂದಲೇ ಪರಸ್ಪರ ಪ್ರೇಮಿಗಳು. ಅವರಿಬ್ಬರೊಳಗೆ ವಿವಾಹ ನಡೆದು ಉಮೇಶ ಮತ್ತೆ

ಕಲ್ಕತ್ತೆಗೆ ಹೋಗುತ್ತಾನೆ. ಬಂಗಾಳ ವಿಭಜನೆಯ ಚಳುವಳಿಯಲ್ಲಿ ಆತನೂ ಧುಮುಕುತ್ತಾನೆ. ಚಳುವಳಿಯಲ್ಲಿ ಭಾಗವಹಿಸಿದ ಉಮೇಶ ಸತ್ತನೆಂಬ ವರ್ತಮಾನ ಪತ್ರಮುಖಾಂತರ ಬರುತ್ತದೆ. ಈ ಪತ್ರದಲ್ಲಿ ಸೂಚಿಸಿದಂತೆ ಸತ್ತವನು ಉಮೇಶನೇ ಎಂಬ ಸಂದೇಹ ಬರುವಂತೆ ಹಾಕಿದ್ದ ದಿನಾಂಕದಲ್ಲಿ ಸೂಚಿತವಾಗಿರುವುದೇ ಈ ಕಾದಂಬರಿಯ ರಹಸ್ಯ ಬಿಂದುವಾಗಿದೆ. ಮುಂದೆ ನಿಗೂಢತೆ (suspense)ಯನ್ನು ಕಾದಿರಿಸಿಕೊಳ್ಳುವಂತೆ ಲೇಖಕರು ಎಚ್ಚರವಹಿಸಿದ್ದನ್ನು ಗಮನಿಸಬೇಕು.

ಕಮಲೆ ಬಿ ಎ. ಓದುವುದಕ್ಕೆ ಕಾಲೇಜು ಸೇರುತ್ತಾಳೆ. ಉಮೇಶ ತನ್ನ ದೇಶ ಪ್ರೇಮದ ಕುರಿತು ಬರೆದ ಪತ್ರಗಳು ಆಕೆಯ ಬಳಿಯಲ್ಲೇ ಇರುತ್ತವೆ. ಅದರಲ್ಲಿ, ಅಂದಿನ ಯುವ ಜನಾಂಗದಲ್ಲಿದ್ದಿರಬಹುದಾದ ದೇಶಪ್ರೇಮ, ತಂದೆತಾಯಿ, ಬಂಧು ಬಳಗ, ಹೆಂಡತಿ, ಮಕ್ಕಳು-ಎಲ್ಲವುಗಳಿಗಿಂತಲೂ ಹಿಂದುಸ್ಥಾನದ ಬಿಡುಗಡೆಗಾಗಿಯೇ ಅವಿರತ ಹೋರಾಡಬೇಕೆಂಬ ನಿಶ್ಚಲವಾದ ಘೋಷಣೆ ಕಾಣಿಸುತ್ತದೆ. ದೇಶಪ್ರೇಮದ ಹೆಸರಿನಲ್ಲಿ ಭ್ರಷ್ಟಾಚಾರ ಸಲ್ಲದೆಂಬ ಸೂಚನೆಯನ್ನೂ ಇಲ್ಲೇ ವಿಶ್ಲೇಷಿಸಿದ್ದಾರೆ. ಇದರಲ್ಲಿ ವಿಧವಾ ವಿವಾಹಕ್ಕೆ ಸಮ್ಮತಿಯಿದೆ (ಪು. 28) 'ಮದುವೆಯಾಗದೆಯೇ ಗಂಡನ ಹೆಸರಿನಲ್ಲಿ ನಡೆಸುವ ಭ್ರಷ್ಟಾಚಾರವೂ ಸಲ್ಲದು'–ಇತ್ಯಾದಿ ಸೂಚನೆಗಳೊಂದಿಗೆ ಲೇಖಕರು ಶಾಸ್ತ್ರ ಮತ್ತು ಆಚರಣೆಗಳ ಬಗೆಗೆ ವ್ಯಾಖ್ಯಾನವನ್ನೇ ಕೊಡುತ್ತಾರೆ. ಭಾರತದಲ್ಲಿ ಬ್ರಿಟಿಷರಾಳ್ವಿಕೆಯ ಅನಂತರ ಆದ ಬದಲಾವಣೆ, ಇದರಿಂದಾಗಿ ನಮ್ಮ ಸಂಸ್ಕೃತಿಯ ಬಗೆಗೆ ಅಭಿಮಾನ. ಪ್ರೇಮಗಳು ಜಾಗ್ರತವಾಗಬೇಕಾದುದರ ಅವಶ್ಯಕತೆ, ಯುವಕರು ಅಂಧಾನುಕರಣೆಯಿಂದಾಗಿ ನಮ್ಮ ಸಂಸ್ಕೃತಿಯನ್ನು ಮರೆತು ಎಡಬಿಡಂಗಿಗಳಾಗಿ ಹಾಳಾಗಿ ಹೋಗುವುದರ ಬಗೆಗೆ ಲೇಖಕರಿಗಿರುವ ಕೊರಗು–ವಿವಾದಗಳು ಅತ್ಯಂತ ಹೃದ್ಯವಾಗಿ ಮೂಡಿಬಂದಿವೆ.

''ನಮ್ಮ ದೇಶದ ಸ್ಥಿತಿಯೂ ಹಾಳಾಗಿದೆ. ನಮ್ಮ ವಿದ್ಯೆಯನ್ನು ಕಲಿಯುವವರೂ ಕಡಿಮೆಯಾಗಿದ್ದಾರೆ, ಪ್ರೋತ್ಸಾಹವೂ ಇಲ್ಲದಾಗಿದೆ, ಪಾಶ್ಚಿಮಾತ್ಯ ವಿದ್ಯಾಭ್ಯಾಸಕ್ಕೂ ನಾಗರಿಕತೆಗೂ ಜನರು ಮರುಳಾಗಿ ಹೋಗಿದ್ದಾರೆ. ಇನ್ನು ನಮ್ಮಲ್ಲಿ ಏನೇನೂ ಉಳಿದಿಲ್ಲ. ಎಲ್ಲವೂ ಹೋಯಿತು. ದೇವರು ಬರೇ ಕಲ್ಲು ಎಂಬಂತಾಯಿತು, ಶಾಸ್ತ್ರಗಳೆಂದರೆ ಬ್ರಾಹ್ಮಣರು ಹೊಟ್ಟೆಹೊರೆಸುವುದಕ್ಕಾಗಿ ಬರೆದುದೆಂಬಂತಾಗಿದೆ. ದೇಶೀಯ ಉಡುಗೆಗಳು ಬಡತನದ ಚಿಹ್ನೆಯಾಗಿದೆ.ದೇಶೀಯ ಭಾಷೆಗಳು ಅನಾಗರಿಕರ ಸಂಕೇತವೆಂಬಂತಾಯಿತು. ಮಾತೃಪ್ರೇಮವೆಂದರೆ ಅಜ್ಞಾನವಾಯಿತು, ಹಿಂದೂ ಎಂದರೆ ಸೇವಕರು ಎಂಬಂತಾಯಿತು...ಕೇವಲ ನಟನೆಗಾಗಿಯಾದರೂ ಆಚರಣೆಯಲ್ಲಿರುವ ಶ್ರಾದ್ಧ, ವಿವಾಹಾದಿ ಸಂಸ್ಕಾರಗಳಿಗೆ ಬಿಳಿಮೋರೆಯುವರು ಪುರೋಹಿತರಾಗಿ ಬರುವುದು....ಯಾವಾಗ ನಮ್ಮ ಜನರು ಕಣ್ತೆರೆಯುವರೊ...ದೇವರಿಗೆ ಗೊತ್ತು".

ತಾಯ್ನುಡಿಯ ಬಗೆಗಿನ ಅಭಿಮಾನ ಇಲ್ಲಿ ದುರಭಿಮಾನವಾಗಿ ಖಂಡಿತವಾಗಿಯೂ ಮೂಡಿ ಬಂದಿಲ್ಲ. ಆಚರಣೆ, ಸಂಸ್ಕಾರ, ಬಟ್ಟೆಬರೆ–ಎಲ್ಲವುಗಳಲ್ಲೂ ದೇಶಾಭಿಮಾನದ ಮುದ್ರೆ ಇದೆ. ಮಾತೃಭಾಷೆಯಂತೆಯೇ ಸಮಗ್ರ ಹಿಂದುಸ್ಥಾನದ ಏಕತೆಯ ಕಲ್ಪನೆ ಇದೆ. ಅದಕ್ಕಾಗಿ ಅವಿರತ ಹೋರಾಡಲೇಬೇಕೆಂಬ ನಿಶ್ಚಲವಾದ ಧೋರಣೆಯಿದೆ.

'ವಂದೇಮಾತರಂ' ಚಳುವಳಿಯ ಪ್ರಭಾವ ಕಮಲೆಯ ಮೇಲೂ ಬೀಳುತ್ತದೆ. ರಾಷ್ಟ್ರೀಯ ಸಪ್ತಾಹ ಕಾರ್ಯಕ್ರಮದಲ್ಲಿ ಆಕೆ ಪಾಲ್ಗೊಳ್ಳುತ್ತಾಳೆ. ಖಾದಿ ಉಡುಪಿನ ಬಗೆಗೆ ಭಾಷಣ ಬಿಗಿಯುತ್ತಾಳೆ. ಇದು ಪುರುಷರಿಗೆ ಸವಾಲೆಸೆಯುವಂತಿದೆ. ನಮ್ಮ ದೇಶದಲ್ಲಿರುವ ಜನರು, ಅವರಿಗೆಲ್ಲರಿಗೆ ಬೇಕಾಗುವ ಬಟ್ಟೆ, ಅದಕ್ಕೆ ತಗಲುವ ಮಜೂರಿ, ಖರ್ಚು, ಲೆಕ್ಕಾಚಾರಗಳನ್ನು ಅಂಕೆ–ಅಂಶಗಳ ಸಮೇತ ಮಾಹಿತಿ ನೀಡಿ ಉತ್ಕಟವಾದ ದೇಶಾಭಿಮಾನವನ್ನು ತೋರ್ಪಡಿಸುತ್ತಾಳೆ (ಪುಟ 35). ಖಾದಿ ಚಳುವಳಿ ಬಗೆಗೆ ತುಳುವಿನಲ್ಲೇ ರಚಿಸಿದ ಘೋಷಣಾ ಪದ್ಯವೊಂದನ್ನು ಹಾಡುತ್ತಾಳೆ.

ಈ ಸಮಾರಂಭದಲ್ಲಿ ನಾರಾಯಣನೂ ಭಾಗವಹಿಸಿ ಅಲ್ಲಿ ತನ್ನ ಚೇಷ್ಟೆಗಳನ್ನು ಪ್ರದರ್ಶಿಸುತ್ತಾನೆ. ತಾನು ಆಕೆಯ ತತ್ವ ಪ್ರಣಾಳಿಕೆಗಳನ್ನು ಹಿಂಬಾಲಿಸುವವನಂತೆ ನಾಟಕ ಹೂಡುತ್ತಾನೆ. ಪರದೇಶಿ ವಸ್ತ್ರಗಳನ್ನು ಸುಡುವುದಕ್ಕೆ ಮುಂದಾಳುತನವನ್ನು ವಹಿಸುವಂತೆ ಕಮಲೆಯನ್ನು ಕೇಳಿಕೊಳ್ಳುತ್ತಾನೆ (37). ಆತನ ಹೊಗಳಿಕೆಗೆ ಕಟ್ಟುಬಿದ್ದು ಆಕೆ ಅದಕ್ಕೊಪ್ಪಿ, ಪರದೇಶಿವಸ್ತ್ರಗಳನ್ನು ಸುಡುತ್ತಾಳೆ. ಆಕೆಯ ಮನಸ್ಸು ಸೋಲುತ್ತಿದೆಯೆಂಬ ಸೂಚನೆಯನ್ನು ಲೇಖಕರು ಕೊಟ್ಟರೂ "ಹೆಂಗಸರು ಮನಸ್ಸು ಮಾಡದಿದ್ದರೆ ಗಂಡಸರು ತಲೆಕೆಳಗೆ ಕಾಲು ಮೇಲೆಮಾಡಿದರೂ ಅವರನ್ನು ಹಾಳು ಮಾಡುವುದಕ್ಕೆ ಅಸಾಧ್ಯ" ಎಂಬ (ಪು 37) ಬುದ್ಧಿವಾದ ಹೇಳುತ್ತಾರೆ.

ಈ ಸಂದರ್ಭವನ್ನು ಉಪಯೋಗಿಸಿಕೊಂಡು ನಾರಾಯಣ ಕಮಲೆಯೊಂದಿಗೆ ಪತ್ರವ್ಯವಹಾರವನ್ನಾರಂಭಿಸುತ್ತಾನೆ. ಪರೀಕ್ಷಾಪತ್ರಿಕೆಗಳನ್ನು ಸಂಗ್ರಹಿಸಿ ಕಳುಹಿಸುವುದು ಇತ್ಯಾದಿ ನಡೆಸುತ್ತಾನೆ. ಅವಳ ಜೊತೆಯಲ್ಲೇ ಊರಿಗೆ ಹೊರಡುವಂತೆ, ರೈಲ್ವೆಗುಮಾಸ್ತನಿಗೆ ಲಂಚಕೊಟ್ಟು, ಆಕೆಯ ಪಕ್ಕದಲ್ಲೇ ಸೀಟು ದೊರಕಿಸಿಕೊಳ್ಳುವುದು, ರೈಲಿನಲ್ಲಿ ತನ್ನ ಚೇಷ್ಟೆಗಳನ್ನು ಪ್ರದರ್ಶಿಸುವುದು ಆಕೆಯೆದುರು ಹುಚ್ಚನಂತೆ ವರ್ತಿಸುವುದು ಇತ್ಯಾದಿಗಳು ಸ್ವಾಭಾವಿಕವಾಗಿ ಮೂಡಿಬಂದಿವೆ. ತಾನು ವಿವಾಹಿತನೆಂಬುದು ಕಮಲಗೂ ಗೊತ್ತು ಎಂಬುದು ನಾರಾಯಣನಿಗೆ ಗೊತ್ತಾಗುತ್ತದೆ. ಕಮಲೆ ಆತನನ್ನು ಹೇಗಾದರೂ ಮಾಡಿ ದೂರವಿರಿಸಬೇಕೆಂಬ ತೀರ್ಮಾನಕ್ಕೆ ಬಂದಿರುತ್ತಾಳೆ. ಗಂಡಸತ್ತವಳನ್ನು ಹೆಂಡತಿ ಸತ್ತವನೇ ವಿವಾಹ ಮಾಡಿಕೊಳ್ಳಬೇಕೆಂಬ ಮಾತು ಕಮಲೆಯಿಂದ ಬರುತ್ತದೆ. ನಾರಾಯಣ ತಾನು ವಿವಾಹಿತನಾಗಿರುವುದಕ್ಕಾಗಿಯೇ ಈಕೆಗೆ ತನ್ನಲ್ಲಿ ಅನುಮತವಿಲ್ಲವೆಂಬ ತೀರ್ಮಾನಕ್ಕೆ ಬರುತ್ತಾನೆ.

ತನ್ನನ್ನು ಕಮಲೆ ವಿವಾಹವಾಗುವುದಕ್ಕೆ ತನ್ನ ಪತ್ನಿಯೇ ಅಡ್ಡಿಯೆಂಬ ಭ್ರಮೆ ಆತನ ತಲೆಗೆ ಹೊಕ್ಕು, ಕಮಲೆಗಾಗಿ ತಾನು ಹೆಂಡತಿಯನ್ನು ಬಿಡುವುದಕ್ಕೂ ಸಿದ್ಧನೇ ಎಂದು ಪರೋಕ್ಷವಾಗಿ ಹೇಳುತ್ತಾನೆ (50/53) ಕಮಲೆ ಯಾವ ತೀರ್ಮಾನಕ್ಕೂ ಬರುವುದಿಲ್ಲ. ನಾರಾಯಣನ ಗೋಜಲು ಮನಸ್ಥಿತಿಯನ್ನು ಲೇಖಕರು ಇಲ್ಲಿ ಚೆನ್ನಾಗಿ ಪ್ರತಿಬಿಂಬಿಸಿದ್ದಾರೆ (ಪು. 53). ಇದರಿಂದ ಕಂಗೆಟ್ಟ ನಾರಾಯಣ ಪತ್ನಿಯನ್ನು ವಿಷಕೊಟ್ಟು ಕೊಂದುಬಿಡುತ್ತಾನೆ.

ನಾರಾಯಣನ ಹೆಂಡತಿಯ ಸಾವಿಗೆ ಕಮಲೆಯೇ ಕಾರಣಳೆಂದು ಊರಲ್ಲಿ ಸುದ್ದಿ ಹಬ್ಬುತ್ತದೆ. ಹೆಂಗಸರ ಬಾಯಲ್ಲಿ ಒಂದು ವಿಚಾರವು ಹೇಗೆ ಮಿಥ್ಯಾಭಿಪ್ರಾಯಗಳನ್ನು ತಾಳಿ, ಬೇರೆಯೇ ಆದ (ವಿಪರೀತವೂ ಆದ) ರೀತಿಯಲ್ಲಿ ಪ್ರಸಾರವಾಗುತ್ತದೆ ಎಂಬುದಕ್ಕೆ ಇಲ್ಲಿ ಸ್ಪಷ್ಟವಾದ ನಿದರ್ಶನವನ್ನು ಚಿತ್ರಿಸಿದ್ದಾರೆ. (ಪು. 60). ತನ್ನ ಹಾಗೂ ಕಮಲೆಯ ವಿವಾಹಕ್ಕೆ ಅಡ್ಡಿಯಾದ ಹೆಂಡತಿ ಸತ್ತಿದ್ದಾಳೆಂಬ ಸಂತೋಷದಿಂದ ನಾರಾಯಣ ಆಗಾಗ ಕಮಲೆಯ ಮನೆಗೆ ಬರುತ್ತಿರುತ್ತಾನೆ. ಸುಂದರರಾಯರಿಗೆ ತನ್ನ ಮೇಲೆ ಅನುಕಂಪೆ ಮೂಡುವಂತೆ ನಾರಾಯಣ ಪ್ರೀತಿ-ಅಭಿಮಾನಗಳನ್ನು ಪ್ರದರ್ಶಿಸುತ್ತಾನೆ. ತನ್ನ ಸಲುವಾಗಿ ನಾರಾಯಣ ಏನೆಲ್ಲಾ ಕುಕೃತ್ಯಗಳನ್ನೆಸಗಿದನೆಂಬುದು ಕಮಲೆಗೆ ಗೊತ್ತಿದೆ. ಸುಂದರರಾಯರು ಕಮಲೆಯನ್ನು ಕರೆದು ನಾರಾಯಣನನ್ನು ವರಿಸುವಂತೆ ಕೇಳಿದಾಗ ಆಕೆ ನಿರಾಕರಿಸುತ್ತಾಳೆ. ಸತ್ಯಸಂಗತಿಯನ್ನು ಬಯಲು ಮಾಡುತ್ತಾಳೆ. ತಾನಿನ್ನೂ ಪತಿವ್ರತೆ, ಬದುಕಿರುವವರೆಗೂ ಉಮೇಶನೇ ತನ್ನ ಗಂಡನೆಂಬುದಾಗಿ ಸಾರುತ್ತಾಳೆ. ಅಲ್ಲದೆ ಆಕೆ ನಾರಾಯಣನನ್ನು ಗೇಲಿ ಮಾಡುತ್ತಾಳೆ. ಆತನನ್ನು ಕೊಲ್ಲುವುದಾಗಿ ಬೆದರಿಕೆಯೂ ಹಾಕುತ್ತಾಳೆ. ಆದರೆ ಆಕೆ ಸುಂದರರಾಯರ ಮನಸ್ಸನ್ನೊಪ್ಪಿಸುವುದರಲ್ಲಿ ವಿಫಲಳಾಗಿ ಅಸಹಾಯಕಳಾಗುತ್ತಾಳೆ. ಕೊನೆಗೆ, ದೇಶ ಸೇವೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಡುವುದಾಗಿ ಪತ್ರವೊಂದನ್ನು ಬರೆದು ಅಲ್ಲಿಂದ ಪಲಾಯನ ಮಾಡುತ್ತಾಳೆ.

ಈ ಕಾದಂಬರಿಯ ಮುಕ್ತಾಯ ಅತ್ಯಂತ ನಾಟಕೀಯವಾಗಿ ಆಗಿದೆ. ಹಿಮಾಲಯ ಪರ್ವತದಲ್ಲಿ ಮೂಕನಾದ ಋಷಿಯೊಬ್ಬ ತಪಸ್ಸು ಮಾಡುತ್ತಿರುವುದು. ಕಮಲೆ 'ಪರ್ವತಾರೋಹಿ'ಯಾಗಿ ಅಲ್ಲಿಗೇ ಬರುವುದು, 'ವಂದೇ ಮಾತರಂ' ಹಾಡು ಕೇಳಿಸಿದಾಗ ಋಷಿಗೆ ರೋಮಾಂಚನವಾಗುವುದು–ನಡೆಯುತ್ತದೆ. ಕಮಲೆಯನ್ನು ನೋಡಿದ ಋಷಿ ಕಾಮಾಸಕ್ತನಾಗಿ ಹತ್ತಿರ ಬಂದು ಆಕೆಯನ್ನು ಆಲಂಗಿಸುತ್ತಾನೆ. ಕಮಲೆ ತಾನು ಜೋಪಾನವಾಗಿ ತಂದಿದ್ದ ಉಮೇಶನ ಫೋಟೋ ಹಾಗೂ ಕುಂಕುಮದ ಕರಡಿಗೆಗಳನ್ನು ನೋಡಿ ಹಿಂದಿನ ಕತೆಯೆಲ್ಲಾ ಪ್ಲಾಷ್‌ಬ್ಯಾಕ್ ಆಗುತ್ತದೆ. ಉಮೇಶ-ಕಮಲೆಯರು ಮತ್ತೆ ಸತಿಪತಿಯರಾಗುತ್ತಾರೆ. ಜ್ಯೋತಿಷಿ

ಗಳು ಜಾತಕದಲ್ಲಿದೆಯೆಂದು ಹೇಳಿದ 'ಶಿಷ್ಟಮಾಂಗಾರಕನಿಂದಾಗಿ ವೈಧವ್ಯವನ್ನನು ಭವಿಸಿದ ಕತೆ'ಯೆಂಬಂತೆ ಲೇಖಕರು ಇದನ್ನು ಮಂಗಳಾಂತವನ್ನಾಗಿ ಮಾಡಿದ್ದಾರೆ.

ಸಮಗ್ರವಾಗಿ ಈ ಕಾದಂಬರಿಯನ್ನು ನೋಡಿದರೆ, ಇದೊಂದು ಪ್ರೇಮ ಕಥೆಯೆನ್ನುವುದಕ್ಕಿಂತ, ಈ ಹುದರದಲ್ಲಿ ದೇಶಪ್ರೇಮ, ಭಾಷಾಪ್ರೇಮಗಳನ್ನು ಸೂಚಿಸುವ ಒಂದು ಕೃತಿಯೆಂದು ಹೇಳಬಹುದು. ವಿಧವಾವಿವಾಹವನ್ನು ಲೇಖಕರು ಒಪ್ಪಿದರೂ, ಇಲ್ಲಿ ಅದಕ್ಕೆ ಅವಕಾಶವೇ ಇಲ್ಲದಂತೆ ಎಚ್ಚರವಹಿಸಿದ್ದು ಗೊತ್ತಾಗುತ್ತದೆ. ಲೇಖಕರು ಸಂಪ್ರದಾಯವನ್ನು ತೀರಾ ಅಲ್ಲಗಳೆಯಲು ಎದೆಗಾರಿಕೆಯಿಲ್ಲದೆ ಅಸಹಾಯಕರಾದುದೂ ಇಲ್ಲಿ ಸ್ಪಷ್ಟವಾಗುತ್ತದೆ. ಹೀಗೆ ಎಚ್ಚರ ವಹಿಸಿದ್ದುದರಿಂದಾಗಿ ನಾರಾಯಣನ ಪಾತ್ರ ಉತ್ತಮ ರೀತಿಯಲ್ಲಿ ಬೆಳೆದು ನಿಂತಿದೆ. ನಾರಾಯಣ ಕಮಲೆಯ ಮೇಲಿನ ಮೋಹದಿಂದಾಗಿ ತನ್ನ ಹೆಂಡತಿಯನ್ನೇ ಕೊಲ್ಲುತ್ತಾನೆ. ಅಲ್ಲದೆ, ದೇಶಪ್ರೇಮಿಯೆಂಬ ಸೋಗನ್ನೂ ಹಾಕಿಕೊಳ್ಳುತ್ತಾನೆ. ಇದನ್ನರಿತ ಕಮಲೆ ಆತನಿಗೆ ಬಹುದೊಡ್ಡ ಪಾಠವನ್ನು ಕಲಿಸುತ್ತಾಳೆ-ಅದುವೇ ಪಶ್ಚಾತ್ತಾಪ. ನಾರಾಯಣ ಪಶ್ಚಾತ್ತಾಪ ಪಡುತ್ತಿರುವಂತೆಯೇ ಆತನ ಪಾತ್ರ ಮುಗಿಯುತ್ತದೆ. ಕಮಲೆಯದ್ದು ಇದರಲ್ಲಿ ಮುಖ್ಯಪಾತ್ರ. ತಾನು ಎಳವೆ ಯಿಂದಲೇ ಪ್ರೇಮಿಸಿ ವರಿಸಿದ ಉಮೇಶ ದೇಶಕ್ಕಾಗಿ ಚಳುವಳಿ ಸೇರಿ ಸತ್ತನೆಂಬ ವರ್ತಮಾನ ಬಂದಾಗಲೂ ತಾನು ಧೈರ್ಯಗೆಡದೆ, ಆತನೇ ದೇವರೆಂದೂ, ಆತ ಬರೆದ ದೇಶಪ್ರೇಮದ ಮಾತುಗಳೆಲ್ಲವೂ ವೇದವಾಕ್ಯವೆಂದೂ ನಂಬಿಕೊಂಡು ಬಂದ ಜೀವ. ಈ ಮಧ್ಯೆ ಒಮ್ಮೊಮ್ಮೆ ಯೌವನವು ಕೈಯಾಡಿಸಿದಂತೆ ಕಂಡರೂ ಆಕೆ ದಾರಿ ತಪ್ಪುವುದಿಲ್ಲ. ಸಜ್ಜನರ ಸಹವಾಸದಿಂದಾಗಿ ಆಕೆ ಸಜ್ಜನಳಾಗಿಯೇ ಇರುತ್ತಾಳೆ. ಈ ತತ್ವವನ್ನು ಲೇಖಕರು ಇದರಲ್ಲಿ ಸಾಧಿಸುತ್ತಾರೆ.

ಉಳಿದ ಪಾತ್ರಗಳಲ್ಲಿ ಸುಂದರರಾಯರು, ಗಂಗೆ, ನಾರಾಯಣ, ಕಮಲೆಯ ಬಳಗದವರು-ಇತ್ಯಾದಿ ಪ್ರಾಸಂಗಿಕ ಹಾಗೂ ಸಾಂದರ್ಭಿಕವಾಗಿ ಬಂದು ಕೆಲವು ಸುಧಾರಣೆಯ ಮಾತುಗಳನ್ನಾಡಿ ಹೋಗುತ್ತವೆ. ಇವೆಲ್ಲವೂ ಕಥೆಗೆ ಪೂರಕವೇ. ಕಾದಂಬರಿಯ ಭಾಷೆ ಯಾವುದೇ ರೀತಿಯ ಅಡೆತಡೆಗಳಿಲ್ಲದೆಯೇ ಓದಿಸಿಕೊಂಡು ಹೋಗುತ್ತದೆ. ಲೇಖಕರು ಅಲ್ಲಲ್ಲಿ ಬಳಸಿಕೊಂಡ ನುಡಿಗಟ್ಟುಗಳು, ಗಾದೆಗಳು ಬೈಗುಳಗಳು_ಎಲ್ಲವೂ ಸಮಯೋಚಿತವೇ ಆಗಿವೆ.

ಸತೀ ಕಮಲೆಯಲ್ಲಿನ ಭಾಷಾ ಶೈಲಿ :

"ಸಮುದ್ರಂತ ಬರಿಟ್ ಒಂಜಿ ತೋಟ ಐಟ್ ಮಸ್ತ್ ನಮೂನೆನ ಮರಕ್ಲಾ ಕಸಿಕ್ಲಾ ಉಂಡು. ಬಯ್ಯಾನಗ ಪಡ್ಡೆಯಿತ್ತ್ ಸೂರ್ಯೆ ಕಿರಣಂಕ್ಲು ಐತ್ ಮಿತ್ತ್ ಬೂಳ್ನಗ ಪೊರ್ಲಾತ್ ತೋಜುಂಡು. ಮನಸ್ಸ್‌ಗ್ ಅತ್ಯಾನಂದ ಆಪುಂಡು. ಆ

ತೋಟಂತ ನಡುಟು ಮೂಜಿ ಉಪ್ಪರಿಗೆದ ಇಲ್ಲ್ ಪೊಸ ನಮುನೆಡ್
ಕಟ್‌ದ್ದೊ ಉಂಡು, ಆ ಇಲ್ಲ್‌ನಿಲಾ ಸೂನಗ ಅವ್ವೊಂಜಿ ಅದೃಷ್ಟಶಾಲಿನೊ
ಇಲ್ಲ್‌ಂತ್ ಸೂಪುಣಾಕ್ಕೈಗ್ ಪಿನಿಯಂತೆ ಕುತೋಣಾನ್. ಸೂರ್ಯಾಸ್ತಮನ
ಆಪಿ ಸಮಯ ಕಿರಣಂಕುಳು ಆ ತೋಟಂತ ಮಿತ್ತ್ ಬೂಳುದುನು.
ಕಡೆಕಟ್ಟ್‌ಗ್‌ಲಾ ವಂತೆ ಬೂಳ್ದುನು ಜಾಯೆಗ್‌ನ್ನಗ ತಾಳಿ ಮರಂಕ್ಳೆ
ಅಡ್ಡ ಉಂಡು..." (ಪು. 54/55).

ಕನ್ನಡ ಹಾಗೂ ಸಂಸ್ಕೃತ ಪದಗಳು ಲೀಲಾಜಾಲವಾಗಿ ಮಿಶ್ರವಾಗಿರುವುದನ್ನು ಇಲ್ಲಿ ಗಮನಿಸಬೇಕು. ತುಳುಭಾಷೆಯ ಸಹಜವಾದ ಸೌಂದರ್ಯ ದೂರವಾಗಿರುವಂತೆ ಕಾಣುತ್ತದೆ. ಶಿವಳ್ಳಿ ಬ್ರಾಹ್ಮಣ ಪಂಗಡದವರು ಇದೇ ಮಾತನ್ನಾಡುವವರಾದರೂ, ಪುತ್ತೂರು, ಮಂಗಳೂರು ಕಡೆಯವರಾಡುವ ಮಾತಿಗೆ ಸಾಕಷ್ಟು ವ್ಯತ್ಯಾಸಗಳಿವೆ.[1] ಹೆಚ್ಚಿನ ತುಳು ಜನರಿಗೆ ಅರ್ಥವಾಗುವ, ಸಾಹಿತ್ಯಿಕ ಸೌಂದರ್ಯವುಳ್ಳ ಶಿಷ್ಟ ತುಳುಭಾಷೆ ಈಗ ಅಗತ್ಯವಾಗಿದೆ. ಪ್ರಸಾರ ಹಾಗೂ ಪ್ರಚಾರ ಮಾಧ್ಯಮದಲ್ಲಿ ಬಳಕೆಯಲ್ಲಿರುವ ತುಳುವನ್ನು ಆ ಸ್ಥಾನಕ್ಕೆ ತರುತ್ತಿದ್ದಾರೆ. ಇಂದು ಮಂಗಳೂರು ಆಕಾಶವಾಣಿಯಲ್ಲಿ ಬಳಸಲಾಗುವ ತುಳುಭಾಷೆಯು ಬಹುಶಃ ಎಲ್ಲರಿಗೂ ತಿಳಿಯಬಹುದಾದ, ಸಾಹಿತ್ಯಿಕ ಸೌಂದರ್ಯವನ್ನು ಹೊಂದಿರುವ ಭಾಷೆಯೆಂದು ಸ್ವೀಕೃತವಾಗಬಹುದು – ಆಗುತ್ತಿದೆ ಕೂಡಾ.

ಕನ್ನಡದ ಆರಂಭದ ಕಾದಂಬರಿ ಕೃತಿಗಳಿಗೆ ಹೋಲಿಸಿದಾಗ ಈ ಕೃತಿಯು ಅವುಗಳಿಂದ ಪ್ರಭಾವಿತವಾದುದು ಕಂಡುಬರುತ್ತದೆ. ಗುಲವಾಡಿ ವೆಂಕಟರಾಯರ 'ಇಂದಿರಾಬಾಯಿ' (1899), ಕೆರೂರ ವಾಸುದೇವಾಚಾರ್ಯರ 'ಇಂದಿರೆ' ಮೊದಲಾದ ಸ್ವತಂತ್ರ ಸಾಮಾಜಿಕ ಕಾದಂಬರಿಗಳ ವಸ್ತುವೂ ಇದೇ ಆಗಿವೆ. ಇಂದಿರಾಬಾಯಿಯಲ್ಲಿ ಕಥಾನಾಯಕಿಯು ಮತ್ತೆ ವಿವಾಹವಾಗುತ್ತಾಳೆ. ಇಂದಿರೆಯಲ್ಲಿ ವಿಧವಾ ವಿವಾಹದ ಬಗ್ಗೆ ಬರೆದಿದ್ದರೂ ದೇವಯಾನಿಯಂಥಾ ಪಾತ್ರವೊಂದು ಕೊನೆಯವರೆಗೂ ವಿಧವೆಯಾಗಿಯೇ ಇರುತ್ತದೆ. 'ಸತೀ ಕಮಲೆ'ಯಲ್ಲಿ ನಾಯಕಿಯೂ ವಿಧವಾ ವಿವಾಹದ ಬಗೆಗೆ ಭಾಷಣ ಬಿಗಿಯುವ ಪಾತ್ರವೇ ಆದರೂ ಆಕೆ ವಿಧವೆಯಾಗಿರುವುದಿಲ್ಲ - ಕೊನೆಯಲ್ಲಿ ತನ್ನ ಗಂಡನನ್ನೇ ಸೇರುತ್ತಾಳೆ. ಪ್ರಕೃತ ಕಾದಂಬರಿಯ 'ನಾರಾಯಣ'ನ ಪಾತ್ರವು ಇಂದಿರೆಯಲ್ಲಿನ ನಟೇಶನ ಪಾತ್ರವನ್ನು ಹೋಲುತ್ತದೆ.

ಈ ಎಲ್ಲ ದೃಷ್ಟಿಗಳಿಂದ ನೋಡಿದಾಗ, ಕಾದಂಬರಿಯ ವಸ್ತುವಿನಲ್ಲಿ ಹೊಚ್ಚ ಹೊಸತೇನೂ ಇಲ್ಲವೆನ್ನಬಹುದು. ಆದರೆ, ತುಳುಜನರಿಗೆ, ಅದೇ ಭಾಷೆಯಲ್ಲಿ ಇಂಥಾ ಒಂದು ಕಥೆಯನ್ನು ಗದ್ಯದಲ್ಲಿ ಮೊತ್ತ ಮೊದಲಬಾರಿಗೆ ಕೊಟ್ಟ ಕೀರ್ತಿ ದಿವಂಗತ ಪಣಿಯಾಡಿಯವರಿಗೆ ಸಲ್ಲುವುದರೊಂದಿಗೆ ಅನೇಕ ಇತರ ಹೆಚ್ಚಿನ ವಿಚಾರಗಳು ಇದರಲ್ಲಿವೆಯೆನ್ನುವುದೂ ಮುಖ್ಯವೇ. ಬಹುಶಃ ಶಿವಳ್ಳಿ ತುಳುವಿನಲ್ಲಿ

ರಚನೆಯಾದ ಸಾಹಿತ್ಯಕೃತಿಗಳು ಅತ್ಯಲ್ಪ. ಹೊಸಗನ್ನಡದ ಮೊತ್ತಮೊದಲ ಸ್ವತಂತ್ರ ಸಾಮಾಜಿಕ ನಾಟಕ 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ' (1887)ವು ಹವ್ಯಕ ಉಪಭಾಷೆಯಲ್ಲಿದೆ ಎನ್ನುವಂತೆಯೇ ತುಳುವಿನಲ್ಲಿ ಮೊತ್ತ ಮೊದಲ ಕಾದಂಬರಿ ಹಾಗೂ ಕಾವ್ಯಗಳು ಶಿವಳ್ಳಿ ತುಳುವಿನಲ್ಲಿದೆಯೆನ್ನುವುದೂ ವಿಶೇಷ ವಿಚಾರ.[2]

ಈ ಕೃತಿಯ ಮೂಲಕ ಪಣಿಯಾಡಿಯವರು ಸಾಧಿಸಿದ್ದು ಅಪಾರ. ತುಳುವಿಗೆ ಸಾಹಿತ್ಯ ಹಾಗೂ ಆಕಾಶವಾಣಿಗಳಲ್ಲಿ ಸ್ಥಾನ ದೊರಕುವುದಕ್ಕೂ, ತುಳುನಾಡಿನ ಸರ್ವತೋಮುಖ ಬೆಳವಣಿಗೆಗೆ ಅವರು ಹಾಕಿಕೊಟ್ಟ ಮೇಲ್ಪಂಕ್ತಿಯೇ ಮುಖ್ಯ ಕಾರಣವೆನ್ನುವುದನ್ನು ಮರೆಯಲಾಗದು. ಅವರ ಅಭಿಪ್ರಾಯಗಳು ಸರಳ, ನೇರ, ಸ್ಪಷ್ಟ, ನಿರ್ದುಷ್ಟ ಹಾಗೂ ನಿಷ್ಪಕ್ಷಪಾತ ದೃಷ್ಟಿಯನ್ನು ಹೊಂದಿದಂಥವುಗಳು ಎನ್ನುವುದು 'ಸತೀಕಮಲೆ'ಯಲ್ಲಿ ಸ್ಪಷ್ಟವಾಗುತ್ತದೆ. ತುಳು ಸಾಹಿತ್ಯದಲ್ಲಿ ಚಾರಿತ್ರಿಕವಾದ ಮೊದಲ ಸ್ಥಾನ ಇದಕ್ಕಿದೆ. ಅನೇಕ ಮಾರ್ಗದರ್ಶಕ ಸೂತ್ರಗಳನ್ನು ಅನೇಕ ಕಿವಿಮಾತುಗಳನ್ನೂ ಇದು ಒಳಗೊಂಡಿದೆ.

2. ತುಳು ಚೋಮನದುಡಿ

1983ರಲ್ಲಿ ತುಳುವಿನಲ್ಲಿ ಪ್ರಕಟವಾದ 'ಚೋಮನದುಡಿ' ಕಾದಂಬರಿಯು ತುಳು ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ಸ್ಥಾನವನ್ನು ಪಡೆಯುತ್ತದೆ. ಈ ಕೃತಿಯ ವಿಸ್ತೃತವಾದ ಅಧ್ಯಯನ ಈ ಲೇಖನದ ಉದ್ದೇಶ.

ಚೋಮ ದಕ್ಷಿಣ ಕನ್ನಡ ಜಿಲ್ಲೆಯ ಹೊಲೆಯ ಜನಾಂಗದ ವ್ಯಕ್ತಿ. ಇಲ್ಲಿನ ಹೊಲೆಯರಲ್ಲಿ ಅನೇಕ ಪಂಗಡಗಳಿವೆ. ಮೇರ, ಬೈರ, ಅಜಿಲ, ಮಾರಿಹೊಲೆಯ ಇತ್ಯಾದಿಯಾಗಿ ಸಮಾಜದಲ್ಲಿ ಅವರನ್ನು ಗುರುತಿಸುತ್ತಾರೆ. ಅವರವರ ಆಚಾರ, ಸಂಪ್ರದಾಯಗಳೆಲ್ಲವೂ ಬೇರೆಯೇ. ಒಂದು ಪಂಗಡದವರು ಇನ್ನೊಂದು ಪಂಗಡದವರೊಂದಿಗೆ ಸಂಬಂಧ/ಸಂಪರ್ಕ ಮಾಡುವುದಿಲ್ಲ. ಹೆಚ್ಚಿನ ಎಲ್ಲಾ ವರ್ಗದವರೂ ಮಾಂಸಾಹಾರಿಗಳು. ದಿನನಿತ್ಯ ಕೆಲಸಮಾಡಿ ಬಂದ ಹಣದಿಂದ ಜೀವನವನ್ನು ನಡೆಸುವವರು. ಹಿಂದಿನ ಕಾಲದಲ್ಲಿ ಇವರಿಗೆ ಭೂಮಿಯ ಒಡೆತನವು ನಿಷಿದ್ಧವಾಗಿತ್ತು ಎಂಬುದನ್ನು ಕಾರಂತರ ಚೋಮನದುಡಿಯಲ್ಲಿ ಒತ್ತಿ ಹೇಳಲಾಗಿದೆ. ಇಂದಿನವರೆಗೂ ಇದೇ ರೀತಿಯ ಕಟ್ಟಳೆಗಳು ನಡೆದುಕೊಂಡು ಬಂದುದೂ ಇದೆ.

ಇಂಥಾ, ಉಸಿರುಗಟ್ಟುವ ವಾತಾವರಣ–ಪರಿಸರಗಳ ಮಧ್ಯೆ ಇದ್ದ ಕಾರಂತರು ಚೋಮನನ್ನು ಹತ್ತಿರದಿಂದಲೇ ಕಂಡವರು. ಚೋಮನ ಧನಿ ಸಂಕಪ್ಪಯ್ಯ ಸಂಪ್ರದಾಯವಾದಿ ಬ್ರಾಹ್ಮಣನಾದರೂ ಚೋಮನಿಗೆ ಗದ್ದೆ ಸಾಗುವಳಿ ಮಾಡುವುದಕ್ಕೆ

ಮನಸ್ಸು ಮಾಡಿದ್ದುಂಟು, ಆದರೆ ಮನೆಯ ಮುಂದುಕಿಯ ದೆಸೆಯಿಂದಾಗಿ ಚೋಮ ಮತ್ತೆ ದುಡಿಮೆಗೇ ಶರಣಾಗಬೇಕಾಗುತ್ತದೆ. ಚೋಮನ ಆಡುಭಾಷೆ, ಮಾತೃಭಾಷೆ ಎಲ್ಲವೂ ತುಳುವೇ. ಚೋಮನನ್ನು ತುಳು ಜನರಿಗೆ ಪರಿಚಯಿಸಲು 'ತುಳು ಚೋಮನದುಡಿ'ಯ ರಚನೆಯಾಗಿದೆ.

ಕೆದಂಬಾಡಿ ಜತ್ತಪ್ಪರೈಯವರು ಈ ನಿಟ್ಟಿನಿಂದ ಉತ್ತುಂಗವಾದ ಕೆಲಸವನ್ನು ಮಾಡಿದ್ದಾರೆನ್ನಬೇಕು. ಚೋಮನನ್ನು, ಆತನ ಅಂತರಂಗವನ್ನು ಹೊಕ್ಕು ಹೊರಟವರು ಕೆದಂಬಾಡಿಯವರು–ಚೋಮನ ನಾಡಿಮಿಡಿತದ ಪ್ರತಿಯೊಂದು ಸದ್ದನ್ನೂ ಆಲಿಸಿ ಅದಕ್ಕೆ ಪ್ರತಿಸದ್ದನ್ನು ಕೊಡಲು ಸಮರ್ಥರಾದವರು. ಕೆದಂಬಾಡಿಯವರ ಮಾತೃಭಾಷೆ ತುಳು, ಅದರಲ್ಲೂ 'ಬಂಟತುಳು'. ಇಂದು ದಕ್ಷಿಣ ಕನ್ನಡದಲ್ಲಿ ಅತ್ಯಂತ ಪ್ರಚಾರದಲ್ಲಿರುವ, ಸಾಹಿತ್ಯಿಕ ಮತ್ತು ಆಕಾಶವಾಣಿಯಂಥಾ ಮಾಧ್ಯಮಗಳಲ್ಲಿ ಬಳಸಲಾಗುವ ತುಳುವೇ ರೈಗಳ ತಾಯ್ನುಡಿಯೂ ಆಗಿದೆ ಎನ್ನುವುದು ಮುಖ್ಯವಿಚಾರ. ಅಲ್ಲದೆ, ಅದನ್ನು ಸಮರ್ಥವಾಗಿಯೂ ಸಮರ್ಪಕವಾಗಿಯೂ ತುಳುವಿನ ಜಾಯಮಾನಕ್ಕೆ ತಕ್ಕಂತೆ, ಅತ್ಯಂತ ಪ್ರಭಾವಪೂರ್ಣವಾಗಿ ಬಳಸಿಕೊಳ್ಳುವ ಸಾಮರ್ಥ್ಯ ಅವರಿಗಿದೆಯೆನ್ನುವುದೂ ಈ ಕೃತಿಯಿಂದ ಗೊತ್ತಾಗುತ್ತದೆ.

ಕೆದಂಬಾಡಿಯವರ ಅನುವಾದದ ಬಗೆಗೆ ಡಾ. ಕಾರಂತರು "...ಪ್ರಧಾನ ಆಡುನುಡಿಯಾದ ತುಳು, ಅನುವಾದಕ್ಕೆ ಕನ್ನಡಕ್ಕಿಂತ ಸ್ವಾಭಾವಿಕವೆನಿಸುವ ಭಾಷೆ..." (ತು. ಚೋ. ದು: ಮುನ್ನುಡಿ) ಎನ್ನುತ್ತಾ, ಈ ಕೃತಿಯು ತುಳುವಿನಲ್ಲೇ ರಚನೆಯಾದರೆ ಅದು ಎಷ್ಟು ಅಥೆಂಟಿಕ್ ಹಾಗೂ ಔಚಿತ್ಯಪೂರ್ಣವಾಗುತ್ತದೆನ್ನುವ ಸೂಚನೆಯನ್ನು ಕೊಟ್ಟಿದ್ದಾರೆ. ಅಲ್ಲದೆ, ಈ ಕೃತಿಯ ಅನುವಾದದ ಗುಣಮಟ್ಟದ ಕುರಿತು ಕಾರಂತರು "...ಜತ್ತಪ್ಪರೈಗಳವರ ಈ ಅನುವಾದ ಮೂಲಕೃತಿಯಷ್ಟೇ ಸೊಗಸಿನಿಂದ ವಾಚಕರಿಗೆ ದೊರೆಯುತ್ತಿದೆ ಎಂಬ ಸಂತೋಷ ನನಗಿದೆ..." (ಅದೇ) ಎಂದು ಸಂತೋಷಪಟ್ಟಿದ್ದಾರೆ. ಈ ಮಾತಿನಲ್ಲಿ ಎರಡಿಲ್ಲವೆನ್ನುವುದು ಈ ಕೃತಿಯನ್ನೋದಿದ ಯಾರಿಗಾದರೂ ಅನ್ನಿಸದಿರದು. ಹಾಗೆಂದ ಮಾತ್ರಕ್ಕೆ ಕೆದಂಬಾಡಿಯವರು ಬೀಗಿಕೊಂಡಿಲ್ಲ. ಬದಲಾಗಿ 'ತಾನು ಅವರ ಕಾಲಬುಡದಲ್ಲೇ ಆಡಿ ಬೆಳೆದ ಮಗು, ಆ ಮೇರುಶಕ್ತಿಯೆದುರು ತಾನೋರ್ವ ಯಃ ಕಶ್ಚಿತ್ ಪ್ರಾಣಿ...' ಎಂದು 'ಅರ್ಪಣೆ'ಯಲ್ಲಿ ವಿನೀತರಾಗಿ ಹೇಳಿಕೊಂಡಿದ್ದಾರೆ.

ಇಟಾಲಿಯನ್ ಸಾಮತಿಯೊಂದರ ಪ್ರಕಾರ 'ಅನುವಾದಕರು ಕೊಲೆಗಡುಕರು' (traduttor tradittariy) ಎಂಬ ಮಾತಿದೆ. ಈ ಮಾತನ್ನು ಕೆಲವೇ ಮಂದಿ ಅನುವಾದಕರು ಮಾತ್ರವೇ ಸುಳ್ಳಾಗಿಸಿದ್ದಾರೆ. ಅವರಲ್ಲಿ ಕೆದಂಬಾಡಿಯವರೂ ಒಬ್ಬರು. ಅವರು ಅನುವಾದ ಹಾಗೂ ಅನುವಾದಿತ ಕೃತಿಗಳ ಬಗೆಗೆ ಕೊಡುವ ಅಭಿಪ್ರಾಯವನ್ನು ಗಮನಿಸಬೇಕು :

ಜ.ರೈ:		ಅನಂ:
ಅನುವಾದ ಆಂಡ ಬಿಲೆ ಐಕ್ ಕಡಮ್ಮೆಸೊ	:	ಅನುವಾದವಾದರೆ ಬೆಲೆ ಅದಕೆ ಕಡಿಮೆಯೆ ?
ಓದುದು ತೂಯುಂರ್ಡ ತೆರಿವು	:	ಓದಿನೋಡದಿರಾದರೆ ತಿಳಿದೀತು
ಕಡೊ ಆದ್ ಕೊನತ್ತಿನ ಮಡು ಪರಿಕಮ್ಮಿತ್ತ್	:	ಕಡವಾಗಿ ತಂದ ಕೊಡಲಿಯ ಹರಿತ ಕಡಿಮೆಯೇನಲ್ಲ
ಕಡ್ತ್ಂಡ ಮುಗುರು ಜೊ ಮಲ್ಲ ಮರ	:	ಕಡಿದರೆ ಚಿಗುರದಿರುವುದೇ ಮಾಮರ ?

(ತು.ಚೋ.ದಂ. ಅರ್ಪಣೆ)

ಅನುವಾದದ ಬಗೆಗಿನ ತಿರಸ್ಕಾರ ದೃಷ್ಟಿ ಸಲ್ಲದು, ಕೃತಿಯನ್ನು ಪ್ರಾರ್ತಿಯಾಗಿ ಓದಿನೋಡಿದ ಬಳಿಕವೇ ಪ್ರತಿಕ್ರಿಯೆಯನ್ನು ತೋರಿ ಎನ್ನುವ ಮಾತು ಇಲ್ಲಿದೆ. ಮುಂದೆ ಅನುವಾದದಿಂದ ಆಯ್ದ ಕೆಲವು ಭಾಗಗಳನ್ನು ಮೂಲದೊಂದಿಗೆ ನೋಡುವ ಪ್ರಯತ್ನವನ್ನು ಮಾಡಲಾಗಿದೆ.

ಚೋಮನು ತನ್ನ ಧನಿಯೆದುರು ತೋರಿಸುವ ವಿಧೇಯತೆಯನ್ನು ಕಾರಂತರು,

> "ಧನಿಯರು ಮನೆಯ ಅಂಗಳದಲ್ಲಿ ನಿಂತು 'ಓ ಚೋಮ' ಎಂದರೆ ಇವನು ಸಿದ್ಧನಿರಬೇಕು. ಕೂಡಲೆ ಚೋಮ 'ಓ ಬಂದೆ' ಎಂದರಾಯಿತು..." (ಚೋ.ದು./9)

ಇದಂ, ತುಳುವಿನಲ್ಲಿ ವ್ಯಕ್ತವಾಗುವ ರೀತಿ ಗಮನಿಸಬೇಕು–

> "ಸಂಕಪ್ಪೆರ್ ಆರೆ ಪಡಿಪ್ಪಿರೆದಪ್ಪುಲು ಉಂತುದು 'ಓ ಚೋಮಾ'ಂದ್ ಲೆಪ್ಪುನಗ - ಇಂಬ್ಯೆ ತೊಡಂಕ್ ಸೊಂಟೊಗು ಬಿಗಿತ್ತ್‌ದ್ ಮುಟ್ಟಾಳೆ ತರೆಕ್‌ದೀದ್ 'ಬತ್ತೆ ಬಾಣಾರೇ' ಂದ್ ಓಕೊಂಡೆ, ಬದ್ಯೆ..." (ಪು. 15)

ಧನಿ ಸಂಕಪ್ಪಯ್ಯನವರು ಹೊರಬಾಗಿಲಲ್ಲಿ ನಿಂತುಕೊಂಡು, 'ಚೋಮಾ' ಎಂದು ಕರೆಯುತ್ತಾರೆ. ಧನಿಯ ದನಿಯ ಓನ್ನೆಲೆಯಲ್ಲಿರುವ ಸ್ವಾಮ್ಯ, ಗತ್ತುಗಾರಿಕೆ, ಧನಿ–ಒಕ್ಕಲು ಸಂಬಂಧ – ಮೊದಲಾದವುಗಳು ಇಲ್ಲಿ ಬಿಂಬಿತವಾಗಿವೆ. ಆ ಕರೆಯನ್ನು ಕೇಳಿದ ಒಕ್ಕಲು ಚೋಮ, ತಾನು ಯಾವ ರೀತಿಯಲ್ಲಿ ಸಜ್ಜಾಗಿರಬೇಕು ಎನ್ನುವುದನ್ನು ವಿಸ್ತರಿಸಿ, ಸೂಕ್ಷ್ಮವಾಗಿ ರೈಗಳು ಕೊಡುತ್ತಾರೆ : '...ತೊಡಂಕನ್ನು (ಕತ್ತಿಯನ್ನು ಇಟ್ಟುಕೊಳ್ಳುವಂಥಾದ್ದು) ಸೊಂಟಕ್ಕೆ ಬಿಗಿದು, ತಲೆಗೆ ಮುಟ್ಟಾಳೆಯನ್ನು ಇಟ್ಟುಕೊಂಡು ಬರುತ್ತಾನೆ' - ಎನ್ನುವುದು ಕೆಲಸಗಾರನ ಸಿದ್ಧವೇಷವನ್ನು ಸೂಚಿಸುತ್ತದೆ. ಮುಂದಿನ ಭಾಗವು ಜತ್ತಪ್ಪರೈಗಳ ಪ್ರತಿಭೆಗೆ ಹಿಡಿದ ಕನ್ನಡಿ. ''ಬತ್ತೆ ಬಾಣಾರೇ'ಂದ್ ಓಕೊಂಡೆ, ಬದ್ಯೆ" ಇದು ಗತ್ತುಗಾರಿಕೆ ಹಾಗೂ ಸಹಜತೆಯ ಉತ್ತಮ ಅಭಿವ್ಯಕ್ತಿ. 'ಓ ಬಂದೆ ಧನಿಗಳೇ' ಎಂದು ತುಂಬು ಮನಸ್ಸಿನಿಂದ ಓಗೊಂಡನಾದರೇನೇ ಬದುಕಿದ" – ಎನ್ನುವುದು ಇದರ ಭಾವ. ಇಲ್ಲಿ ಚೋಮ ಹಾಗೂ ಧನಿಗಳೊಳಗಿನ ಸಂಬಂಧವನ್ನು ಚಿಕ್ಕದಾಗಿ, ಚೊಕ್ಕವಾಗಿ ಪ್ರತಿಬಿಂಬಿಸಿದ್ದಾರೆ.

ಚೋಮನ ಮನಸ್ಸಿನ ಬಯಕೆಯನ್ನು ಕಾರಂತರು ''ತಾನು ನೆಲವನ್ನು ಉತ್ತು ಬೆಳೆಯಬೇಕೆಂದು..." (ಚೋ.ದು. 12) ವರ್ಣಿಸುತ್ತಾರೆ. ಒಬ್ಬ ಕೃಷಿಕ ತಾನು ಉಳುವ ಗದ್ದೆಯನ್ನು ಕೃಷಿಗೆ ಸಜ್ಜಾಗುವಂತೆ ತಯಾರು ಮಾಡುವುದರ ವಿವಿಧ

ಮಜಲುಗಳನ್ನು ರೈಗಳು ಕೊಡುವ ಭಾಗವು ಚೋಮನ ಅಂತರಂಗಕ್ಕೆ ಹಿಡಿದ ಕನ್ನಡಿ. ಚೋಮನ ಅಭಿಲಾಷೆ ಕೇವಲ ಒಬ್ಬ ಬೇಸಾಯಗಾರನಾಗಬೇಕೆಂಬುದಷ್ಟೇ ಅಲ್ಲ, ತಾನು "ಮಣ್ಣು ಹಿಸುಕಿ, ಕೆಸರು ಮಾಡಿ, ನಾಲ್ಕು ತೆನೆ ಬೆಳೆಸಿ, ಒಂದು ದಿನವಾ ವಾದರೂ ಆ ಗಂಜಿಯನ್ನೇ ಕುಡಿಯಬೇಕೆಂಬುದು". ಅದೇ ಇನ್ನೊಂದೆಡೆಯಲ್ಲಿ, "ಇವತ್ತಲ್ಲ ನಾಳೆ ನೇಗಿಲಿನ ಹಿಡಿಯನ್ನು ಊರಿ ಹಿಡಿದು ಎತ್ತುಗಳ ಬೆನ್ನಿಗೆ ಬಾರಿಸಿ, ಒಂದು ದಿನವಾದರೂ ಹೂಂ... ಮಾದು...ಮುಟ್ಟಾ...ಂತ ಕರೆದು, ಗದ್ದೆ ನನ್ನ ದೆಂದು ಉತ್ತೇನು..." ಇದು ಚೋಮನ ಅಂತರಂಗದ ಧ್ವನಿ, 'ಚೋಮನ ದುಡಿ' ಕಾದಂಬರಿಯ ಮಹತ್ವಪೂರ್ಣ ಘಟ್ಟ.

ಚೋಮ ನಿಜವಾದ ಅರ್ಥದಲ್ಲಿ ಮಣ್ಣಿನ ಮಗ. ಆತನಿಗೆ ಮಣ್ಣೇ ದೇವರು. ತಾನು ನಿಂತ ನೆಲ ತನ್ನನ್ನು ಕಾಪಾಡಬೇಕು. ತಾನು ಕೆಲಸ ಗೈಯುತ್ತಿರುವ ಮಣ್ಣಿಗೆ ಎರಡು ಬಗೆದರೆ, ತಾನು ನಂಬಿದ ದೈವ ದೇವರು ಇಂಬು ಕೊಡಲಾರರು ಎನ್ನುವುದು ಆತನ ಖಚಿತವಾದ ನಂಬಿಕೆ. 'ಮನಸ್ಸು ಮುನಿದರೆ ಮದ್ದುಂಟು, ಮಣ್ಣು ಮುನಿದರೆ ಮದ್ದಿಲ್ಲ' - ಈ ಭಾಗವು ಕಾರಂತರ ಕೃತಿಯಲ್ಲಿ "ದಣಿಯರ ಋಣ ಸಂದಾಯವಾದೀತೇ? ಅದೂ ಇಲ್ಲ" (ಪು. 18) ಎಂದಷ್ಟೇ ಚಿತ್ರಿತ ವಾಗಿದೆ. ಮೂಲ ಕೃತಿಯಲ್ಲಿಲ್ಲದ ಅನೇಕ ಭಾಗಗಳನ್ನು ಕೆದಂಬಾಡಿಯವರು ವಿಸ್ತೃತವಾಗಿ ಕೊಟ್ಟಿರುವುದು ಕೆಲವೆಡೆಗಳಲ್ಲಿ ಅಗತ್ಯವೆಂದು ಕಾಣಿಸುತ್ತದೆ. ಇದಕ್ಕೆ ಚೋಮನ ಕೆಲಸಗಾರಿಕೆ, ತನ್ನ ದುಡಿಮೆಯಲ್ಲಿರುವ ಭಕ್ತಿ, ಶ್ರದ್ಧೆಗಳನ್ನು ಚಿತ್ರಿಸುವ ಭಾಗವನ್ನು ನೋಡಬೇಕು :

'ತನಗೆ ಶ್ರಮವಾಗುತ್ತಿದೆ, ಶರೀರವಿಡೀ ಬೆವತಿದೆ; ತನಗೆ ಬೆವರುತ್ತಿದೆ ಮತ್ತು ಶ್ರಮವಾಗುತ್ತಿದೆಯೆನ್ನುವ ಪರಿವೆಯೇ ಇಲ್ಲದೆ ತನ್ನ ಕರ್ತವ್ಯದಲ್ಲಿ ನಿರತನಾಗಿ ದ್ದಾನೆ'ನ್ನುವ ಈ ಭಾಗದಲ್ಲಿ ಅನುವಾದಕರ ದೃಷ್ಟಿ ಹೊಸದು. ಒಂದು ಪ್ರಾಮಾಣಿಕವಾದ ಅಧ್ಯಯನವನ್ನಿಲ್ಲಿ ಕಾಣಬಹುದು. ಹಲವಾರು ಚೋಮಂದಿರನ್ನು ಅತೀ ಸಮೀಪದಿಂದ ನೋಡಿದ ಅನುಭವದಿಂದ ಹೊರ ಹೊಮ್ಮಿದೆ ಈ ಅಭಿವ್ಯಕ್ತಿ.

ಕತ್ತಲು ಕವಿಯುತ್ತಿರುವ ಸಮಯದ ವರ್ಣನೆಯಲ್ಲೂ ಕೆದಂಬಾಡಿಯವರ ಹೆಚ್ಚುಗಾರಿಕೆಯನ್ನು ನೋಡಬಹುದು. "ಕತ್ತಲು ಕವಿಯುತ್ತಿರುವ ಸಮಯ; ಧನಿಯರು ಕೂಲಿಗಳಿಗೆ ಅಕ್ಕಿಯನ್ನು ಅಳೆಯಿಸಿಕೊಂಡು ಕುಳಿತಿದ್ದಾರೆ, ಎಲ್ಲರೂ ಮನೆಗೆ ಹೋದರೂ..." (ಚೋ. ದು. 22) — ಕಾರಂತರ ಈ ಮಾತುಗಳಿಗೆ ಅನುವಾದಕರ ವ್ಯಾಖ್ಯಾನವು ಕಣ್ಣಿಗೆ ಕಟ್ಟುವಂಥಾ ಚಿತ್ರಣ :

'ಮುಸ್ಸಂಜೆ, ಬೈಗಿನ ಹೊತ್ತು, ದನಕರುಗಳನ್ನು ಮೇಯಿಸಿಕೊಂಡು ಬರುತ್ತಿರುವ ಹುಡುಗರ ಗಲಾಟೆ, ಅವರೂದುವ ಕೊಳಲು ದನಿ, ದನಕರುಗಳ ಕೊರಳಿನ ಗಂಟೆಯ ಸದ್ದು, ಹೋರಿಗಳ ಮುಕ್ಕುರು, ಪಕ್ಷಿಗಳು ತಮ್ಮ ತಮ್ಮ ಗೂಡಿಗೆ ಬಂದು ಸೇರುವುದು....ಈ ಹೊತ್ತಿನಲ್ಲಿ ಕೆಲಸದಾಳುಗಳು ತಮ್ಮ ಕೆಲಸ

ಗಳನ್ನು ಮುಗಿಸಿಕೊಂಡು ಧನಿಯರ ಮನೆಯಂಗಳದಲ್ಲಿ ಕುಕ್ಕುರಗಾಲಿನಲ್ಲಿ ಕುಳಿತುಕೊಂಡು, ವೀಳ್ಯವೆಲ್ಲುತ್ತ ತಮ್ಮ ಕೂಲಿಯನ್ನು ಪಡೆದುಕೊಳ್ಳುತ್ತಿರುವ' ಒಂದು ದೃಶ್ಯ. ಈ ವಿಚಾರ ಇಲ್ಲಿ ಉಚಿತವೇ ಎನಿಸಬಹುದಾದರೂ, ಮುಂದೆ ಚೋಮ ತನ್ನ ಮನಸ್ಸಿನ ಇಂಗಿತವನ್ನು ಧನಿಯವರಲ್ಲಿ ತೋಡಿಕೊಳ್ಳಬೇಕೆನ್ನುವುದಕ್ಕಿರುವ ಪೀಠಿಕೆ ಇಲ್ಲಿದೆ. ಇಂಥಾ ಪರಿಸರದಲ್ಲೂ ಚೋಮನ ಮನಸ್ಸು ಯಾವ ರೀತಿ ಇದೆಯೆನ್ನುವುದರಿಂದ ಈ ಭಾಗ ಉಚಿತವೇ ಆಗಿದೆಯೆನಿಸುತ್ತದೆ. ಬಹುಶಃ ಕೆದಂಬಾಡಿಯವರ ಅನುವಾದದ ಗಾತ್ರ ವಿಸ್ತಾರವಾಗುವುದಕ್ಕೆ ಇದೇ ರೀತಿಯ ಹಲವು ಅನಿವಾರ್ಯ ಪರಿಸರ ನಿರ್ಮಾಣಗಳೂ ಕಾರಣವಿರಬೇಕು. ತಾವು ಸ್ವತಃ ಕಂಡ ಚೋಮ ಅವರ ಅಂಗಳದಲ್ಲೇ ಇನ್ನೂ ಓಡಾಡುತ್ತಿದ್ದಾನೆ. ಇದರಿಂದಾಗಿ ಅನುವಾದಕರು ಅಸಹಾಯಕರಾಗಿದ್ದಾರೆನಿಸುತ್ತದೆ.

ತುಳುಭಾಷೆಯ ನುಡಿಗಟ್ಟುಗಳ ಅರ್ಥಪೂರ್ಣ ಪ್ರಯೋಗಗಳು ಅಲ್ಲಲ್ಲಿ ಎದ್ದು ಕಾಣುತ್ತವೆ. "ಇದ್ದ ವೇಷದಲ್ಲಿಯೇ ಅವರು ಹೊರಡುವವರು" ಎನ್ನುವ ಈ ವಾಕ್ಯ (ಚೋ.ದು. 30) "ಯಿತ್ತಿನ ವೇಸೊಡು, ಉಡ್ತಿ ಕುಂಟುಡು, ತೊಟ್ಟು ಕೋಣೊಡು, ಕಟ್ಟಿ ತೊಡಂಕ್‌ಡ್, ದೀಡಿ ಮುಟ್ಟೆಲೆಡ್ ಆಳು ಪಿದಾಡುನಕುಲು...." (44) (ಇದ್ದ ವೇಷದಲ್ಲಿ, ಉಟ್ಟ ಬಟ್ಟೆಯಲ್ಲಿ, ಕಟ್ಟಿದ ತೊಡಂಕಿನಲ್ಲಿ, ತೊಟ್ಟ ಕೋಮಣದಲ್ಲಿ, ಇಟ್ಟ ಮುಟ್ಟಾಳೆಯಲ್ಲಿ—ಅವರು ಹೊರಡುವವರು.)ಇತ್ಯಾದಿ... ಇಂಥಾ ಕೆಲವು ವಿಸ್ತೃತವಾದ ಭಾಗಗಳು ಅನುವಾದಕರ ಅನುಭವದ ಬಿಂದುಗಳಾಗಿ ಅಲ್ಲಲ್ಲಿ ಕಾಣಸುವುದು ಉಂಟು. ಉದಾಹರಣೆಗೆ, ಕೆಲವು ಜಾತಿಯ ಮೀನುಗಳ ಹೆಸರು (ಪು 50), ಘಟ್ಟದ ಬುಡದ ವರ್ಣನೆ, ಉಂಬುರು ಹುಳಗಳಿಂದ ಕಡಿಸಿಕೊಳ್ಳುವ ಅನುಭವ, ಅವನ್ನು ಹತ್ತಿಕ್ಕಲು ಪ್ರಯತ್ನಿಸುವುದು (10/50)ಚೋಮ, ಬ್ರಾಹ್ಮಣರ ಬಗೆಗೆ ಇಟ್ಟುಕೊಳ್ಳುವ ಭಾವನೆ (58)-ಮುಂತಾದುವು. ಮಳೆಗಾಲದ ವರ್ಣನೆ, ಮುಳಿಹುಲ್ಲಿನಲ್ಲಿ ಒಂದು ಪ್ಯಾರಾವಿರುವುದು ಅನುವಾದದಲ್ಲಿ ಒಂದು ಪುಟದಷ್ಟು (45, 67, ಇ.) ವಿಸ್ತೃತವಾಗಿದೆ. ಇಂಥಾ ಕಡೆಗಳಲ್ಲಿ ಅನುವಾದಕರು ಸ್ವಲ್ಪ ಮಟ್ಟಿಗೆ ಹದ್ದುಮೀರಿದಂತೆ ಕಂಡರೂ ಅವು ಅವಾಸ್ತವಿಕವೇನಲ್ಲ. 'ಮನ್ಸ' ಜನಾಂಗದ (ಹೊಲೆಯರ) ಮನರಂಜನೆ, ಕಳ್ಳುಕುಡಿಯುವುದು, ನಿತ್ಯ ಜೀವನದ ವೈವಿಧ್ಯ–ವಿಶ್ಲೇಷಣೆ–ಮುಂತಾದುವು ಮೂಲದ ದೃಷ್ಟಿಯಲ್ಲಿ ಅನಗತ್ಯವೇ (ಪು 80-82). ಆದರೆ, ಆ ಜನಾಂಗದ ಸಂಪ್ರದಾಯಗಳು, ಮದುವೆ (ಮದಿಮೆ) ಇತ್ಯಾದಿಗಳ ವಿವರಣೆ ವಾಸ್ತವವೇ ಆಗಿದೆ. ಸಂಪ್ರದಾಯಗಳು ನಶಿಸುತ್ತಿರುವಂಥಾ ಇಂದಿನ ಕಾಲದಲ್ಲಿ ಹಳೆಯ ಕಾಲದ ಆಚಾರ ವಿಚಾರಗಳು, ನಂಬಿಕೆಗಳು-ಮೊದಲಾದವುಗಳು ಅಧ್ಯಯನ ಯೋಗ್ಯವಾಗಿಯೂ ಇವೆ. ಆ ಜನಾಂಗದಲ್ಲಿ ಇಂಥಾ ಸಂಪ್ರದಾಯಗಳು ಎಲ್ಲೆಡೆಗಳಲ್ಲೂ ಇರಬಹುದೆಂದು ತಿಳಿಯುವುದು ಕಷ್ಟ (80-84). ಸ್ವತಃ ಆ

ಜನಾಂಗದ ಹಲವರಿಗೆ ಗೊತ್ತಿಲ್ಲದ ಅವರದೇ ಆದ ಅನೇಕ ಸಂಪ್ರದಾಯಗಳನ್ನು ಲೇಖಕರು ಇಲ್ಲಿ ಚಿತ್ರಿಸಿದ್ದಾರೆನ್ನುವುದು ವಿಶೇಷ.

ಕೆದಂಬಾಡಿಯವರ ಕಲ್ಪನಾ ವಿಲಾಸ ಅಲ್ಲಲ್ಲಿ ಎದ್ದು ಕಾಣುವುದು ಈ ಕಾದಂಬರಿಯಲ್ಲಿನ ಇನ್ನೊಂದು ವಿಶೇಷತೆ. ಕಾರಂತರು ಹೇಳದೇ ಇರುವ ಅನೇಕ ವಿಚಾರಗಳನ್ನು ಜತ್ತಪ್ಪರೈಗಳು ತಮ್ಮ ಮೂಸೆಯಲ್ಲಿ ಬೇರೆಯೇ ಒಂದು ಪಾಕವಾಗಿ ಎರಕಹೊಯ್ದಿದ್ದಾರೆ. ಒಂದೆಡೆ ಅವರು ಬೆಳದಿಂಗಳನ್ನು 'ಬೊಳ್ಳೆಸೊಪ್ಪು' (ಬಿಳಿಯ ಒಂದು ಜಾತಿಯ ಸೊಪ್ಪು) ಹರಡಿದಂತೆ ಕಾಣುತ್ತದೆ ಎಂದಿದ್ದಾರೆ. ಇದು ಕೆದಂಬಾಡಿಯವರ ಸ್ವಂತಿಕೆಗೆ ಉದಾಹರಣೆ. ಇನ್ನೊಂದೆಡೆ 'ಚೋಮ ಕೊಕ್ಕಡದ ಹಾದಿಯನ್ನು ಹಿಡಿಯುತ್ತಲೇ...' ಎನ್ನುವಲ್ಲಿ ಚೋಮನ ದೈಹಿಕ ಬಳಲಿಕೆಯೊಂದಿಗಿನ ಮಾನಸಿಕ ಯಾತನೆಯನ್ನು ಕೆದಂಬಾಡಿಯವರು ಹೇಳುವ ರೀತಿ "ಸುಸ್ತಾಗಿ ಬೆವರನ್ನು ಒರೆಸಿಕೊಳ್ಳುತ್ತಾನೆ. ಹಣೆಯಲ್ಲಿನ ಬೆವರು ಹನಿಯನ್ನು ಬೆರಳಿನಿಂದ ಸೀಂಟಿ ಸಿಡಿಯುತ್ತಾನೆ. ಧೂಳು ತುಂಬಿದ ಕಾಲು ಭಾರವೆನಿಸಿ ಎತ್ತುವುದಕ್ಕೆ ಅಸಾಧ್ಯವೋ ಅಥವಾ ನಡೆಯುವ ಅವಸರಕ್ಕೆ ದಾರಿಯ ಕಲ್ಲುಗಳೆಡವಿ, ಮುಳ್ಳುನಾಟಿ ನೋಯುತ್ತಿರುವುದರಿಂದ ನಡಿಗೆಯು ನಿಧಾನವಾದರೂ, ಬಳಲಿಕೆಯ ಪರಿವೆಯೇ ಇಲ್ಲದೆ, ನಡಿಗೆಯನ್ನು ನಿಲ್ಲಿಸಲೇ ಇಲ್ಲ..." ಮುಂದೆ ಒಂದೆಡೆ ಬೆಳ್ಳಿ ಬುಟ್ಟಿ ಹೆಣೆಯುವ ಬಗ್ಗೆ ವಿವರಣೆಯನ್ನು ವಿಸ್ತಾರವಾಗಿ ಕೊಡುತ್ತಾರೆ. ಇದು ಕೂಡಾ ಮೂಲದಲ್ಲಿಲ್ಲದ ವಿಚಾರ.

ಇಷ್ಟು ದೀರ್ಘವಾದ ವಿವರಣೆಗಳು ಅಗತ್ಯವೇ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಇವೆಲ್ಲಾ ರೈಗಳ ಕಲ್ಪಕತೆಯೇ ಸರಿ. ಆದುದರಿಂದ ಈ ಕೃತಿ ಕೇವಲ ಅನುವಾದವಲ್ಲ. ಕೇವಲ ಅನುವಾದವೆಂದು ಹೇಳುವುದಾದರೆ ಅನುವಾದಕರ ಈ ಸ್ವತಂತ್ರ ಕಲ್ಪಕತೆಗಳಿಗೆ ಅವಕಾಶವಿಲ್ಲ ನಿಜ. ಜತ್ತಪ್ಪರೈಗಳ ಉದ್ದೇಶ ಕೇವಲ ಅನುವಾದ ಮಾಡುವುದು ಮಾತ್ರ ಅಲ್ಲ. ಚೋಮನದುಡಿಯಂಥಾ ಕಥಾವಸ್ತುವನ್ನಾಯ್ದುಕೊಂಡು ತುಳುವಿನಲ್ಲಿ ಸ್ವತಂತ್ರವಾಗಿ ಬರೆಯುವ ಸಾಮರ್ಥ್ಯ ಕೆದಂಬಾಡಿಯವರಿಗೆ ಇದೆಯೆಂಬುದು ನಿರ್ವಿವಾದ. ಏನಿದ್ದರೂ ಚೋಮ, ಕಾರಂತರ ಹಕ್ಕಿನವ. ಈ ಚೋಮ ಹುಟ್ಟಿಬೆಳೆದು ತನ್ನ ಕಾರ್ಯಕಲಾಪಗಳನ್ನು ಮಾಡುತ್ತಿರುವುದು ಕೆದಂಬಾಡಿಯವರ ಅಂಗಳದಲ್ಲಿ ಎನ್ನುವುದೂ ವಿವೇಚಿಸಬೇಕಾದ ಅಂಶ.

"ಚೋಮನ ಈ ಸಂಕಟವೆಂಬ ಪ್ರವಾಹವನ್ನು ದಾಟಬೇಕಾದರೆ ಕಳ್ಳೆದೋಣಿ, ಮೆಟ್ಟುವ ದುಡಿಯೇ ಚುಕ್ಕಾಣಿ, ಈ ಸಂಕಟಕ್ಕೆ ಬೇರೇನು ಮದ್ದು?" (ಪು 108) ಇಲ್ಲಿ ಹೊಲೆಯ ಜನಾಂಗದ ಅತ್ಯಂತ ಸಮೀಪದ ಅಧ್ಯಯನದಿಂದ ಬಂದದ್ದಾದರೆ, ಪುಟ 109ರಲ್ಲಿ ಆ ಜನಾಂಗದಲ್ಲಿನ ಶವಸಂಸ್ಕಾರ, ಉತ್ತರಕ್ರಿಯೆಗಳೂ ಅಷ್ಟೇ

ಪ್ರತ್ಯಕ್ಷವಾಗಿ ಮೂಡಿವೆ. ಇಂಥಾ ಅನೇಕ ಸಂದರ್ಭ, ವಿಚಾರಗಳನ್ನು ಈ ಕೃತಿಯಿಂದ ಉದಾಹರಿಸಬಹುದು. ಕೆದಂಬಾಡಿಯುವರು ಸ್ವತಃ ಕವಿಹೃದಯದವರು. ಪ್ರಕೃತ ಕೃತಿಯು ವಸ್ತು, ವಿನ್ಯಾಸ, ವಿಶ್ಲೇಷಣೆ, ಅಂತರಂಗಗಳನ್ನು ಚೆನ್ನಾಗಿ ಬಲ್ಲವರು. 115 ಪುಟಗಳ ಕನ್ನಡ ಕೃತಿಯನ್ನು ತಮ್ಮ ಮಾತೃಭಾಷೆಯಲ್ಲಿ 183 ಪುಟಗಳಲ್ಲಿ ಹಿಡಿದಿಟ್ಟವರು. ಚೋಮನ ದುಡಿಯು 'ಡಮು-ಢಕ್ಕ-ಢಕ್ಕಡಮು'ವನ್ನು-

"ಬೆಂದ್‌ಂಡ ಉಣ್ಬ ಬೆಂದ್‌ಂಡ ಉಣ್ಬ ಬಂಜಾರೋ ಉಣ್ಬ
ಮನ್ಸೆರೆ ಬೊಟ್ಟೊಡು ಗುಮ್ಮೆ ಗೂರೊಡು
ನೂರಿ ಗುಮ್ಮೆ ಗೂರಂದೆ ಉಪ್ಪುವೊ" (182)
ಎಂದರೆ
ಗೈದರೆ ತಿನ್ನುವೆ ಗೈದರೆ ತಿನುವೆ ಹೊಟ್ಟೆ ತುಂಬಾ
ಹೊಲೆಯರ ಗುಡಿಲಲ್ಲಿ ಗೂಗೆ ಗೂರಲಿ
ಹೊಕ್ಕ ಗೂಗೆ ಗೂರದಿರುವುದೇ ?

-ಎಂಬ ಸಾಂಕೇತಿಕ ಅರ್ಥವಿಶೇಷದ ಮಾತನ್ನು ಧ್ವನಿಸುತ್ತಾರೆ.

ಇನ್ನು, ಕೊನೆಯ ಸಾಲುಗಳನ್ನು ವಿಶೇಷವಾಗಿ ನೋಡಬೇಕು. ಮೂಲದಲ್ಲಿ ಚೋಮ—

"ಹಿಡಿದ ದುಡಿ, ಎತ್ತಿದ ಕೈ, ತುಂಬಿದ ಆವೇಶ ! ಎಲ್ಲವೂ ಇದ್ದಕ್ಕಿದ್ದಂತೆಯೇ ಇವೆ, ಆದರೆ ಚೋಮನಿಲ್ಲ." (ಚೋ. ದು. 115)
ಕೆದಂಬಾಡಿಯವರ ಚೋಮ-

"ತಬ್ಬಿ ಹಿಡಿದ ದುಡಿ, ಎತ್ತಿ ಹಿಡಿದ 'ಬಾಕೋಲು' ಎಳೆದು ಬಿಟ್ಟ 'ಪೂಂಬೆ' ಕೋಲು, ಆವೇಶಭರಿತ ದೇಹ, ಇರುವುದೆಲ್ಲಾ ಇನುವಂತೆಯೇ, ಇರುವ ರೀತಿಯಲ್ಲೇ, ಇರುವಲ್ಲೇ ಇವೆ",

ಸುರಿದ ಬೆವರು ಆರುವುದಿಲ್ಲ, ತೊಟ್ಟಿಕ್ಕುವ ಕಣ್ಣೀರು ಮಾಸುವುದಿಲ್ಲ, ಆದರೆ ಚೋಮ ಮಾತನಾಡುವುದಿಲ್ಲ. ದುಡಿ ಧ್ವನಿಸುವುದಿಲ್ಲ...ಅಯ್ಯೋss .."
(ಪು 183)

'ಚೋಮ ಇನ್ನಿಲ್ಲ'ವೆನ್ನುವ ಮಾತಿನಲ್ಲಿ ಅಡಗಿರುವ ಧ್ವನಿಯನ್ನು ತುಳುವಿನ ಜಾಯಮಾನಕ್ಕೆ ತಕ್ಕಂತೆ ಇದಕ್ಕಿಂತ ಪರಿಪೂರ್ಣವಾಗಿ ಹೇಳುವುದು ಅಸಾಧ್ಯ.

ತುಳು ಚೋಮನ ದುಡಿಯನ್ನು, ವಿವರಣಾತ್ಮಕವಾದ ಭಾವಾನುವಾದವೆಂದರೆ ಹೆಚ್ಚು ಸರಿಯಾದೀತು. ಚೋಮನ ಅಂತರಂಗ, ಆತನ ಪರಿಸರ, ಹೊಲೆಯ-ಬ್ರಾಹ್ಮಣರೊಳಗಿನ ಸಂಬಂಧ ಅಂದಿನ ಸಮಾಜದಲ್ಲಿ ಅವರ ಸ್ಥಾನಮಾನ, ಚೋಮನ ಸಂಸ್ಕಾರ-ಸಂಪ್ರದಾಯಗಳು, ಆತನ ಮಾನಸಿಕ ತುಡಿತಗಳಿಗೆ ಆತನು

ದುಡಿಯನ್ನು ಬಳಸಿಕೊಳ್ಳುತ್ತಿದ್ದ ರೀತಿ, ಅದರ ಧನಿಯ ಸಾಂಕೇತಿಕತೆ–ಇತ್ಯಾದಿಯಾಗಿ ಅನೇಕ ವಿಚಾರಗಳು ಕೆದಂಬಾಡಿಯವರ ಕೃತಿಯಲ್ಲಿ ಮೂಡಿದಾಗ, ತುಳುವಿಗೆ ಅತ್ಯಂತ ಸಹಜವಾದ, ತುಳುವಿನ ಸೊಗಸು–ಸೊಗಡುಗಳಿಂದ ಕೂಡಿದ ಉತ್ತಮ ಕೃತಿಯಾಗಿ ಬಂದಿದೆಯೆನ್ನಬೇಕು.

ಇದರೊಂದಿಗೆ, ಕೆದಂಬಾಡಿಯವರ ಗದ್ಯಶೈಲಿಯ ಬಗೆಗೂ ಒಂದೆರಡು ಮಾತುಗಳನ್ನು ಸೇರಿಸಬೇಕು. ತುಳುವಿನಲ್ಲಿ ಸಾಹಿತ್ಯಿಕವಾದ ಗದ್ಯಶೈಲಿಯೊಂದು ಸಿದ್ಧವಾಗುತ್ತಿರುವ ಈ ಕಾಲದಲ್ಲಿ ಈ ಕೃತಿಯಲ್ಲಿನ ಕೆಲವು ಭಾಗಗಳನ್ನು ವಿಶೇಷವಾಗಿ ಗುರ್ತಿಸಬಹುದು. ಕೆದಂಬಾಡಿಯವರದ್ದು ಆಡುಮಾತಿನ ಶೈಲಿಯೇ ಹೆಚ್ಚಿನೆಡೆಗಳಲ್ಲಿ ಕಂಡುಬರುತ್ತದಾದರೂ ಅದರಲ್ಲಿ ಶಬ್ದ ಮೈಲಿಗೆಯಾಗಲೀ ಮಡಿವಂತಿಕೆಯಾಗಲೀ ಕಾಣಿಸುವುದಿಲ್ಲ. ತುಳುವಿನ ಅನೇಕ ನುಡಿಗಟ್ಟುಗಳು, ಗಾದೆಗಳು ಬೈಗಳು ಪದಗಳನ್ನು ಇಲ್ಲಿಂದ ಆಯ್ದುಕೊಳ್ಳಬಹುದು. ಉದಾ : ಪಂಡಿಬೆಲೆ ಪಾಡಿನುಪ್ಪು (ಹೇಳಿದ ಕೆಲಸ ಹಾಕಿದ ಕೂಳು). ದಿಕ್ಕೆಲ್‌ನ್ ಕೋರಿ ಒಕ್ಕುಂಡು (ಮನೆಯಲ್ಲಿ ಬೇಯಿಸುವುದಕ್ಕೇನೂ ಇಲ್ಲ)(10), ತಿಗಲೆಗ್ ಬೆಚ್ಚ ನೀರ್ (ಆಸೆಗೆ ಬಿಸಿನೀರು ಹೊಯ್ಯು) (20) ಇತರೆಪಾಡ್ಡ್ ಜೆಪ್ಪು(ವಿಚಾರವನ್ನೇ ಬಿಟ್ಟುಬಿಡು) (140), ಹಾಗೆಯೇ, ಗಾದೆಗಳು (ಮನಸ್ಸ್‌ಮುನಿಂಡ ಮರ್ದ್ ಉಂಡು, ಮಣ್ಣ್ ಮುನಿಂಡ ಮರ್ದ್ ಇದ್ದಿ)ಮನಸ್ಸು ಮುನಿದರೆ ಮದ್ದು ಉಂಟು,ಮಣ್ಣು ಮುನಿದರೆ ಮದ್ದಿಲ್ಲ) (27), ಗೋಣನ ಪಿರಾವು ಕುದಿಕ್ಕ್ ಪೋಯಿ ನಂಚ (ಕೋಣನ ಹಿಂದೆ ನರಿಹೋದಂತೆ ವ್ಯರ್ಥ ಪ್ರಯತ್ನ)(73) ಬಿರ್ಮಣೆರೆ ಮಡೆಕ್ಕ್ ಕಕ್ಕೆ ಕಾತದ್ ಕುಲ್ಲುಪಿಲೆಕೊ (ಬ್ರಾಹ್ಮಣರ ಎಂಜಲಿಗೆ ಕಾಗೆ ಕಾಯುವಂತೆ) (92), ಕೋಲೋಗುದಾಂತಿ ಕೊಂಬು ಸಾವುಗೊ ? (ಕೋಲಕ್ಕಿಲ್ಲದ ಕೊಂಬು ಬೊಜ್ಜಕ್ಕೊ?) (115) ಆ ಕಾನಗ್ ಈ ಮುಂಜು (ಆ ಕಾಡಿಗೆ ಈ ಮುಂಸು) (132), ಉಂದಾಯಿ ಪಾತೆರೊಗು ಸಂದಾಯ ಇದ್ದಿ (ಹೌದಾದ ಮಾತಿಗೆ ಸಂದಾಯವಿಲ್ಲ) (136)–ಇತ್ಯಾದಿ.

ಜತ್ತಪ್ಪರೈಗಳು ತಮ್ಮ ಅನುವಾದದಲ್ಲಿ ಮಾಡಿಕೊಂಡ ಚಿಕ್ಕಪುಟ್ಟ ಬದಲಾವಣೆಗಳೂ ಇವೆ. ಭೋಗನಹಳ್ಳಿ-ಬೋಗಾಯನಕೇರಿಯಾದರೆ ಸಂಕಪ್ಪಯ್ಯ ಸಂಕಯ್ಯರಾಗಿದ್ದಾರೆ. ಚೋಮನ ನಾಯಿಗೆ ಬಾಡುವೆಂಬ ನಾಮಕರಣವನ್ನು ಮಾಡಿದ್ದಾರೆ. ಕಾರಂತರ ಕಾಳನಿಗೆ ಎಂಟುವರ್ಷವಾದರೆ ರೈಗಳು ಅದನ್ನು ಹನ್ನೆರಡಕ್ಕೇರಿಸಿದ್ದಾರೆ. ಇಷ್ಟೇ. ಡಮ-ಡಕ್ಕ-ಡಕ್ಕ-ಡಮ ಎಂಬ ದುಡಿಯ ಸದ್ದಿಗೆ ''ಬೆಂ-ದಂ-ಡುಣ್-ಬಾ'' (ಗೆಣಸ್-ದರೆ ತಿನುವೆ)ಎಂಬ ಅರ್ಥವತ್ತಾದ ಧ್ವನಿಯನ್ನು ಕೊಟ್ಟಿದ್ದಾರೆ. ಈ ಕೆಲವು ಸಣ್ಣಪುಟ್ಟ ವ್ಯತ್ಯಾಸಗಳನ್ನು ಬಿಟ್ಟರೆ ಕಥೆಯಲ್ಲಾಗಲಿ ಕಥೆಯ ನಡಿಗೆಯಲ್ಲಾಗಲೀ ಇನ್ನಾವುದೇ ಬದಲಾವಣೆಗಳಿಲ್ಲ.

ತುಳು ಚೋಮನ ದುಡಿಯು ಅನುವಾದವೇ ಅಲ್ಲವೆ ಎಂಬುದು ವಾದಗ್ರಸ್ತ ವಿಷಯವಾಗಬಾರದು. ಕಾರಂತರು ನೋಡಿದ ಚೋಮನನ್ನು ಕೆದಂಬಾಡಿಯವರು ನಮ್ಮ ಮುಂದೆ ಮತ್ತೆತಂದು ನಿಲ್ಲಿಸಿದ್ದಾರೆ. ಮತ್ತೆ ಜೀವ ತುಂಬಿ ತುಳು ನಾಡಿಗೆ ಪರಿಚಯಿಸಿದ್ದಾರೆ. ತುಳು ಸಾಹಿತ್ಯ ಚರಿತ್ರೆಯಲ್ಲಿ, ತುಳು ಗದ್ಯ ಶೈಲಿಯಲ್ಲಿ, ತುಳು ಭಾಷೆಯ ಸೂಕ್ಷ್ಮ ಸಂವೇದನಾಶೀಲ ಅಭಿವ್ಯಕ್ತಿಯಲ್ಲಿ 'ತುಳು ಚೋಮನ ದುಡಿ'ಗೆ ಪ್ರತ್ಯೇಕವಾದ ಸ್ಥಾನವಿದೆ, ಇದರ ಯಶಸ್ಸು ಕೆದಂಬಾಡಿಯವರದ್ದು.

ಅಡಿಟಿಪ್ಪಣಿಗಳು

1. ಈ ಕೃತಿಯಲ್ಲಿನ ಭಾಷೆಯ ಬಗೆಗೆ ಲೇಖಕ ಪಣಿಯಾಡಿಯವರು- "ಈ ಭಾಷೆಯು ನಿಜವಾದ ತುಳುಭಾಷೆಯಾಗಿರದೆ ಅದೊಂದು ಸ್ವತಂತ್ರಮಾರ್ಗವನ್ನೇ ಅವಲಂಬಿಸಿಕೊಂಡಿದೆ ಎಂಬುದರಲ್ಲಿ ಅನುಮಾನವಿಲ್ಲ" ಎಂದಿದ್ದಾರೆ (ಮುನ್ನುಡಿ: ಪು. ii).
2. ಪ್ರಕೃತ ಲಭ್ಯವಿರುವ ಕೃತಿಗಳಲ್ಲಿ ವಿಷ್ಣುತುಂಗ ಕವಿಯ 'ಶ್ರೀಭಾಗವತೊ' ಕಾವ್ಯ ಕೃತಿಯು (17ನೇ ಶ.) ಶಿವಳ್ಳಿ ತುಳುವಿನಲ್ಲಿ ರಚನೆಯಾದ, ತುಳು ಸಾಹಿತ್ಯದ ಮೊದಲಕೃತಿ. ಶ್ರೀ ವೆಂಕಟರಾಜ ಪುಣಿಂಚತ್ತಾಯರು, ವಿಸ್ತಾರವಾದ ಹಾಗೂ ವಿಮರ್ಶಾತ್ಮಕ ಮುನ್ನುಡಿಯೊಂದಿಗೆ ಸಂಪಾದಿಸಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯದಿಂದ ಇದು ಪ್ರಕಟಿತವಾಗಿದೆ (1984).
3. "...ಯಾನ್ ಆರೆ ಕಾರ ಮುದೆಲ್ತ್ ಗೊಬ್ಬು ಬಾಲೆ! ಅಂಡಲಾ ಆ ಮೋರು ಸಗ್ಗಿದ ದುಂಬು ಯಾನ್ ಪರಪ್ಪುನ ಪೊರುಕುಲ್ಲ..." (ತು. ಚೋ. ದು. : ಅರ್ಪಣೆ)
4. ಈ ದೃಶ್ಯವು ದಕ್ಷಿಣ ಕನ್ನಡದ ಕೆಲವೆಡೆಗಳಲ್ಲಿ ಇಂದಿಗೂ ಕಾಣಸಿಗುವುದು.
5. ಕಾರಂತರು ಬಳಸಿದ 'ದುಡಿ' ಪದಕ್ಕೆ ಅಲ್ಲಿ ಮುಖ್ಯವಾಗಿ ಎರಡು ಅರ್ಥಗಳಿವೆ: ದುಡಿತ, ಮತ್ತು ದುಡಿಯೆಂಬ ಚರ್ಮವಾದ್ಯ. ಆದರೆ ದುಡಿತವೆಂಬ ಅರ್ಥದಲ್ಲಿ ತುಳುವಿನಲ್ಲಿ 'ದುಡಿ'ಯೆಂಬ ಪ್ರಯೋಗವಿಲ್ಲ. ದುಡಿ ಎಂಬುದಕ್ಕೆ ಮಡಿಸುದು ಎಂಬ ಅರ್ಥವಿದೆ.

ಆಕರ

1. ಚೋಮನದುಡಿ : 1977 : ಶಿವರಾಮಕಾರಂತ : ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು
2. ತುಳು ಚೋಮನದುಡಿ : 1983 : ಅನು : ಕೆದಂಬಾಡಿಜತ್ತಪ್ಪರೈ : ತೆಕ್ಕುಂಜ ಅಭಿಮಾನಿ ಬಳಗ, ಹೈದರಾಬಾದು.
3. ತುಳುವ ಅಕ್ಟೋಬರ್-ಡಿಸೆಂಬರ 1981-1982. ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ, ಉಡುಪಿ
4. ಪೊರ್ಲು : 1983 : ಸಂ. ವಿಶುಕುಮಾರ್ : ತುಳುಕೂಟ, ಬೆಂಗಳೂರು.
5. ಸತೀಕಮಲೆ : 1936 : ಎಸ್.ಯು. ಪಣಿಯಾಡಿ : ತುಳುನಾಡು ಛಾಪಖಾನೆ, ಉಡುಪಿ
6. ಸ್ವಾತಂತ್ರ್ಯಪೂರ್ವ ತುಳು ಸಾಹಿತ್ಯ : 1982 : ಸಂ. ಕು. ಶಿ. ಹರಿದಾಸಭಟ್ಟ : ರಾ. ಗೋ. ಪೈ. ಸಂಶೋಧನ ಕೇಂದ್ರ, ಉಡುಪಿ

ಹೊಸಗನ್ನಡದಲ್ಲಿ ಇತ್ತೀಚಿನ ಕೆಲವು ಪ್ರಯೋಗಗಳು

ಉಪ್ಪಂಗಳ ರಾಮಭಟ್

ಮಾನವನ ಜೀವನದಂತೆ ಅವನ ಭಾಷೆಯೂ ಪರಿವರ್ತನಶೀಲ. ಇದನ್ನೇ ಭಾಷೆಯ ಬೆಳವಣಿಗೆ ಅಥವಾ ವ್ಯತ್ಯಾಸ, ವಿಕಾಸ ಎಂದೂ ಕರೆಯಲಾಗುತ್ತದೆ. ಸಂಪರ್ಕವಿರುವ ಭಾಷೆಗಳೊಳಗೆ ಕೊಳುಕೊಡುಗೆಗಳೂ ನಡೆಯುತ್ತವೆ. ಧ್ವನಿ, ಅರ್ಥ, ಪ್ರಯೋಗಗಳಲ್ಲಿ ಕಾಲದಿಂದ ಕಾಲಕ್ಕೆ ವ್ಯತ್ಯಾಸ ತಲೆದೋರಬಹುದು. ಕೆಲವೊಮ್ಮೆ ಸೌಲಭ್ಯಾಕಾಂಕ್ಷೆಯೇ ಈ ವ್ಯತ್ಯಾಸಗಳಿಗೆ ಮುಖ್ಯ ಕಾರಣವಿರಬಹುದು. ವ್ಯತ್ಯಾಸಗಳು ತನ್ನಿಂತಾನೇ ಆಗಬಹುದು, ಉದ್ದೇಶಪೂರ್ವಕವಾಗಿಯೂ ಆಗಬಹುದು. ಎಲ್ಲೋ ಒಂದೆಡೆ ತೊಡಗಿದ ಬದಲಾವಣೆ ಇತರರಲ್ಲಿ ಹಬ್ಬಿ ಎಲ್ಲರಿಂದ ಸ್ವೀಕೃತವಾದರೆ ಗಟ್ಟಿಗೊಳ್ಳುತ್ತದೆ. ಒಂದೊಂದು ಸೀಮಿತ ಪ್ರದೇಶದಲ್ಲಿ ತೊಡಗಿದ ಒಂದು ವ್ಯತ್ಯಾಸ ಸಾಮೂಹಿಕ ಮಾಧ್ಯಮಗಳ ಮೂಲಕ ಈಗ ಹೆಚ್ಚು ಮಂದಿಗೆ ತಲಪುವಂತಾಗಿ ವ್ಯತ್ಯಾಸದ ವೇಗ ಹೆಚ್ಚಿದೆ. ಬಾನುಲಿ, ವಾರ್ತಾ ಪತ್ರಿಕೆ, ದೂರದರ್ಶನ, ಸಿನೆಮಾದಂತಹ ಪ್ರಭಾವಶಾಲಿ ತ್ವರಿತ ಮಾಧ್ಯಮಗಳ ಮೂಲಕ ಜನರಿಗೆ ಭಾಷೆ ಬೇಗ ತಲಪುವುದರಿಂದ ಏನೇ ಒಂದು ವ್ಯತ್ಯಾಸವನ್ನು ಇವು ಎತ್ತಿಕೊಂಡರೂ ಅದು ಬಹುಬೇಗನೇ ಹಬ್ಬುತ್ತದೆ. ಪ್ರಾಚೀನ ಕಾಲದಲ್ಲಿ ಈ ಮಾಧ್ಯಮಗಳು ಇಲ್ಲದಿದ್ದುದರಿಂದ ಭಾಷಾ ಪರಿವರ್ತನೆ ಬಹಳ ನಿಧಾನವಾಗಿತ್ತು. ಕನ್ನಡದ ನಾಲ್ಕು ಅವಸ್ಥೆಗಳಿಗೆ–ಪೂರ್ವದ ಹಳಗನ್ನಡ (ಕ್ರಿ. ಶ 850 ರವರೆಗೆ) ಹಳಗನ್ನಡ (ಕ್ರಿ ಶ. 850–1050) ನಡುಗನ್ನಡ (ಕ್ರಿ. ಶ 1050–1800) ಹೊಸಗನ್ನಡ (ಕ್ರಿ.ಶ. 1800 ರಿಂದ) ಪರಸ್ಪರ ಮಧ್ಯದಲ್ಲಿ ಶತಮಾನಗಳ ಅಂತರವಿದೆ. ಒಂದರಿಂದ ಒಂದು ಅವಸ್ಥೆಗೆ ಸ್ಪಷ್ಟ ವ್ಯತ್ಯಾಸಗಳು ತೋರಲು ಸುದೀರ್ಘ ಅವಧಿ ಬೇಕಾಯಿತು. ಅಂದರೆ ಯಾವುದೇ ಬದಲಾವಣೆ ಸಾಮೂಹಿಕವಾಗಿ ಬಹಳ ನಿಧಾನವಾಗುತ್ತಿತ್ತು. ಈ ಸಮೂಹ ಮಾಧ್ಯಮಗಳ ಬಳಕೆಯ ಮೊದಲಿದ್ದ ಕನ್ನಡ ಭಾಷೆಯ ಮತ್ತು ಈಗಿನ ಭಾಷೆಯ ಅಂತರವನ್ನು ಕೇವಲ ಒಂದೆರಡು ದಶಕಗಳಲ್ಲೇ ಗುರುತಿಸುವಂತಾಗಿದೆ.

ಆಧುನಿಕ ಮಾನವನ ಜೀವನದಲ್ಲಿ ವಿಜ್ಞಾನವು ಬಹಳ ಪರಿಣಾಮಗಳನ್ನು ಮಾಡಿರುವುದರಿಂದ ಅದಕ್ಕನುಸರಿಸಿ ಹೊಸ ಹೊಸ ಶಬ್ದಗಳು ಸೇರಿಕೊಳ್ಳುವುದು ಸಹಜ. ಹೊಸಜೀವನದಲ್ಲಿ ಅವಸರ ಹೆಚ್ಚಿ ತಾಳ್ಮೆ ಕಡಿಮೆಯಾದುದರಿಂದ ಭಾಷೆಯನ್ನು ಸಂಕುಚಿತಗೊಳಿಸುವ ಸೌಲಭ್ಯಾಕಾಂಕ್ಷೆ ಹೆಚ್ಚುತ್ತಿದೆ. ಇದರಿಂದ ಅಸ್ಪಷ್ಟತೆಗೆ ಅವ

ಕಾಶವಾಗಬಹುದು. ಮಾತಾಡುವ, ಕೇಳುವ ವ್ಯಕ್ತಿಗಳು ಸಮ್ಮುಖದಲ್ಲಿದ್ದಾಗ ಪ್ರಯೋಗದಲ್ಲಿ, ಶಕ್ತಿವ್ಯಯದಲ್ಲಿ ಎಷ್ಟು ಕೃಪಣತೆಯನ್ನು ತೋರಿದರೂ, ಹುಟ್ಟಿದ ಸಂದೇಹವನ್ನು ಅಲ್ಲೇ ಪರಿಹರಿಸಲು ಸಾಧ್ಯವಿದೆ. ಆದರೆ ಬರವಣಿಗೆಯಲ್ಲಿ ಸಂದೇಹ ತೋರಿದರೆ ಪರಿಹಾರಕ್ಕೆ ಬರೆದ ವ್ಯಕ್ತಿ ಅಲ್ಲಿರುವುದಿಲ್ಲ. ಆದ್ದರಿಂದ ಬರವಣಿಗೆಯಲ್ಲಿ ಸ್ಪಷ್ಟತೆ ಮತ್ತು ನಿರ್ದಿಷ್ಟತೆ, ನಿರ್ದುಷ್ಟತೆ ಇರಲೇಬೇಕು. ಆದ್ದರಿಂದ ಈಗಿನ ತ್ವರಿತ ಸಮೂಹ ಮಾಧ್ಯಮಗಳು ಭಾಷೆಯ ಬಗೆಗೆ ಅತ್ಯಂತ ಶ್ರದ್ಧೆ ವಹಿಸಬೇಕು. ಕ್ಷುಲ್ಲಕವಾದ ತಪ್ಪನ್ನೇ ಆದರೂ ಇವು ಹಬ್ಬಿಸುವ ವೇಗ ಅದ್ಭುತವಾದದ್ದು, ಪರಿಣಾಮಕಾರಿಯಾದದ್ದು. ರೋಗವನ್ನು ಗುಣಪಡಿಸುವ ಕಾರ್ಯ ಅತಿ ಶೀಘ್ರವಾಗಲು ವೈದ್ಯನು ಪ್ರಯೋಗಿಸಿದ ಚುಚ್ಚುಮದ್ದು ವಿರುದ್ಧವಾದರೆ ಹೇಗೆ ವಿಪರೀತ ಪರಿಣಾಮವೋ ಹಾಗೆ ಈ ಮಾಧ್ಯಮಗಳಿಂದ ವಿಪರೀತ ಪರಿಣಾಮಗಳಾಗಬಹುದು. ತುರ್ತುವಾರ್ತೆಗಳನ್ನು ಪ್ರಕಟಿಸುವ ಅವಸರದಲ್ಲಿ ಶಬ್ದಪ್ರಯೋಗ ಅಬದ್ಧವಾದರೆ ಪರಿಣಾಮವೇನಾದೀತೆಂದು ಯೋಚಿಸಬೇಕು.

ಈ ಹಿನ್ನೆಲೆಯಲ್ಲಿ ಈಗಿನ ಕನ್ನಡ ಭಾಷೆಯ ಕೆಲವು ಪ್ರಯೋಗಗಳನ್ನಿಲ್ಲಿ ವಿಶ್ಲೇಷಿಸಬಹುದು.

ನಾಮವಿಭಕ್ತಿ ಪ್ರತ್ಯಯಗಳು, ಆಖ್ಯಾತ ಪ್ರತ್ಯಯಗಳು, ಲಿಂಗವಾಚಕಗಳು ಸರಿಯಾಗಿ ಪ್ರಯೋಗವಾಗದಿದ್ದಲ್ಲಿ ಸಂದೇಹಗಳು ತಲೆದೋರಬಹುದು. ಪ್ರಥಮಾ ವಿಭಕ್ತಿ–ಇದಕ್ಕೆ ಪ್ರತ್ಯಯವಿಲ್ಲ, ಕೇವಲ ಪ್ರಾತಿಪದಿಕವೇ ಪ್ರಥಮಾರ್ಥವನ್ನು ಕೊಡುತ್ತದೆಂದು ಆಧುನಿಕ ಭಾಷಾವಿಜ್ಞಾನಿಗಳು ಪ್ರತಿಪಾದಿಸಿದ್ದಾರೆ. ಕಳೆದ ದಶಕದವರೆಗೂ 'ಉ' ಪ್ರಥಮಾ ಪ್ರತ್ಯಯದ ರೀತಿಯಲ್ಲಿ ಬಳಕೆಯಾಗುತ್ತಿತ್ತು. ಆಡುಮಾತಿನಲ್ಲಿ, ಕೆಲವೆಡೆ ವಿಭಕ್ತಿಪ್ರತ್ಯಯಗಳನ್ನು ಲೋಪಿಸಿ ಹೇಳುವುದಿದೆ. ಒಂದು ವಾಕ್ಯದಲ್ಲಿ ಒಂದಕ್ಕಿಂತ ಹೆಚ್ಚು ವಿಭಕ್ತಿಗಳನ್ನು ಲೋಪಿಸಿದರೆ ಸಂದೇಹಕ್ಕೆ ಅವಕಾಶವಾಗಬಹುದು. ಪ್ರಥಮಾ ವಿಭಕ್ತಿಯು ಕರ್ತೃತ್ವವನ್ನು ಇಂತಹ ಕಡೆಗಳಲ್ಲಿ ಪ್ರತ್ಯೇಕವಾಗಿ ಸೂಚಿಸಲು 'ಉ' ವನ್ನು ಒಳಸತೊಡಗಿ ರೂಢಿಗೊಂಡಿರಬಹುದು. ಕೆಲವೆಡೆ ವ್ಯಂಜನಾಂತಗಳಿಗೆ ಉಚ್ಚಾರಣಾರ್ಥವಾಗಿಯೂ 'ಉ' ಸೇರುತ್ತದೆ. ಉದಾ :– ''ಇಲಿ ಬೆಕ್ಕು ನೋಡಿ ಓಡಿತು'' ಇಲ್ಲಿ ಎರಡೂ ನಾಮಪದಗಳು. ವಿಭಕ್ತಿ ಲೋಪವಾಗಿರುವುದರಿಂದ ಮೇಲ್ನೋಟಕ್ಕೆ ಕರ್ತೃ-ಕರ್ಮ ಸ್ಪಷ್ಟವಾಗುವುದಿಲ್ಲ. 'ಇಲಿಯು' ಎಂದು ಪ್ರಯೋಗಿಸಿದರೆ ಕರ್ತೃ ಸ್ಪಷ್ಟವಾಗುತ್ತದೆ. 'ರಾಮ' ಮೊದಲಾದ ಅಕಾರಾಂತ ಶಬ್ದಗಳಲ್ಲಿ ಪುಲ್ಲಿಂಗಸೂಚಕ 'ನ್' ಉಚ್ಚಾರಣಾರ್ಥದ 'ಉ' ಸೇರಿ 'ರಾಮನು' ಎಂದು ಪ್ರಥಮಾ ವಿಭಕ್ತಿ ಏಕವಚನ ಪುಲ್ಲಿಂಗವನ್ನೂ ಸ್ಪಷ್ಟಪಡಿಸುತ್ತದೆ. ಆದರೆ ಈಗಿನ ಭಾಷೆಯಲ್ಲಿ ಲಿಂಗವಚನ ಎರಡನ್ನೂ ಬಿಟ್ಟು ಕೇವಲ 'ರಾಮ'

ಮಾತ್ರ. ಉದಾ: ರಾಮ ಹೋದ, (ರಾಮನು ಹೋದನು, ಹಿಂದಿನ ಪ್ರಯೋಗ) ತಮಿಳು, ಮಲಯಾಳಗಳಲ್ಲಿ ಇಂದಿಗೂ ಲಿಂಗವಚನ ಸೂಚಕ ಅಂಶ ಸ್ಪಷ್ಟವಾಗಿದ್ದು 'ರಾಮನ್' ಎಂದೇ ಪ್ರಯೋಗಿಸಲಾಗುತ್ತದೆ. ಇತ್ತೀಚೆಗೆ ಒಂದೇ ನಾಮಪದ (ಹೆಸರು) ಪುಲ್ಲಿಂಗದಲ್ಲೂ ಸ್ತ್ರೀಲಿಂಗದಲ್ಲೂ ಸಮಾನವಾಗಿ ಬಳಕೆಯಾಗುವುದರಿಂದ ಸ್ತ್ರೀ ಸೂಚಕ 'ಳು' ನಾಮಪದದೊಂದಿಗೆ ಸೇರಲೇಬೇಕಾಗುತ್ತದೆ. ಉದಾ :- ಸುಗುಣ, ವಿನಯ, ಸ್ತ್ರೀಯಾದಲ್ಲಿ ಸುಗುಣಳು, ವಿನಯಳು, ಎನ್ನಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಸ್ತ್ರೀ ನಾಮಪದಗಳು ಪ್ರಸಿದ್ಧವಾದ ಸ್ತ್ರೀವಾಚಕಗಳೇ ಆಗಿದ್ದರಿಂದ 'ಳು' ಬೇಕಾಗಿರಲಿಲ್ಲ.- ಗೌರಿ, ಲಕ್ಷ್ಮಿ, ಸೀತೆ. ನಪುಂಸಕದಲ್ಲಿ ಕೇವಲ 'ಉ' (ವು, ಯು) ಸೇರುವುದಿತ್ತು- ನೆಲವು, ಮರವು, ಮನೆಯು ಇತ್ಯಾದಿ. ಈಗ ಇವುಗಳನ್ನು ಕೈಬಿಡಲಾಗಿದೆ. ನಾಮಪದದಲ್ಲಿ ಲಿಂಗವಚನ ಸೂಚನೆಯಿಲ್ಲದಲ್ಲಿ ಕ್ರಿಯಾಪದವನ್ನೇ ಕಾದುನೋಡಬೇಕು (ಹೋಗುತ್ತಾನೆ, ಹೋಗುತ್ತಾಳೆ, ಹೋಗುತ್ತದೆ). ನಾಮಪದ ಕ್ರಿಯಾಪದಗಳೆರಡರಲ್ಲೂ ಲಿಂಗವಚನಸೂಚಕ ಅಂಶಗಳಿರುವುದು ಅಲ್ಲಿಂದಲ್ಲಿಗೇ ಸ್ಪಷ್ಟತೆಗೆ ಅನುಕೂಲ.

ದ್ವಿತೀಯಾ ಪ್ರತ್ಯಯ ಅನ್

ಪೂರ್ವದ ಹಳಗನ್ನಡದಲ್ಲಿ ಅನ್, ಹಳಗನ್ನಡದಲ್ಲಿ ಅನ್, ಅ (ಮ) (೦), ಹೊಸಗನ್ನಡದಲ್ಲಿ ನಕಾರಕ್ಕೆ ದ್ವಿತ್ವ ಮತ್ತು ಉಚ್ಚಾರಣಾರ್ಥ'ಉ' ಕಾರ ಸೇರಿ ಅನ್ನು ಎಂದೇ ಪ್ರಯೋಗವಾಗುತ್ತಿತ್ತು. ವ್ಯಂಜನಾಂತಗಳಲ್ಲೆಲ್ಲಾ ಹೆಚ್ಚಾಗಿ 'ಉ' ಕಾರವೇ ಇರುವುದರಿಂದ ಇಲ್ಲೆಲ್ಲಾ ಅದು ಸಹಜ. ಉದಾ- ಪುಲ್ಲು (ಪುಲ್) ಮುಳ್ಳು (ಮುಳ್) ಬೆಂಚು (ಬೆಂಚ್) ರೈಲು (ರೈಲ್) ಇತ್ತೀಚೆಗೆ ಅನ್ನು ಎಂಬು ದನ್ನು 'ಅನ್ನ' ಎಂಬಂತೆ ಬದಲಾಯಿಸುತ್ತಿರುವುದು ಸ್ಪಷ್ಟ. ಉದಾ—ರಾಮ ನನ್ನು—ರಾಮನನ್ನ, ಅದನ್ನು--ಅದನ್ನ. ಈ ಪರಿವರ್ತನೆಯಿಂದ ಯಾವ ಉಳಿತಾಯವಾಗಲೀ ಪ್ರಯೋಜನವಾಗಲೀ ಇಲ್ಲದಿರುವುದರಿಂದ ಇದರ ಅವಶ್ಯಕತೆ ಯಿಲ್ಲ. ರಾಮನನ್ನು ಎಂದು ಹಿಂದಿನ ರೀತಿಯನ್ನೇ ಉಳಿಸಿಕೊಳ್ಳಬಹುದು. ಯಾರೋ ಒಬ್ಬ ಶೋಕಿಗಾಗಿ ತೊಡಗಿದ್ದನ್ನು ಇತರರು ಅನುಸರಿಸಿ ಅದೀಗ ಗಟ್ಟಿ ಗೊಳ್ಳುವ ಸ್ಥಿತಿಯಲ್ಲಿದೆ. 'ಅನ್ನು' ಎಂಬುದನ್ನು 'ಅನ' ಎಂಬಂತೆ ಉದಾ—ಪದ್ಯಾನ (ಪದ್ಯವನ್ನು) ಕಾರ್ಯಕ್ರಮಾನ (ಕಾರ್ಯಕ್ರಮವನ್ನು) ಎಂದು ಹೇಳಬೇಕಾದ ಅವಶ್ಯಕತೆ ಇದೆಯೇ ? ಆಕಾಶವಾಣಿಯಲ್ಲೂ ಇಂತಹ ಪ್ರಯೋಗ ನಡೆಯುತ್ತಿದೆ. 'ಅನ್ನು' ಲೋಪಿಸಿ—ಗಿಡಾ ನೆಡು, ಮನೇ ಕಟ್ಟು ಎಂಬಂತಹ ಪ್ರಯೋಗಗಳು ಇತ್ತೀಚೆಗೆ ಹೆಚ್ಚುತ್ತಿವೆ.

ತೃತೀಯಾ ಪ್ರತ್ಯಯ

ಇನ್, ಇಂದೆ ಇಂದಂ, ಎಂದು ಹಳಗನ್ನಡ ಗ್ರಾಂಥಿಕ ಭಾಷೆಯಲ್ಲಿದ್ದರೂ ಪ್ರಯೋಗದಲ್ಲಿ ತೃತೀಯಾರ್ಥವನ್ನು ಹೇಳಲು ಸಪ್ತಮೀ ಪ್ರತ್ಯಯ ಅಲ್ಲಿ, ಒಳ್ ಪ್ರಯೋಗವಾಗುತ್ತಿತ್ತು. ಹೊಸಗನ್ನಡದಲ್ಲಿ ಆಡುಮಾತಿನಲ್ಲಿ ತೃತೀಯಾರ್ಥಕ್ಕೆ ಸಪ್ತಮೀ ಪ್ರತ್ಯಯವೇ ಬಳಕೆಯಾಗುತ್ತಿತ್ತು—ಪೆನ್ನಿನಲ್ಲಿ ಬರೆದ, ಕತ್ತಿಯಲ್ಲಿ ಕಡಿದ ಆದುದರಿಂದ "ಇಂದ" ಎಂಬುದು ಮೂಲತಃ ಪಂಚಮೀ ಪ್ರತ್ಯಯವೆಂಬುದು ಸ್ಪಷ್ಟ. ವ್ಯಾಕರಣ ಓದಿದ್ದಕ್ಕಾಗಿ, ಒತ್ತಾಯಪೂರ್ವಕವಾಗಿ ತೃತೀಯಾರ್ಥದಲ್ಲಿ 'ಇಂದ' ಬಳಸುವುದಕ್ಕಿಂತ 'ಅಲ್ಲಿ' ಎಂಬುದನ್ನೇ ರೂಢಿಯಲ್ಲಿದ್ದಂತೆ ಬಳಸಬಹುದು. 'ಇಂದ'ವನ್ನು ಪಂಚಮಿಯಲ್ಲಿ (ಅಗಲಿಕೆ, ಬೇರ್ಪಡುವಿಕೆ) ಬಳಸಬಹುದು. ಉದಾ: ಪಂಚಮಿ–ಮನೆಯಿಂದ ಬಂದನು.

ಚತುರ್ಥೀ ಪ್ರತ್ಯಯ

ಕ್ಕೆ, ಗೆ—ಕೃದಂತನಾಮಗಳ ಜತೆಯಲ್ಲಿ ಬಳಕೆಯಾಗುವಾಗ ಔದಾಸೀನ್ಯ ಎದ್ದು ತೋರುತ್ತದೆ. ನೋಡು, ಮಾಡು ಮೊದಲಾದ ಧಾತುಗಳಿಗೆ 'ಉದು' ಸರ್ವನಾಮ ಸೇರಿ ನೋಡುವುದು, ಮಾಡುವುದು ಎಂಬಂತೆ ಕೃದಂತನಾಮಗಳಾಗುತ್ತವೆ. ಇವಕ್ಕೆ 'ಕ್ಕೆ' ಪ್ರತ್ಯಯ ಸೇರಿದಾಗ ನೋಡುವುದಕ್ಕೆ, ಮಾಡುವುದಕ್ಕೆ ಎಂದಾಗುತ್ತಿತ್ತು. ಇತ್ತೀಚೆಗೆ ಇವನ್ನು ನೋಡೋಕೆ, ಮಾಡೋಕೆ, ನೋಡಂಕ್ಕೆ, ಮಾಡುಕ್ಕೆ, ಇದೇರೀತಿ ನೋಡುವುದಿಲ್ಲ — ನೋಡೋಲ್ಲ, ಹೋಗುವಾಗ— ಹೋಗೋವಾಗ, ಬರುವಾಗ—ಬರೋವಾಗ, ಇರುವ, ಬರುವ—ಇರೋ, ಬರೋ, ಎಂಬಂತೆ ಪ್ರಯೋಗಿಸುವುದು ಕಾಣುತ್ತದೆ. ಇದರಿಂದ ಶಬ್ದರೂಪ ವಿಕೃತವಾಗುತ್ತದೆ. ಇಂತಹ ಧಾತುಗಳಿಗೆ 'ಅಲ್' ಪ್ರತ್ಯಯ ಸೇರಿ ಕೃನ್ನಾಮಗಳಾಗಿ 'ಕೆ' ಸೇರಿದರೆ ನೋಡಲ್ಕೆ (ಹಳಗನ್ನಡ) ನೋಡಲಿಕ್ಕೆ (ಹೊಸಗನ್ನಡ) ಆಗುತ್ತಿತ್ತು. ಈಗ ಈ ರೂಪಗಳು ಕಣ್ಮರೆಯಾಗುತ್ತಿದ್ದು ನೋಡಲು, ಮಾಡಲು ಎಂದಷ್ಟೆ ಇರುವಂತೆ ಕಾಣುತ್ತದೆ. ನೋಡೋಕೆ, ಮಾಡೋಕೆ ಇನ್ನೂ ಗ್ರಾಮ್ಯ ಸ್ಥಿತಿಯಲ್ಲೇ ಆಡುಮಾತಿನಲ್ಲಿದ್ದು ಬರವಣಿಗೆಗೆ ಬರುವ ಸ್ಥಿತಿಯಲ್ಲಿವೆ. ಸಣ್ಣ ಕತೆ, ಕಾದಂಬರಿಗಳಲ್ಲಿ ನೈಜತೆಗಾಗಿ ಇಂತಹ ಗ್ರಾಮ್ಯ ಪ್ರಯೋಗಗಳನ್ನು ಬಳಸಿ ಕ್ರಮೇಣ ಇವು ಗಟ್ಟಿಗೊಳ್ಳಬಹುದು. ದ್ವಿತೀಯಾದ ಬದಲು ಚತುರ್ಥಿಯ ಬಳಕೆ ಕೆಲವೆಡೆ ಕಾಣುತ್ತದೆ. ಉದಾ: ನನ್ನನ್ನು ಮುಟ್ಟಬೇಡ—ನನಗೆ ಮುಟ್ಟಬೇಡ. ಇದು ಕೊಂಕಣಿ ಮರಾಠಿ ಪ್ರಭಾವವಿರಲೂ ಬಹುದು. ಹಿಂದಿಯಲ್ಲೂ ದ್ವಿತೀಯಾ ಚತುರ್ಥಿಗಳಿಗೆ ಒಂದೇ ಪ್ರತ್ಯಯ 'ಕೋ' ಇರುತ್ತದೆ.—"ಮಕ್ಕ ಅಪ್ಪಣ್ಣಕ್ಕ (ಕೊಂಕಣಿ) ಮುಝುಕೋ ಮತ್ ಮಾರೋ (ಹಿಂದಿ)

ಪಂಚಮೀ ಪ್ರತ್ಯಯ

ಹೊಸಗನ್ನಡದಲ್ಲಿ ತೃತೀಯದಿಂದ 'ಇಂದ' ಬೇರ್ಪಡಿಸುವುದಕ್ಕಾಗಿ 'ದೆಸೆಯಿಂದ' ಎಂದು ವ್ಯಾಕರಣವಲ್ಲಿ ಹೇಳಿದರೂ ಪ್ರಯೋಗದಲ್ಲಿ 'ಇಂದ' ಮಾತ್ರವಿದೆ. ಉದಾ: ಮರದಿಂದ ಹಣ್ಣು ಬಿತ್ತು. ಇದರಲ್ಲಿ ಯಾವುದೇ ಮಾರ್ಪಾಡಿಗೂ ಅವಕಾಶವಿಲ್ಲ.

ಷಷ್ಠೀ ಪ್ರತ್ಯಯ

'ಅ' ಕಾರವು 'ಅದು' ಸರ್ವನಾಮದ ಅವಶೇಷವಾಗಿದ್ದು ಸಂಬಂಧ ಸೂಚಕ ಮಾತ್ರ. ಉದಾ: ರಾಮನ ಪುಸ್ತಕ, ಮರದ ಹಲಗೆ. ದ್ವಿತೀಯಾ ಪ್ರತ್ಯಯ 'ಅನ್' (ಅನ್ನು)ನಲ್ಲಿ 'ನ್' ಲೋಪಿಸಿದರೆ 'ಅ' ಉಳಿದು ಷಷ್ಠಿಯ ಭ್ರಮೆ ಹುಟ್ಟಿಸುವುದುಂಟು. ಅಲ್ಲಿ ಅರ್ಥವನ್ನು ಚಿಂತಿಸಿದಾಗ ಮಾತ್ರ ಅದು ದ್ವಿತೀಯ ಎಂದು ತಿಳಿಯುವುದು. ಉದಾ: ರಾಮನ ಕರೆಯಮ್ಮ-ರಾಮನನ್ನು ಎಂಬಲ್ಲಿನ 'ನ್ನು' ಇಲ್ಲಿ ಲೋಪವಾಗಿರುವುದು ಸ್ಪಷ್ಟ.

ಸಪ್ತಮೀ ವಿಭಕ್ತಿ ಪ್ರತ್ಯಯ

"ಅಲ್ಲಿ" ಎಂಬುದೇ ಹೊಸಗನ್ನಡದಲ್ಲಿ ರೂಢಿಗೊಂಡರೂ ಪ್ರಕೃತಿಗೆ ಈ ಪ್ರತ್ಯಯ ಸೇರುವಲ್ಲಿ ಇತ್ತೀಚೆಗೆ ಗೊಂದಲ ಶುರುವಾಗಿದೆ. ಗಿರಿಯಲ್ಲಿ, ಮನೆಯಲ್ಲಿ, ಕೈಯಲ್ಲಿ, ಬಾಯಿಯಲ್ಲಿ ಹೀಗೆ ಇ, ಈ, ಎ, ಏ, ಐ, ಈ ಸ್ವರಾಕ್ಷರಗಳಿಂದ ಅಂತ್ಯವಾಗುವ ಪ್ರಕೃತಿಯ ಮುಂದೆ 'ಅಲ್ಲಿ' ಪ್ರತ್ಯಯ ಬಂದಾಗ ಯಕಾರಾಗಮವಾಗುವುದು ವ್ಯಾಕರಣ (ಶಬ್ದಮಣಿದರ್ಪಣ-ಸೂತ್ರ 65) ಮತ್ತು ಧ್ವನಿಶಾಸ್ತ್ರದ ದೃಷ್ಟಿಯಿಂದಲೂ ಸಮ್ಮತ. ಈ ಅಕ್ಷರಗಳ ಸ್ಥಾನ ಪ್ರಯತ್ನ ಸಾಮ್ಯ (ತಾಲು ಸ್ಥಾನ)ದಿಂದ ಯಕಾರಾಗಮವೇ ಉಚ್ಚಾರಣೆಯ ದೃಷ್ಟಿಯಿಂದ ಸುಲಭ, ವಿಹಿತ. ಆದರೆ ಯಕಾರದ ಬದಲು ನಕಾರ (ದಂತ್ಯ)ವನ್ನು ಆಗಮ ಮಾಡುವುದು ಎರಡೂ ದೃಷ್ಟಿಯಿಂದ ಸರಿಯಲ್ಲ. ಆದರೆ ಈಗ ಅಂತಹ ಪ್ರಯೋಗ ಆಡುಮಾತಿನಲ್ಲೂ ಮಾತ್ರವಲ್ಲ ಸಮೂಹಮಾಧ್ಯಮಗಳಲ್ಲೂ ಹಬ್ಬತೊಡಗಿದೆ–ಮನೆನಲ್ಲಿ, ಕೈನಲ್ಲಿ, ಬಾಯಿನಲ್ಲಿ ಎಂದೇ ಪ್ರಯೋಗಿಸುವುದು ಕಾಣುತ್ತದೆ. ಯಾರೋ ಎಲ್ಲೋ ತೊಡಗಿದ ಈ ಅಬದ್ಧ ಹೇಗೋ ಆಕರ್ಷಣೆ ಪಡೆದಿದೆ. ಈ ಬದಲಾವಣೆ ಅವಶ್ಯವಿಲ್ಲ. ನಕಾರದ ಬಾಹುಳ್ಯ–ಇನ್ನೂ ಕೆಲವು ಕಡೆಗಳಲ್ಲಿ ನಕಾರದ ಪ್ರಯೋಗ ಅನಗತ್ಯವಾಗಿ ಹೆಚ್ಚುತ್ತಿರುವುದನ್ನು ಗಮನಿಸಬಹುದು–ಉದಾ: ನಿನ್ನೇನೆ (ನಿನ್ನೆಯೇ), ಮೊನ್ನೇನೇ (ಮೊನ್ನೆಯೇ) ಮರಾನೇ (ಮರವೇ) ನೆಲಾನೇ (ನೆಲವೇ) 'ಆ ಜಾಗದಲ್ಲಿ ಮರಾನೇ ಇಲ್ಲ (ಆ ಜಾಗದಲ್ಲಿ ಮರವೇ ಇಲ್ಲ.) ಅಷ್ಟೇನಾ (ಅಷ್ಟೇಯೋ). ಇಷ್ಟೇನಾ (ಇಷ್ಟೇಯೋ) ಪ್ರಯೋಜನಾನೂ (ಪ್ರಯೋಜನವೂ) ಆಡುಮಾತಿನಲ್ಲಿ ಕೆಲವೊಮ್ಮೆ

ಬರವಣಿಗೆಯಲ್ಲೂ ಹತ್ತಿರ-ಹತ್ರ-ಅತ್ರ ಸಪ್ತಮಿಯ ಅರ್ಥದಲ್ಲಿ ಬಳಕೆಯಾಗುತ್ತದೆ. ಉದಾ : ನನ್ನತ್ರ ಹಣವಿಲ್ಲ, ನನ್ನ ಹತ್ತಿರ ಹಣವಿಲ್ಲ. ಕೆಲವೆಡೆ 'ನನ್ಕೈಲಿ' ಎಂದೂ ಹೇಳುವುದಿದೆ. ಆತನ್, ಈತನ್ ಹಳಗನ್ನಡದ ಏಕವಚನ ಸರ್ವನಾಮಗಳು. ಆದರೆ ಈಗ ಆತ, ಈತ ಬಹುವಚನದಲ್ಲೂ ಪ್ರಯೋಗವಾಗುವುದು ವಿಶೇಷ. ಉದಾ : ಆತ ಹೇಳುತ್ತಾರೆ. ಆಖ್ಯಾತ ಪ್ರಯೋಗದಲ್ಲೂ ಕೆಲವು ಬದಲಾವಣೆಗಳನ್ನು ಗುರುತಿಸಬಹುದು. ಪ್ರಥಮಪುರುಷ ಏಕವಚನದಲ್ಲಿ ಲಿಂಗವಚನ ಸೂಚಕ 'ನು' ಈಗ ಲೋಪವಾಗುತ್ತಿದೆ. ಉದಾ : ಹೋದ, ಬಂದ. ಮಧ್ಯಮ ಪುರುಷ ಉತ್ತಮ ಪುರುಷ ಏಕವಚನಗಳಲ್ಲಿ ಒಂದೇ ರೂಪ 'ಹೋದೆ' ಸಂದೇಹಾಸ್ಪದವಾಗುವುದರಿಂದ ಉತ್ತಮಪುರುಷ ಏಕವಚನದಲ್ಲಿ 'ಹೋದೆನು' ಎಂದೇ ಪ್ರಯೋಗಿಸುವುದು ಸೂಕ್ತ. ಮಧ್ಯಮಪುರುಷ ಬಹುವಚನದಲ್ಲಿ ಹೋದಿರಿ, ನೋಡಿರಿ ಇತ್ಯಾದಿಯನ್ನು, ಹೋದಿ ನೋಡಿ ಎಂದು ಸಂಕ್ಷೇಪಿಸುವುದು ಸೂಕ್ತವೆನಿಸದು. ಏಕೆಂದರೆ ಭೂತದಲ್ಲಿ ಉದಾ : ಹೋಗಿ ಬಂದನು, ನೋಡಿ ಹೇಳಿದನು ಎಂಬಂತಹ ಪ್ರಯೋಗದಲ್ಲೂ ಇದೇ ರೂಪವಿರುವುದರಿಂದ ವಿಧಿರೂಪದಲ್ಲಿ ಹೋದಿರಿ, ಹೋಗಿರಿ, ನೋಡಿರಿ, ಎಂಬಂತೆ 'ರಿ' ಲೋಪಿಸದೆ ಹೇಳುವುದೇ ಸ್ಪಷ್ಟತೆಯ ದೃಷ್ಟಿಯಿಂದ ಒಳ್ಳೆಯದು. ಹೋಗುತ್ತೇನೆ, ಬರುತ್ತೇನೆ ಎಂಬವು ಹೋಗ್ತೀನಿ, ಬರ್ತೀನಿ ಎಂದು ಏಕಾಗುತ್ತವೋ ತಿಳಿಯದು. ಆಗುತ್ತದೆ, ಹೋಗುತ್ತದೆ ಎಂಬುವನ್ನು ಆಗುತ್ತೆ, ಹೋಗುತ್ತೆ ಎಂದು ಸಂಕ್ಷೇಪಿಸುವುದು ಈಚಿನ ಬೆಳವಣಿಗೆ. ಮತ್ತೆ ಇವಕ್ಕೆ ಪ್ರಶ್ನಾರ್ಥಕ 'ಏ' ಯನ್ನು ಸೇರಿಸಿ ಆಗುತ್ಯೇ, ಹೋಗುತ್ಯೇ ಎನ್ನುವುದು ಸುಕರವಲ್ಲ. ಹೋದೆವು, ಬಂದೆವು ಹೋಗಿದ್ದೆವು, ಬಂದಿದ್ದೆವು ಎಂಬವನ್ನು ಹೋದ್ವಿ, ಬಂದ್ವಿ, ಹೋಗಿದ್ವಿ, ಬಂದಿದ್ವಿ, ಎನ್ನುವುದು ಹೊಸ ಶೋಕಿಯ ಪ್ರಯೋಗವಾಗಿದೆ. 'ಹೋದದ್ದು, ಬಂದದ್ದು' ಕೆಲವರ ಬಾಯಲ್ಲಿ ಹೋಗಿದ್ದು, ಬಂದಿದ್ದು ಆಗುತ್ತವೆ. ಹೋದದ್ದೇಕೆ-ಹೋಗಿದ್ದೇಕೆ, ಬಂದದ್ದೇಕೆ-ಬಂದಿದ್ದೇಕೆ ಎಂದಾಗುವುದೂ ಕಾಣುತ್ತದೆ, ಮಾಡಿಕೊಳ್ಳಬೇಕು-ಮಾಡ್ಕೊಬೇಕು, ನೋಡಿಕೊಳ್ಳಬೇಕು-ನೋಡ್ಕೋಬೇಕು ಎಂಬಿತ್ಯಾದಿ ಸಂಕ್ಷಿಪ್ತ ರೂಪಗಳು ಮೈಸೂರು ಬೆಂಗಳೂರು ಕಡೆಯವರ ಕನ್ನಡದಲ್ಲಿ ಹೆಚ್ಚಾಗಿ ಎದ್ದು ತೋರುತ್ತದೆ. ದಕ್ಷಿಣ ಕನ್ನಡದವರೂ ಈಗೀಗ ಇಂಥವನ್ನು ಅನುಕರಿಸುತ್ತಿದ್ದಾರೆ. ಹೀಗೆ ಮನಬಂದಂತೆ ಬದಲಾಯಿಸಿ ನಿರರ್ಥಕವಾಗಿ ಹೊಸತನವನ್ನೆಳೆದು ತರುವುದರಿಂದ ಯಾವ ಪ್ರಯೋಜನವೂ ಇಲ್ಲ. ದಕ್ಷಿಣಕನ್ನಡದಲ್ಲಿ ಸಾಧಾರಣವಾಗಿದ್ದ ಹೌದಯ್ಯ ಅಲ್ಲಯ್ಯ-ಹಾದ್ರಿ. ಅಲ್ರಿ; 'ಆಗ, ಈಗ'-'ಅವಾಗ, ಈವಾಗ' ಆಗಿ ಮಾರ್ಪಡುತ್ತಿರುವಂತೆ ಕಾಣುತ್ತದೆ. 'ಅವರು, ಇವರು' ಸ್ವತಃ ಬಹುವಚನವೇ ಆದರೂ ಅವು ಗೌರವದ ಏಕವಚನವಾಗಿ ಮತ್ತೆ ಗಳು ಎಂಬ ಬಹುವಾಚಕವನ್ನು ಸೇರಿ ಅವರುಗಳು, ಇವರುಗಳು ರೂಢಿಯಾಗುತ್ತವೆ. ಅವರು ಇವರು ಸ್ವತಃ ಬಹು

ವಾಚಕವಾದುದರಿಂದ ಸಾಕಾಗುತ್ತದೆ. ಸಚಿವರುಗಳು, ಅಧ್ಯಾಪಕರುಗಳು, ಕಾರ್ಯಕರ್ತರುಗಳು—ಇಂತಹ ಪ್ರಯೋಗಗಳು ಅಸಂಗತ್ಯವೆನಿಸುವುದಿಲ್ಲವೇ ? ಸುಬ್ರಹ್ಮಣ್ಯರವರು' ಎನ್ನುವುದೇಕೆ ? ಸುಬ್ರಹ್ಮಣ್ಯನವರು, ಸುಬ್ರಹ್ಮಣ್ಯ ಅವರು ಸುಬ್ರಹ್ಮಣ್ಯರು ಎನ್ನಬಹುದು. 'ರವರು' ಏಕೆ ? ಸುಬ್ರಹ್ಮಣ್ಯರು ಎಂದ ಮೇಲೆ ಅವರು ಬೇಕೆ ? ಹಳೆಗನ್ನಡದಲ್ಲಿ ಅರ್ ಇರ್ ಗಳ ಮೇಲೆ 'ಕಳ್' ಸೇರಿ ಎರಡು ಬಹುವಾಚಕಗಳ ಪ್ರಯೋಗವಿರಲಿಲ್ಲವೆಂದಲ್ಲ'. ಉದಾ—ದೇವರ್ಕಳ್, ಬುಧರ್ಕಳ್, ತಾಯ್ವಿರ್ಕಳ್ (ಶಬ್ದಮಣಿ ದರ್ಪಣ—ಸೂತ್ರ 111) ಇಂಗ್ಲೀಷಿನ ಅತಿರೇಕದಿಂದ ಫಾದರು, ಮದರು, ಡ್ಯಾಡಿ, ಮಮ್ಮಿ, ಬ್ರದರು, ಸಿಸ್ಟರು, ಕಸಿನ್ನುಗಳು ಹೆಚ್ಚು ಗೌರವದಿಂದ ಕಾಣಲ್ಪಡುತ್ತಾರೆ. ಮಾತಿನ ಮಧ್ಯದಲ್ಲಿ ಬಟ್ (ಆದರೆ) ಸೋ (ಹಾಗೆ) ಮುಂತಾದವನ್ನು ಬಳಸುವುದೂ ಒಂದು ಶೋಕಿಯಾಗಿದೆ. ಸಂಭಾವ್ಯ ಭವಿಷ್ಯತ್ತಿನ ರೂಪಗಳಾದ ಹೋಗುವ, ಬರುವ—ಹೋಗೋಣ, ಬರೋಣ ಎಂದಾಗುತ್ತಿವೆ. ಇವು ಮೂಲತಃ ಆ ಧಾತುಗಳಿಗೆ ಸೇರುವ 'ಒಣ' ಪ್ರತ್ಯಯದ ಮೂಲಕವುಂಟಾದ ಕೃನ್ನಾಮಗಳಾದರೂ ಇತ್ತೀಚೆಗೆ ಕ್ರಿಯಾಪದಗಳಂತೆ ಬಳಕೆಯಾಗುತ್ತವೆ. ಉದಾ—ಮಂತ್ರಾಲಯಕ್ಕೆ ಹೋಗೋಣ. ಹವ್ಯಕದಲ್ಲಿ 'ಅಣ' ಪ್ರತ್ಯಯ ಸೇರಿ ಅವು ಕೃನ್ನಾಮಗಳೇ ಆಗುತ್ತಿವೆ. ಉದಾ—ಹೋಗಾಣ (ಹೋಗುವಿಕೆ), ಬರಾಣ (ಬರುವಿಕೆ) ಇತ್ಯಾದಿ. 'ಉಂಟು, ಇಲ್ಲ' ಎಲ್ಲಾ ಲಿಂಗ ವಚನಗಳಲ್ಲಿ ಸಮಾನವಾಗಿ ಬಳಕೆಯಾಗುತ್ತಿದ್ದುವು. ಇತ್ತೀಚೆಗೆ 'ಉಂಟು' ನಪುಂಸಕಕ್ಕೆ ಮಾತ್ರ ಸೀಮಿತವಾಗುತ್ತಿರುವಂತೆ ಕಾಣುತ್ತದೆ ಉದಾ—ಅವನಲ್ಲಿ ಹಣ ಉಂಟು.

ಭಾಷೆಯೊಂದು ಮಾನವನ ಜೀವಂತ ಶಕ್ತಿ. ಅದರಲ್ಲಿ ಬದಲಾವಣೆ ಸಹಜ. ಅದನ್ನು ಯಾವ ಭಾಷಾವಿದನೂ ವಿರೋಧಿಸಲಾರ. ಆದರೆ ಈ ಜೀವನದಿ ಯದ್ವಾ ತದ್ವಾ ಹರಿದರೆ ತಾನೇ ಬೆಳೆಸಿದ ಪೈರನ್ನು ಹಾಳುಗೆಡಹಬಹುದು. ಅದನ್ನು ಬೇಕಾದಂತೆ ಬಳಸಿ ಸಮೃದ್ಧಗೊಳಿಸುವುದು ಪ್ರತಿಯೊಬ್ಬನ ಕರ್ತವ್ಯ. ಅದಕ್ಕೆ ಕಬ್ಬಿಣದ ಕಟ್ಟು ಹಾಕಿ ನಿಯಂತ್ರಿಸುವುದು ಮೂರ್ಖತನ. ಆದ್ದರಿಂದ ಪ್ರತಿಯೊಬ್ಬನೂ ತನ್ನ ಭಾಷಾ ಪ್ರಯೋಗದಲ್ಲಿ ಎಚ್ಚರವಹಿಸುವುದು ಮುಖ್ಯ. ಅದರಲ್ಲೂ ತ್ವರಿತವೇಗದ ಸಮೂಹ ಮಾಧ್ಯಮಗಳವರು ಹೆಚ್ಚು ಎಚ್ಚರವಹಿಸುವುದು ಅನಿವಾರ್ಯ. ಸಮೂಹ ಮಾಧ್ಯಮಗಳವರು ಎಲ್ಲರಿಗೂ ಸಮಾನವೆನಿಸಿದ ಪ್ರಮಾಣ ಭಾಷೆ (Standard Language)ಯನ್ನು ಬಳಸುವುದು ವಿಹಿತ. ಒಂದು ಪ್ರಾದೇಶಿಕ ಪ್ರಭೇದವನ್ನು ಸಮೂಹ ಮಾಧ್ಯಮ ಬಳಸಿದರೆ ಇತರರಿಗೆ ಅದು ಅರ್ಥವಾಗದೆಯೂ ಹೋಗಬಹುದು. ಪ್ರಾದೇಶಿಕ ರೂಪಗಳನ್ನು ಬಳಸಿದಲ್ಲಿ ಪ್ರಮಾಣ ಭಾಷೆಯ ರೂಪವನ್ನು ಆವರಣದಲ್ಲಾದರೂ ಕೊಡುವುದು, ಅಂತಹ ಶಬ್ದಗಳಿಗೆ ಟಿಪ್ಪಣಿಗಳನ್ನು ಕೊಡುವುದು ಅವಶ್ಯ. ಇತ್ತೀಚೆಗೆ ದಲಿತ

ಬಂಡಾಯಗಳ ಹೆಸರಿನಲ್ಲಿ ಬರುವ ಕತೆಕಾದಂಬರಿಗಳಲ್ಲಿ ಕೇವಲ ಪ್ರಾದೇಶಿಕ ರೂಪಗಳನ್ನೇ ಕೊಡುತ್ತಿರುವುದರಿಂದ ಇತರೆಡೆಗಳವರಿಗೆ ಅವು ಅರ್ಥವಾಗದಂತಾಗುತ್ತವೆ.

ಭಾಷಾಶುದ್ಧಿಯ ಬಗೆಗೆ ಸಮೂಹಮಾಧ್ಯಮಗಳು ಯೋಚಿಸಿವೆಯೇ ? 'ಹಿಂದೂ' ಇಂಗ್ಲಿಷ್ ದೈನಿಕದಲ್ಲಿ ಪ್ರತಿ ಮಂಗಳವಾರ, ವಾರಕ್ಕೊಮ್ಮೆ "ನಿಮ್ಮ ಇಂಗ್ಲಿಷ್ ತಿಳಿಯಿರಿ" (Know Your English) ಎಂಬ ಅಂಕಣದಲ್ಲಿ ಇಂಗ್ಲಿಷಿನ ಶುದ್ಧಾಶುದ್ಧ ಪ್ರಯೋಗದ ವಿಚಾರ ಬರುತ್ತದೆ. ಇಂತಹದ್ದೇನೂ ಕನ್ನಡದಲ್ಲಿ ಕಂಡುಬಂದಿಲ್ಲ. ಕೇವಲ ಜನಪ್ರಿಯ 'ವಿಚಾರ'ಗಳನ್ನು ಮಾತ್ರ ಪ್ರಕಟಿಸುವುದಕ್ಕಿಂತ ಓದುಗರ, ಕೇಳುಗರ ರುಚಿ ಶುದ್ಧಿ ಮಾಡುವ ಜವಾಬ್ದಾರಿಯೂ ಸಮೂಹ ಮಾಧ್ಯಮಗಳಿಗಿಲ್ಲವೆ ? 'ಕಸ್ತೂರಿ'ಯಲ್ಲಿ ಶ್ರೀ ಪಾ.ವೆಂ. ಆಚಾರ್ಯರು ಪ್ರಕಟಿಸುವ 'ಪದಾರ್ಥ ಚಿಂತಾಮಣಿ', 'ನಿಮ್ಮ ಶಬ್ದ ಭಂಡಾರ ಬೆಳೆಯಲಿ' ಬೇರೆ ತರದವು. ತಮ್ಮ ಬಳಕೆಗಾರರ ಜ್ಞಾನ, ಅಭಿರುಚಿ, ಅಭಿವೃದ್ಧಿಪಡಿಸುವುದರೊಂದಿಗೆ ಆನಂದವನ್ನೂ ಸಮೂಹಮಾಧ್ಯಮಗಳು ನೀಡುವಂತಾಗಬೇಕು.

ಪಂಪಭಾರತದ ಕೃತ್ಯಾ > ಕೀರ್ತಿಗೆ :

ಪಂಪಭಾರತದಲ್ಲಿ ಹರಡಿರುವ ಸಾಂಸ್ಕೃತಿಕ ಅಂಶಗಳಿಗೆ ಲೆಕ್ಕವೇ ಇಲ್ಲ. ಅದರಲ್ಲಿನ ಸಾಂಸ್ಕೃತಿಕ ಅಂಶಗಳಿಗೇ ವಿಶೇಷ ಗಮನವಿತ್ತು ಅಧ್ಯಯನ ಕೈಕೊಳ್ಳಬೇಕಾದ ಅವಶ್ಯಕತೆ ತುಂಬಾ ಇದೆ. ಅದರಲ್ಲಿನ ಹಲವಾರು ಅಂಶಗಳನ್ನು ಕುರಿತು ವಿದ್ವಾಂಸರು ಆಗೀಗ ಚರ್ಚಿಸುತ್ತ ಬಂದಿದ್ದಾರೆ.

ಮಹಾಕವಿ ಪಂಪ ಮಾಡಿಕೊಂಡ ಬದಲಾವಣೆಗಳು ಕೂಡ ಅಪಾರ. ಅಂಥ ಬದಲಾವಣೆಗಳನ್ನು ಕುರಿತಂತೆಯೂ ತಕ್ಕಷ್ಟು ಚರ್ಚೆ ನಡೆಯುತ್ತ ಬಂದಿದೆ. ವ್ಯಾಸ ಭಾರತದಲ್ಲಿ ಧರ್ಮದೇವತೆಯಾದ ಯಮ ದ್ವೈತವನದಲ್ಲಿದ್ದ ಬ್ರಾಹ್ಮಣನ ಆರಣಿ ಯನ್ನು ಜಿಂಕೆಯ ರೂಪದಲ್ಲಿ ಬಂದು ಅಪಹರಿಸಿಕೊಂಡು ಹೋಗುತ್ತಾನೆ. ತರು ವಾಯದಲ್ಲಿ ಅಟ್ಟಿಸಿಕೊಂಡು ಬಂದ ನಾಲ್ವರು ಪಾಂಡವರನ್ನು ಕೊಳದ ಬಳಿಯಲ್ಲಿ ನಿಶ್ಚೇಷ್ಟಿತಗೊಳಿಸಿ ಕೆಡುವುತ್ತಾನೆ. ಏಕಪಾದದ ಮೇಲೆ ನಿಂತ ಹಂಸರೂಪೀ ಯಕ್ಷನಾಗಿ ಯುಧಿಷ್ಠಿರನಿಂದ ಧಾರ್ಮಿಕಾಧ್ಯಾತ್ಮಿಕಾದಿ ಸಮಸ್ಯೆಗಳಿಗೆ ಉತ್ತರ ಹೇಳಿಸಿಕೊಂಡು ಸಂಪ್ರೀತನಾಗಿ ಪಾಂಡವರನ್ನು ಬದುಕಿಸುತ್ತಾನೆ.

ಪಂಪಭಾರತದಲ್ಲಿ ಈ ಸನ್ನಿವೇಶ ತೀವ್ರತರವಾಗಿ ಬದಲಾಯಿಸಲ್ಪಟ್ಟಿದೆ. ಅಲ್ಲಿನ ಜಿಂಕೆಯ ಬದಲು ಇಲ್ಲಿ ಮದ್ದಾನೆ ಆರಣಿಯನ್ನು ಅಪಹರಿಸುತ್ತದೆ. ಅಲ್ಲಿನ ಧರ್ಮ ದೇವತೆ ಯಮ ಇಲ್ಲಿ ಒಂದು 'ದಿವ್ಯ'ವಾಗಿದೆ. 'ಅದಱ ಬೆಸಗೊಂಡವರ್ಕೆಲ್ಲಂ ಮಱುಮಾತು ಗುಡುವುದುಂ' ಎಂದಿಷ್ಟೇ ಹೇಳಿ ಯಕ್ಷಪ್ರಶ್ನೆಯ ಭಾಗವನ್ನು ಸಾರಾಸಗಟಾಗಿ ವರ್ಜಿಸಿಬಿಟ್ಟಿದ್ದಾನೆ ಪಂಪ. ಕನಕ ಎಂಬ ಪುರೋಹಿತ ಎಸಗಿದ ಬೇಳ್ವೆ ಮತ್ತು ಅದರಲ್ಲಿ ಹುಟ್ಟಿದ ಕೀರ್ತಿಕೆಯೆಂಬ ಉಗ್ರದೇವತೆಯ ಪ್ರಸ್ತಾಪ ಮೂಲದಲ್ಲಿಲ್ಲ. ಇಲ್ಲಿನ ಆಭಿಚಾರದ ಕಲ್ಪನೆಯನ್ನು ಪಂಪನೇ ಸೇರಿಸಿದ್ದಾನೆ *

ಕೃತ್ಯಾ (ಅಥವಾ ಕೃತ್ತಿಕಾ) ಎಂಬ ಆಭಿಚಾರಿಣಿ ದೇವತೆಯ ಕಥೆ ವ್ಯಾಸ ಭಾರತದಲ್ಲಿ ಎರಡು ಮೂರು ಕಡೆ ಬಂದಿದೆ. ಮುಖ್ಯವಾಗಿ ಘೋಷಯಾತ್ರೆಯ ಅವಮಾನದಿಂದ ಬೆಂದ ದುರ್ಯೋಧನ ಪ್ರಾಯೋಪವೇಶಕ್ಕೆ ಸಿದ್ಧನಾದಾಗ ಈ ಕಥೆ ಅಲ್ಲಿ ಬಂದಿದೆ. ಆ ಮಾರ್ಗದಿಂದ ದುರ್ಯೋಧನನನ್ನು ಪರಾಙ್ಮುಖಗೊಳಿಸುವುದ

* ಇದರಲ್ಲಿ ಅರಿಕೇಸರಿ ಸಂಬಂಧಿಯಾದ ಐತಿಹಾಸಿಕ ಘಟನೆಯೇನಾದರೂ ಹುದುಗಿರಬಹುದೇ ?

ಕ್ಕಾಗಿ ಅವನ ಪಕ್ಷಪಾತಿಗಳಾದ ರಾಕ್ಷಸರು ಈ ಕೃತ್ಯೆಯನ್ನು ಸೃಷ್ಟಿಸುತ್ತಾರೆ. ಅದರ ವಿವರಗಳು ಇಲ್ಲಿ ಅಪ್ರಸ್ತುತ. ಶ್ರೀ. ನ. ಸುಬ್ರಹ್ಮಣ್ಯಂ ಅವರ ಲೇಖನವೊಂದರಲ್ಲಿ (ಪ್ರ. ಕ. 44–4) ಅದರ ಕೆಲವು ವಿವರಗಳನ್ನು ಕಾಣಬಹುದು.

ಪಂಪ ಕೀರ್ತಿಕೆಯ ಸನ್ನಿವೇಶವನ್ನು ಕಲ್ಪಿಸುವಾಗ ಮೇಲೆ ಹೇಳಿದ ಕೃತ್ಯೆಯ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡಿರಬಹುದೆಂಬ ಮಾತನ್ನು ಕೆಲಮಟ್ಟಿಗೆ ಒಪ್ಪಬಹುದು. ಆದರೆ ಕೃತ್ಯಾ ಎಂಬ ರೂಪವನ್ನು ಬಿಟ್ಟು ಕೀರ್ತಿಗೆ ಎಂಬ ರೂಪವನ್ನೇಕೆ ತಂದುಕೊಂಡ? ಈ ಸಮಸ್ಯೆಗೆ ಸರಿಯಾದ ಉತ್ತರ ಹೇಳಬೇಕಾಗುತ್ತದೆ. ಅದಕ್ಕೆ ಕೃತ್ಯಾ ಎಂಬ ಪೌರಾಣಿಕ ರೂಪವೊಂದೇ ಸಾಕಾಗುವುದಿಲ್ಲ. ಪಂಪ ಸ್ವೇಚ್ಛಾಪ್ರವೃತ್ತಿಯಿಂದ ಈ ರೂಪ ಕಲ್ಪಿಸಿದ್ದಾನೆಂದು ಹೇಳಿ ಆತನಿಗೆ ಹೊಣೆಗೇಡಿತನವನ್ನು ಆರೋಪಿಸಿಬಿಡಬಹುದು. ಆದರೆ ಹೀಗೆ ಮಾಡುವುದು ಉಚಿತವಲ್ಲವೆಂಬುದು ನಮ್ಮ ಅಭಿಪ್ರಾಯ. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಕಡತಿಗ್ರಾಮದ ಶಾಸನವೊಂದು ಈ ನಮ್ಮ ಅಭಿಪ್ರಾಯಕ್ಕೆ ಆಧಾರವಾಗಿದೆ. ಅದರ ಪಾಠ ಕೆಳಗಿನಂತಿದೆ.

> ಸ್ವಸ್ತಿ ಶ್ರೀಮತು ಯಾದವ ನಾರಾಯಣಂ ಭುಜಬಳ ಪ್ರೌಢಪ್ರತಾಪ ಚಕ್ರವರ್ತಿ –ಶ್ರೀವೀರ
> ರಾಮಚಂದ್ರದೇವನ ವಿಜಯ ರಾಜ್ಯೋದಯದ ೧೨ ಚಿತ್ರಭಾನು ಸಂವತ್ಸರದ ವಯಿಶಾ
> ಖ ಬಹುಳ ೨. ಅ. ಪಂಚಮಹಾಸಾಮಂತಂ ವೀರಲಕ್ಷ್ಮೀಕಾಂತಂ ಕೀರ್ತಿಕಾದೇವಿಯ
> ಲಬ್ಧವರಪ್ರಸಾದ......ಪಾಸಾದ ಮೃಗಮದಾಮೋದ ಮಹಾಮಕ್ಕಳ
> ಜಂ ಗಣಿಕಾಮನೋಜಂ ರಸ್ಯ ಬಳಸಾಧಕಂ ಪರ್ಯಾಪ್ತ ಬಳಜಲಧಿ ಬನವಾಸಿಳಂ ಕೋಟಿ
> ಕಾಳಾಸಕಂ ಕೌತ್ಸವ ವಂಶೋದ್ಭವಂ ಮಾಮನಿಂತಕಾಣ ಪ್ರಥಮಗೋತ್ರ
> ......ಶ್ರೀಮ...ಬಯಿರರಸ ದೇವನ ಬಸಮೇದನ......
> ......ಮುಂಬಾಡ ಪಚುಕಾದಿ...ಅದಿ...ಪೇನ...... (SII-IX-i-No-381)

ಕ್ರಿ.ಶ. 1282ರ ಮೇಲ್ಕಾಣಿಸಿದ ಶಾಸನದಲ್ಲಿ ಕೌತ್ಸವಂಶದ ಪಂಚಮಹಾ (ಶಬ್ದ) ಸಾಮಂತನೊಬ್ಬನ ಉಲ್ಲೇಖ ಬಂದಿದೆ. ಈತನ ಹೆಸರು ಬಹುಶಃ ಬಯಿರರಸದೇವ. ತನ್ನನ್ನು ಈತ ಕೀರ್ತಿಕಾದೇವಿ ಲಬ್ಧ ವರಪ್ರಸಾದ ಎಂದು ಕರೆದುಕೊಂಡಿದ್ದಾನೆ. ಇದರಿಂದ ಕೀರ್ತಿಕೆ ಎಂಬ ದೇವಿ ಬಳ್ಳಾರಿ ಜಿಲ್ಲೆಯ ಆ ಭಾಗದಲ್ಲಿ ಆ ಕಾಲಕ್ಕೆ ತಕ್ಕಷ್ಟು ಪ್ರಸಿದ್ಧಳಾಗಿದ್ದಳೆಂದು ಸೂಚಿತವಾಗುತ್ತದೆ. ಈ ದೇವಿಯ ಉಲ್ಲೇಖ ಇತರತ್ರ ಬಂದಂತಿಲ್ಲ.

ಶಾಸನದ ಕೀರ್ತಿಕಾದೇವಿ ಎಂಬ ರೂಪ ಪಂಪಭಾರತದ ಕೀರ್ತಿಗೆ ಎಂಬುದಕ್ಕೆ ಭಾಷಿಕವಾಗಿ ನೇರ ಸಂಬಂಧ ಪಡೆದಿದೆ. ಪ್ರಾಚೀನ ಜೈನ ಲೇಖಕರು ಹಿಂದೂ ದೇವತೆಗಳನ್ನು ತಮ್ಮ ಉದ್ದೇಶಕ್ಕೆ ತಕ್ಕಂತೆ ಬದಲಾಯಿಸಿ ತಮ್ಮ ಕೃತಿಗಳಲ್ಲಿ ಸೇರಿಸುವುದು ತೀರ ಸಾಮಾನ್ಯವಾಗಿತ್ತು. ಸೌಮ್ಯರಾದ ಮತ್ತು ಬಹುಜನರ

ಗೌರವಕ್ಕೆ ಪಾತ್ರರಾದ ರಾಮನಂಥವರಿಗೆ ಅವರ ಕೃತಿಗಳಲ್ಲಿ ಉಚ್ಚಸ್ಥಾನ ಪ್ರಾಪ್ತವಾಗಿದ್ದರೆ ಕೃಷ್ಣ ಮತ್ತು ಪರಶುರಾಮನಂಥವರಿಗೆ ಅಂಥ ಸ್ಥಾನ ದೊರಕಿಲ್ಲ. ವಡ್ಡಾರಾಧನೆಯ ಕಾರ್ತಿಕ ಋಷಿಯ ಕಥೆಯ ಕಾರ್ತಿಕಋಷಿ ಮಂಚಿನಿಂದ ಸೊಂಡೂರಿನಲ್ಲಿ ಪ್ರಸಿದ್ಧವಿರುವ ಕುಮಾರಸ್ವಾಮಿಯೇ. ಶಿವಕೋಟಿ ಈ ಕಥೆಯನ್ನು ಬಹು ಜಾಣ್ಮೆಯಿಂದ ಹೆಣೆದಿದ್ದಾನೆ. ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿ ಇಂಥ ಬದಲಾವಣೆಯ ಉದಾಹರಣೆಗಳು ಬೇಕಾದಷ್ಟಿವೆ. ಅವನ ಅಭಿಪ್ರಾಯದಲ್ಲಿ ಶ್ರೀಶೈಲದ ಮಲ್ಲಿಕಾರ್ಜುನ, ಲಕ್ಷ್ಮೇಶ್ವರದ ಸೋಮೇಶ್ವರ, ಕೊಲ್ಲಾಪುರದ ಮಹಾಲಕ್ಷ್ಮಿ ಇವರೆಲ್ಲ ಜೈನ ಪರರೇ. ಕೆಲವೊಂದು ಪ್ರಾಚೀನ ಹಿಂದೂ ಪರಂಪರೆಯ ದೇವರುಗಳನ್ನು ಅವರು ಛೇಡಿಸಿದ್ದೂ ಉಂಟು. ನಯಸೇನ ತನ್ನ ಧರ್ಮಾಮೃತದಲ್ಲಿ ಕಂಚಿಯ ಕಾಮಕೋಟಿ,ಕೊಳ್ಳಿಪಾಕೆಯ ಭೂತಕೋಟಿ ಇವರನ್ನು ಜೋಡೆಯರೆಂದು ಕರೆದುಬಿಟ್ಟಿದ್ದಾನೆ. ಅಂದು ಬಹುಜನಪ್ರಿಯನಾಗಿದ್ದ ಮೈಲಾರದೇವರನ್ನು ಬ್ರಹ್ಮಶಿವ 'ಜೈನನೇ ಕೆಟ್ಟು ಮೈಲಾರನಾದ' ಎಂದು ಹೇಳಿಕೊಂಡಿದ್ದಾನೆ. ಇಂಥ ಭಾವನೆಗಳು (ಕರ್ನಾಟಕದ) ಜೈನ ಲೇಖಕರಲ್ಲಿ ಸರ್ವೇಸಾಧಾರಣವಾಗಿದ್ದವೆಂದು ಈ ಉದಾಹರಣೆ ತೋರಿಸಿಕೊಡುತ್ತವೆ. ಕಾರಣ ಒಂದು ಭಾಗದಲ್ಲಿ ಅಂದು ತಕ್ಕಷ್ಟು ಪ್ರಸಿದ್ಧಳಾಗಿದ್ದ ಕೀರ್ತಿಕೆಯನ್ನು ಆಭಿಚಾರದ ದೇವತೆಯಾಗಿ ಪಂಪ ಹೊಂದಿಸಿಕೊಂಡಿದ್ದರೆ ಅದಕ್ಕೆ ಆಶ್ಚರ್ಯ ಪಡಬೇಕಾಗಿಲ್ಲ. ಕಾರಣ ಕೀರ್ತಿಗೆಯ ಸೃಷ್ಟಿಗೆ ಪ್ರಸ್ತುತ ಕಡಕಿಶಾಸನೋಕ್ತ ಕೀರ್ತಿಕಾದೇವಿಯೂ ಮುಖ್ಯ ಪ್ರೇರಣೆ ನೀಡಿರುವ ಸಾಧ್ಯತೆ ತುಂಬಾ ಇದೆ.

ಹೀಗಾಗಿ ಶ್ರೀ ನ. ಸುಬ್ರಹ್ಮಣ್ಯ ಮತ್ತು ಡಾ. ಡಿ.ಎಲ್.ಎನ್.(ಪಂಪ ಭಾರತ ದೀಪಿಕೆ) ಕೃತ್ಯಾ ಅಥವಾ ಕೃತ್ತಿಕಾ ರೂಪದಿಂದ ಕೀರ್ತಿಗೆ ಎಂಬ ರೂಪ ನಿಷ್ಪನ್ನಗೊಳಿಸಿರುವುದು ನಿರಾಧಾರ ಸಮೀಕರಣವಾಗುತ್ತದೆ. ಕೃತ್ಯಾ ರೂಪದಲ್ಲಿನ ಮೊದಲ ಸ್ವರ ಹ್ರಸ್ವವಾಗಿದೆ. ಅದರ ಮುಂದೆ (ವಿಜಾತೀಯ) ದ್ವಿತ್ವಾಕ್ಷರ ಬಂದಿದೆ. ಕೀರ್ತಿಕೆ ಎಂಬುದರಲ್ಲಿ ಮೊದಲ ಸ್ವರ ದೀರ್ಘವಿದ್ದು ತರುವಾಯ ದ್ವಿತ್ವ ಬಂದಿದೆ. ತದ್ಭವೀಕರಣದಲ್ಲಿ ಇಂಥ ಧ್ವನಿ ವ್ಯತ್ಯಾಸ ಅಸಾಧ್ಯ. ಸಂಸ್ಕೃತದಿಂದ ಬರುವ ವಿಜಾತಿ ದ್ವಿತ್ವಗಳು ಕನ್ನಡದಲ್ಲಿ ಸರಳಗೊಂಡು ದ್ವಿತ್ವ ಲೋಪವೋ ಸಜಾತೀಯ ದ್ವಿತ್ವಗಳೋ ಆಗಿ ಪರಿವರ್ತಿಸುತ್ತವೆ. ಅವುಗಳ ಹಿಂದಿನ ಸ್ವರ ದೀರ್ಘವಾಗಿದ್ದರೆ ಅದು ಹ್ರಸ್ವವಾಗಿ ಮಾರ್ಪಡುತ್ತದೆ. ಅಥವಾ ದ್ವಿತ್ವವೇ ಲೋಪಗೊಳ್ಳುತ್ತದೆ. ಅಂದರೆ ದೀರ್ಘಸ್ವರ ಮತ್ತು ಅದರ ಪರದಲ್ಲಿನ ದ್ವಿತ್ವ ಇವುಗಳಲ್ಲಿ ಯಾವುದಾದರೂ ಒಂದು ಮಾತ್ರ ಉಳಿದುಕೊಳ್ಳುತ್ತದೆ. ಆದ್ದರಿಂದ ಕೃತ್ಯಾ > ಕೀರ್ತಿಗೆಯಾಗಿ ಮಾರ್ಪಟ್ಟಿದೆ ಎಂದು ಭಾಷಾವೈಜ್ಞಾನಿಕವಾಗಿ ಸಾಧಿಸಿ ತೋರಿಸುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ನಿಷ್ಪತ್ತಿಯನ್ನು ತ್ಯಜಿಸಬೇಕಾಗುತ್ತದೆ. ಎಂದರೆ ಕಡಕಿಶಾಸನೋಕ್ತ ಕೀರ್ತಿಕೆ ಮತ್ತು ಪಂಪಭಾರತದ ಕೀರ್ತಿಗೆಯರು ನೇರ ಸಂಬಂಧ ಪಡೆದಿದ್ದಾರೆಂಬ ಅಂಶ ಹೆಚ್ಚು ಸಮರ್ಥನೀಯವೆನಿಸುತ್ತದೆ.

ಎಂ. ಬಿ. ನೇಗಿನಹಾಳ

ವೀರಣಾರಾಧ್ಯನ ಕಾಲವಿಚಾರ : ಒಂದು ಟಿಪ್ಪಣಿ

ವಿಶ್ವನಾಥಾಚಾರ್ಯನ ಸಂಸ್ಕೃತ ಕೃತಿ 'ದಶಗ್ರಂಥಿ', ಇದಕ್ಕೆ 'ಶಿವಜ್ಞಾನ ಪ್ರದೀಪಿಕೆ' ಎಂಬ ಹೆಸರಿನಲ್ಲಿ ವ್ಯಾಖ್ಯಾನವೊಂದನ್ನು ವೀರಣಾರಾಧ್ಯ ರಚಿಸಿದ್ದಾನೆ. ಟೀಕಾಕಾರನ ಕಾಲದ ಬಗೆಗೆ ಶ್ರೀ ಆರ್. ನರಸಿಂಹಾಚಾರ್ಯರು 'ಸುಮಾರು 1650 ಇದ್ದಿರಬಹುದು' ಎಂದಿದ್ದಾರೆ. (ಕರ್ಣಾಟಕ ಕವಿಚರಿತೆ, ದ್ವಿತೀಯ ಸಂಪುಟ, 1919, ಪು. 429).

ಟೀಕೆಯ ಉಪಲಬ್ಧ ಕಾಗದದ ಪ್ರತಿಯೊಂದು 'ಶಕವರ್ಷ ೧೪೮೦ ಸಂದ ವರ್ತಮಾನ ಕಾಳಾಯುಕ್ತ ಸಂವತ್ಸರದ ಆಷಾಢ ಬಹುಳ ೭ ಗುರುವಾರ' ಪ್ರತಿಯಾಗಿದೆ. (ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ದ್ವಿತೀಯ ಸಂಪುಟ ಬೆಂಗಳೂರು, ಕ್ರಮಾಂಕ 664 (1962). ಕ್ರಿ. ಶ. 1558ರಲ್ಲಿ ಲಿಖಿತವಾಗಿರುವ ಪ್ರತಿಯೇ ಲಭ್ಯವಾಗಿರುವುದರಿಂದ ವೀರಣಾರಾಧ್ಯನ ಕಾಲವನ್ನು, ಕವಿಚರಿತೆಕಾರರು ಸೂಚಿಸಿರುವ 1650ಕ್ಕಿಂತ ಹಿಂದೆ ಸು. 1530-40 ಎಂದು ತಾತ್ಕಾಲಿಕವಾಗಿ ನಿರ್ಧರಿಸಬಹುದು.

ಎಸ್. ಶಿವಣ್ಣ

ಈ ಸಂಚಿಕೆಯ ಲೇಖಕರ ವಿಳಾಸಗಳು

ಶ್ರೀ ಶ್ಯಾಮಸುಂದರ ಕೋಚಿ	ಕನ್ನಡ ಅಧ್ಯಾಪಕ, ಸರ್ಕಾರಿ ಕಲಾ ಕಾಲೇಜು ತುಮಕೂರು.
ಡಾ॥ ವಿಲಿಯಂ ಮಾಡ್ತ	ಪ್ರಾಧ್ಯಾಪಕರು, ಕನ್ನಡ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಡಾ॥ ಶಂಕರ ಮೊಕಾಶಿ ಪುಣೇಕರ್	ಮಾಳಮಡ್ಡಿ ಧಾರವಾಡ.
ಶ್ರೀ ಮೋಹನ್ ಕುಂಟಾರ್	ಸಂಶೋಧನ ವಿದ್ಯಾರ್ಥಿ ಕನ್ನಡ ವಿಭಾಗ, ಮಧುರೈ ಕಾಮರಾಜ್ ವಿಶ್ವವಿದ್ಯಾಲಯ ಮಧುರೈ–625 021
ಡಾ॥ ವಿ. ಪೂಜಾರ	ಕನ್ನಡ ಅಧ್ಯಾಪಕರು, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ
ಡಾ॥ ಹಂಪ. ನಾಗರಾಜಯ್ಯ	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ
ಡಾ॥ ಎಂ. ಚಿದಾನಂದಮೂರ್ತಿ	ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ
ಶ್ರೀ ಬಿ. ಆರ್. ನರಸಿಂಹಮೂರ್ತಿ	ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ

ಶ್ರೀ ಡಿ. ವಿ. ಪರಮಶಿವಮೂರ್ತಿ	ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ
ಶ್ರೀ ಎಸ್. ಶಿವಣ್ಣ	ಸಂಪಾದಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ
ಶ್ರೀ ಕ. ವೆಂ. ರಾಜಗೋಪಾಲ್	ಎಂ ಐ ಜಿ 41, 80 ಅಡಿ ರಸ್ತೆ ಕೆಂಗೇರಿ ಉಪನಗರ ಬೆಂಗಳೂರು–60
ಡಾ॥ ಎಸ್. ಎಸ್. ರೇಣುಕಾರಾಧ್ಯ	ಸಂಶೋಧನಾ ಸಹಾಯಕ, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ
ಶ್ರೀ ಜಿ. ವಿ. ಶ್ರೀರಾಮರೆಡ್ಡಿ	ಸಿದ್ದೇಶ್ವರನ ದುರ್ಗ, ಚಳ್ಳಕೆರೆ ತಾ॥ ಚಿತ್ರದುರ್ಗ ಜಿಲ್ಲೆ–577538
ಹರಿಕೃಷ್ಣ ಭರಣ್ಯ	ಕನ್ನಡ ಉಪನ್ಯಾಸಕ, ಮಧುರೈ ಕಾಮರಾಜ ವಿಶ್ವವಿದ್ಯಾಲಯ ಮಧುರೈ–625002
ಡಾ॥ ಉಪ್ಪಂಗಳ ರಾಮಭಟ್	ಕನ್ನಡ ಪ್ರಾಧ್ಯಾಪಕ, ಎಂ. ಜಿ. ಎಂ. ಕಾಲೇಜು, ಉಡುಪಿ–576102
ಡಾ॥ ಎಂ. ಬಿ. ನೇಗಿನಹಾಳ.	ಪ್ರವಾಚಕರು ಮತ್ತು ಸ್ಥಾನಿಕ ಮುಖ್ಯಸ್ಥರು, ಕನ್ನಡ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ ಬೆಳಗಾವಿ ಆವರಣ, ಬೆಳಗಾವಿ